भारतदेशस्य उत्तरभागे स्थितं भूभागं आर्यावर्तः इति कथयन्ति । तस्मिन् भूभागे काशी, अयोध्या, मथुरा, बदरी, केदारदीनि च पुण्यक्षत्राणि विराजन्ते । दक्षिणभारते अस्माकं कर्णाटकराज्ये अपि गोकर्णः, उडुपि, शृङ्गेरी, धर्मस्थलं, बसवकल्याणादीनि पवित्रस्थानानि विराजन्ते । एतादृशपुण्यक्षेत्रेषु आदिचुञ्चनगिरिः अपि प्राचीनं तथा सिद्धिक्षेत्रमिति प्रथितमस्ति ।

प्राचीनपवित्रक्षेत्रमिदं कर्णाटकराज्ये मण्ड्यमण्डले नागमङ्गपत्तनस्य समीपे विराजते । उन्नतगिरियुक्तं क्षेत्रमिदं चन्दनादिवृक्षविशेषैः परिवृते परिसरे विराजते । अत्र वने मयूराः, हरिणाः, शशादयः प्राणिपक्षिणः इतस्ततः सदा अटन्तः प्राचीनऋष्याश्रमं स्मारयन्ति । इदं परिगणय्य कर्णाटकसर्वकारेण सुन्दरचेतोहारि वनमिदं मयूरवनम् इति नाम्ना निर्देशितमस्ति । अत्र वनस्पतयः, सुगन्धपुष्पलताः, गगनचुम्बिवृक्षाः, शुकपिककपोतादयः पक्षिणश्च दृश्यन्ते । अतीव रमणीयेऽस्मिन् प्रदेशे अनेके ऋषयः, साधकाश्च तपः कृत्वा सिद्धिं प्राप्तवन्तः । अत एव क्षेत्रमिदं सिद्धिक्षेत्रम् इति प्रसिद्धमस्ति ।

क्षेत्रमिदं पुराणप्रसिद्धमपि भवति । एकदा लयाधिकारी परशिवः सिद्धयोगिरूपधारी भूत्वा चुञ्चनकॅ इति प्रदेशम् आगतः दक्षिणगङ्गा इति प्रसिद्धे कावेरीतटे तपः प्रारभत । तदा लङ्काधीश्वरेण रावणेनापहृतां सीतां अन्विष्यन्तौ रामलक्ष्मणौ तत्रैवागतवन्तौ । तौ तम् अवलोक्य सः साक्षात् परशिवः इति ज्ञात्वा शिवस्तुतिं अकुरुताम् । तयोः स्तुत्या सन्तुष्टः परशिवः युवयोः इष्टार्थसिद्धिः भवतु इत्यनुगृह्य तपः तप्तुं चुञ्चनगिरिक्षेत्रम् अगच्छत् । तस्य तपसः प्रभावेण इदं क्षेत्रं शैवक्षेत्रमिति प्रसिद्धम् अभवत् ।

अस्य क्षेत्रस्य विषये कथामेकां कथयन्ति जनपदाः । यदा परशिवः चुञ्चनगिरिमागत्य आरण्ये ध्यानमग्नोऽभवत् तदा तत्र चुञ्चः कञ्चश्चेति द्वावसुरौ निवसन्तौ आस्ताम् । एतयोः अनुजयोः हिंसामसहमानाः शिष्टजनाः ऋषिगणाश्च परमेश्वरं भक्त्या प्रार्थितवन्तः । तदा स सिद्धयोगी स्वस्य दैवीशक्त्या तौ असुरौ जघान । एवमादौ चुञ्चासुरस्य निवासात् क्षेत्रमिदं आदिचुञ्चनगिरिः इति प्रथितमभवत् ।

अत्र अनेके देवालयाः शोभन्ते । तेषु गङ्गाधरेश्वरः कत्तलेसोमेश्वरः, मल्लेश्वरः, चन्द्रमौलीश्वरः, कालभैरवेश्वरः, मालाम्बिकादेवी इत्यादयः प्रमुखाः । अस्य क्षेत्रस्य प्रधानभूतो देवस्तु गङ्गाधरेश्वरः । मन्दिरमिदं शिलामयं वर्तते । अस्मिन् मन्दिरे अष्टात्रिंशत् शिलास्तम्भाः सन्ति । एकैकोऽपि शिल्पकलावैभवेन विराजते । प्रतिसंवत्सरमत्र रथोत्सवः वैभवेन प्रचलति । अस्मिन्नवसरे सहस्रशः भक्ताः सम्मिलन्ति ।

कालभैरवेश्वरदेवालयोऽपि अत्रैव विराजते । पुरातनमन्दिरमिदम् इतः पूर्वं जीर्णावस्थायामासीत् ।

श्रीबालगङ्गाधरनाथमहास्वामिनां परिश्रमेण बृहन्मदिरं निर्मितमस्ति । नूतनमन्दिरमिदं विश्वविख्यातं वर्तते । गर्भगृहे विराजमानो कालभैरवेश्वरविग्रहस्तु मनोहरः भवति ।

प्रतिदिनं सहस्राधिकाः भक्ताः अत्रागत्य इष्टार्थफलप्राप्यर्थं प्रार्थयन्ति । अत्र आगतानां भक्तानां सर्वेषां सदा भोजनव्यवस्था भवति ।

कालभैरवेश्वरस्य दक्षिणौ पार्श्वे मालविकादेव्याः मूर्तिः अस्ति । ग्रामीणजनाः इमां देवीं मल्लम्मा इति नाम्ना सम्बोधयन्ति । आदिचुञ्चनगिरिमठेन संस्थापिताः शिक्षणसंस्थाः कर्णाटकराज्ये अनेकग्रामेषु नगरेषु च विद्यन्ते । तेषु बेल्लूरु, बेंगलूरु इत्यादिषु प्रदेशेषु वैद्यकीयमहाविद्यालयः, बेंगलूरु, चिक्कमगलूरु, इत्यादिषु तांत्रिकमहाविद्यालयश्च प्रसिद्धाः सन्ति ।

एतान् अतिरिच्य ग्रामीणप्रदेशेष्वपि विविधविद्यासंस्थाः वर्तन्ते । संस्कृतस्य प्रसारार्थं प्रचारार्थं च श्रीमठद्वारा समीचीनतया कार्यं प्रचलति । तत्र आदिचिञ्चनगिरौ श्री कालभैरवेश्वरसंकृतवेदआगममहाविद्यालयः प्रख्यातः वर्तते । अन्यत्र संस्कतपाठशालाः सन्ति । एवं संस्कृतसंरक्षणपोषणार्थं एतेषां स्वामिनां योगदानम् अद्वितीयमस्ति ।

ग्रन्थालयस्य महत्त्वम्

लिशा डि कोव्यान्
प्र. बी.काम्

ज्ञानगृहकुञ्चिका, ज्ञानभाण्डागारम् इत्यादिनी ग्रन्थालयस्य नामानि सन्ति । अनेनैव ज्ञायते ग्रन्थालयस्य महत्वम् ।

ग्रथि– ग्रथने इति धातोः निष्पन्नोऽयं ग्रन्थशब्दः । तेषां ग्रन्थानाम् आलयः गन्थालयः । षष्ठीतत्पुरुष समासः । ग्रन्थ+आलयः = ग्रन्थालयः इत्यत्र सवर्णदीर्घसन्धिश्च । ग्रन्थः सर्वेषां जीवनपर्यन्तं मित्रं किल । ग्रन्थालयविषये लेखनम् एकं लिखितुं सुवर्णावकाशः लब्धः इति भावयामि ।

शास्त्रग्रन्थाः वेदादयः जनानां जीवनसाफल्यार्थं यतन्तः सन्ति । लौकिकग्रन्थाः जीवनोत्साहं वर्धयन्तः सन्ति । कथाग्रन्थाः पञ्चतन्त्रादयः बालकान् आकर्षयन्तः नीतिं बोधयन्तः सार्थकतां प्रापयन्ति ।

शालायां महाविद्यालयेषु वा महत्त्वस्थानम् आप्नोति ग्रन्थालयः । यस्मिन् विषये यस्य आसक्तिः तादृशग्रन्थाः अपि ग्रन्थालये लभ्यन्ते । यथा साहित्य–ऐतिहासिक–पौराणिक–वैज्ञानिक–शास्त्रीय–नाटकादयः ग्रन्थाः अत्र भवन्ति । तथैव वयोमानरीत्या सदृशाः ग्रन्थाः अपि लभ्यन्ते । उदाहरणार्थं बालकानां कृते कथाः, युवकानां पाक्षिकाः, मासिकाः, वार्तापत्रिकासदृशज्ञानपटलानि, वृद्धानां रमणीयकादम्बरीकथाग्रन्थाः, तत्त्वोपदेशकाः

रामायणमहाभारतादयः विदुषां भगवद्गीतादयः मनुस्मृत्यादयः ग्रन्थाः व्याकरणादयः च ग्रन्थाः उपलभ्यन्ते । वर्गे छात्राः पाठं शृण्वन्ति । तस्य पाठस्य विवरणं अपेक्षितं चेत् उपयुक्तग्रन्थाः ग्रन्थालय एव वर्तते? ज्ञानपिपासूनां छात्राणां अपि विषयसंग्रहणार्थं ग्रन्थालयः कुञ्चिका भवति । ग्रन्थानां उपयोगेन ज्ञानाभिवृद्धि भवति । तत् ज्ञानं अनुभवसिद्धं यदा भवति तदा न केनपि अपहर्तुं शक्यते ।

केचन छात्राः पुस्तकं विक्रेतुं समर्थाः न भवन्ति । तादृशः ग्रन्थालयं गच्छन्ति । छात्राः अपेक्षितानि पुस्तकानि चिन्वन्ति । ज्ञानं सम्पादयन्ति च ।

संस्कृतेन सम्भाषणम् तस्य संरक्षणं, संवर्धनं च ।

वैष्णवि तन्त्री
प्र. बी.काम्

जगतीतले विद्यामानासु सर्वासु भाषासु संस्कृतमेव प्राचीनतमम् । अमृतसदृशा इयं भाषा देववाणी सुरभारती गीर्वाणवाणी इति कथ्यते, पञ्चसहस्रवर्षादपि प्राचीनसंस्कृतग्रन्थाः अद्यापि उपलभ्यन्ते । सहस्रद्विसहस्रवर्षेभ्यः प्राक् संस्कृतभाषा एव भरतखण्डस्य व्यवहारभाषा आसीत् । पञ्चशतवर्षेभ्य प्राक् भारते संस्कृतग्रन्थानि रचितानि विराजन्ते । शतवर्षेभ्य प्राक् संस्कृतग्रन्थाः सर्वत्र जनप्रियाः प्रचलिताः च आसन्, परन्तु अद्य संस्कृत शब्दस्य अवगणनं जनाः कुर्वन्ति । अतः अद्यतन दिवसेषु संस्कृतभाषया संभाषणं, तस्य संरक्षणं संवर्धनं च आवश्यकं अस्ति ।

संस्कृतसंभाषणं संस्कृतसरक्षणस्यैव अन्यतमः मार्गः अस्ति । संस्कृतसंभाषणेनैव अस्य संवर्धनं भवति । संस्कृतसंभाषणं तु न कष्टम् कार्यम् । सम्भाषणेन विचारशक्तिः मेधाशक्तिरपि वर्धते । जगतीतलेषु विद्यामानासु सर्वासु भाषासु समस्तशब्दराशिः यत् वर्तते तत्सर्वं संस्कृतभाषया अनुवादयितुं संस्कृतज्ञाः समर्थाः सन्ति, आङ्ग्लभाषायां Indian Space Research Organisation इति शब्दम् संस्कृते **भारतीय बाह्याकाश संशोधना संस्था** इति नाम्ना सार्थं भवति ।

संस्कृतसाहित्यं तु ज्ञानशेवधिरेवस्ति । अत्र काव्यानि महाकाव्यानि पुराणानि नाटकानि कथावल्यः उपनिषदः इति बहवः प्रकाराः विद्यन्ते । अत्र सुभाषितम् इति कश्चन नीतिबोधकश्लोकः च प्रसिद्धः वर्तते ।

उदाहरणार्थं –

यक्तियुक्तो वचो ग्राह्यं बालादपि शुकादपि ।
युक्तिहीनो वचस्त्याज्यं वृद्धादपि शुकादपि ॥

एवं सुभाषितम् ज्ञानस्य महत्वं निरूपयति ।

वर्तमानकाले भारतीयाः पाश्चत्यनाम् असम्बद्ध आचरणानां अन्धानुकरणम् कुर्वन्ति, इदं नैव पुनः

सम्भवनीयम्। तदैव भारतस्य कीर्तिः गौरवश्च पुनरवाप्तुं शक्यते। भारतीयैः प्राचीनानि आचरणानि भागशः विनष्टानि सन्ति । तेषां पुनः प्रतिष्ठापनार्थं प्रयत्नं करणीयम् । यतः भारतीयानां आचारविचाराः वैज्ञानिकाः इति आदरणीयाः ।

संस्कृतभाषा भारतस्य आत्मा अस्ति । संस्कृतेन विना भारतदेशः असंस्कृतः असभ्यः च भविष्यति । संस्कृतिं विना भारतदेशस्य अस्तित्वमेव विनश्यति । अतः वर्तमाने संस्कृतज्ञैः संस्कृतसंरक्षणम् क्षिप्रम् करणीयम्, भारतदेशे संस्कृतभाषा रक्षणीया ।

संस्कृतभाषायाः महत्वम्

वर्षा. जी
प्र. बी.एस.सी

सर्वासु भाषासु संस्कृतभाषा प्राचीनतमा अस्ति । इयं भाषा देववाणी गीर्वाणवाणी, सुरवाणी इत्यादि नामभिः सुविख्याता। इयं भाषा अतीव रमणीया मधुरा च अस्ति। सा न कठिना, अपितु सरला सरसा एव । पुरा इयं भाषा व्यावहारिकी भाषा आसीत् । अद्यापि आंध्रप्रदेशे एकस्मिन् ग्रामे जनाः संस्कृतभाषायामेव वार्तालापं कुर्वन्ति। रामायण महाभारतकाले संस्कृतभाषा प्रचलिता आसीत् । इयं भाषा अस्माकम् अमूल्या निधिः एव । अस्यां भाषायां विपुलं साहित्यं वर्तते । चत्वारो वेदाः उपनिषदः गीर्वाणभाषायामेव सन्ति । वेदादीनां पठनं न केवलम् अस्माकं देशे, अपितु विदेशे वर्तते । मनुस्मृतिः याज्ञवल्क्यस्मृतिः एतौ द्वौ ग्रन्थौ विख्यातौ स्तः। लौकिकसाहित्य–नाट्यसाहित्य–काव्यसाहित्य–कथासाहित्यञ्च विद्यते । महाकवेः कालिदासस्य साहित्यप्रकारः विदेशे अपि सुविख्यातः ।

संस्कृतभाषैव प्रांतीयभाषाणां जननी । अस्याः व्याकरणं परिपूर्णमस्ति । संस्कृतभाषायाम् एकस्य शब्दस्य अनेके पर्यायशब्दाः सन्ति । अतः इयं भाषा सम्पन्ना अस्ति ।

संस्कृतभाषा अस्माकं सांस्कृतिकी भाषा अस्ति। अस्माकं सर्वे धार्मिक–संस्काराः अस्यां भाषायामेव विद्यन्ते । संस्कृतभाषायाम् अनेकानि सुवचनानि सुभाषितानि च सन्ति । यानि बालकेभ्यो, युवकेभ्यः च प्रेरणां यच्छन्ति । अस्यां भाषायां मानवीयगुणानां विवेचनं वर्तते । आध्यात्मिकशान्तये इयं भाषा सर्वैः पठनीयाः खलु। अस्यां भाषायाम् एव सर्वेषां कल्याणो मार्गः दृश्यते। यथा सर्वे भवन्तु सुखिनः सर्वे सन्तु निरामयाः। सर्वे भद्राणि पश्यन्तु मा कश्चित् दुःखभाग् भवेत् । एवं संस्कृतभाषायाः महत्वं विज्ञाय सर्वैः एषा भाषा पठनीया, सर्वत्र च प्रसारः करणीयः ।

वृत्तपत्रं

किरण कामत्
प्र. बी.एस.सी

अर्वाचीनकाले वृत्तपत्रं मानवस्य जीवनमस्ति । वृत्तपत्रं अस्माकं ज्ञानस्य गङ्गा इव । प्रभाते करे वृत्तपत्रदर्शनम् आवश्यकं सञ्जातम् । वृत्तपत्राणां महत्त्वम् अनन्यासाधरणम् । विविधाः वार्ताः विस्तारूपेण वृत्तपत्रे वर्तन्ते । वार्ताहाराः विविधेभ्यः प्रदेशेभ्यः च वार्ताः समाहरन्ति । संपादकाः ताः वार्ताः संपादयन्ति जनानाम् अग्रे स्थापयन्ति च । पी.टी. आय्, यू. एन. आय्, समाचार भारती (प्रसारभारती) इन्यादयः विख्याताः वृत्तसंस्थाः।

सत्यप्रचारः, जनजगरणं, वार्ताप्रसारणम् च एतानि वृत्तपत्राणां महत्त्वपूर्णानि कार्याणि । स्वतन्त्रपूर्वकाले वृत्तपत्राणां कार्यम् अनन्यासाधरणं आसीत् । लोकमान्यतिलक महोदयेन केसरी मराठा च वृत्तपत्रद्वयं प्रकाश्य महाराष्ट्रराज्ये जनजागरणं कृतम् । एतस्मिन् पत्रद्वये तेन आङ्लस्य कुटिलां राजनीतिम् उद्दिश्य लेखाः लिखिताः । तेन जनाः प्रभाविताः आसन् । वृत्तपत्राणि विविधभाषासु प्रवर्तन्ते । कानि वृत्तपत्राणि आकर्षकाणि कानि अनाकर्षकाणि च । कानि केवलानि स्थानीयानि यथा सन्मित्र ठाणे– वैभवम् कोंकणभवनम् इत्यादीनि । केषांचित् पत्राणां भाषा मधुरा सरला सुलभा च । तर्हि केषांचित् क्लिष्टा कठिना च । वृत्तपत्रं अस्मभ्यं विश्वस्य ज्ञानं यच्छन्ति । अधुना सकाल केसरी, इंडियन एक्सप्रेस, लोकसत्ता च इत्यादीनि दैनिकानि विख्यातानि ।

यदि वृत्तपत्रं समये न आयाति तर्हि कर्मचारिणः कष्टं अनुभवन्ति । वृत्तपत्रस्य महात्त्वं निरतिशयम् । वृत्तपत्राणि लोकमित्राणि खलु । वृत्तपत्रस्वातन्त्र्यं लोकशासनस्य आवश्यम् अङ्गम् । वृत्तपत्रे क्रीडा, मनोरंजनादयः बहवः विषयाः सन्ति । स्त्रीणाम्, बालानाम्, युवकानां कृते स्वतंत्राः विभागाः वृत्तपत्रे सन्ति । तेन ज्ञानं वर्धते, मनोरंजनम् च भवति एवं वृत्तपत्रक्षेत्रं भृशं विस्तृतं विकसितं च वर्तते । वृत्तपत्रेण प्रबोधितोऽयं लोकः । राष्ट्रस्य समुत्कर्षे, संरक्षणे च सदैव जागरितः स्यात् । एतदेव महत्कार्यं वृत्तपात्राणाम् ।

सम्पत्सु महतां चित्तं भवेदुत्पलकोमलम् ।
आपत्सु च महाशैलशिलासङ्घातकर्कशम् ॥

ಸಂಪತ್ಸು ಮಹತಾಂ ಚಿತ್ತಂ ಭವೇದುತ್ಪಲಕೋಮಲಮ್ ।
ಆಪತ್ಸು ಚ ಮಹಾಶೈಲಶಿಲಾಸಂಘಾತಕರ್ಕಶಮ್ ॥

ಸಂಪತ್ತು ಬಂದಾಗ ಮಹಾತ್ಮರ ಮನಸ್ಸು ನೈದಿಲೆಯಂತೆ ಕೋಮಲ.
ವಿಪತ್ತು ಬಂದಾಗ ಅದೇ ಮನಸ್ಸು ಪರ್ವತದ ದೊಡ್ಡ ಶಿಲೆಗಳ ಸಮೂಹದಂತೆ ಕಠೋರ. ೨೪

When wealth showers, the mind of great souls will be like keeps smooth like lily.
But the same becomes strong like rock in the mountain in havoc.

स्वामि विवेकानन्दः

पवित्रा एन्
तृ. बि.ए.

स्वामिविवेकानन्दः अस्मदीयेषु तत्त्वज्ञानिषु विशिष्टं स्थानं प्राप्तवान् । स्वप्रभावेण आधुनापि देशस्यास्य जनमानसे नितरां विराजते । निर्भयत्वं, साधकत्वं सामाजिकेषु विषयेषु दृष्टिवैशाल्यं, दीनानां समाजे परित्यक्तानां च उद्धरणे कटिबद्धतां इत्येवं बहषु विषयेषु अद्यापि विवेकानन्दसमः विवेकानन्द एव इत्यत्र नास्ति सन्देहः । विवेकानन्दस्य तरुणेषु अतीव विश्वासः आसीत् । राष्ट्रनिर्माणे युवानः एव समर्थाः इति भावना तस्मिन् आसीत् । तथापि ते मार्गदर्शकस्य अभावात् तूष्णीकाः संवृत्ताः इति मत्वा सर्वत्र तान् प्रेरयितुं एकीभूय राष्टनिर्माणे तत्पराः भवन्तु इति उपदिशति स्म । उत्तिष्टत, जाग्रत, सिद्धिं यावत् प्रयतत इत्येतत् विवेकानन्दस्य घोषवाक्यमासीत् ।

देशे सर्वत्र सञ्चरन् सनातनधर्मस्य प्रसारं कृतवतः तस्य विवेकानन्दस्य जगति धर्मप्रचारं कर्तुं विशिष्टः कश्चन अवसरः समुपलब्धः । क्रिस्तीये त्रिनवत्युत्तर–अष्टादशशततमे वर्षे सेप्टेम्बर् मासस्य एकादशतमे दिनाङ्के चिकागो नगरे प्रवृत्ते विश्वधर्मसम्मेलने हिन्दूधर्मस्य प्रतिनिधिर्भूत्वा भागमग्रहीत् । तत प्रवचनकारेषु अन्तिमत्वेन परिगणितोऽपि तत्रत्यानां जनानां मानसे प्रथमस्थानमभजत । तत्र कारणं तत्कृतं भाषणं यच्च अमेरिकादेशस्य सोदरः सोदर्यश्च इत्येवं सम्बोधनवाक्यगर्भितम् । तदेव तत्रत्यानां दीर्घकरताडनहेतुरभवत् । इयं च भ्रातृभावना अन्यादृशी या च न केवलम् अमेरिकादेशीयानाम् अपि तु समग्रस्य जगतः विजयाय कारणमभवत् । तेन च जगद्व्यापिनी कीर्तिः विवेकानन्देन आसादिता ।

स्वामिविवेकानन्दस्य विचारसरणिः विभिन्ना आसीत् । भूतकालस्य परिज्ञानं हि भविष्यनिर्माणे आधारत्वेन कल्प्यते । राष्ट्रनिर्मितिर्नाम न भवनादीनां नूतनानां निर्माणम् । तद्धि संस्कृतेः निर्माणं परिवर्तनं परिष्करणं वा स्यात् । अविदितप्राक्तनस्वरुपस्य जनस्य का वा शक्तिः स्यात् परिष्कारणे । लोकेऽपि इदं दृश्यते यत् लङ्घनात् पूर्वं किञ्चिदिव पृष्टगमनम् । तदेव हि शक्त्याधायकं कर्म । तस्मादेव गतस्य ज्ञानमपेक्षितं भविष्यनिर्माणे इति ।

विवेकानन्दस्य भारतमातुः विषये महती प्रीतिरासीत् । भूमिरियं तत्त्वज्ञानस्य प्रसूः अध्यात्मसाधकानां त्यागिनां वीराणां च जन्मस्थानम् । इयं हि कल्याणगुणानां प्रीत्यादरसौहार्दादीनां आश्रयदायिनी । इदृशी भूः नान्यत्र लभ्यते इति निश्चप्रचं ब्रवीमीति उद्घरति स्म । एतदृशोऽयं महानुभावः स्वामिविवेकानन्दः क्रिस्तीयो द्व्युत्तरनवशतशताब्दे जुलाय् मासे चतुर्थे दिने भारतमातुः गर्भे आत्मानं संस्थापयन् अदृश्यतां गतः । स च महान् अद्य नास्ति । तथापि तेन दर्शितो मार्गः अस्मत्पुरतः तथैवास्ति । तत्र गमनमेव आधुनिकक्लेशकर्तने युक्तः उपायः । जनवरिमासस्य द्वादशदिनाङ्कः तस्य महतः विवेकानन्दस्य जन्मदिनं तच्च यूनां दिनमिति आचर्यते ।

ಹಳೆಯ ಸಂಪ್ರದಾಯದ ಆಚರಣೆಯ ಮೂಲಕ ಔಷಧೀಯ ಪದ್ಧತಿ

ನವ್ಯ ಬಿ.ಎ.
ಪ್ರ. ಬಿ.ಕಾಂ.

ಭಾರತದ ಪ್ರಾಚೀನಕಾಲದಿಂದಲೂ ಅಂದರೆ ನಮ್ಮ ಪೂರ್ವ ಋಷಿಮುನಿಗಳಿಂದ ಹಾಗೂ ಮಹರ್ಷಿಗಳಿಂದ ಸಂಪ್ರದಾಯದ ಆಚರಣೆಗಳು ನಡೆಸಿಕೊಂಡು ಬಂದಿದ್ದು, ಹಾಗೂ ಆ ಸಂಪ್ರದಾಯವು ನಮ್ಮ ಪೂರ್ವಜರಿಂದ ಮುಂದುವರೆಯಲ್ಪಟ್ಟಿತು. ಆ ಮುಂದುವರೆಯಲ್ಪಟ್ಟ ಸಂಪ್ರದಾಯವು ಇಂದು ಔಷಧೀಯ ಮಹತ್ವವನ್ನು ತಂದು ಕೊಟ್ಟಿದೆ. ಅಂದರೆ ಸಂಪ್ರದಾಯದ ಪಾಲನೆಯ ಮೂಲಕ ಪರೋಕ್ಷವಾಗಿ ಆರೋಗ್ಯಕ್ಕೆ ಲಾಭವನ್ನು ನೀಡುವುದು. ಸಂಪ್ರದಾಯ ಆಚರಣೆಯ ಆಧಾರದ ಮೂಲ ಸಂಸ್ಕೃತ. ಸಂಸ್ಕೃತವು ವೇದಾಧ್ಯಯನದ ಮೂಲಕ ಸಂಪ್ರದಾಯವನ್ನು ಮತ್ತು ಅದರ ಲಾಭವನ್ನು ತಿಳಿಸಿದೆ.

ಭಾರತದ ಸಂಪ್ರದಾಯವನ್ನು ಹಿಂದೂಗಳು ಆಚರಿಸುತ್ತಾ ಬಂದಿದ್ದು, ಅದರಲ್ಲಿ ಸಂಸ್ಕೃತ ಶ್ಲೋಕಪಠಣ ಹಾಗೂ ಅಧ್ಯಯನವೂ ಒಂದು. ಸಂಸ್ಕೃತ–ಅಧ್ಯಯನದಿಂದ ಹಲವಾರು ಉಪಯೋಗಗಳಿವೆ. ಸಂಸ್ಕೃತ ಅಧ್ಯಯನವು ಮನಸ್ಸಿನ ಒತ್ತಡ ಹಾಗೂ ಖಿನ್ನತೆಯ ವಿರುದ್ಧ ಹೋರಾಡಲು ಸಹಕರಿಸುತ್ತದೆ. ಅಲ್ಲದೆ ಮೆದುಳಿನ ಕಾರ್ಯವನ್ನು ವೃದ್ಧಿ ಮಾಡುವುದರಲ್ಲಿ ಸಹಾಯ ಮಾಡುತ್ತದೆ. ಹೇಗೆ ಯೋಗಾಸನದಿಂದ ಹಲವಾರು ದೋಷಗಳನ್ನು ದೂರ ಮಾಡಬಹುದೋ ಹಾಗೆಯೇ ಸಂಸ್ಕೃತ ಶ್ಲೋಕಪಠಣ ಅಂದರೆ ಶ್ಲೋಕಗಳ ನಿತ್ಯ ಪಠಣವು ಹಲವಾರು ದೋಷಗಳನ್ನು ದೂರ ಮಾಡಬಹುದು. ಹಾಗೆಯೇ ಸಂಪ್ರದಾಯಿಕವಾಗಿ ಉತ್ತಮ ಆಹಾರ ಪದ್ಧತಿಯು ಆಚರಣೆಯಲ್ಲಿದೆ. ಮೊದಲಿಗೆ ಮುಂಜಾನೆ ಸ್ನಾನದ ನಂತರ ಸೂರ್ಯನಿಗೆ ನಮಸ್ಕರಿಸಿ ಬೆಳಿಗ್ಗೆಯ ಆಹಾರವನ್ನು ಸೇವಿಸಿದ ನಂತರ ನಿತ್ಯದ ಕಾರ್ಯಗಳನ್ನು ಮುಗಿಸಿ ಮಧ್ಯಾಹ್ನದ ಆಹಾರವನ್ನು ಸೇವಿಸಬೇಕು. ಈ ಮಧ್ಯಾಹ್ನದ ಆಹಾರದಲ್ಲಿ ತಂಬುಳಿ, ಚಟ್ನಿ, ಸಾರು, ಹುಳಿ ಹಾಗೂ ಕೊನೆಯದಾಗಿ ಮಜ್ಜಿಗೆ ಅನ್ನವನ್ನು ಸೇವಿಸುವುದರಿಂದ ಸರಿಯಾದ ಜೀರ್ಣಕ್ರಿಯೆ ಆಗುವುದಲ್ಲದೆ ಹಲವಾರು ಕಾಯಿಲೆಗೊಳಗಾಗುವುದರಿಂದ ದೂರ ಮಾಡುತ್ತದೆ. ಮುಂಜಾನೆ ಸೂರ್ಯನಿಗೆ ನಮಸ್ಕರಿಸುವುದರಿಂದ ವಿಟಮಿನ್ ಡಿ ಎಂಬ ಪೋಷಕಾಂಶವೂ ದೊರೆಯುತ್ತದೆ. ಅಷ್ಟು ಮಾತ್ರವಲ್ಲದೆ ನಮ್ಮ ಆಲಸ್ಯವನ್ನು ದೂರಮಾಡಿ ದೈನಂದಿನ ಕಾರ್ಯಗಳಲ್ಲಿ ತೇಜಸ್ಸಿನಿಂದ ತೊಡಗಲು ಸಹಾಯ ಮಾಡುತ್ತದೆ. ವರ್ಷದಲ್ಲಿ ನಾವು ಬೇಸಿಗೆ ಕಾಲ, ಮಳೆಗಾಲ ಮತ್ತು ಚಳಿಗಾಲ ಎಂಬ 3 ಕಾಲಚಕ್ರಗಳನ್ನು ನಾವು ಗಮಿಸಬಹುದು. ಪ್ರತಿಯೊಂದು ಕಾಲವು ಪ್ರಾಕೃತಿಕವಾಗಿ ಮನುಷ್ಯನ ದೇಹದ ಮೇಲೆ ಪರಿಣಾಮವನ್ನುಂಟು ಮಾಡುತ್ತದೆ. ಆದರೆ ಈ ಪರಿಣಾಮಗಳಿಂದ ದೂರಹೊಂದಲು ನಮ್ಮ ಪೂರ್ವಜರು ಹಬ್ಬಗಳನ್ನು ಆಚರಿಸುತ್ತಾ ಸರಿಯಾದ ಆಹಾರ ಪದ್ಧತಿಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಪ್ರತಿಯೊಂದು ಹಬ್ಬವನ್ನು ಆಚರಿಸುವುದರಿಂದ ಜೀವನದಲ್ಲಿ ಉತ್ಸಾಹ ಹಾಗೂ ಧನಾತ್ಮಕತೆಯು ಹೆಚ್ಚಾಗುತ್ತದೆ. ಅದಲ್ಲದೆ ಅತ್ಯಂತ ಮುಖ್ಯವಾಗಿ ಬಂಧುಮಿತ್ರರು ಹಬ್ಬಗಳಲ್ಲಿ ಭಾಗವಹಿಸುವುದರಿಂದ ಸ್ತ್ರೀಯರಿಗೆ ತನ್ನನ್ನು ತಾನೂ ಸಮಾಜದಲ್ಲಿ ಸೇರಿಸಿಕೊಳ್ಳಲು ಅವಕಾಶ ದೊರೆಯುತ್ತದೆ. ಅಷ್ಟು ಮಾತ್ರವಲ್ಲದೆ ಆಯಾ ಕಾಲಗಳಿಗೆ ಅನುಗುಣವಾಗಿ ಪ್ರಕೃತಿಯಲ್ಲಿ ಸಿಗುವ ದವಸ, ಧಾನ್ಯಗಳನ್ನು ಉಪಯೋಗಿಸಿ ಹಬ್ಬ ಮಾಡುವುದರಿಂದ ಆಯಾ ಕಾಲಕ್ಕೆ ಬೇಕಾದಂತಹ ಪೌಷ್ಟಿಕಾಂಶವು ದೊರೆಯುತ್ತದೆ. ಪ್ರಮುಖ ಹಬ್ಬಗಳು ಯಾವುದೆಂದರೆ ಯುಗಾದಿ, ಗಣೇಶ ಚತುರ್ಥಿ, ನವರಾತ್ರಿ, ದೀಪಾವಳಿ, ಸಂಕ್ರಾಂತಿ, ಶಿವರಾತ್ರಿ ಇತ್ಯಾದಿ. ಹಿಂದು ಪಂಚಾಂಗದ ವರ್ಷದಲ್ಲಿ ಮೊದಲಿಗೆ ಯುಗಾದಿಯನ್ನು ಆಚರಿಸುತ್ತಾರೆ. ಪ್ರಕೃತಿಯಲ್ಲಿ ಸಿಗುವ ಬೇವು–ಬೆಲ್ಲವನ್ನು ತಿಂದು ಜೀವನದಲ್ಲಿ ಸುಖ–ದುಃಖ ಎಂಬ ಭಾವನೆಗಳನ್ನು ಸಮವಾಗಿ ತೆಗೆದುಕೊಳ್ಳಬೇಕೆಂಬ ಸಂದೇಶವನ್ನು ವರ್ಷದ

ವೊದಲಿಗೆ ತಿಳಿಸಿಕೊಡುತ್ತದೆ. ನಂತರ ಗಣೇಶ ಚತುರ್ಥಿಯಂದು ಎಲ್ಲಾ ಕೆಲಸಗಳಿಗೂ ವಿಘ್ನನಿವಾರಕನಾದ ಗಣೇಶನಿಗೆ ಪೂಜೆ ಸಲ್ಲಿಸಿ, ಅವನಿಗೆ ಪ್ರಿಯವಾದ ಮೋದಕವನ್ನು ಮಾಡುತ್ತಾರೆ. ಇಲ್ಲಿ ಸಕಾರಾತ್ಮಕತೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ನಂತರ ನವರಾತ್ರಿ, ದೀಪಾವಳಿ ಹಬ್ಬದಲ್ಲಿ ಜೀವನದಲ್ಲಿ ಕತ್ತಲೆಯಿಂದ ದೂರವಾಗಿ ಬೆಳಕನ್ನು ಹೊಂದುವ ಭಾವನೆಯಿಂದ ದೀಪಗಳನ್ನು ಹಚ್ಚುತ್ತಾರೆ. ಆ ಸಂದರ್ಭದಲ್ಲಿ ಭತ್ತದ ತೆನೆಗಳಲ್ಲಿ ಹಾಲಿನಂಶಯಿರುವುದರಿಂದ ಹುಳು, ಕ್ರಿಮಿಕೀಟಗಳು ಆ ತೆನೆಗಳನ್ನು ತಿನ್ನಲು ಬಯಸುತ್ತದೆ. ಈ ಕ್ರಿಮಿಗಳನ್ನು ಆ ಭತ್ತದ ತೆನೆಯಿಂದ ದೂರ ಮಾಡುವ ಉದ್ದೇಶದಿಂದ ಗದ್ದೆಗಳಲ್ಲಿ ದೀಪದ ದೀವಟಿಕೆಗಳನ್ನು ಹಚ್ಚುತ್ತಾರೆ.

ನಂತರ ಕೊನೆಯದಾಗಿ ಸಂಕ್ರಾಂತಿ ಹಬ್ಬದಲ್ಲಿ ಎಳ್ಳು, ಬೆಲ್ಲ, ಶೇಂಗಾ ಕಾಳುಗಳಿಂದ ಮಾಡಿದ ತಿನಿಸುಗಳನ್ನು ತಿನ್ನುವುದರಿಂದ ಚಳಿಗಾಲದಲ್ಲಿ ಬೇಕಾದಂತಹ ಎಣ್ಣೆ ಅಂಶವು ದೊರಕುತ್ತದೆ. ಹೀಗೆ ಸಂಪ್ರದಾಯಿಕವಾಗಿ ಹಬ್ಬಗಳ ಮೂಲಕ ನಮ್ಮ ದೇಹದ ಸಮತೋಲನದಿಂದಿಟ್ಟುಕೊಳ್ಳಲು ಸಹಕರಿಸುತ್ತದೆ. ಇಷ್ಟು ಮಾತ್ರವಲ್ಲದೆ ತಾಮ್ರದ ಪಾತ್ರೆಯ ನೀರನ್ನು ಸೇವಿಸುವುದರಿಂದ ದೇಹದ ಉಷ್ಣಾಂಶವನ್ನು ಕಡಿಮೆ ಮಾಡುತ್ತದೆ. ಹೀಗೆ ಸಂಪ್ರದಾಯಿಕ ಆಚರಣೆಯ ಹಲವಾರು ಮಹತ್ವವನ್ನು ಹೊಂದಿದೆ. ಇನ್ನು ಹಲವಾರು ಸಂಪ್ರದಾಯಗಳ ಮಹತ್ವವು ಇನ್ನು ಬೆಳಕಿಗೆ ಬಂದಿಲ್ಲದಿದ್ದರು ಅದರ ಉಪಯೋಗವು ದೊರಕುತ್ತಿದೆ.

ಆದರೆ ಇಂದು ಸಂಪ್ರದಾಯದ ಆಚರಣೆಯು ಮಾಸಿ ಹೋಗುತ್ತಿದ್ದು, ಸಂಪ್ರದಾಯದ ಹಿಂದಿನ ಮಹತ್ವವನ್ನು ಅರಿಯದೆ ಈಗಿನ ಜನರು ಮೂಢನಂಬಿಕೆ ಎಂದು ತಿಳಿದಿದ್ದಾರೆ. ಮನುಷ್ಯನು ತನ್ನ ಹೊಸ ಹೊಸ ಆವಿಷ್ಕಾರದಿಂದ ಅಸಂಪ್ರದಾಯಿಕ ಜೀವನವನ್ನು ನಡೆಸುತ್ತಾ, ಅವರ ಜೀವನದ ಅಂತಿಮಕ್ಕೆ ಅವರೆ ಪ್ರಯತ್ನ ಪಡುತ್ತಿದ್ದಾರೆ. ಸಂಸ್ಕೃತ ಅಧ್ಯಯನದ ಮಹತ್ವವನ್ನು ಮರೆತ ನಮ್ಮ ಭಾರತೀಯರಾದರೆ, ಅದೇ ವೇಳೆಯಲ್ಲಿ ಇಂದು ಅದರ ಮಹತ್ವವನ್ನು ತಿಳಿದ ಪರದೇಶಿಯರು ಸಂಸ್ಕೃತ ಅಧ್ಯಯನದೆಡೆಗೆ ಧಾವಸುತ್ತಿದ್ದಾರೆ. ಭಾರತದ ಕೆಲವೊಂದು ಸಂಪ್ರದಾಯವು ಇಂದು ಮಾಸಿಹೋಗಿದ್ದರೂ ಇನ್ನೂ ಕೆಲವು ಭಾಗಗಳಲ್ಲಿ ಇದು ಪ್ರಚಲಿತವಾಗಿದೆ. ಸಂಪ್ರದಾಯವೂ ಕೇವಲ ಆಹಾರ ಪದ್ಧತಿಯನ್ನು ತಿಳಿಸಿಕೊಡುವುದು ಮಾತ್ರವಲ್ಲದೆ ಜೀವನದಲ್ಲಿ ಉತ್ಸಾಹವನ್ನು ಕೂಡ ತುಂಬುತ್ತದೆ.

सकृत्कन्दुकपातेनोत्पतत्यार्यः पतन्नपि ।
तथा त्वनार्यः पतति मृत्पिण्डपतनं यथा ॥

ಸಕೃತ್ಕಂದುಕಪಾತೇನೋತ್ಪತತ್ಯಾರ್ಯಃ ಪತನ್ನಪಿ ।
ತಥಾ ತ್ವನಾರ್ಯಃ ಪತತಿ ಮೃತ್ಪಿಂಡಪತನಂ ಯಥಾ ॥

ಸಜ್ಜನನು ಒಮ್ಮೆ ಬಿದ್ದರೂ ಚೆಂಡಿನಂತೆ ಪುನಃ ಪುಟಿದೇಳುತ್ತಾನೆ.
ಆದರೆ ದುರ್ಜನನು ಮಾತ್ರ ಮಣ್ಣಿನ ಹೆಂಟೆ ಬಿದ್ದಂತೆ ಬೀಳುತ್ತಾನೆ.೨೫

Even if virtuous man falls once, he rebounds like a ball and awakes.
But the bad man if so falls never awakes, like a mud ball fallen on the ground.

ಸಂಸ್ಕೃತ ಮತ್ತು ವಿಜ್ಞಾನ

ಗಣಪತಿ ವೈ ಸಭಾಹಿತ.
ಪ್ರ. ಬಿ.ಎಸ್ಸಿ.

ಒಂದು ಭಾಷೆಯಾಗಿ ಸಂಸ್ಕೃತ

ಸಂಸ್ಕೃತವು ಇತರ ಎಲ್ಲ ಭಾಷೆಗಳಂತೆಯೇ ಇದ್ದರೂ ಅದು ಬಹಳ ಸಂಕೀರ್ಣವಾದದ್ದು ಮತ್ತು ಎಲ್ಲ ದೃಷ್ಟಿಗಳಿಂದಲೂ ಮಾತೃಭಾಷೆಯೆಂದು ಭಾವಿಸಲಾಗಿದೆ. ಈ ಸಂಸ್ಕೃತ ಭಾಷೆಯು ಧಾರ್ಮಿಕ ಮತ್ತು ತತ್ವಶಾಸ್ತ್ರದ ವಿಷಯಗಳನ್ನು ತಿಳಿಸುವ ಉತ್ತಮ ಸಾಧನವಾಗಿದೆ. ಈ ಸಂಸ್ಕೃತವು ಅತಿ ಸೂಕ್ಷ್ಮ ಕ್ಲಿಷ್ಟ ಗಣಿತಶಾಸ್ತ್ರದ ವಿಷಯಗಳೂ ಸೇರಿದಂತೆ ವೈಜ್ಞಾನಿಕ ವಿಷಯವನ್ನು ಸಮರ್ಥವಾಗಿ ತಿಳಿಸಬಲ್ಲ ಮಾಧ್ಯಮವಾಗಿದೆ.

ಸಂಸ್ಕೃತ ವ್ಯಾಕರಣ ಮತ್ತು ಪಾಣಿನಿ

ಗ್ರೀಕ್ ಮತ್ತು ಲ್ಯಾಟಿನ್ ಸೇರಿದಂತೆ, ಪ್ರಪಂಚದ ಇತರ ಯಾವ ಭಾಷೆಗಳಲ್ಲಿಯೂ ಕಾಣದೇ ಇರುವ ವೈಜ್ಞಾನಿಕ ಗರಿಮೆ ಸಂಸ್ಕೃತಕ್ಕೆ ಇದೆ. ಗ್ರೀಕ್ ಹಾಗೂ ಲ್ಯಾಟಿನ್ ಭಾಷೆಗಳಿಗೂ ಸಂಸ್ಕೃತಕ್ಕೂ ತುಂಬ ಹತ್ತಿರದ ಸಂಬಂಧವು ಪದ ಸಂಪತ್ತು ಮತ್ತು ವ್ಯಾಕರಣಗಳಲ್ಲಿ ಕಾಣಬರುತ್ತದೆ. ಪಾಣಿನಿಯು ತನ್ನ ಅಷ್ಟಾಧ್ಯಾಯಿಯಲ್ಲಿ ನೀಡಿರುವ ವ್ಯಾಕರಣ ಸುಮಾರು 2500 ವರ್ಷಗಳ ಹಿಂದೆ ರಚಿತವಾದ ಗ್ರಂಥ. ಇದರಲ್ಲಿ ನಾಲ್ಕುಪಾದ ಎಂಟು ಅಧ್ಯಾಯಗಳಿವೆ. ಇದು ಮಾನವನ ಬುದ್ಧಿಶಕ್ತಿಯ ಅತ್ಯಂತ ಶ್ರೇಷ್ಠತೆಯನ್ನು ಪ್ರದರ್ಶಿಸುತ್ತದೆ.

ಪಾಣಿನಿಯು ವ್ಯಾಕರಣ ಹಾಗೂ ಯೂಕ್ಲಿಡ್‌ನ ಜ್ಯಾಮಿತಿಗೂ ವಿಶೇಷ ಸಾಮರಸ್ಯವಿದೆ. ಪಾಣಿನಿಯು ಕೆಲವು ಸಾಮಾನ್ಯ ತತ್ವಗಳನ್ನು ನಿರೂಪಿಸುವ ಧಾತುಗಳಿಂದ ಆರಂಭಿಸಿ, ಸ್ವರ, ವ್ಯಂಜನ, ನಾಮಪದ, ಸರ್ವನಾಮ ಮುಂತಾದ ಅನೇಕ ಭಾಗಗಳಾಗಿ ವಿಂಗಡಿಸಿದ್ದಾನೆ. ಪಾಣಿನಿಯು ತನ್ನ ಚಿಂತನೆಗಳನ್ನು ಸುಮಾರು ನಾಲ್ಕು ಸಾವಿರ ಸೂತ್ರಗಳನ್ನು ಆರು ವಿಭಾಗಗಳಲ್ಲಿ ಪ್ರಸ್ತುತ ಪಡಿಸಿದ್ದಾನೆ. ಅವೇ ಸಂಜ್ಞಾ, ಪರಿಭಾಷಾ, ವಿಧಿ, ನಿಯಮ, ಅಧಿಕಾರ ಮತ್ತು ಆದೇಶ.

ಉಪಯುಕ್ತ ಭಾಷೆಯಾಗಿ ಸಂಸ್ಕೃತ

ಒಂದು ಭಾಷೆಯನ್ನು ಶ್ರೇಷ್ಠವಾಗಿ ಮಾಡುವ ಅಂಶಗಳೇನು ಹಾಗೂ ಅದಕ್ಕೆ ಭಿನ್ನವಾಗಿ ಒಂದು ಭಾಷೆಯನ್ನು ಉಪಯುಕ್ತವಾಗಿ ಮಾಡುವ ಗುಣಗಳೇನು ಎಂಬುದನ್ನು ತಿಳಿಸಲಾಗಿದೆ. ಒಂದು ಭಾಷೆಯು ಉಪಯುಕ್ತವಾಗಬೇಕಾದರೆ ಅದು ಸರಳವಾಗಿರಬೇಕು. ಸಂಸ್ಕೃತವು ಸರಳ ಭಾಷೆಯಾಗಿದೆ. ಒಂದಾನೊಂದು ಕಾಲದಲ್ಲಿ ಅದು ಸಾಮಾನ್ಯಜನರ ಆಡುಭಾಷೆಯಾಗಿ ಮಾತ್ರವಲ್ಲದೆ, ಸಂಪರ್ಕ ಭಾಷೆಯಾಗಿ ಮೆರೆದಿತ್ತು. ಸಂಸ್ಕೃತವು ಇಂದಿಗೂ ಬಳಕೆಯಲ್ಲಿದ್ದು, ಪರಿಮಿತಿಯ ಅರ್ಥದಲ್ಲಿ ಸಾಹಿತ್ಯಿಕ ರಚನೆಗಳ ಮಾಧ್ಯಮವೂ ಆಗಿದೆ. ಅಷ್ಟೇ ಅಲ್ಲದೆ, ಸಂಸ್ಕೃತವು ಎಲ್ಲ ರೀತಿಯ ಶ್ರೀಮಂತ ರಚನೆಯ ಬೆಳವಣಿಗೆಗೆ ಕಾರಣವಾಗಿದ್ದಿತು. ಕಾಲಕ್ರಮದಲ್ಲಿ ಇವುಗಳಿಂದ ಆಧುನಿಕ ಕಾಲದ ವಿವಿಧ ಪ್ರಾಂತೀಯ ಭಾಷೆಗಳು ವಿಕಾಸಗೊಂಡವು.

ಸಂಸ್ಕೃತ ಎಲ್ಲರನ್ನೂ ಒಳಗೊಂಡಿರುವ ಭಾಷೆ

ಸಂಸ್ಕೃತದಲ್ಲಿ ಎಲ್ಲ ರೀತಿಯ ಚಿಂತನೆಗಳನ್ನೂ ಅಂದರೆ ಪುರಾಣಗಳಿಂದ ಸಾಹಿತ್ಯದವರೆಗೆ ಮತ್ತು ವಿಜ್ಞಾನದಿಂದ ತತ್ವಶಾಸ್ತ್ರದವರೆಗೆ ಅಭಿವ್ಯಕ್ತಿಗೊಳಿಸಬಹುದು. ಪ್ರತಿಯೊಂದು ಹೇಳಿಕೆಗೂ, ಒಂದಕ್ಕಿಂತ ಹೆಚ್ಚು ಅರ್ಥಗಳಿದ್ದು, ಭಾಷೆಗೆ ಒಂದು ರೀತಿಯ ವಿವಿಧ ವರ್ಣ ಸ್ಫುರಣ ಗುಣವನ್ನು ನೀಡುತ್ತದೆ. ಇದರಿಂದಾಗಿ ಗದ್ಯ, ಪದ್ಯ, ಸಂಗೀತ, ನೃತ್ಯ ಮುಂತಾದವುಗಳಿಗೆ ಅವಕಾಶ ಮಾಡಿಕೊಡುತ್ತದೆ. ಸಂಸ್ಕೃತ ಪುರಾಣಗಳು ಹೆಚ್ಚಿನ ವ್ಯಾಪ್ತಿ ಹೊಂದಿದ್ದು, ಶ್ರೇಷ್ಠ ರೀತಿಯ ಕಲ್ಪನಾ ಸಾಂಕೇತಿಕತೆ ಹಾಗೂ ಅನೇಕ ಸಾರಿ ಅಗಾಧತೆಯನ್ನು ತೋರ್ಪಡಿಸುತ್ತದೆ. ಇದೇ ಮಾತು ತತ್ವಶಾಸ್ತ್ರದ ಬಗೆಗೂ ಅನ್ವಯವಾಗುತ್ತದೆ. ಏಕೆಂದರೆ ಇದರಲ್ಲಿ ವಿಶೇಷ ಸೂಕ್ಷ್ಮತೆಯ ಅವಶ್ಯಕತೆ ಇದ್ದು, ಲೌಕಿಕ ವಿಷಯಗಳಿಂದ ಹಿಡಿದು ಅತ್ಯಂತ ಶ್ರೇಷ್ಠ ವುಟ್ಟದ ಆಧ್ಯಾತ್ಮ ವಿಚಾರಗಳನ್ನು ಅಭಿವ್ಯಕ್ತಿಗೊಳಿಸಲಾಗಿದೆ.

ಸಂಸ್ಕೃತದಲ್ಲಿ ವಿಜ್ಞಾನ

ಪ್ರಾಚೀನ ಕಾಲದಲ್ಲಿ ಸಂಸ್ಕೃತವು ವೈಜ್ಞಾನಿಕ ಚಿಂತನೆಗಳ ಪರಿಣಾಮಕಾರಿಯಾದ ಮಾಧ್ಯಮವಾಗಿತ್ತು. ಮತ್ತು ಕಲೆ, ತತ್ವಶಾಸ್ತ್ರ, ಧರ್ಮ, ಕಾನೂನು ಮುಂತಾದವುಗಳ ಜೊತೆಗೆ ವಿಜ್ಞಾನವನ್ನು ಕುರಿತಾದ ಸಾಹಿತ್ಯ ಗ್ರಂಥಗಳು ಸಂಸ್ಕೃತದಲ್ಲಿ ಹೇರಳವಾಗಿವೆ. ಗಣಿತಶಾಸ್ತ್ರ, ವೈದ್ಯ ವಿಜ್ಞಾನ, ಖಗೋಳಶಾಸ್ತ್ರ ಮತ್ತು ತತ್ವಶಾಸ್ತ್ರ ಮುಂತಾದವುಗಳು.

ಸಂಸ್ಕೃತದಲ್ಲಿ ಗಣಿತಶಾಸ್ತ್ರ

ಭಾರತದಲ್ಲಿ ಗಣಿತಶಾಸ್ತ್ರಕ್ಕೆ ದೀರ್ಘವಾದ ಹಾಗೂ ಶ್ರೇಷ್ಠ ಹಂತದ ಇತಿಹಾಶವಿದೆ. ಪೈಥಾಗೋರಸ್‌ನ ಪ್ರಮೇಯವು ಶುಲ್ಬ ಸೂತ್ರಗಳಲ್ಲಿ ವಿವರಿಸಲ್ಪಟ್ಟಿದೆ. ಬೋಧಾಯನನು (ಕ್ರಿ.ಪೂ. 600–500) ನೀಡಿರುವ ನಿರೂಪಣೆ ಹೀಗಿದೆ.

ದೀರ್ಘ ಚತುರಸ್ರಸ್ಯಾಕ್ಷ್ಣಯಾರಜ್ಜುಃ ಪಾರ್ಶ್ವಮಾನೀ
ತಿರ್ಯಙ್ಮಾನೀ ಚ ।
ಯತ್ಪೃಥಗ್ಭೂತೇ ಕುರುತಸ್ತದುಭಯಂ ಕರೋತಿ ॥

ಒಂದು ಚತುರ್ಭುಜಾಕೃತಿಯ ಕರ್ಣರೇಖೆಯು ಎರಡು ಭುಜಗಳಿಂದ ತಾನೇ ಎರಡು ಭಾಗಗಳನ್ನು ಸೃಷ್ಟಿಸುತ್ತದೆ.

ಕೆಲವು ಸೂತ್ರಕಾರರು ಕೊಟ್ಟಿರುವ ಸಂಖ್ಯೆಯು ಸೂತ್ರಗಳಿಂದ ಸುಮಾರಾಗಿ ಕರಣೀಗತ (Irrational Number) ಸಂಖ್ಯೆಗಳಾದ ದ್ವಿಕರಣೀ ಮತ್ತು ತ್ರಿಕರಣೀ ಮೌಲ್ಯವನ್ನು ತಿಳಿಯಬಹುದಾಗಿದೆ. ಬೋಧಾಯನ ಮತ್ತು ಆಪಸ್ತಂಬರ ಪ್ರಕಾರ–

ಪ್ರಮಾಣಂ ತೃತೀಯೇನ ವರ್ಧಯೇತ್ತಚ್ಚ ಚತುರ್ಥೇನ
ಆತ್ಮಚತುಸ್ತ್ರಿಂಶೋನೇನ ಸವಿಶೇಷಃ ॥

ಮತ್ತು

ಕಾತ್ಯಾಯನನ ಪ್ರಕಾರ–

ಕರಣೀಂ ತೃತೀಯೇನ ವರ್ಧಯೇತ್ತಚ್ಚ ಸ್ವ ಚತುರ್ಥೇನ
ಆತ್ಮಚತುಸ್ತ್ರಿಂಶೋನೇನ ಸವಿಶೇಷಃ ಇತಿ ವಿಶೇಷಃ ॥

ಒಂದು ಮೊತ್ತವನ್ನು ಅದರ ಮೂರನೆಯ ಒಂದು ಭಾಗದಿಂದ ಹೆಚ್ಚಿಸಿರಿ; ಈ ಮೂರನೆ ಯದರ ನಾಲ್ಕನೆಯ ಒಂದು ಭಾಗವನ್ನು ಸೇರಿಸಿ, ಆ ನಾಲ್ಕನೆಯ ಭಾಗದ ಮೂವತ್ತನಾಲ್ಕನೆಯ ಒಂದು ಭಾಗವನ್ನು ಕಳೆಯಿರಿ. ಈ ಹೆಚ್ಚಿದ ಮೊತ್ತದ ಹೆಸರೇ ಸವಿಶೇಷ.

ಮೊದಲನೆಯ ಆರ್ಯಭಟನು ಒಂದು ನಕ್ಷತ್ರವು ಮಧ್ಯಾಹ್ನ ರೇಖೆಯನ್ನು ಒಮ್ಮೆ ಹಾದಂದಿನಿಂದ ಮತ್ತೊಮ್ಮೆ ಭೂಮಿಯ ಅಕ್ಷದ ಮೇಲೆ ಹಾಯುವುದಕ್ಕೆ ತೆಗೆದುಕೊಳ್ಳುವ ಸಮಯವನ್ನು ಕೊಟ್ಟಿದ್ದಾನೆ. ಆಶ್ಚರ್ಯವೆಂದರೆ ಅದು ಆಧುನಿಕ ವಿಜ್ಞಾನಿಗಳು ನೀಡಿರುವ ಸಮಯಕ್ಕೆ ಅತೀ ಹತ್ತಿರದಲ್ಲಿದೆ, ಒಂದು ಯುಗದಲ್ಲಿ ತನ್ನ ಪೂರ್ವಾಭಿಮುಖವಾಗಿ ತಿರುಗುವುದರ ಸಂಖ್ಯೆಯಿಂದ ಇದನ್ನು ಹೊಂದಿಸಿ ಕೊಂಡು ಕೆಳಗಿನ ಶ್ಲೋಕವನ್ನು ನೀಡಿದ್ದಾನೆ.

ಯುಗರವಿಭಗಣಾಃ ಖ್ಯಿಘೃ ಶಶಿ ಚಯಗಿಯಿಜುಶುಘ್ಲ್ಲು ಜಶಿಬುಣ್ಲ್ಲುಖ್ಷ್ಯ ಪ್ರಾಕ್ ॥

ಒಂದು ಯುಗದಲ್ಲಿ ಭೂಮಿಯ ಪೂರ್ವಾಭಿಮುಖ ಚಲನೆಯು 1,58,22,37,500 ಆದುದರಿಂದ ನಾಕ್ಷತ್ರಿಕ ಭೂಮಿಯ ಚಲನೆಯ ಕಾಲ

=1,57,79,17,500/1,58,22,37,500 ದಿವಸಗಳು

=23ಘ 56ನಿ 43.1ಸೆ.

ಆಧುನಿಕ ಲೆಕ್ಕಾಚಾರದಂತೆ ಈ ಕಾಲವು = 23ಘ 56ನಿ 4,091 ಸೆ. ಆಗಿದೆ.

न कश्चिच्चण्डकोपानामात्मीया नाम भूभुजाम् ।
होतारमपि जुह्वानं स्पृष्टो दहति पावकः ॥
-नीतिशतकम्

ನ ಕಶ್ಚಿಚ್ಚಂಡಕೋಪಾನಾಮಾತ್ಮೀಯಾ ನಾಮ ಭೂಭುಜಾಮ್।
ಹೋತಾರಮಪಿ ಜುಹ್ವಾನಂ ಸ್ಪೃಷ್ಟೋ ದಹತಿ ಪಾವಕಃ ॥

ಅತ್ಯಂತ ಸಿಡುಕಿನ ಸ್ವಭಾವದ ರಾಜರಿಗೆ
'ಈತ ನಮ್ಮ ಆತ್ಮೀಯ' ಎನ್ನುವ ಭಾವನೆಯಿರುವುದಿಲ್ಲ.
ಏಕೆಂದರೆ ತಾಗಿದ ಬೆಂಕಿಯು ಆಹುತಿ ಕೊಡುವ ವ್ಯಕ್ತಿಯನ್ನೇ ಸುಟ್ಟುಬಿಡುತ್ತದೆ.

ಸಂಸ್ಕೃತಸ್ಯ ಮಹತ್ತ್ವಮ್

ಕೆ. ಶ್ರೀನಿವಾಸ ಭಟ್
ಪ್ರ. ಬಿ.ಎಸ್ಸಿ.

ದೇವಾಸುರ ದೈತ್ಯದಾನವ ರಾಕ್ಷಸಾದ್ಯಖಿಲದೇವಯೋನಿ ನಿರ್ವಿಶೇಷ ಸಮುದೃತವ್, ನಿಖಿಲ ಮಾನವ ಮಂಗಲಪ್ರದಮ್, ಸನಾತನ ಜೈನಬೌದ್ಧ ಚಾರ್ವಾಕ ದೈಶಿಕ ವೈದೇಶಿಕ ಸಕಲವೈದಿಕಾವೈದಿಕಮತ ಮತಾನ್ತರಾನುಯಾಯಿ ಜನಮನೋವೋದಕಂ, ಸಂಸ್ಕೃತಂ ಹಿ ಸುಸಂಸ್ಕೃತಾನಾಮಾರ್ಯಾಣಾಂ ಜೀವನ ಸರ್ವಸ್ವಮ್, ಸರ್ವಾದಿಜಗದ್ಗುರೋರ್ಬ್ರಹ್ಮಣೋ ಮುಖೇಭ್ಯಃ ಸ್ವಯಂ ಪ್ರವೃತ್ತಾವಾಕ್, ದೇವಾನಾಂ ಸರ್ವವ್ಯವಹಾರ ಪ್ರಸೂರ್ದಿವ್ಯಾ ಚಾವೋಘಾ ಚ ಗೀಃ, ವೇದೋಪವೇದ ಬ್ರಾಹ್ಮಣಾರಣ್ಯಕೋಪನಿಷತ್ಸ್ಮೃತಿಪುರಾಣೋಪಪುರಾಣ ಶಿಕ್ಷಾಕಲ್ಪ ವ್ಯಾಕರಣ ನಿರುಕ್ತಚ್ಛನ್ದೋಜ್ಯೌತಿಷ್ಯ ನ್ಯಾಯ ವೈಶೇಷಿಕ ಸಾಂಖ್ಯಯೋಗ ಮೀಮಾಂಸಾವೇದಾಂತಾದಿ ಸರ್ವದರ್ಶನ ಕೋಷಕಾವ್ಯನಾಟಕಾಖ್ಯಾನಕಾಖ್ಯಾಯಿ ಆರಚತುಃ ಷಷ್ಟಿಕಲಾ ಸಂಗೀತಾ ಚತುರ್ವರ್ಗಗಜಗವಾಶ್ವಪುರುಷಲಕ್ಷಣ ಚಿಕಿತ್ಸಾಗ್ರಸ್ಥೇತಿ ಹಾಸಾಂಗಸೂತ್ರ ಜಾತಕ ಭಾಷ್ಯವಾರ್ತಿಕ ವ್ಯಾಖ್ಯಾದ್ಯಖಿಲವಾಙ್ಮಯಜನ್ಮಭೂಃ, ನಿಖಿಲವಿಶ್ವಭಾಷಾದಿಜನನೀ, ಮಾನವ ಜೀವನಸ್ಯಾದಿಮಧ್ಯಾವಸಾನೇಷು ಸದಾ ಸಮಪೇಕ್ಷಿತಾ ವಾಣೀ ।

ಅಥವಾ ಸಂಸ್ಕೃತಭಾಷಾಯಾ ವಯಂ ಕಾನ್‌ಗುಣಾನ್ ಗಾಯಾಮಃ? ಗಾಯನ್ತೋಪಿ ಚ ಕಥಂ ತೇಷಾಂ ಪಾರಮಾಸಾದಯಾಮಃ? ಇಯಂ ಹಿ ಭಾಷಾಸ್ಮಾಸು ಭಾರತೀಯತ್ವಂ ಜಾಗರಯತಿ, ಭಾರತೀಯೇಷ್ವೇಕತಾಂ ಸಂಚಾರಯತಿ, ನ ಕೇವಲ ಭಾರತೀಯಾಃ ಪ್ರಾದೇಶಿಕೀರೇವ, ಯಾವದ್ ವೈದೈಶಿಕೀರಪಿ ಭಾಷಾಃ ಪರಿಷ್ಕರೋತಿ, ಮಾನವ ಮಾತ್ರಸ್ಯ ಮಸ್ತಿಷ್ಕಂ ಸಂಸ್ಕರೋತಿ, ತತ್ರಜ್ಞಾನ ವಿಜ್ಞಾನ ಪ್ರಭಾಂ ಪ್ರಸಾರಯತಿ, ತದ್ ಹೃದಯೇ ಸರ್ವದಾನನ್ದಸನ್ದೋಹಂ ಆರೋಹಯತಿ, ಸತ್ಪಥಪ್ರವೃತ್ತಿಂ ಜನಯತಿ, ಸದ್ಗುಣಗೌರವಂ ಪ್ರಕಟಯತಿ, ವಿಶ್ವಬನ್ಧುತಾಂ ವಿಸ್ತಾರಯತಿ, ಸರ್ವಭೂತೇಷ್ವೇಕತ್ವಂ ಪ್ರದರ್ಶಯತಿ, ಸರ್ವತಃ ಶಾಸ್ತಿಂ ಸಂಸ್ಥಾಪಯತಿ, ತ್ಯಾಗಂ, ತಪಃ, ಸನ್ತೋಷಂ, ಸೇವಾಂ ಚ ಶಿಕ್ಷಯತಿ, ವಿಶ್ವಕಲ್ಯಾಣ ಭಾವನಾಮುದ್ಭಾವಯತಿ, ಪಂಚಶೀಲ ಪರಿಶೀಲನಮಾವಿರ್ಭಾವಯತಿ, ಜ್ಞಾನವಿಜ್ಞಾನಯೋಃ ಸಮನ್ವಯಮಾತನೋತಿ, ಭುಕ್ತಿಂ ಮುಕ್ತಿಂ ಚ ಅವಿರೋಧೇನೋದ್ವೇಲಯತಿ, ಧರ್ಮಾರ್ಥಕಾಮ ಮೋಕ್ಷಾಂಶ್ಚತುರೋಪಿ ಪುರುಷಾರ್ಥಾನ್ ಸಮುಪಸ್ಥಾಪಯತಿ, ಐಹಿಕಮಾಮುಷ್ಮಿಕಂ ಚೇತ್ಯುಭಯವಿಧಮಪ್ಯುತ್ಕರ್ಷಂ ಸಮ್ಪಾದಯತಿ, ಸತ್ಯಂ, ಶಿವಂ, ಸುನ್ದರಂ ತತ್ಕಿಮಪಿ ತತ್ತ್ವಂ ಸನ್ನಿಧಾಪಯತಿ, ವಾಚಿಲಾಲಿತ್ಯಂ ಸಂಚಿತಿ, ಮಾಧುರ್ಯಧಾರಾಭಿಃ ಕರ್ಣೌ ಕೃತಾರ್ಥಯತಿ, ವಾಚಿ ಲಾಲಿತ್ಯಂ ವಿಶ್ವಸ್ಯಾಪಿ ವಿಶ್ವಸ್ಯ ಚೇತಶ್ಚಮತ್ಕರೋತಿ, ಪೂರ್ವೇಷಾಮಪಿ ಪೂರ್ವಜಾನಂ ಯಶಶ್ಚ ಸಂಸ್ಮಾರಯತಿ। ಕಿಂ ಬಹುನಾ, ಇಯಂ ಕಲ್ಪಲತೇವ ನಃ ಕಿಂ ಕಿಂ ನ ಸಾಧಯತಿ?

ಏಷಾ ಚ ಭಾರತೇ ಸಮುದ್ಭೂತಾಪಿ ಗಂಗೇವ ಸರ್ವತ್ರ ಜೇಗೀಯತೇ, ಸರ್ವಾನೇವ ಚ ಪಾವಯತಿ । ಭಾರತೇ ವೈದಿಕಾ ಅವೈದಿಕಾಶ್ಚೇತ್ಯುಭಯೇಪಿ ಸಮ್ಪ್ರದಯಾಃ ಸ್ವಸ್ವವಿಚಾರಪರಿಪಾಟೀಪ್ರಬನ್ಧೇಷು ಭಾಷಾನ್ತರಾಣಿ ಸ್ವೀಕುರ್ವಾಣಾ ಅಪಿ ಯದ್ಯತ್ ಸ್ಪಷ್ಟತಾಂ, ಮಾನ್ಯತಾಂ ಚ ನಿನೀಷನ್ತಿ, ತತ್ತದಸ್ಯಾಮೇವ ಭಾಷಾಯಾಂ ಪ್ರತಿನಿಬಧ್ನನ್ತಿ । ಸ್ವಸ್ವಾಭಿಮಥನಂ ಚ ಮತಂ ಸರ್ವಜನ ಸಂವೇದ್ಯತಾಂ ನೇತುಂ ಜೈನಾಃ ಬೌದ್ಧಾ ಅಪೀಮಾಮೇವ ಭಾಷಾಂಪುರಾಸಂಶ್ರಯನ್ತೇ । ಚಾರ್ವಾಕಾ ಲೋಕಾಯತಾಶ್ಚಾಪಿ ಸ್ವಸ್ವದರ್ಶನಾಂ ಅಸ್ಯಾಮೇವ ಭಾಷಾಯಾಂ ಪ್ರಬಧ್ನನ್ತಿ। ಯಾವದ್ ಬಹಿರಪಿ ಭಾರತಾದ್ ದೂರದೂರತರೇಷು ದೇಶೇಷು ಸಂಸ್ಕೃತ ಸಾಹಿತ್ಯಂ ಸರ್ವತೋ ಪ್ರತಿಹತಪ್ರಸರಂ ಪ್ರವಿಶತಿ । ವೇದೇಷು, ದರ್ಶನೇಷು ಪುರಾಣೇಷು, ಕಾವ್ಯೇಷು, ತಥಾವಿಧೇಷು ಚಾನ್ಯೇಷು ವಿಷಯೇಷು ಪಾಶ್ಚಾತ್ಯೈರ್ವಿದ್ವದ್ಭಿಃ ಕೃತಾ ಗವೇಷಣಾಸ್ತೇಷಾಂ ಸಂಸ್ಕೃತ ಭಾಷಾಭಿರುಚೇಃ ಪ್ರಬಲಾನಿ ಪ್ರಮಾಣಾನಿ ಸನ್ತಿ ।

ಯಸ್ಮಿನ್ ಕಸ್ಮಿಂಶ್ಚಿದ್ದೇಶೇ, ಯಸ್ಯಾಂ ಕಸ್ಯಾಂಚಿಚ್ಚಜಾತಾ ಜಾತೇನ ಯೇನ ಕೇನಾಪಿ ಮಾನವೇನ ಸಂಸ್ಕೃತಭಾಷಾಯಾ ಅಧ್ಯಯನಾಧ್ಯಾಪನಾದಿನಾ, ಸಮ್ಪಾದನಪ್ರಕಾಶನಾದಿನಾ ವಾ ಸೇವಾ ಸಮ್ಪಾದಿತಾ, ಸ ಸರ್ವೋಪಿ ಮಾನವೋಸ್ಮಾಕಂ ಮಾನನೀಯಃ, ಶ್ಲಾಘನೀಯಶ್ಚಾಸ್ತಿ । ಅಸ್ಯಾಃ ಸಂಸ್ಕೃತ ಭಾಷಾಂಯಾಃ ಸಾರ್ವಕಾಲಿಕಃ ಸೇವಾವಿಧೇಃ ಇತಿಹಾಸಶ್ಚತುರಾನನಾದಪಿ ಚತುರತರೇಣ ಕೇನಚಿತ್ ಕವಿನಾ ಕೋವಿದೇನ ವಾ ನ ಸಮ್ಪಾದಯಿತುಂ ಶಕ್ಯತೇ ಇತಿ ಗತಾಮೇವ ಶತಾಬ್ದೀಮಾಶ್ರಿತ್ಯಾಯಂ ಗ್ರನ್ಥಃ ವಿರಚ್ಯತೆ। ತತ್ರಾಪಿ ಕಾಲೋ ಯಥಾ ನಿರವಧಿಃ, ಪೃಥಿವ್ಯಪಿ ತಥಾ ವಿಪುಲೇತಿ ಪೃಥಿವ್ಯಾಂ ಭಾರತಂ ವರ್ಷಂ, ಭಾರತೇ ವರ್ಷೇ ಚ ತದೀಯಮುಕ್ತವಾಂಗಂ ಜಮ್ಬೂಸಮೇತಂ ಕಾಶ್ಮೀರಮೇವಾವಲಮ್ಬ್ಯಯಂ ಸಮುಪಕ್ರಮಃ । ಸಮಸ್ತಸ್ಯಾಪ್ಯಸ್ಯ ದೇಶಸ್ಯ ಪ್ರದೇಶೋಯಂ ಮೌಲಿಭೂತೋಪ್ಯದ್ಯಾವದ್ಯೈರ್ನರೈರುತ್ಥಾಪಿತಾ ಭಿರ್ವಿಪದ್ಭಿರಭಿ ಭೂಯಮಾನೋಸ್ತೀತ್ಯಸ್ಮೈ ಸ್ವಸ್ತಯೇ, ಏನಂ ಪ್ರತಿಭಾರತಾಭಿಜನ ಜನ–ಭಾವನಾಜಾಗರಣಾಯ ಚೇತ್ ಏವಾಯಂ ಶುಭಾರಮ್ಭಃ । ಸಂಸ್ಕೃತೋಪಹಾರ್ಯಾಣಾಂ ಕಾರ್ಯಾಣಾಂ ತತ್ಕಾರ್ಯಕರಾಣಾಂ ಚಾಯಂವಿಶದ ಇತಿಹಾಸಃ ಪ್ರಸ್ತೂಯಮಾನ ಏವಾಸ್ತಿ । ಇತಿ ಶಮ್ ॥

मेघदूतम्

निर्मला
द्वितीय बि.काम

ಮೇಘದೂತ ವರಕವಿಕಾಳಿದಾಸನ ಅಮರ ಭಾವಗೀತೆ. ಇದರ ಸುಮಧುರ ವಿರಹಭಾವ ಹೃದಯಾಳದಿಂದ ಚಿಮ್ಮಿ ಹರಿದು ವಾಚಕಲೋಕವನ್ನು ತನ್ಮಯಗೊಳಿಸುತ್ತದೆ. ಇಲ್ಲಿ ದೊರೆಯುವ ಆನಂದ ವಿಗಲಿತವೇದ್ಯಾಂತರ. ಕವಿಯು ಬಳಸಿರುವ ಮಂದಾಕ್ರಾಂತ ವೃತ್ತವು ವಿರಹಕ್ಕೆ ಗಾನರೂಪ ತಂದಿದೆ. ವಿರಹದಲ್ಲಿಯೂ ಅಚ್ಚಳಿಯದೆ ಉಳಿದಿರುವ ಪ್ರೇಮ ಅಮರವಾದುದು. ಸಂಭೋಗಶೃಂಗಾರದಲ್ಲಿ ಕಾಣಿಸಿಕೊಳ್ಳಬಹುದಾದ ಲೋಲುಪತೆ, ಕಾಮುಕತೆಗಳ ಸೋಂಕು ಇದಕ್ಕಿಲ್ಲ. ದಿವ್ಯ ಪ್ರೇಮದ ಮಧುರಸಂದೇಶವೇ ಮೇಘಸಂದೇಶ.

ಒಂದು ವರ್ಷ ಪ್ರಿಯಾವಿರಹವನ್ನುಭವಿಸುವಂತೆ ಕುಬೇರನಿಂದ ಆದೇಶಕ್ಕೊಳಗಾದ ಅಲಕಾಪಟ್ಟಣದ ಯಕ್ಷನು ರಾಮಗಿರಿಗೆ ಬಂದು ನೆಲೆಸಿದನು. ಅಲ್ಲಿ ಎಂಟು ತಿಂಗಳು ಹೇಗೋ ಕಳೆದನು. ಅನಂತರ ಆಷಾಢಮಾಸದ ಆರಂಭದಲ್ಲಿ ಮೇಘದರ್ಶನದಿಂದ ಆತನಿಗೆ ತನ್ನ ಪ್ರಿಯತಮೆಯ ವಿರಹವು ತಾಳಲಾರದಂತಾಯಿತು. ತನ್ನ ಪ್ರೀತಿಯ ಪತ್ನಿಗೂ ಇದೇ ಅವಸ್ಥೆ ಉಂಟಾಗಿರಬೇಕೆಂದು ತಿಳಿದು ಆತನು ಆ ಮೋಡವನ್ನೇ ತನ್ನ ದೂತನನ್ನಾಗಿ ಕಳುಹಿಸಲು ನಿರ್ಧರಿಸಿದನು. ಆ ಪರ್ವತದ ಮೇಲೆ ಆಗತಾನೇ ಅರಳಿದ ಬೆಟ್ಟಮಲ್ಲಿಗೆಯ ಹೂಗಳನ್ನು ಮೋಡಕ್ಕರ್ಪಿಸಿ ಅದನ್ನು ಸ್ತುತಿಸಿದ ಬಳಿಕ ಅಲಕೆಗೆ ಹೋಗುವ ಮಾರ್ಗವನ್ನು ಹೇಳಲಾರಂಭಿಸಿದನು. ಮೂಲಕ್ಷೇತ್ರ, ಆಮ್ರಕೂಟಪರ್ವತ, ವಿಂಧ್ಯಪರ್ವತದಡಿಯಲ್ಲಿ ಬಂಡೆಕಲ್ಲುಗಳಿಂದ ಬೇರ್ಪಟ್ಟ ನರ್ಮದಾನದಿ ಮುಂತಾದವುಗಳನ್ನು ವರ್ಣಿಸಿ ಯಕ್ಷನು ಮೇಘಕ್ಕೆ ದಶಾರ್ಣದೇಶದ ರಾಜಧಾನಿಯಾದ ವಿದಿಶೆಯ ಮಾರ್ಗವನ್ನು ಅರುಹಿದ್ದಾನೆ. ಆಮೇಲೆ ಉಜ್ಜಯನಿಯು

ಹೋಗುವ ಮಾರ್ಗದಲ್ಲಿರದಿದ್ದರೂ ಅಲ್ಲಿಗೆ ಹೋಗಬೇಕೆಂದು ಮೋಡಕ್ಕೆ ಆಗ್ರಹಪಡಿಸಿದ್ದಾನೆ. ಉಜ್ಜಯನಿಯ ವರ್ಣನೆಯನ್ನು ಕವಿಯು ಅತಿವಿಸ್ತಾರವಾಗಿಯೂ ಮಹೋಹರವಾಗಿಯೂ ಮಾಡಿದ್ದಾನೆ. ತರುವಾಯ ದಾರಿಯಲ್ಲಿರುವ ಗಂಭಿರಾನದಿ, ದೇವಗಿರಿ ಎಂಬ ಪರ್ವತದ ಮೇಲಿರುವ ಕಾರ್ತಿಕೇಯ ದೇವಾಲಯ, ಚರ್ಮಣ್ವತೀನದಿ, ದಶಪುರ (ಈಗಿನ ಮಂಡಸೋರು). ಬ್ರಹ್ಮಾವರ್ತದೇಶ, ಕುರುಕ್ಷೇತ್ರ ಸರಸ್ವತೀ ಮತ್ತು ಗಂಗಾನದಿಗಳು, ಹಿಮಾಲಯ ಹಾಗೂ ಅಲಕಾಪಟ್ಟಣ ಇವುಗಳ ರಮ್ಯವಾದ ವರ್ಣನೆಯಿಂದ ಕವಿಯು ಪೂರ್ವ ಮೇಘವನ್ನು ಸಮಾಪ್ತಿಗೊಳಿಸಿದ್ದಾನೆ. ಈ ಭಾಗದಲ್ಲಿ ರಾಮಗಿರಿಯಿಂದ ಅಲಕಾಪಟ್ಟಣದವರೆಗಿನ ದಾರಿಯಲ್ಲಿರುವ ಪರ್ವತಗಳ, ನದಿಗಳ, ದೇಶಗಳ, ನಗರಗಳ, ಗ್ರಾಮಗಳ, ವನಗಳ ಹಾಗೂ ಉಪವನಗಳ ವರ್ಣನೆ ಇದ್ದುದರಿಂದ ಅದು ಅತ್ಯಂತ ಚಿತ್ತಾಕರ್ಷಕವಾಗಿದೆ. ಇದರಲ್ಲಿ ಕವಿಯ ಕಲ್ಪನೆಯು ರಮ್ಯಾವಿಲಾಸವು ಗೋಚರವಾಗುತ್ತದೆ. ಅಂತೆಯೇ ಉತ್ತರಮಾಘದಲ್ಲಿ ಅಲಕಾಪಟ್ಟಣದ ಹಾಗೂ ಯಕ್ಷನ ಮನೆಯ ವರ್ಣನೆಯಲ್ಲಿ ಆತನು ತನ್ನ ಪ್ರತಿಭೆಯಿಂದ ಹೊಸ ಸೃಷ್ಟಿಯನ್ನೇ ನಿರ್ಮಿಸಿ ತನ್ನ ಕಲ್ಪನಾಶಕ್ತಿಗೆ ಮನಬಂದಂತೆ ವಿಹರಿಸಲು ಬಿಟ್ಟಿದ್ದಾನೆ. ಅಲಕಾಪಟ್ಟಣವನ್ನು ವರ್ಣಿಸಿದ ಬಳಿಕ ಪ್ರಿಯತಮೆಗೆ ಯಕ್ಷನು ಅಚೇತನವಾದ ಮೇಘದ ಮೂಲಕ ಸಂದೇಶವನ್ನು ಕಳುಹಿಸುವನು. ಯಕ್ಷನು ಮೇಘನನ್ನು ಕುರಿತು ನನ್ನ ಕುಶಲವಾರ್ತೆಯನ್ನು ತಿಳಿಸಿ ಈ ಸಂದೇಶವನ್ನು ಹೇಳು ಎನ್ನುವನು ಪ್ರಿಯಂಗುಲತೆಯಲ್ಲಿ ನಿನ್ನ ಶರೀರ, ಅಂಜಿದ ಜಿಂಕೆಯ ಕಣ್ಣಿನ ಕುಡಿನೋಟದಲ್ಲಿ ನಿನ್ನ ಕಟಾಕ್ಷ, ಚಂದ್ರನಲ್ಲಿ ನಿನ್ನ ಶರೀರಕಾಂತಿ, ನವಿಲಿನ ಗರಿಗಳಲ್ಲಿ ನಿನ್ನ ಕೇಶಕಲಾಪ, ನದಿಯ ಚಿಕ್ಕಚಿಕ್ಕ ವೀಚಿಗಳಲ್ಲಿ ನಿನ್ನ ಭ್ರೂವಿಲಾಸವನ್ನು ನಾನು ನೋಡುತ್ತಿದ್ದೇನೆ. ಎಲೈ ಚಂಡಿ! ಆದರೆ ಒಂದೇ ಸ್ಥಳದಲ್ಲಿ ನಿನಗೆ ಸದೃಶವಾದುದನ್ನು ಎಲ್ಲಿಯೂ ನಾನು ಕಾಣುತ್ತಿಲ್ಲ. ಪ್ರೇಮಾತಿಶಯದಲ್ಲಿ ಕೋಪಗೊಂಡ ನಿನ್ನ ಚಿತ್ರವನ್ನು ಕಲ್ಲಿನ ಮೇಲೆ ಕೆಂಬಣ್ಣದ ಮಣ್ಣಿನಿಂದ ಬರೆದು ನಿನಗೆ ನಾನು ನಮಿಸುತ್ತಿರುವುದನ್ನು ತೋರಿಸಲು ಪ್ರಯತ್ನಿಸುತ್ತಿರುವಷ್ಟರಲ್ಲಿ ದುಃಖಾತಿಶಯದಲ್ಲಿ ನನ್ನ ಕಣ್ಣುಗಳು ಕಂಬನಿಗಳಿಂದ ತುಂಬಿಬಿಡುತ್ತದೆ. ಕ್ರೂರನಾದ ಯಮನು ಈ ರೀತಿಯಿಂದುಂಟಾದ ನಮ್ಮ ಸಂಗಮವನ್ನು ಸಹ ಸಹಿಸುವುದಿಲ್ಲ. ಕನಸಿನಲ್ಲಿ ನನ್ನ ದರ್ಶನ ಲಭಿಸಿದ ಮೇಲೆ ಆಲಿಂಗನಕ್ಕಾಗಿ ನನ್ನ ಬಾಹುಗಳನ್ನು ಚಾಚುತ್ತಿರುವುದನ್ನು ಕಂಡು ವನದೇವತೆಗಳ ಕಣ್ಣುಗಳಿಂದ ಮರಗಳ ಚಿಗುರುಗಳ ಮೇಲೆ ಮುತ್ತಿನಂತಿರುವ ದೊಡ್ಡ ಕಂಬನಿಗಳು ಸುರಿಯುತ್ತವೆ. ವಿರಹದುಃಖವನ್ನು ವಿವೇಕದಿಂದ ನಾನು ಸಹಿಸಿಕೊಳ್ಳುತ್ತಿರುವಂತೆ ನೀನೂ ಮಾಡಬೇಕು: ಏಕೆಂದರೆ–

कस्यैकान्तं सुखमुपनतं दुःखमेकान्ततो वा ।
नीचैर्गच्छत्युपरि च दशा चक्रनेमिक्रमेण ॥

ಯಾವಾಗಲೂ ಕೇವಲ ಸುಖವಾಗಲಿ ಅಥವಾ ದುಃಖವಾಗಲಿ ಯಾರಿಗೆ ದೊರೆತಿದೆ? ಮಾನವನ ಅದೃಷ್ಟವು ರಥದ ಚಕ್ರದ ಅರಗಳಂತೆ ಮೇಲೆ ಕೆಳಗೆ ಹೋಗುತ್ತಿರುತ್ತದೆ. ಭಗವಾನ್ ವಿಷ್ಣುವು ಶೇಷಶಯನದಿಂದ ಎದ್ದಮೇಲೆ ನನ್ನ ಶಾಪವು ಕೊನೆಗೊಳ್ಳುವುದು. ಆದುದರಿಂದ ಇನ್ನೂ ನಾಲ್ಕು ತಿಂಗಳವರೆಗೆ ದುಃಖವನ್ನು ಸಹಿಸಿಕೊಳ್ಳಬೇಕು. ಆಮೇಲೆ

ನಾವು ಶರದೃತುವಿನ ಬೆಳದಿಂಗಳಲ್ಲಿ ವಿವಿಧ ಪ್ರಕಾರವಾಗಿ ಉಪಭೋಗಿಸೋಣ ಎಂಬುದಾಗಿ. ಎಲೈ ಮೇಘನೆ, ನನ್ನ ಪ್ರಾರ್ಥನೆಯನ್ನು ಮನ್ನಿಸಿ ಇಲ್ಲವೇ ನನ್ನ ಮೇಲಿರುವ ಪ್ರೇಮದಿಂದ ಅಥವಾ ಅನುಕಂಪದಿಂದ ನನ್ನ ಈ ಕಾರ್ಯವನ್ನು ನೆರವೇರಿಸಿದ ನಂತರ ವರ್ಷಾಕಾಲದಿಂದಾಗಿ ಸೌಂದರ್ಯವನ್ನು ಹೆಚ್ಚಿಸಿಕೊಂಡಂತೆ ನೀನು ನಿನ್ನ ಮನಸ್ಸಿಗೆ ಬಂದಂತಹ ಪ್ರದೇಶಕ್ಕೆ ಹೋಗು. ನನ್ನಂತೆ ನಿನಗೆ ಇನ್ನು ಮುಂದೆ ಕ್ಷಣಕಾಲವೂ ನಿನ್ನ ಪ್ರಿಯತಮೆಯಾದ ವಿದ್ಯುಲ್ಲತೆಯ (ಮಿಂಚಿನ) ವಿಯೋಗವಾಗದಿರಲಿ.

ನೂರಇಪ್ಪತ್ತು ಪದ್ಯಗಳ ಈ ಖಂಡಕಾವ್ಯದಲ್ಲಿ ಕವಿಯು ತನ್ನ ಶಕ್ತಿಸರ್ವಸ್ವವನ್ನು ವ್ಯಯಿಸಿದ್ದಾನೆ. ಇದರಲ್ಲಿ ಆತನ ಸೌಂದರ್ಯಾನ್ವೇಷಣ ದೃಷ್ಟಿ ಹಾಗೂ ಕಲಾಭಿಜ್ಞತೆ ಸ್ಪಷ್ಟವಾಗಿ ಕಂಡುಬರುತ್ತದೆ. ಓರ್ವ ಶ್ರೇಷ್ಠ ಚಿತ್ರಕಾರನು ತನ್ನ ಕುಂಚದಿಂದ ರಮ್ಯವಾದ ಆಕೃತಿಯನ್ನು ನಿರ್ಮಿಸುವಂತೆ ಕಾಳಿದಾಸನು ಇದರಲ್ಲಿರುವ ಪ್ರತಿಯೊಂದು ಶ್ಲೋಕದಲ್ಲಿ ನಿಯಮಿತ ಶಬ್ದಗಳಿಂದ ಒಂದೊಂದು ಮನೋಹರವಾದ ಚಿತ್ರವನ್ನು ಚಿತ್ರಿಸಿದ್ದಾನೆ. ಇದರೊಳಗಿನ ಶಬ್ದರಚನೆಯು ಶುದ್ಧಗೊಳಿಸಿದ ರತ್ನದಂತೆ ನಿರ್ದೋಷ ಹಾಗೂ ಉಜ್ವಲವಾಗಿದೆ. ಕಾಳಿದಾಸನು ಒಂದೊಮ್ಮೆ ಇದೊಂದೇ ಕಾವ್ಯವನ್ನು ರಚಿಸಿದ್ದರೂ ಸಹ ಆತನನ್ನು ಜಗತ್ತಿನ ಅತ್ಯುತ್ಕೃಷ್ಟ ಕವಿ ಎಂಬುದಾಗಿ ಪರಿಗಣಿಸುವಷ್ಟು ಈ ಕಾವ್ಯವು ಸರಸವಾಗಿ ಮೂಡಿಬಂದಿದೆ.

ಆಧುನಿಕ ಸಂಶೋಧನೆ ಮೇಘದೂತದ ಪಥದ ವೈಮಾನಿಕ ಸಮೀಕ್ಷೆ

ಕಾಳಿದಾಸನ ಮೇಘದೂತ ಕೃತಿಯನ್ನು ವಿಮರ್ಶಕರು ಅನೇಕ ಕಾರಣಗಳಿಗಾಗಿ ಹೊಗಳುತ್ತಾರೆ. ಅದರಲ್ಲಿನ ಅಪೂರ್ವ ಕಾವ್ಯ ಸೌಂದರ್ಯ, ಅಪ್ರತಿಮ ವ್ಯಕ್ತಿಚಿತ್ರಣ, ಅಲ್ಲಿ ತುಳುಕುವ ಶೃಂಗಾರ ರಸ ಹಾಗೂ ಉಪಮಾಲಂಕಾರಗಳಿಗಾಗಿ ಮೇಘದೂತ ಮೇರುಕೃತಿಯೆಂದು ಬಣ್ಣಿಸುತ್ತಾರೆ. ಆದರೆ ಪುಣೆಯ ಸಂಶೋಧಕರಾದ ಡಾ। ಎಸ್.ವಿ. ಭಾವೆಯವರು ಕಾಳಿದಾಸ ಸೂಚಿಸಿದಂತೆ ಮೇಘಮಾರ್ಗದಲ್ಲಿ ವಿಮಾನದಲ್ಲಿ ಸಾಗಿಹೋಗಿ ಈ ಕವಿಯ ಇನ್ನೂ ಅನೇಕ ಮುಖಗಳನ್ನು ಪತ್ತೆಹಚ್ಚಿದ್ದಾರೆ. ಕಾಳಿದಾಸ ಕೇವಲ ಕಲ್ಪನಾ ಲೋಕದಲ್ಲಿ ವಿಹರಿಸಿಲ್ಲ; ಆತ ನಿಜಕ್ಕೂ ವಾಯುಯಾನ ಮಾಡಿ ಒಂದೇ ಕಾವ್ಯ ರಚನೆಗೆ ಕೈ ಹಾಕಿದನೆಂಬ ಹೊಸ ವಾದವನ್ನು ಸಾಕ್ಷ್ಯಾಧಾರಗಳ ಸಮೇತ ಮಂಡಿಸಿದ್ದಾರೆ. ಡಾ । ಭಾವೆಯವರು ವೃತ್ತಿಯಿಂದ ವೈದ್ಯರು (ಶಸ್ತ್ರಚಿಕಿತ್ಸಕರು). ಆದರೆ ಪ್ರವೃತ್ತಿಯಿಂದ ವೈಮಾನಿಕರು ಕೆಲವು ವರ್ಷಗಳ ಹಿಂದೆ ಕಾಳಿದಾಸನಿಂದ ಪ್ರಭಾವಿತರಾಗಿ ರಘುವಂಶದಂತಹ ಮಹಾಕಾವ್ಯವನ್ನು, ಮೇಘದೂತದಂತಹ ಖಂಡಕಾವ್ಯವನ್ನು ಆಳವಾಗಿ ಅಭ್ಯಸಿಸಿದರು. ಮೇಘದೂತದಿಂದ ಪ್ರೇರಿತರಾಗಿ ತಾವೇ ಸ್ವತಃ ಮೋಡಗಳ ಮಾರ್ಗದಲ್ಲಿ ಸಂಚರಿಸಲು ನಿರ್ಧರಿಸಿದರು. ಡಾ । ಭಾವೆಯವರು ತಮ್ಮದೇ ಆದ ವಿಮಾನವನ್ನು ಹತ್ತಿ ಕಾಳಿದಾಸನ ಯಕ್ಷ ಹೇಳಿರುವ ಮಾರ್ಗದಲ್ಲಿ ತಾವೂ ಅನೇಕ ಬಾರಿ ಹೋಗಿ ನೋಡಿದ್ದೂ ಅಲ್ಲದೆ, ಮೇಘ ಕ್ರಮಿಸಿದ ದಾರಿಯನ್ನು ಅಲ್ಲಲ್ಲಿ ಗುರುತಿಗೆಂದು ಯಕ್ಷ ಸೂಚಿಸಿದ ಸ್ಥಳಗಳನ್ನು ಅಕ್ಷರಶಃ ಮತ್ತೆ ಗುರುತಿಸಲು ಪ್ರಯತ್ನಿಸಿದ್ದಾರೆ. ಅವರ ಪ್ರಕಾರ ಕಾಳಿದಾಸನ ಈ ಕೃತಿ ಕೇವಲ ಸಾಹಿತ್ಯಿಕ ಕೃತಿ ಮಾತ್ರವಲ್ಲ ವೈಮಾನಿಕನೊಬ್ಬ ಆಕಾಶದಿಂದ ಕೆಳಗೆ ನೋಡಿದಾಗ ಕಾಣುವ

ದೃಶ್ಯಗಳ ಅವಲೋಕನದ ಅಪರೂಪದ ಕೃತಿಯೂ ಆಗಿದೆ. ಅಂದರೆ, ಕವಿ ಸ್ವತಃ ಆಕಾಶದಲ್ಲಿ ವಿಮಾನದಲ್ಲಿ ಕುಳಿತಂತೆ (ಅಂದರೆ ಇಲ್ಲಿ ಮೇಘ ಅಷ್ಟು ಎತ್ತರದಿಂದ ನೋಡುವಂತೆ) ನೋಡುತ್ತಾನೆ. ಅವನದು ವೈಮಾನಿಕ ದೃಷ್ಟಿ ! ಇದಕ್ಕೆ ಪುಷ್ಟಿ ನೀಡುವ ಅನೇಕ ಮಾತುಗಳನ್ನು ಡಾ । ಭಾವೆ ಉದ್ಧರಿಸುತ್ತಾರೆ. ಈ ಕೃತಿಯಲ್ಲಿ ಬರುವ 'ನೀ ತಲೆಯೆತ್ತಿದರೆ ನಿನಗೆ ಆಕಾಶಗಂಗೆ ಕಾಣಿಸುತ್ತದೆ. ತಲೆತಗ್ಗಿಸಿ ನೋಡಿದರೆ ಮಲಯಗಿರಿ ಕಾಣಿಸುತ್ತದೆ. ಇನ್ನೂ ಹಿಂದಕ್ಕೆ ತಿರುಗಿ ನೋಡಿದೆಯಾ, ಈಗ ತಾನೆ ಹಾರಿ ಬಂದ ನೆಲವೇ ದಿಗಂತದ ಅಂಚಿನಲ್ಲಿ ಮುಳುಗುತ್ತಿರುವ ದೃಶ್ಯ ನಿನಗೆ ಕಾಣಿಸುತ್ತದೆ ಎಂಬ ರೀತಿಯ ಮಾತುಗಳನ್ನು ಅವರು ವಿಶೇಷವಾಗಿ ಉಲ್ಲೇಖಿಸುತ್ತಾರೆ. ಅದಲ್ಲದೆ ಒಬ್ಬ ವೈಮಾನಿಕ ಮಾತ್ರ ಪ್ರಸ್ತಾಪಿಸುವಂತಹ ಅಕ್ಷಾಂಶ, ರೇಖಾಂಶಯಾನದ ಎತ್ತರ ಇಂತಹ ಮಾತುಗಳು ಕಾಳಿದಾಸನ ನುಡಿಗಳಲ್ಲಿ ಅವನಿಗಿರುವ ವಿಶೇಷ ಜ್ಞಾನವನ್ನು ತೋರಿಸುತ್ತದೆ ಎನ್ನುತ್ತಾರೆ ಅವರು. ಈ ಮಾತು ಬಂದಾಗ, ಕಾಳಿದಾಸ ಹೇಳುವ ವಿವಿಧ ಹಾರುವ ಹಂತಗಳನ್ನು ಪ್ರಸ್ತಾಪಿಸಿ– ಖಗಾನಾಂ, ಮೇಘಾನಾಂ, ದೇವಾನಾಂ– ಅಂದರೆ ಪಕ್ಷಿಗಳು ಹಾರುವ ಮಟ್ಟ, ಮೋಡಗಳು ಹಾರುವ ಮಟ್ಟ, ದೇವರು ಹಾರುವ ಮಟ್ಟ, ದೇವರು ಹಾರುವ ಮಟ್ಟ ರಘುವಂಶದಲ್ಲಿ ಬರುವ ಶ್ಲೋಕವೊಂದನ್ನು ಡಾ. ಭಾವೆ ಉಲ್ಲೇಖಿಸುತ್ತಾರೆ.

क्वचित्पथा सञ्चरते सुराणां क्वचिद् घनानां
पततां क्वचिच्च ।
यथाविधो मे मनसोऽभिलाषः प्रवर्तते विमानम् ॥

(ನನ್ನ ಮನದ ಅಭಿಲಾಷೆಯಂತೆ ಪುಷ್ಪಕ ವಿಮಾನವು ಚಲಿಸುತ್ತದೆ. ನೋಡು, ಅದು ಕೆಲವೊಮ್ಮೆ ದೇವತೆಗಳ ಮಾರ್ಗದಲ್ಲಿ, ಕೆಲವೊಮ್ಮೆ ಮೋಡಗಳ ಮಾರ್ಗದಲ್ಲಿ, ಕೆಲವೊಮ್ಮೆ ಪಕ್ಷಿಗಳ ಮಾರ್ಗದಲ್ಲಿ ಚಲಿಸುತ್ತದೆ ಎಂದು ಶ್ರೀರಾಮನು ಸೀತೆಯನ್ನು ಉದ್ದೇಶಿಸಿ ಹೇಳುವನು)

ಮೇಘದೂತದ ದಾರಿಯನ್ನು ಹಿಂಬಾಲಿಸಿ ಹೋಗಿರುವ ಡಾ.ಭಾವೆಯವರ ಸಂಶೋಧನೆಯ ಫಲವನ್ನು ಈ ಕೆಲವು ಪ್ರಮುಖ ಸಾರಾಂಶಗಳಲ್ಲಿ ಸಂಗ್ರಹಿಸಬಹುದು:

ಯಕ್ಷ ಅಂದು ಶಾಪಗ್ರಸ್ತನಾಗಿ ಕಾಲಕಳೆಯಬೇಕಾಗಿದ್ದ ಸ್ಥಳ, ಈಗಿನ ನಾಗಪುರದ ಬಳಿಕ ರಾಮಟೇಕ್ (ಅತಿ ಬಿಸಿಲು ಪ್ರದೇಶ)

ಮೇಘ ಹೋಗುವ ದಾರಿ ನೇರವಲ್ಲ. ರಾಮಟೇಕ್‌ನಿಂದ ಹೊರಟ ಮೇಘ ಭೊಪಾಲ್, ಉಜ್ಜಯಿನಿ ಸೀತಾಮಾವು, ಮಿಡ್ನಾಪುರ ಮತ್ತು ಹೃಷಿಕೇಶದ ಉತ್ತರಭಾಗದ ಮಾರ್ಗವಾಗಿ ಕೈಲಾಸದ ಬಳಿಗೆ ಹೋಗುತ್ತದೆ. ಅಲ್ಲಿ ಅವನ ಅಲಕಾಪುರಿ ಇತ್ತು.

ಇಂದು ಸಾವಿರದ ಆರುನೂರು ವರ್ಷಗಳ ನಂತರವೂ ಮೇಘ ಅದೇ ದಾರಿಯಾಗಿ ಹೋಗುತ್ತದೆ.

ಮೇಘದೂತದಲ್ಲಿ ಹೇಳಿರುವಂತೆ ಆಷಾಢದ ಮೊದಲ ದಿನದಂದು ಮೋಡ ಹೊರಟು ಹತ್ತನೆಯ ದಿನ ಅದು ಅಲಕಾಪುರಿಯನ್ನು ತಲುಪಬೇಕು. ಇಂದಿಗೂ ಈ ಮಾರ್ಗವನ್ನು ಕ್ರಮಿಸಲು ಮೋಡಕ್ಕೆ ಕೇವಲ ಅವೇ ಹತ್ತು ದಿವಸಗಳು ಬೇಕಾಗುತ್ತವೆ.

ಕೆಲವು ಸ್ಥಳಗಳಲ್ಲಿ ಯಕ್ಷ ಮೋಡವನ್ನು ಸ್ವಲ್ಪ ಹೊತ್ತು ನಿಂತು ವಿಶ್ರಾಂತಿ ಪಡೆದುಕೋ ಎನ್ನುತ್ತಾನೆ. ಈಗಲೂ ಅಂತಹ ಸ್ಥಳಗಳಲ್ಲಿ (ಉದಾಃ ಪಂಚಮರಿ) ಮೋಡ ಸ್ತಬ್ಧವಾಗಿ ನಿಂತು ಬಿಡುತ್ತದೆ! ಇದಕ್ಕೆ ಅಲ್ಲಿರುವ ಭೌಗೋಳಿಕ ಕಾರಣಗಳ ಜೊತೆಗೆ, ಆಗಿನ ಸಂದರ್ಭದಲ್ಲಿ (ಅಂದರೆ ಆಷಾಢದ ಆ ದಿನದಲ್ಲಿ) ವಾಯುಭಾರದಲ್ಲಿ ಉಂಟಾಗುವ ಒತ್ತಡ, ತಾಪಮಾನಗಳು ಕಾರಣಗಳಾಗಿರುತ್ತವೆ.

ಇಂದೂ ಸಹ ಮಾರ್ಗದಲ್ಲಿ ಮೇಘದೂತಂನಲ್ಲಿ ನಮೂದಿಸಿರುವ ನದಿಗಳನ್ನು ಝರಿಗಳನ್ನು ಗಮನಿಸಬಹುದು. ಅವೇ ಭೌಗೋಳಿಕ ಚಿತ್ರಗಳನ್ನು ಗಮನಿಸಬಹುದು ಅಂದರೆ ಕಳೆದ ಸಾವಿರದ ಆರುನೂರು ವರ್ಷಗಳಲ್ಲಿ ಯಾವುದೇ ವ್ಯತ್ಯಾಸವಾಗಿಲ್ಲ!

ರಸಾಭಿವ್ಯಕ್ತಿ :

ಋತುಸಂಹಾರ ಸಂಭೋಗ ಶೃಂಗಾರಕ್ಕೆ ಉದಾಹರಣೆಯಾದರೆ, ಮೇಘದೂತ ವಿಪ್ರಲಂಭ ಶೃಂಗಾರಕ್ಕೆ ಉತ್ತಮ ಉದಾಹರಣೆಯಾಗಿದೆ. ವಿರಹದಲ್ಲಿ ಶೃಂಗಾರದ ಪ್ರಶಾಂತ ಪ್ರಭೆಯು ಹೇಗೆ ಹೊಂಬೆಳಕನ್ನು ಸೂಸುವದೆಂಬುದನ್ನು ಮೃದುಮನೋಹರವಾದ ಮಂದಾಕ್ರಾಂತಾ ವೃತ್ತಗಳಲ್ಲಿ ಮೇಘದೂತದ ತುಂಬ ಕಾಲಿದಾಸ ಹಾಡಿದ್ದಾನೆ. ಪ್ರೇಮದ ಸತ್ವ ಪರೀಕ್ಷೆಗೆ ವಿರಹವೆಂಬ ಅಗ್ನಿ ಅಗತ್ಯವಾಗುತ್ತದೆ. ಆದ್ದರಿಂದಲೇ "ನ ವಿನಾ ವಿಪ್ರಲಂಭೇಣ ಶೃಂಗಾರೋ ಪುಷ್ಟಿಮಶ್ನುತೇ।" ಎಂದು ಲಾಕ್ಷಣಿಕರು ಹೇಳಿದ್ದಾರೆ.

ಮೇಘದೂತದ ಶೈಲಿ :

ಮೇಘದೂತದಲ್ಲಿ ಎರಡು ಭಾಗಗಳಿವೆ; ಇವೆರಡೂ ಪರಸ್ಪರ ಪೂರಕಗಳಾದ ಎರಡು ಬೇರೆ ಬೇರೆ ಚಿತ್ರಗಳು ಪ್ರೇಮದೃಷ್ಟಿಗೆ ವಿಶ್ವಸೃಷ್ಟಿಯ ಸೌಂದರ್ಯರಹಸ್ಯವೂ ಪ್ರಕಟವಾಗುತ್ತದೆ. ಜಡ–ಚೇತನ, ಕ್ಷುದ್ರ–ಭವ್ಯ, ಇವೇ ಮೊದಲಾದ ಭೇದಭಾವಗಳೆಲ್ಲವೂ ಪ್ರೇಮಮಂದಾಕಿನಿಯ ಸ್ವಚ್ಛಸಲಿಲದಲ್ಲಿ ಅಳಿಸಿಹೋಗುತ್ತದೆ. ಆಗ ಮೋಡವು ಹೊಗೆ, ನೀರು ಗಾಳಿಗಳ ಒಂದು ನಿರ್ಜೀವ ಮುದ್ದೆಯೆನಿಸುವುದಿಲ್ಲ; ಮನುಷ್ಯನ ಸುಖದುಃಖಗಳಲ್ಲಿ ಸಮಭಾಗಿಯಾಗುವ ಪರಮಮಿತ್ರನಾಗಿ ಪರಿಣಮಿಸುತ್ತಾನೆ. ಬೆಟ್ಟಗಳು ಬಂಡೆಗಳ ಒಂದು ಜಡರಾಶಿಯೆನಿಸುವುದಿಲ್ಲ; ಮನೆಗೆ ಬಂದ ಮೇಘರೂಪೀ ಮಿತ್ರನನ್ನು ಆದರದಿಂದಾಲಿಂಗಿಸಿ ಉಪಚರಿಸುವ ಮಹಾತ್ಮರಾಗಿ ಕಾಣುತ್ತಾರೆ. ತೊರೆಗಳು ಹರಿಯುವ ನೀರಾಗಿ ತೋರುವುದಿಲ್ಲ. ಮೆಚ್ಚಿನ ನಲ್ಲನಾಥ ಮೇಘನ ಆಗಮನದಿಂದ ಮನವುಬ್ಬಿದ ಕೋಮಲೆಯರಾಗಿ ಕಾಣುತ್ತಾರೆ. ಮೇಘದೂತದ ಮೊದಲನೆಯ ಭಾಗವೆಲ್ಲ ಈ ಪ್ರೇಮ ನಿರ್ಭರವಾದ ಪ್ರಕೃತಿಮಾಧುರ್ಯದ ವರ್ಣನೆಗೆ ಮೀಸಲಾಗಿದೆ. ಎರಡನೆಯ ಭಾಗದ ತುಂಬ ಆದರ್ಶಪ್ರೇಮವು ಪ್ರಕಟವಾಗುವ ಪ್ರಣಾಲಿಗಳ ವರ್ಣನೆಯಿದೆ. ಹೀಗೆ ಶೃಂಗಾರನಿರೂಪಣೆಯಲ್ಲಿಯೇ ಕಾಳಿದಾಸನ ಪ್ರತಿಭೆ ಋತುಸಂಹಾರಕ್ಕಿಂತ ಮುಂದಿನ ಹೆಜ್ಜೆಯನ್ನಿಟ್ಟು ಆ ರಸದ ಜೀವಾಳವನ್ನು ಕರತಲಾಮಲಕವಾಗಿ ಮಾಡಿಕೊಡುತ್ತದೆ ಮೇಘದೂತದಲ್ಲಿ. ಕವಿಯ ಅನುಭವವಲಯವು ಇಲ್ಲಿ ಇನ್ನೂ ಅಗಲವಾಗಿದೆ; ಆಳವಾಗಿದೆ. ಕಾವ್ಯಸಿದ್ಧಿಯೂ ಹೆಚ್ಚಿನ ಪ್ರಮಾಣದಲ್ಲಿ ಹೊರಹೊಮ್ಮಿದೆ. ಮೇಘದೂತದ

ಮೊದಲಿನಿಂದ ಕಡೆಯವರೆಗೂ ಪ್ರಕೃತಿವರ್ಣನೆ ಮತ್ತು ಪ್ರೇಮನಿರೂಪಣೆಗಳು ಹಾಸುಹೊಕ್ಕಾಗಿ ಹೆಣೆದುಕೊಂಡು ಕಾಳಿದಾಸನ ಮಧುರ ಮನೋಧರ್ಮಕ್ಕೂ ಕವಿತ್ವ–ಕೌಶಲಕ್ಕೂ ಕೈದೀವಿಗೆಗಳಾಗುತ್ತವೆ. ಮೇಘದೂತವು ನಮ್ಮನ್ನು ಒಂದು ಸ್ವಪ್ನಸುಂದರ ಮಾಯಾಲೋಕಕ್ಕೆ ಕರೆದೊಯ್ಯುತ್ತದೆ. ಅಲ್ಲಿ ಪ್ರೇಮದ ಹೊಂಬೆಳಗಿನಿಂದ ಅಣುರೇಣು ತೃಣಕಾಷ್ಠಗಳೂ ಪುಲಕಿತವಾಗುತ್ತವೆ. ಪ್ರಕೃತಿಯು ಪ್ರೇಮದ ತಾಳಕ್ಕೆ ಮೃಗಪಕ್ಷಿಗಳು ಮೇಳವಿಸುತ್ತವೆ, ಗಿಡಬಳ್ಳಿಗಳು ದನಿಗೂಡಿಸುತ್ತವೆ. ಗಿರಿನದಿಗಳು ಓಗೊಡುತ್ತವೆ. ಪಾರ್ವತೀಪರಮೇಶ್ವರರು ಈ ಪ್ರೇಮದ ಪಾವಿತ್ರ್ಯಕ್ಕೆ ಪ್ರತೀಕಗಳಾಗುತ್ತಾರೆ. ಇಂತಹ ವಿಶ್ವವಿಶಾಲವಾದ ರಮಣೀಯ ಲೋಕದಲ್ಲಿ ಪಾತ್ರಧಾರಿಗಳಾಗಿ ಪ್ರಾತಿನಿಧ್ಯವನ್ನು ವಹಿಸುವುದು ಹುಲು ಮನುಜರಿಂದಾತೀತೆ? ಆದುದರಿಂದಲೇ ಕವಿ ಯಕ್ಷನೊಬ್ಬನನ್ನು ಈ ಶೃಂಗಾರ ಕಾವ್ಯಕ್ಕೆ ನಾಯಕನನ್ನಾಗಿಯೂ ಅವನ ಪತ್ನಿಯಾದ ವಿರಹಿಣಿಯನ್ನು ನಾಯಿಕೆಯನ್ನಾಗಿಯೂ ನಿರ್ಮಿಸಿದ್ದಾನೆ.

ಮೇಘದೂತದಲ್ಲೆಲ್ಲ ಒಟ್ಟು ಇರುವ ಪದ್ಯಗಳು ನೂರಿಪ್ಪತ್ತೇ. ಆದರೆ ಒಂದೊಂದೂ ಒಂದು ಮುಕ್ತಾಫಲ. ಇಷ್ಟು ಸಣ್ಣ ಪರಿಮಿತಿಯಲ್ಲೇ ಉಳಿದ ಸಂಸ್ಕೃತ ಕವಿಗಳಾರೂ ಊಹಿಸಲಾರದಷ್ಟು ಸೌಂದರ್ಯವನ್ನು ಕಾಳಿದಾಸನು ಘನೀಭೂತವಾಗಿ ತಂದುಕೊಟ್ಟಿದ್ದಾನೆ. ಅವನ ಪದಸಂಗೀತದ ಕಲೆ, ವರ್ಣನೆಯ ಜಾಣ್ಮೆ, ಶೈಲಿಯ ಪ್ರಸನ್ನತೆ, ಛಂದಸ್ಸಿನ ಔಚಿತ್ಯ, ಇವುಗಳನ್ನು ಕೊಂಡಾಡಿ ರಸಿಕರು ದಣಿಯಲಾರರು. ಒಂದು ಆಯುಷ್ಯವೆಲ್ಲ ಆಸ್ವಾದಿಸಿದರೂ ಕುಗ್ಗದ ಸವಿ ಈ ಕಾವ್ಯರತ್ನದಲ್ಲುಂಟೆಂದು ಮಲ್ಲಿನಾಥನು ಇಳಿವಯಸ್ಸಿನಲ್ಲಿ ಉದ್ಗರಿಸಿದೆ. **ಮಾಘೇ ಮೇಘೇ ಗತಂ ವಯಃ** ಎಂಬ ಊಕ್ತಿ ಸೂಚಿಸುತ್ತದೆ.

चिन्तनीया हि विपदामादावेव प्रतिक्रिया ।
न कूपखननं युक्तं प्रदीप्ते वह्निना गृहे ॥

ಚಿಂತನೀಯಾ ಹಿ ವಿಪದಾಮಾದಾವೇವ ಪ್ರತಿಕ್ರಿಯಾ ।
ನ ಕೂಪಖನನಂ ಯುಕ್ತಂ ಪ್ರದೀಪ್ತೇ ವಹ್ನಿನಾ ಗೃಹೇ ॥

ವಿಪತ್ತುಗಳಿಗೆ ಮೊದಲೇ ಉಪಶಮನದ ಉಪಾಯವನ್ನು ವಿಚಾರಮಾಡಿರಬೇಕು.
ಮನೆಗೆ ಬೆಂಕಿ ಹತ್ತಿಕೊಂಡ ಮೇಲೆ ಬಾವಿ ತೋಡುವುದು ಸರಿಯಲ್ಲ. ೨೭

Remedies should be founded to disasters before it commences.
It is not wise to dig a well, when house catches fire .

ಋಗ್ವೇದ

ನಿಧಿಶ್ರೀ
ದ್ವಿತೀಯ ಬಿ.ಎಸ್ಸಿ.

ಭಾರತದ ಅತ್ಯಂತ ಪ್ರಾಚೀನವಾದ ಮತ್ತು ಪೂಜನೀಯವಾದ ಧರ್ಮಗ್ರಂಥಗಳೇ ವೇದಗಳು. ವೇದ ಎಂದರೆ ಜ್ಞಾನ ಎಂದು ಅರ್ಥ. ವೇದಗಳಲ್ಲಿ ಒಟ್ಟು ನಾಲ್ಕು ವಿಧಗಳಿವೆ. ಋಗ್ವೇದವು ಛಂದೋಬದ್ಧವಾದ ಪ್ರಾರ್ಥನೆ, ವರ್ಣನೆಗಳಿಂದ ಕೂಡಿರುವ ಮಂತ್ರಭಾಗ. ಯಜುರ್ವೇದದಲ್ಲಿ ಯಜ್ಞದ ಅನುಷ್ಠಾನಕ್ಕೆ, ಆಚರಣೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ಸಾಮವೇದದಲ್ಲಿ ಹಾಡುವುದಕ್ಕೆ ಅನುಗುಣವಾದ ಸ್ವರಗಳನ್ನುಳ್ಳ ಮಂತ್ರಗಳಿವೆ. ಲೌಕಿಕ ಪ್ರಯೋಜನದ ಪ್ರಯೋಗಗಳನ್ನೊಳಗೊಂಡ ಮಂತ್ರಗಳನ್ನು ಅಥರ್ವವೇದವು ಹೊಂದಿದೆ. ವೇದಗಳಲ್ಲಿ ಸಂಹಿತೆಗಳು, ಬ್ರಾಹ್ಮಣ, ಆರಣ್ಯಕ ಮತ್ತು ಉಪನಿಷತ್ತುಗಳು ಎಂಬ ವಿಭಾಗಗಳಿವೆ.

ಋಗ್ವೇದ ಸಂಹಿತೆಯಲ್ಲಿ ಒಟ್ಟು 1028 ಸೂಕ್ತಗಳಿವೆ. 10552 ಮಂತ್ರಗಳಿವೆ. 64 ಅಧ್ಯಾಯಗಳಿವೆ. ಋಗ್ವೇದವು ಒಬ್ಬ ಕರ್ತವಿನಿಂದ ರಚಿತವಾದದ್ದು ಅಲ್ಲ. ಋಗ್ವೇದದ ಉದ್ಭವ ಮತ್ತು ವಿಕಾಸಗಳ ಮಧ್ಯೆ ತುಂಬಾ ಪರಿಶ್ರಮವಿದೆ. ಅನೇಕ ಋಷಿಗಳ ಕಾಣಿಕೆಗಳಿಂದ ರೂಪು ತಾಳಿದ ಋಗ್ವೇದ ಸಂಹಿತೆಯು ಪೂರ್ಣರೂಪ ಹೊಂದಲು ವಿಶಾಲವಾದ ಕಾಲವನ್ನು ತೆಗೆದುಕೊಂಡಿರಬಹುದು. ಋಗ್ವೇದವು ಸಂಸ್ಕೃತ ಭಾಷೆಯ ಅತ್ಯಂತ ಪ್ರಾಚೀನ ಸ್ವರೂಪವನ್ನು ನಮಗೆ ತೋರ್ಪಡಿಸುತ್ತದೆ. ಋಗ್ವೇದದಲ್ಲಿ ಒಟ್ಟು ಹತ್ತು ಮಂಡಲಗಳಿವೆ. ಎರಡನೆಯ ಮಂಡಲದಿಂದ ಏಳನೆಯ ಮಂಡಲಗಳನ್ನು ವಂಶಾನುಗತ ಮಂಡಲಗಳು ಎಂದು ಕರೆಯುತ್ತಾರೆ. ಒಂದೇ ವಂಶದ ಋಷಿಗಳಿಂದ ರಚಿಸಲ್ಪಟ್ಟ ಮಂತ್ರಗಳು ಈ ಮಂಡಲಗಳಲ್ಲಿ ಸಂಗ್ರಹಿಸಲ್ಪಟ್ಟಿವೆ. ಎಂಟನೇ ಮಂಡಲವನ್ನು ಕಾಣ್ವವಂಶೀಯ ಮಂಡಲವೆಂದು, ಮೊದಲನೇ ಮಂಡಲದ ಋಷಿಗಳನ್ನು ಶತರ್ಚಿನವೆಂದು ಕರೆಯುತ್ತಾರೆ. ಒಂಭತ್ತನೇ ಮಂಡಲದಲ್ಲಿ ಋಷಿಗಳನ್ನು ಪಾವಮಾನ್ಯವೆಂದು ಕರೆಯುತ್ತಾರೆ. ಹತ್ತನೇಯ ಮಂಡಲದ ಋಷಿಗಳಿಗೆ ಕ್ಷುದ್ರಸೂಕ್ತವೆಂದು ಹೆಸರು. ಋಗ್ವೇದದಲ್ಲಿ ಎರಡು ರೀತಿಯ ಸ್ವರಗಳನ್ನು ಸಂಯೋಜಿಸಲಾಗಿದೆ. ಉಚ್ಚಸ್ವರದಲ್ಲಿ ಹೇಳುವ ಸ್ವರಗಳಿಗೆ ಉದಾತ್ತವೆಂದು ಹೆಸರು ಮತ್ತು ನಿಮ್ನ ಸ್ವರದಲ್ಲಿ ಹೇಳುವ ಸ್ವರಗಳಿಗೆ ಅನುದಾತ್ತವೆಂದು ಕರೆಯುತ್ತಾರೆ.

ಒಂದು ವಿಶಿಷ್ಟ ಸಮಾಜದ ಸ್ವರೂಪವನ್ನು ನಾವು ಅರಿಯಬೇಕಾದರೆ ಆ ಕಾಲದಲ್ಲಿ ಹೊರಬಂದ ಸಾಹಿತ್ಯದ ಕೃತಿಗಳನ್ನು ಅವಲಂಬಿಸಬೇಕು.

ಹಾಗೆಯೇ ಋಗ್ವೇದವು ತನ್ನ ಕಾಲದ ಜನಜೀವನದ ವ್ಯವಹಾರಗಳನ್ನು ತಿಳಿಸಿಕೊಟ್ಟಿದೆ. ಋಗ್ವೇದ ಕಾಲದ ಜನಾಂಗವು ಶ್ರಮ ಮತ್ತು ಬುದ್ಧಿಯ ಕ್ಷೇತ್ರಗಳಲ್ಲೂ ಸಮಾನವಾದ ವಿಕಾಸವನ್ನು ಸಾಧಿಸಿತ್ತು. ಋಗ್ವೇದದಲ್ಲಿ ಕಮ್ಮಾರ, ಬಡಗಿ, ವೈದ್ಯ, ಶಿಲ್ಪಿ, ನೇಯುವುದು, ಚರ್ಮಗಾರಿಕೆ ಮುಂತಾದ ವಿವಿಧ ವ್ಯವಸಾಯಗಳ ಬಗ್ಗೆ ಉಲ್ಲೇಖವಿದೆ. ಋಗ್ವೇದದಲ್ಲಿ ಇಂದಿನ ವೈಜ್ಞಾನಿಕ ಸಂಪರ್ಕ ಹಾಗೂ ಸಾಧನಗಳಾದ ವಾಯುಮಾನ, ಜಲಯಾನ ಮುಂತಾದ ವಾಹನಗಳ ಪರಿಚಯವಿದೆ. ಋಗ್ವೇದ ಸಮಾಜವು ಕೃಷಿಯನ್ನು ಪ್ರಧಾನ ವೃತ್ತಿಯಾಗಿ ಮತ್ತು ಆರ್ಥಿಕ ವ್ಯವಹಾರದ ಪ್ರಧಾನ ಸಾಧನವನ್ನಾಗಿ ಸ್ವೀಕರಿಸಿತ್ತು. ಋಗ್ವೇದದಲ್ಲಿ ಪಶುಪಾಲನವೂ ಮಹತ್ವದ ಉದ್ಯೋಗವೆಂದು ತಿಳಿಸಲಾಗಿದೆ.

ಋಗ್ವೇದದ ಒಂದೊಂದು ಮಂತ್ರವೂ ಒಂದು ಸುಂದರವಾದ ಗೀತೆಯಂತಿದೆ. ಅಲಂಕಾರ, ಛಂದಸ್ಸು, ನಾದದ ಮಾಧುರ್ಯ, ಧ್ವನಿಪೂರ್ಣತೆ ಮುಂತಾದ ಕಾವ್ಯಲಕ್ಷಣಗಳನ್ನು ಋಗ್ವೇದವು ಹೊಂದಿದೆ. ಋಗ್ವೇದವು ನಿಜವಾದ ಅರ್ಥದಲ್ಲಿ ಹೇಳುವುದಾದರೆ ಭಕ್ತಿಗೀತೆಗಳ ಅಕ್ಷಯಭಂಡಾರವಾಗಿದೆ. ಸರ್ವಜಗತ್ತಿನ ಒಡೆಯನಾದ ಭಗವಂತನಲ್ಲಿ ತೋರುವ ಅಖಂಡ ಭಕ್ತಿಯೇ ಮನುಷ್ಯನನ್ನು ಎಲ್ಲಾ ದುಃಖಗಳಿಂದ ಪಾರುಮಾಡಬಲ್ಲದು ಎಂಬ ನಿಶ್ಚಲ ವಿಶ್ವಾಸ ಋಗ್ವೇದದಲ್ಲಿ ಉಲ್ಲೇಖವಾಗಿದೆ. ಋಗ್ವೇದದಲ್ಲಿ ಇಂದ್ರ, ಅಗ್ನಿ, ವಾಯು, ಬೃಹಸ್ಪತಿ ಮೊದಲಾದ ದೇವತೆಗಳ ವರ್ಣನೆಯಿದೆ.

ಋಗ್ವೇದವು ಸಾಮಾಜಿಕ ಸಮಾನತೆ ಮತ್ತು ಸಂಪತ್ತಿನ ಸಮಾನ ಹಂಚಿಕೆಯನ್ನು ಪ್ರತಿಪಾದಿಸುತ್ತದೆ. ಉದ್ಯಮಶೀಲರಾದ, ಪ್ರಯತ್ನವಂತರಿಂದಲೇ ಸಮಾಜದ ಉದ್ಧಾರ ಸಾಧ್ಯವೆಂದು ತಿಳಿಸಿಕೊಟ್ಟಿದೆ. ಋಗ್ವೇದದಲ್ಲಿ ವೈದ್ಯಕೀಯ ಉಲ್ಲೇಖಗಳಿವೆ. ಋಗ್ವೇದದಲ್ಲಿ ನಿರೂಪಿತವಾಗಿರುವ ಯಜ್ಞದಲ್ಲಿ ಬಳಸುವ ದರ್ಭೆ, ತಿಲ ಮೊದಲಾದ ವಸ್ತುಗಳಲ್ಲಿ ಅಡಗಿರುವ ರೋಗನಾಶಕ ಶಕ್ತಿಯನ್ನು ಇಂದು ಆಯುರ್ವೇದದವರು ಜಗತ್ತಿಗೆ ತಿಳಿಸಬೇಕಾಗಿದೆ. ಋಗ್ವೇದದಲ್ಲಿ ಗಿಡವನ್ನು ದೇವರೆಂದು ಪೂಜಿಸಿ, ಪರ್ವತಗಳನ್ನು, ಅಡವಿಗಳನ್ನು, ಗಾಳಿಯನ್ನು ಸೂರ್ಯನನ್ನು ಪ್ರಾಣದಾಯಿನೀ ಶಕ್ತಿಗಳೆಂದು ಪೂಜಿಸಬೇಕು ಎಂದು ತಿಳಿಸಲಾಗಿದೆ. ಆದರೆ ಇಂದು ನಾವು ಅದೇ ಪ್ರಕೃತಿಯನ್ನು ನಾಶ ಮಾಡುತ್ತಿದ್ದೇವೆ. ಆದ್ದರಿಂದ ನಾವು ವೇದಗಳಲ್ಲಿ ಹೇಳಿರುವ ಪ್ರಕೃತಿ ಪೂಜೆಯನ್ನು ಖಂಡಿತವಾಗಿಯೂ ಅಲಕ್ಷಿಸಬಾರದು. ಋಗ್ವೇದವು ನಮಗೆ ನೀಡಿದ ಬಳುವಳಿ ಎಂದರೆ ಪರಿಸರ ಪ್ರೇಮ. ಅಂತಹ ಪರಿಸರ ಪ್ರೇಮವನ್ನು ನಾವು ಪಾಲಿಸಬೇಕು.

देवानां भद्रा सुमतिर्ऋजूयतां

देवानां रातिरभि नो नि वर्तताम् ।

देवानां सख्यमुप सेदिमा वयं

देवा न आयुः प्र तिरन्तु जीवसे ॥

ಅರ್ಥ: ಋಜುಮಾರ್ಗದಲ್ಲಿ ಎಂದರೆ ಸತ್ಯಮಾರ್ಗದಲ್ಲಿ ಮುನ್ನಡೆವ ದೇವತೆಗಳ ಮಂಗಲಾಶೀರ್ವಾದಗಳು ಮತ್ತು ಉದಾರ ಕೊಡುಗೆಗಳು ನಮಗೆ ಸಂಪ್ರಾಪ್ತವಾಗಲಿ. ನಾವು ದೇವತೆಗಳ ಸ್ನೇಹವನ್ನು ಸಂಪಾದಿಸೋಣ. ಈ ದೇವತೆಗಳು ನಮಗೆ ಜೀವಿಸಲು ದೀರ್ಘವಾದ ಆಯಸ್ಸನ್ನು ನೀಡಲಿ.

ಹೀಗೆ ಋಗ್ವೇದದಲ್ಲಿ ಜೀವನವನ್ನು ಉತ್ತಮವಾದ ರೀತಿಯಲ್ಲಿ ನಡೆಸಲು ಅನೇಕ ಸಂದೇಶಗಳನ್ನು ತಿಳಿಸಲಾಗಿದೆ. ಅಂತಹ ಸಂದೇಶಗಳನ್ನು ನಾವು ಪಾಲಿಸಿ, ನಮ್ಮ ಪ್ರಾಚೀನ ಸಂಸ್ಕೃತಿಯನ್ನು ಉಳಿಸೋಣ.

ಗುರುವರೇಣ್ಯರು

ಆಶ್ರಿತಾ ಉಡುಪ
ಪ್ರಥಮ ಬಿ.ಎಸ್ಸಿ.

प्रेरकः सूचकश्चैव वाचको दर्शकस्तथा ।

शिक्षको बोधकश्चैव षडेते गुरवः स्मृताः ॥

ಗುರುವೆಂದರೆ ಒಬ್ಬ ವ್ಯಕ್ತಿಯನ್ನು ಅಜ್ಞಾನದಿಂದ ಜ್ಞಾನದೆಡೆಗೆ ಕರೆದೊಯ್ಯುವ ಪುಣ್ಯ ಪುರುಷ. ಅಂತಹ ಗುರುವರೇಣ್ಯರಲ್ಲಿ ಅತ್ಯುತ್ತಮ ಸ್ಥಾನಕ್ಕೇರಿದವರು ಉಡುಪಿಯ ಪೇಜಾವರ ಅಧೋಕ್ಷಜ ಮಠಾಧೀಶರಾದ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು. 1931 ಎಪ್ರಿಲ್ 27ರಂದು ಉಪ್ಪಿನಂಗಡಿಯ ರಾಮಕುಂಜದಲ್ಲಿ ಶಿವಳ್ಳಿ ಮಾಧ್ವಬ್ರಾಹ್ಮಣ ಕುಟುಂಬದಲ್ಲಿ ನಾರಾಯಣಾಚಾರ್ಯ ಮತ್ತು ಕಮಲಮ್ಮ ದಂಪತಿಗಳಿಗೆ ಎರಡನೆಯ ಪುತ್ರರಾಗಿ ಜನಿಸಿದರು. ಇವರ ಪೂರ್ವಾಶ್ರಮದ ಹೆಸರು ವೆಂಕಟರಾಮ. 7ನೇ ವಯಸ್ಸಿಗೆ ಸನ್ಯಾಸ ದೀಕ್ಷೆ ಸ್ವೀಕರಿಸಿದರು. ಉಡುಪಿ ಕೃಷ್ಣಮಠದ ಪರಂಪರೆಯಲ್ಲಿ 5 ಬಾರಿ ಪರ್ಯಾಯ ಸ್ವೀಕರಿಸಿ ಪೂರೈಸಿದ ಶ್ರೇಯಸ್ಸು ಅವರದ್ದು.

ಇವರು ಧಾರ್ಮಿಕವಾಗಷ್ಟೇ ಅಲ್ಲದೇ ಸಾಮಾಜಿಕವಾಗಿಯೂ ಚಟುವಟಿಕೆಯಿಂದ ಕೂಡಿದ್ದರು. ಹಲವು ಸಮಾಜಸೇವಾ ಮತ್ತು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿ ಅನೇಕ ಬಡವರ್ಗದವರ ಏಳಿಗೆಗೆ ಶ್ರಮಿಸಿದವರು. ಪೂರ್ಣಪ್ರಜ್ಞ ವಿದ್ಯಾಪೀಠ, ಅಖಿಲಭಾರತ ಮಾಧ್ವಮಹಾಮಂಡಲ ಇವರು ಸ್ಥಾಪಿಸಿದ ಪ್ರಮುಖ

ಸಂಸ್ಥೆಗಳಾಗಿವೆ. ಧರ್ಮಸೂಕ್ಷ್ಮ ವಿಚಾರ ಬಂದಾಗ ಭಿನ್ನಾಭಿಪ್ರಾಯಗಳನ್ನು ನಿರ್ಲಕ್ಷಿಸದೇ ವೈಚಾರಿಕ ಚರ್ಚೆಗೆ ಮುನ್ನುಗ್ಗುವ ಉತ್ಸಾಹ ಹೊಂದಿದ್ದರು. ಇವರು ತಮ್ಮ ಶಿಷ್ಯಂದಿರನ್ನು ಸ್ವಂತ ಮಕ್ಕಳಂತೆ ಪ್ರೀತಿಯಿಂದ ಸಲಹುತ್ತಿದ್ದರು. ಧರ್ಮ, ವಿದ್ಯೆಯನ್ನು ಬಿಡಿಬಿಡಿಸಿ ಹೇಳಿಕೊಡುತ್ತಿದ್ದರು. ಯಾರಿಗೂ ಭೇದಬಾವ ಮಾಡಿದವರಲ್ಲ. ಇವರು ಹಿಂದುತ್ವವಾದಿಯಾದರೂ ಸರ್ವಧರ್ಮ ಸಹಿಷ್ಣುವಾಗಿದ್ದರು. ಪಾದರಸದಂತಹ ಚಟುವಟಿಕೆಯಿಂದ ಎಲ್ಲರನ್ನೂ ಆಕರ್ಷಿಸಿದವರು, ಜಾತಿಗಿಂತ ಸ್ವಭಾವ ಲೇಸೆಂದು ಹೇಳಿ ದಲಿತ ಕೇರಿಗೆ ಭೇಟಿ ನೀಡಿ ಜಾತ್ಯಾತೀತ ತತ್ವ ಸಾರಿದವರು. ಇವರ ಶಾಸ್ತ್ರದ ಅರಿವಿನ ಆಳ, ವಿಸ್ತಾರಗಳು ವಿದ್ವಾಂಸರನ್ನೂ ನಿಬ್ಬೆರಗಾಗಿಸುತ್ತಿತ್ತು. ಜನರು ಸಮಾಜಕ್ಕೆ ಸಲ್ಲಿಸಿದ ಸೇವೆ ನಾವು ದೇವರಿಗೆ ಸಲ್ಲಿಸಬೇಕಾದ ಸುಂಕ. ಇದು ನಮ್ಮ ಹಿರಿಯರು ನೀಡಿದ ಸಂದೇಶ ಎಂದು ನಂಬಿದ್ದ ಪೇಜಾವರ ಶ್ರೀಗಳು ಅದನ್ನು ತಮ್ಮ ಜೀವನದಲ್ಲಿ ಅಕ್ಷರಶಃ ಅಳವಡಿಸಿಕೊಂಡಿದ್ದರು. ರಾಮಮಂದಿರ ನಿರ್ಮಾಣದಲ್ಲೂ ಬಹಳಷ್ಟು ಶ್ರಮವಹಿಸಿದ್ದರು. ಇಂತಹ ಗುರುಗಳ ಈಗ ನೆನಪು ಮಾತ್ರ.

ಭಗವದ್ಗೀತಾ

ಮಧುಮತಿ ಎಂ.
ಪ್ರಥಮ ಬಿ.ಎಸ್ಸಿ.

ಭಾರತದ ಪುರಾಣಗ್ರಂಥಗಳಲ್ಲಿ ಅತ್ಯಂತ ಪ್ರಸಿದ್ಧವಾದ ಮತ್ತು ಅತ್ಯಂತ ಪವಿತ್ರವಾದ ಗ್ರಂಥವೆಂದರೆ ಅದು ಭಗವದ್ಗೀತೆ. ದೇವವಾಣಿಯಲ್ಲಿ ಬೋಧಿಸಿದ ಈ ಗ್ರಂಥವು ಕೇವಲ ಹಿಂದು ಸಮಾಜಕ್ಕೆ ಅಲ್ಲದೆ ಸಮಸ್ತ ಸಂಸಾರದ ಪ್ರತಿಯೊಬ್ಬ ಮಾನವನಿಗೂ ಉತ್ತಮ ಮಾರ್ಗದರ್ಶನ ನೀಡುವ ಗ್ರಂಥವಾಗಿದೆ. ಇದು ಮಹಾಭಾರತ 18 ಪರ್ವದಲ್ಲಿ ಶ್ರೇಷ್ಠ ಪರ್ವವಾದ ಭೀಷ್ಮಪರ್ವದಲ್ಲಿ ಇದೆ. ಈ ಗ್ರಂಥವು 18 ಅಧ್ಯಾಯಗಳನ್ನು ಹೊಂದಿದೆ. ಅವು ಯಾವುವೆಂದರೆ ಅರ್ಜುನವಿಷಾದ, ಕರ್ಮಯೋಗ, ಸಾಂಖ್ಯಯೋಗ, ಜ್ಞಾನಯೋಗ, ಸನ್ಯಾಸಯೋಗ, ಧ್ಯಾನಯೋಗ, ಜ್ಞಾನವಿಜ್ಞಾನ ಯೋಗ, ಅಕ್ಷರಬ್ರಹ್ಮಯೋಗ, ರಾಜವಿದ್ಯಾರಾಜಗುಹ್ಯಯೋಗ, ವಿಭೂತಿಯೋಗ, ವಿಶ್ವರೂಪದರ್ಶನ, ಭಕ್ತಿಯೋಗ, ಕ್ಷೇತ್ರಕ್ಷೇತ್ರಜ್ಞಯೋಗ, ಗುಣತ್ರಯವಿಭಾಗ ಯೋಗ, ಪುರುಷೋತ್ತಮ ಯೋಗ, ದೈವಾಸುರಸಂಪದ್ವಿಭಾಗಯೋಗ, ಶ್ರದ್ಧಾತ್ರಯ ವಿಭಾಗಯೋಗ ಮತ್ತು ಮೋಕ್ಷಸನ್ಯಾಸಯೋಗ.

ಅರ್ಜುನನು ಕುರುಕ್ಷೇತ್ರ ಯುದ್ಧದ ಸಮಯದಲ್ಲಿ ಯುದ್ಧಮಾಡಲು ಹಿಂಜರಿದಾಗ ಆತನಿಗೆ ಬೋಧಿಸಿದ ಧರ್ಮ ಸಂದೇಶವಾಗಿದೆ. ಮೇಲ್ನೋಟಕ್ಕೆ ಇದು ಶ್ರೀ ಕೃಷ್ಣನ ಅರ್ಜುನನಿಗೆ ಭೋದಿಸಿದಂತೆ ಕಂಡರೂ ಇದು ಸಮಸ್ತ ಲೋಕಕ್ಕೆ ಭಗವಂತನು ನೀಡಿದ ಅದ್ಭುತವಾದ ಮತ್ತು ಮಹತ್ವಪೂರ್ಣವಾದ ಸಂದೇಶವಾಗಿದೆ. ಪ್ರತಿಯೊಬ್ಬ ಮಾನವನ ಸಾಮಾಜಿಕ, ಆಧ್ಯಾತ್ಮಿಕ, ಭೌತಿಕವಾದ ಯಾವುದೇ ರೀತಿಯ ಪ್ರಶ್ನೆಗಳಿಗೂ ಉತ್ತರ ಸಿಗುವ ಗ್ರಂಥವೆಂದರೆ ಅದು ಭಗವದ್ಗೀತೆ. ಧರ್ಮ, ಜ್ಞಾನ, ಭಕ್ತಿ, ಯೋಗ, ಕರ್ಮ, ಶ್ರದ್ಧೆ ಹೀಗೆ ಹಲವಾರು ರೀತಿಯ ನಮ್ಮ ಜೀವನದ ಹೆಜೆ ಹೆಜ್ಜೆಗೂ ಅಳವಡಿಸಬೇಕಾದ ಪ್ರತಿಯೊಂದು ಅಂಶವೂ ಇದರಲ್ಲಿ ಒಳಗೊಂಡಿರುತ್ತದೆ.

ನಮ್ಮ ನಿಸ್ವಾರ್ಥ ಮನೋಭಾವವೇ ಅಭಿವೃದ್ಧಿಗೆ ಮತ್ತು ಉನ್ನತಿಗೆ ಕಾರಣ. ಅದೇ ರೀತಿ **कर्मण्येवाधिकारस्ते मा फलेषु कदाचन** ಅರ್ಥಾತ್ ನಾವು ಯಾವುದೇ ಕಾರ್ಯವನ್ನು ಧರ್ಮದಿಂದ ಮಾಡಬೇಕು. ಇಲ್ಲಿ ಧರ್ಮ ಎಂದರೆ ಯಾವುದೇ ಜಾತಿ, ಮತ, ಪಂಗಡಗಳನ್ನು

ಸೂಚಿಸಿಲ್ಲ. ಇಲ್ಲಿ ಸರಿಯಾದ ದಾರಿಯಲ್ಲಿ ನಡೆಯಬೇಕಾಗಿ ಸೂಚಿಸಿರುತ್ತಾನೆ. ಅಷ್ಟೇ ಅಲ್ಲದೆ ಕಾರ್ಯವನ್ನು ಕೇವಲ ಫಲದ ನಿರೀಕ್ಷೆಯಿಂದ ಮಾಡಬಾರದು. ನಾವು ಮಾಡುವ ಕಾರ್ಯದಲ್ಲಿ ಶ್ರದ್ಧೆ, ನಿಷ್ಠೆ ಇದ್ದಾಗ ಅದು ತನ್ನಿಂದ ತಾನಾಗಿ ಫಲವನ್ನು ನೀಡುತ್ತದೆ. ಅಷ್ಟೇ ಅಲ್ಲದೆ **स्वधर्मे निधनं श्रेयः** ಈ ರೀತಿ ಸಾವಿರಾರು ಸಂದೇಶ ನಮ್ಮ ಜೀವನಕ್ಕೆ ಅವಶ್ಯಕವಾದ ಸಂದೇಶವನ್ನು ನೀಡಿದ್ದಾನೆ ಅಂತಹ ಶ್ರೀಕೃಷ್ಣನಿಗೆ ನಾವು ಎಂದಿಗೂ ಚಿರಋಣಿಯಾಗಿರಬೇಕು.

ಅತೀ ಮಹತ್ವಪೂರ್ಣವಾದ ಈ ಗ್ರಂಥದಿಂದ ಪ್ರಸಿದ್ಧ ವ್ಯಕ್ತಿಗಳೂ ಕೂಡ ಪ್ರಭಾವಿತರಾಗಿರುವುದು ಸಾಮಾನ್ಯ, ಏಕೆಂದರೆ ಅದರ ಶಕ್ತಿಯೇ ಅದ್ಭುತವಾದುದು. ರಾಷ್ಟ್ರಪಿತ ಮಹಾತ್ಮಾಗಾಂಧೀಜಿಯವರು ಭಗವದ್ಗೀತೆಯನ್ನು "ಆಧ್ಯಾತ್ಮಿಕ ಶಬ್ದಕೋಶ" ಎಂದಿರುತ್ತಾರೆ. ಅಷ್ಟೇ ಅಲ್ಲದೆ ವಿವೇಕಾನಂದರು ಇದು ಸುಂದರವಾದ ಗುಚ್ಛ. ಹಾಗೆಯೇ ಈ ಗುಚ್ಛವು ಸುಂದರವಾದ ಹೂಗಳು ಅಂದರೆ ಆಧ್ಯಾತ್ಮಿಕ ಸತ್ಯದಿಂದ ತುಂಬಿಕೊಂಡಿದೆ ಎಂದು ಉಲ್ಲೇಖಿಸಿದ್ದಾರೆ. ಇದು ಕೇವಲ ಭಾರತೀಯ ತತ್ವಜ್ಞಾನಿಗಳನ್ನು ಮಾತ್ರವಲ್ಲದೆ ವಿದೇಶೀ ತತ್ವಜ್ಞಾನಿಗಳನ್ನು ಪ್ರಭಾವಿತರಾಗುವಂತೆ ಮಾಡಿದೆ.

ಇಂತಹ ಮಹಿಮೆಯುಳ್ಳ ಗ್ರಂಥವನ್ನು ಪಡೆದ ನಾವು ಓದಿ ಅದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುತ್ತೇವೋ ಅಂದು ನಾವು ಧನ್ಯರು. ಪ್ರತಿಯೊಬ್ಬ ಮಾನವನೂ ಇದನ್ನು ತಿಳಿದುಕೊಂಡು ಅದರಂತೆ ನಡೆದರೆ ಎಲ್ಲರೂ ಆಧ್ಯಾತ್ಮಿಕ ಸಾಧನೆ ಮಾಡುವುದರಲ್ಲಿ ಸಂದೇಹವೇ ಇಲ್ಲ ಎಂದು ಹೇಳಬಹುದು. ಇಂತಹ ಭಗವದ್ಗೀತೆಯು ನಮ್ಮನ್ನು ರಕ್ಷಿಸಲಿ ಮತ್ತು ಆ ಭಗವಂತನು ಎಲ್ಲರನ್ನೂ ಒಳ್ಳೆಯ ದಾರಿಯಲ್ಲಿ ಸಾಗುವಂತೆ ಮಾಡಲಿ ಎಂದು ಪ್ರಾರ್ಥಿಸೋಣ. **सर्वे जनाः सुखिनो भवन्तु ।**

ಮಹಾಕಾವ್ಯಗಳು

ವೈಶಾಲಿ ಎ. ಪೈ
ಪ್ರಥಮ ಬಿ.ಕಾಂ. ಎ.

ನಾವೆಲ್ಲರೂ ಮಹಾಕಾವ್ಯಗಳ ಕುರಿತು ಕೇಳಿರುತ್ತೇವೆ. ಪಂಚಮಹಾಕಾವ್ಯಗಳ ಕುರಿತು ತಿಳಿದೂ ಇರುತ್ತೇವೆ. ಆದರೆ ಈ ಮಹಾಕಾವ್ಯಗಳ ಲಕ್ಷಣಗಳ ಕುರಿತು ಇದರ ವಿಶೇಷತೆಗಳ ಕುರಿತು ತಿಳಿದವರ ಸಂಖ್ಯೆ ಬಹಳ ಕಡಿಮೆ. ಹಾಗಾಗಿ ಮಹಾಕಾವ್ಯಗಳ ಕುರಿತು ಕೇವಲ ವಿಷಯಗಳನ್ನು ತಿಳಿಸುವ ಪ್ರಯತ್ನವನ್ನು ಮಾಡಿರುತ್ತೇನೆ.

ಮಹಾಕಾವ್ಯಗಳು ಸರ್ಗಬಂಧವನ್ನು ಹೊಂದಿರುವುದರಿಂದ ಅವುಗಳನ್ನು ಸರ್ಗಬಂಧ ಎಂದು ಕರೆಯುತ್ತಾರೆ. ದಂಡಿ, ರುದ್ರಟ, ವಿಶ್ವನಾಥ ಮೊದಲಾದ ಕವಿಗಳು ತಮ್ಮ ಗ್ರಂಥಗಳಲ್ಲಿ ಮಹಾಕಾವ್ಯದ ಲಕ್ಷಣಗಳನ್ನು ತಿಳಿಸಿದ್ದಾರೆ. ಆಚಾರ್ಯ ವಿಶ್ವನಾಥರು ತಮ್ಮ ಕೃತಿಯಾದ ಸಾಹಿತ್ಯದರ್ಪಣದಲ್ಲಿ ಮಹಾಕಾವ್ಯಗಳ ಲಕ್ಷಣಗಳನ್ನು ಸವಿವರವಾಗಿ ಈ ಪರಿಯಾಗಿ ವರ್ಣಿಸಿದ್ದಾರೆ. ಯಾವ ಕಾವ್ಯದಲ್ಲಿ ಸರ್ಗಗಳ ನಿಬಂಧನವಿರುತ್ತದೆಯೋ ಅಂತಹ ಕಾವ್ಯಗಳನ್ನು ಮಹಾಕಾವ್ಯಗಳೆನ್ನುತ್ತಾರೆ. ಅಷ್ಟು ಮಾತ್ರವಲ್ಲದೇ ಅಂತಹ ಕಾವ್ಯಗಳಲ್ಲಿ ಒಬ್ಬ ದೇವತೆ ಅಥವಾ ಸದೃಶನಾದ ಕ್ಷತ್ರಿಯನು ನಾಯಕನಾಗಿರಬೇಕು. ಅಂತಹ ನಾಯಕನು ಧೀರೋದಾತ್ತ ಗುಣಗಳನ್ನು ಹೊಂದಿರಬೇಕು. ಒಂದೇ ಕುಲದಲ್ಲಿ ಹುಟ್ಟಿದ ಅನೇಕ ಉತ್ತಮ ರಾಜರೂ ಕೂಡ ಇವುಗಳಲ್ಲಿ ನಾಯಕರಾಗಿರಬಹುದು. ಇವುಗಳಲ್ಲಿ ಶೃಂಗಾರ, ವೀರ ಅಥವಾ ಶಾಂತರಸವು ಪ್ರಧಾನವಾಗಿರಬೇಕು ಹಾಗೂ ಉಳಿದ ರಸಗಳು ಅದಕ್ಕೆ ಸಹಾಯಕವಾಗಿರಬೇಕು. ಇವು ಆಚಾರ್ಯ ವಿಶ್ವನಾಥರು ತಿಳಿಸಿದ ಕೆಲವು ಪ್ರಮುಖ ಲಕ್ಷಣಗಳಾಗಿವೆ.

ಇವುಗಳಲ್ಲದೆ ಇನ್ನೂ ಕೆಲವು ಅನ್ಯ ಲಕ್ಷಣಗಳನ್ನು ಆಚಾರ್ಯರು ತಿಳಿಸಿದ್ದಾರೆ. ಅವುಗಳೆಂದರೆ ಇಂತಹ

ಕಾವ್ಯಗಳಲ್ಲಿ ನಾಟಕದ ಎಲ್ಲ ಸಂಧಿಗಳಿರಬೇಕು. ಅವುಗಳೆಂದರೆ ಮುಖ–ಪ್ರತಿಮುಖ ಗರ್ಭ, ವಿಮರ್ಶಾ ಉಪಸಂಹೃತಿ. (ನಿರ್ವಹಣ) ಇಂತಹ ಕಾವ್ಯದ ಕಥೆಯು ಐತಿಹಾಸಿಕವಾಗಿರಬೇಕು. ಕಾವ್ಯವು ಐತಿಹಾಸಿಕವಾಗಿರದಿದ್ದರೆ ಅದರ ಕಥೆಯು ಸಜ್ಜನರನ್ನು ಆಶ್ರಯಿಸಿರಬೇಕು. ಇವುಗಳು ದುಷ್ಟರ ನಿಂದನೆ ಹಾಗೂ ಸಜ್ಜನರ ಪ್ರಶಂಸೆಯಿಂದ ಕೂಡಿರುತ್ತವೆ. ಮಹಾಕಾವ್ಯಗಳಲ್ಲಿ ಚರ್ತುವರ್ಗಗಳಲ್ಲಿ ಒಂದು ವರ್ಗಕ್ಕೆ ಪ್ರಾಮುಖ್ಯತೆಯನ್ನು ನೀಡಲಾಗುತ್ತದೆ. ಇವುಗಳ ಆರಂಭದಲ್ಲಿ ನಮಸ್ಕಾರ, ಆಶೀರ್ವಚನ ಅಥವಾ ವಸ್ತು ನಿರ್ದೇಶನವನ್ನು ಗಮನಿಸಬಹುದು.

ಮಹಾಕಾವ್ಯಗಳು ಎಂಟಕ್ಕಿಂತ ಅಧಿಕ ಸರ್ಗಗಳನ್ನು ಹೊಂದಿರುತ್ತವೆ. ಇಂತಹ ಸರ್ಗಗಳ ಗಾತ್ರವು ಅತೀ ದೀರ್ಘವಾಗಿ ಅಥವಾ ಅತೀ ಲಘುವಾಗಿರಬಾರದು. ಪ್ರತಿಯೊಂದು ಸರ್ಗದಲ್ಲೂ ಸಮಾನವಾದ ಛಂದಸ್ಸಿನ ಪ್ರಯೋಗವಿರಲೇಬೇಕು. ಸರ್ಗದ ಅಂತ್ಯದಲ್ಲಿ ಛಂದಸ್ಸಿನ ಪರಿವರ್ತನೆಯಿದ್ದರೆ ಅದು ಉತ್ತಮ. ಕೆಲವೊಮ್ಮೆ ಒಂದೇ ಸರ್ಗದಲ್ಲಿ ಅನೇಕ ಛಂದಸ್ಸುಗಳ ಪ್ರಯೋಗವನ್ನು ಕವಿ ಮಾಡಬಹುದು. ಸರ್ಗದ ಅಂತ್ಯದಲ್ಲಿ ಕವಿ ಮುಂದೆ ಬರುವ ಕಥೆಯ ಸೂಚನೆಯನ್ನು ನೀಡಬೇಕು. ಇಂತಹ ಸರ್ಗಸಂಧ್ಯಾವರ್ಣನೆ, ಸೂರ್ಯೋದಯ, ಸೂರ್ಯಾಸ್ತ, ಪರ್ವತ, ವನ, ಬೇಟೆ, ಋತು, ಸಾಗರ ಮುಂತಾದವುಗಳ ವರ್ಣನೆಯಿರಬೇಕು.

ಇಂತಹ ಲಕ್ಷಣಗಳನ್ನು ಯಾವ ಕಾವ್ಯಗಳು ಹೊಂದಿರುತ್ತವೆಯೋ ಅವುಗಳನ್ನೇ ಮಹಾಕಾವ್ಯಗಳೆನ್ನುವರು. ಮಹಾಕಾವ್ಯದ ಲಕ್ಷಣಗಳನ್ನು ಹೊಂದಿದ ಐದು ಮಹಾಕಾವ್ಯಗಳು ಸಂಸ್ಕೃತ ವಿದ್ವಾಂಸರ ಮೆಚ್ಚುಗೆಯನ್ನು ಪಡೆದಿದ್ದು ಅವುಗಳನ್ನು ಪಂಚಮಹಾಕಾವ್ಯಗಳು ಎಂದು ಕರೆಯಲಾಗುತ್ತದೆ. ಅವುಗಳೆಂದರೆ

ರಘುವಂಶ: ಕಾಳಿದಾಸನಿಂದ ರಚಿತವಾದ ಈ ಮಹಾಕಾವ್ಯವು 19 ಸರ್ಗಗಳನ್ನು ಹೊಂದಿದೆ. ಸೂರ್ಯವಂಶಜರ ಕಥೆಯನ್ನು ದಿಲೀಪನಿಂದ ಆರಂಭಿಸಿ 29ನೇಯ ರಾಜನಾದ ಅಗ್ನಿವರ್ಣನವರೆಗೂ ಈ 19 ಸರ್ಗಗಳಲ್ಲಿ ವಿವರಿಸಲಾಗಿದೆ. ಸೂರ್ಯವಂಶದವರ ಆದರ್ಶಗಳನ್ನು ಕಾಳಿದಾಸನು ಇಲ್ಲಿ ವರ್ಣಿಸುತ್ತಾನೆ.

ಕುಮಾರಸಂಭವ: ಶಿವ–ಪಾರ್ವತಿಯರ ಸಂಯೋಗ, ಕುಮಾರನದ ಹಾಗೂ ಷಣ್ಮುಖನಿಂದ ತಾರಕಾಸುರನ ಸಂಹಾರ. ಇದನ್ನೇ ಪ್ರಧಾನ ಕಥೆಯನ್ನಾಗಿಸಿಕೊಂಡಿರುವ ಈ ಮಹಾಕಾವ್ಯವು 17 ಸರ್ಗಗಳಿಂದ ಕೂಡಿದೆ. ಕಾಳಿದಾಸನ ಈ ಮಹಾಕಾವ್ಯವು ಶಿವ–ಸ್ಕಾಂದ ಹಾಗೂ ಬ್ರಹ್ಮಪುರಾಣಗಳ ಕಥೆಯನ್ನು ಆಶ್ರಯಿಸಿದೆ.

ಕಿರಾತಾರ್ಜುನೀಯ: ಮಹಾಭಾರತದ ವನಪರ್ವವನ್ನು ಆಶ್ರಯಿಸಿ ರಚಿತವಾದ ಈ ಮಹಾಕಾವ್ಯದಲ್ಲಿ 18 ಸರ್ಗಗಳಿವೆ. ಭಾರವಿಯು ತನ್ನ ಕೃತಿಯಲ್ಲಿ ಶಿವನಿಂದ ಪಾಶುಪತಾಸ್ತ್ರವನ್ನು ಪಡೆಯಲು ಅರ್ಜುನನು ಮಾಡುವ ತಪಸ್ಸಾಧನೆ. ಕಿರಾತರೂಪಿಯಾದ ಶಿವನೊಡನೆ ಯುದ್ಧ ಹಾಗೂ ಅದರ ಪಾಪಿಯನ್ನು ಬಹಳ ರಮಣೀಯವಾಗಿ ವರ್ಣಿಸಿದ್ದಾನೆ.

ಶಿಶುಪಾಲವಧ: ಮಾಘನ 20 ಸರ್ಗಗಳ ಈ ಮಹಾಕಾವ್ಯವು ಶ್ರೀಕೃಷ್ಣನ ಚಕ್ರದಿಂದ ಶಿಶುಪಾಲನ ವಧೆಯಾಗುವ ಕಥನವನ್ನು ಹೊಂದಿದೆ. ರಾಜಸೂಯಯಾಗದಲ್ಲಿ ಯುಧಿಷ್ಠಿರನು ಅಗ್ರಪೂಜೆ ಯಾರಿಗೆ ಸಲ್ಲಬೇಕೆಂದು ಜಿಜ್ಞಾಸೆಯಲ್ಲಿದ್ದಾಗ ಶ್ರೀಕೃಷ್ಣನ ಹೆಸರು ಪ್ರಮುಖವಾಗಿ ಕೇಳಿಬರುತ್ತದೆ. ಶಿಶುಪಾಲನು ಇದನ್ನು ವಿರೋಧಿಸಿದಾಗ ಶ್ರೀಕೃಷ್ಣನಿಂದ ಹತನಾಗುತ್ತಾನೆ.

ನೈಷಧೀಯ ಚರಿತ:

ನಳ–ದಮಯಂತಿಯರ ಕಥೆಯೇ ಈ ಕಾವ್ಯದ ಮುಖ್ಯ ಕಥಾವಸ್ತುವಾಗಿದೆ. ಶ್ರೀಹರ್ಷ ಈ ಮಹಾಕೃತಿಯು 22 ಸರ್ಗಗಳಿಂದ ಕೂಡಿದೆ. **नैषधं विद्वदौषधम्** ಎಂಬ ಉಕ್ತಿಯು ಈ ಮಹಾಕೃತಿಯ ಮಹತ್ವವನ್ನು ತಿಳಿಸುತ್ತದೆ.

ಸಂಸ್ಕೃತ ಕಾವ್ಯಕ್ಷೇತ್ರದಲ್ಲಿ ಈ ಐದು ಮಹಾಕಾವ್ಯಗಳು ಉತ್ಕೃಷ್ಟ ಕೃತಿಗಳಾಗಿವೆ. ಇವುಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಅಧ್ಯಯನ ಮಾಡಿ ಅದರ ಮೌಲ್ಯಗಳನ್ನು ನಮ್ಮಲ್ಲಿ ಅಳವಡಿಸಿ ನಮ್ಮ ಜೀವನವನ್ನು ಸಾರ್ಥಕಗೊಳಿಸೋಣ.

ಚಿಂತನ–ಮಂಥನ

ಪೂರ್ಣಿಮಾ ಎಲ್. ಭಟ್
ದ್ವಿತೀಯ ಬಿ.ಕಾಂ. ಬಿ.1

ನಾವು ನಮ್ಮ ಮನಸ್ಸನ್ನು ತೋಟದಂತೆ ಸರಿಯಾಗಿ ನೀರು, ಸಾರ ಇತ್ಯಾದಿಗಳನ್ನು ಕಾಲಕಾಲಕ್ಕೆ ಪೋಷಿಸಿದರೆ ಅದು ನಮ್ಮ ನಿರೀಕ್ಷೆಗೂ ಮೀರಿ ಫಲನೀಡುತ್ತದೆ. ಆದರೆ ಅದರಲ್ಲಿ ಕಳೆಗಿಡಗಳನ್ನು ಬೆಳೆಯಲು ಒಟ್ಟಿಗೆ ಮನಶಾಂತಿ ಸಾಮರಸ್ಯಭಾವಗಳು ಮಾಯವಾಗುತ್ತವೆ.

ನಿಮಗೊಂದು ಸರಳ ಪ್ರಶ್ನೆ ನಿಮ್ಮ ಮನೆಯ ಹಿತ್ತಲಲ್ಲಿ ನೀವು ಅಷ್ಟು ಚೆನ್ನಾಗಿ ಬೆಳೆಸಿದ ಹೂದೋಟದಲ್ಲಿ ನಾನು ಒಂದಿಷ್ಟು ವಿಷವಸ್ತುಗಳನ್ನು ಚೆಲ್ಲಾಪಿಲ್ಲಿಯಾಗಿ ಚೆಲ್ಲಿದರೆ ನಿಮಗೆ ಖುಷಿಯಾಗುತ್ತದೆಯೇ?

ನಿಜವಾದ ಸಂಗತಿ ಏನೆಂದರೆ ಬಹುತೇಕ ತೋಟಗಾರರು ತಮ್ಮ ತೋಟಗಳನ್ನು ಸೈನಿಕರಂತೆ ರಕ್ಷಣೆ ಮಾಡುತ್ತಾರೆ. ಯಾವುದೇ ರೀತಿಯಲ್ಲಿ ಅದು ಹಾಳಾಗದಂತೆ ನೋಡಿಕೊಳ್ಳುತ್ತಾರೆ. ಆದರೆ ಮನಸ್ಸಿನ ತೋಟದಲ್ಲಿ ಜನರು ಪ್ರತಿನಿತ್ಯವು ಸುರಿಯುತ್ತಿರುವ ವಿಷವಸ್ತುಗಳೆಷ್ಟೆಂದು ನೋಡುವುದಿಲ್ಲ. ಚಿಂತೆಗಳು, ಆತಂಕಗಳು, ಗತಕಾಲದ ವಿಷಾದಗಳು, ಭವಿಷ್ಯತ್ತಿನ ಬಗ್ಗೆ ಯೋಚನೆಗಳು, ಸ್ವಯಂಕೃತ ಭಯಗಳು ಇತ್ಯಾದಿ...ಇವೆಲ್ಲ ನಿಮ್ಮ ಅಂತರ್ಜಗತ್ತನ್ನು ಧ್ವಂಸ ಮಾಡುತ್ತದೆ. ವಿದ್ವಾಂಸರ ಪ್ರಕಾರ ಚಿಂತೆಗೂ ಉರಿಯುವ ಚಿತೆಗೂ ಹೆಚ್ಚು ವ್ಯತ್ಯಾಸವಿಲ್ಲ. ಆದರೆ ಚಿಂತೆಯು ಕೇವಲ ಆಕಸ್ಮಿಕವಲ್ಲ. ಚಿಂತೆ ಮನಸ್ಸಿನ ಎಲ್ಲ ಶಕ್ತಿಯನ್ನೂ ಹೀರಿ ಆತ್ಮವನ್ನೇ ನಿರ್ಜೀವಗೊಳಿಸುತ್ತದೆ.

ಜೀವನವನ್ನು ಪೂರ್ಣವಾಗಿ ಅನುಭವಿಸಬೇಕಾದರೆ ನೀನು ಮನವೆಂಬ ತೋಟದ ಗೇಟಿನಲ್ಲಿ ನಿಂತು ಒಳ್ಳೆಯ ವಿಚಾರಗಳನ್ನಷ್ಟೇ ಒಳಗೆ ಹೋಗಲು ಬಿಡಬೇಕು. ನಿಜವಾಗಿಯೂ ಒಂದೇ ಒಂದು ಸಕಾರಾತ್ಮಕ ಯೋಚನೆಗೂ ಅವಕಾಶ ನೀಡಬಾರದು.

ಪ್ರಪಂಚದಲ್ಲಿರುವ ತುಂಬ ಸಂತುಷ್ಟ, ಸಂತೃಪ್ತ, ಉತ್ಸಾಹಿ ವ್ಯಕ್ತಿಗಳು ಮೂಲತಃ ನಮಗಿಂತ ತುಂಬ ಭಿನ್ನರಾಗಿರುವವರಲ್ಲ. ನಾವೆಲ್ಲ ಮೂಳೆ ಮಾಂಸದ ತಡಿಕೆಗಳೇ. ನಾವೆಲ್ಲರೂ ಒಂದೇ ವಿಶ್ವಮೂಲದಿಂದ ಬಂದಿದ್ದೇವೆ. ಆದರೆ ನಮ್ಮಲ್ಲಿ ಬಹುತೇಕ ಮಂದಿ ಸುಮ್ಮನೆ ಜೀವಿಸುತ್ತಿದ್ದಾರಷ್ಟೆ ಆದರೆ ಕೆಲವರು ತಮ್ಮೊಳಗಿನ ಸುಪ್ತಶಕ್ತಿಯ ಕಿಡಿಗೆ ಗಾಳಿ ಹಾಕಿ ಅದು ಪ್ರಜ್ವಲಿಸುವಂತೆ ಮಾಡಿ, ಸಾಮಾನ್ಯರಿಗಿಂತ ಭಿನ್ನವಾದ ಅದ್ಭುತ ಸಾಧನೆಗಳನ್ನು ಸಾಧಿಸುತ್ತಾರೆ. ಅವರು ಮಾಡುವ ಅತ್ಯಂತ ಪ್ರಮುಖ ಕಾರ್ಯವೆಂದರೆ ತಮ್ಮ ಪ್ರಪಂಚ ಹಾಗೂ ಅದರಲ್ಲಿರುವ ಎಲ್ಲದರ ಬಗ್ಗೆಯೂ ಸಕಾರಾತ್ಮಕ ದೃಷ್ಟಿಕೋನವನ್ನು ಬಳಸಿಕೊಳ್ಳುವುದು.

ವಿದ್ವಾಂಸರು ಹೇಳುವ ಪ್ರಕಾರ ಪ್ರತಿದಿನವೂ ಒಬ್ಬ ಸಾಮಾನ್ಯ ಮನುಷ್ಯ ಅರವತ್ತು ಸಾವಿರ ಯೋಚನೆಗಳನ್ನು ಮಾಡುತ್ತಾನಂತೆ. ಅದರಲ್ಲಿ ಆಶ್ಚರ್ಯದ ಸಂಗತಿಯೆಂದರೆ 95% ಯೋಚನೆಗಳು ಹಿಂದಿನ ದಿನದಂದೇ ! "

ಪ್ರತಿದಿನವೂ ಹಳೆಯ ಯೋಚನೆಗಳನ್ನೇ ಮಾಡುತ್ತಿರುವವರು ಅದರಲ್ಲೂ ನಕಾರಾತ್ಮಕ ಯೋಚನೆಗಳೇ ಹೆಚ್ಚಾಗಿರುವವರು ಮಾನಸಿಕ ಚಟಗಳ ಎಲೆಯಲ್ಲಿ ಬೀಳುತ್ತಾರೆ. ಅವರು ಬದುಕಿನಲ್ಲಿರುವ ಒಳ್ಳೆಯ ಅಂಶಗಳನ್ನು ಗಮನಿಸಿ ಅದನ್ನು ಇನ್ನೂ ಸುಧಾರಿಸಲು ಯತ್ನಿಸುವ ಬದಲು ಭೂತಕಾಲದ ಬಂಧಿಗಳಾಗಿರುತ್ತಾರೆ. ಕೆಲವರು ವಿಫಲವಾದ

ವೈಯಕ್ತಿಕ ಸಂಬಂಧಗಳ ಬಗ್ಗೆ ಅಥವಾ ಆರ್ಥಿಕ ಸಮಸ್ಯೆಗಳ ಬಗ್ಗೆ ಚಿಂತಿಸುತ್ತಿರುತ್ತಾರೆ. ಇನ್ನು ಕೆಲವರು ತಮ್ಮ ಬಾಲ್ಯದ ಸನ್ನಿವೇಶದ ಕೊರತೆಗಳ ಬಗ್ಗೆ ಚಿಂತೆ ಮಾಡುತ್ತಾರೆ ಮತ್ತೂ ಕೆಲವರು ಸಹೋದ್ಯೋಗಿಯೊಬ್ಬನ ಕೊಂಕುನುಡಿಯನ್ನೋ ಸರಕಾರಿ ಆಫೀಸಿನ ಕಾರಕೂನನೊಬ್ಬ ತನ್ನನ್ನು ಅಲಕ್ಷ್ಯದಿಂದ ನೋಡಿದ್ದನ್ನೋ ನೆನೆಸಿಕೊಂಡು ಕೊರಗಬಹುದು. ಈ ರೀತಿ ಯೋಚನೆಗಳಲ್ಲಿ ಮನಸ್ಸನ್ನು ಹರಿಯಬಿಡುವವರು ತಮ್ಮ ಜೀವ ಚೈತನ್ಯವನ್ನೇ ಸೆಳೆದುಕೊಳ್ಳುತ್ತಾರೆ. ಅವರು ತಮ್ಮ ಬದುಕಿಗೆ ಅವಶ್ಯವಾದುದನ್ನು ಗಳಿಸುವಂತೆ ಕಾರ್ಯ ಸಾಧಿಸುವ ಸುಪ್ತ ಸಾಮರ್ಥ್ಯಕ್ಕೆ ತಾವೆ ತಡೆಯೊಡ್ಡಿಕೊಳ್ಳುತ್ತಾರೆ. ಇಂಥವರು ಜೀವನದ ಯಶಸ್ವಿ ನಿರ್ವಹಣೆ ಎಂದರೆ ಮನಸ್ಸಿನ ಯಶಸ್ವಿ ನಿರ್ವಹಣೆ ಎನ್ನುವ ಸತ್ಯವನ್ನು ಅರಿತಿರುವುದಿಲ್ಲ. ನಾವು ಯೋಚಿಸುವ ರೀತಿ ನಮ್ಮ ಅಭ್ಯಾಸದ ಮೇಲೆ ಹೊಂದಿಕೊಂಡಿದೆ ಎಂದು ಸರಳವಾಗಿ ಹೇಳಬಹುದು. ಬಹುತೇಕ ಜನ ಮನಸ್ಸಿನಲ್ಲಿ ಸುಪ್ತವಾಗಿರುವ ಅಪಾರ ಶಕ್ತಿಯ ಬಗ್ಗೆ ಅರಿತಿರುವುದಿಲ್ಲ. ಅತ್ಯಂತ ಬುದ್ಧಿಜೀವಿಗಳೂ ಸಹ ತಮ್ಮ ಸುಪ್ತಶಕ್ತಿಯ 1/100 ರಷ್ಟನ್ನೆ ಬಳಸುತ್ತಾರೆ.

ಮನಸ್ಸಿನ ನಿಯಂತ್ರಣ ಸಾಧಿಸಬೇಕಾದರೆ ಮನಸ್ಸನ್ನು ಒಂದು ಸ್ಥಿತಿಯಲ್ಲಿ ಸ್ಥಿರೀಕರಿಸಬೇಕಾಗುತ್ತದೆ. ನಮ್ಮೆಲ್ಲರಲ್ಲಿರುವ ಮೂಲದ್ರವ್ಯ ಒಂದೇ. ಆದರೆ ಯಶಸ್ಸು ಹಾಗೂ ಸಂತೋಷಗಳಿಸಿರುವವರು ಇತರರಿಗಿಂತ ಈ ಮೂಲ ದ್ರವ್ಯವನ್ನು ಚೆನ್ನಾಗಿ ಪರಿಷ್ಕರಿಸಿ ಬಳಸಿಕೊಳ್ಳುತ್ತಾರಷ್ಟೆ. ನೀವು ನಿಮ್ಮ ಆಂತರಿಕ ಪ್ರಪಂಚನ್ನು ಪರಿವರ್ತಿಸಲು ಬದ್ಧನಾದಾಗ ನಿಮ್ಮ ಇಡೀ ಜೀವನವೇ ಸಾಧಾರಣ ಸ್ಥಿತಿಯಿಂದ ಅಸಾಧಾರಣ ಸ್ಥಿತಿಗೆ ಜಿಗಿಯುತ್ತದೆ.

ನಮಗೆಲ್ಲ ತಿಳಿದಿರುವಂತೆ ನಮಗೆ ಒಂದು ವಿಷಯವನ್ನು ಬಿಟ್ಟು ಬೇರಾವುದರ ಮೇಲೆ ನಿಯಂತ್ರಣ ಸಾಧ್ಯವಿಲ್ಲ. ಅದು ನಮ್ಮ ಮನಸ್ಸು. ನಮಗೆ ಹವಾಮಾನವನ್ನಾಗಲೀ, ನಮ್ಮ ಸುತ್ತಲ ಜನರ ಗುಣವನ್ನಾಗಲೀ, ವಾಹನ ಸಂಚಾರವನ್ನಾಗಲೀ ನಿಯಂತ್ರಿಸಲು ಸಾಧ್ಯವಿಲ್ಲ. ಆದರೆ ಅವುಗಳ ಬಗ್ಗೆ ನಮ್ಮ ದೃಷ್ಟಿಕೋವನ್ನು ಖಂಡಿತವಾಗಿಯೂ ನಿಯಂತ್ರಿಸಿಕೊಳ್ಳಬಹುದು. ಯಾವಾಗ ನಾವು ಏನನ್ನು ಯೋಚಿಸಬೇಕು ಎನ್ನುವುದನ್ನು ನಿರ್ಧರಿಸುವ ಶಕ್ತಿ ನಮಗಿದೆ. ಇದು ಮಾನವ ಸ್ವಭಾವದ ಒಂದು ವಿಶೇಷತೆ.

छायामन्यस्य कुर्वन्ति तिष्ठन्ति स्वयमातपे ।
फलान्यपि परार्थाय वृक्षाः सत्पुरुषा इव ॥

ಛಾಯಾಮನ್ಯಸ್ಯ ಕುರ್ವಂತಿ ತಿಷ್ಠಂತಿ ಸ್ವಯಮಾತಪೇ ।
ಫಲಾನ್ಯಪಿ ಪರಾರ್ಥಾಯ ವೃಕ್ಷಾಃ ಸತ್ಪುರುಷಾ ಇವ ॥

ಮರಗಳು ತಾವು ಸ್ವಯಂ ಬಿಸಿಲಲ್ಲಿ ನಿಂತುಕೊಂಡು ನೆರಳನ್ನು ಮಾತ್ರವಲ್ಲದೆ ಹಣ್ಣುಗಳನ್ನೂ ಇನ್ನೊಬ್ಬರಿಗೆ ನೀಡುತ್ತವೆ. ಆದುದರಿಂದ ಅವುಗಳು ಸಜ್ಜನರಂತೆ.

Acharya Pingala

Vinutha Shastry
II B.Com. B1

Ancient Indians used Mathematics extensively and relied on it so deeply that Indian logic Philosophy, Hindu Rituals and the Sanskrit language have strong mathematical base.

Meters called Chandas which are used in Prayers and literary works have a strict mathematical bare.

Pingala the younger brother of Panini, a Sansrit grammarian, has devised Chandha Shastra that deals with these meters.

He explains that lived around 400-200 BC. Another legend he is the younger brother of Patanjali who wrote Yoga sutra Which assigns Pingala to 4th century BC.

The Chandha Shastra presents the first known description of a binary numeral system in connection with the systematic enumeration of Chandha with fixed patterns of laghu and guru syallables.

Halayudha who wrote a commentary on Pingala's work include a presentation of the Parcal's triangle called Meruprastara. Pingala's work also contains the Fibonacci numbers called matsameru.

In Europe a rediscovery of the binary rotation in a slightly different form, was made by Gottified Leigniz (1646-1716) at the end of seventeeth century.

The use of zero is sometimes mistakenly attributed to Pingala due to his discussion of binary numbers usually represented witn 0 and 1 in modern discussion. But Pingala used laghu and guru syllbles and Pingalas system of binary starts with one (four short syllables-binary "0000"- is the first pattern), the nth pattern corresponde to the binary representation of n-1written backwards.

Positional use of zero in the place of laghu matra appears later and sould have been known to Halayudha but not to Pingala.

Most of the vedic hymns are in stanzas of four quarters (paada), though there are some with three or five divisions. The most popular chandas has quarters which

have 8, 11 or 12 syllables. The usual way to classify meters is by counting the number of syllables in each line.

The syllables are prosodically either short (laghu) or long (guru). Infact as long as one is in aware of these subtle differences one would not be able to read sanskrit accurately.

Within each quarter verse a sequence of laghus and gurus define the Chandas which is much like the representation of a number by a succession of 'O's and 'Is' used in the binary arithmetic of computers.

Chandah Shastra describes the method of obtainng binary equivalent of any decimal number in detail. They were used 1600 years before western people and Arabs copied binary system from India through trade and invasion. We now use zero and one in representing binary numbers.

Pingala also knew the special case of the binomial theorem for the index 2 i.e. for (atb)2 as used by Greek contemporary Eudid.

Pingala presented a method where all the binary laghu-guru sequence were shown as a matrix Prastara. In a specific sequence, he showed how it could be converted into an equivalent decimal number. He also showed how a given decimal number could be expanded into the sequence of laghus and gurus. This suggests that an understanding of the basis of the representation of numbers existed in the ancient times.

धनिकः श्रोत्रियो राजा नदी वैद्यस्तु पञ्चमः ।
पञ्च यत्र न विद्यन्ते न तत्र दिवसं वसेत् ॥

ಧನಿಕಃ ಶ್ರೋತ್ರಿಯೋ ರಾಜಾ ನದೀ ವೈದ್ಯಸ್ತು ಪಂಚಮಃ ।
ಪಂಚ ಯತ್ರ ನ ವಿದ್ಯಂತೇ ನ ತತ್ರ ದಿವಸಂ ವಸೇತ್ ॥

ಧನಿಕ, ವೇದಜ್ಞ, ರಾಜ, ನದೀ, ಐದನೆಯದಾಗಿ ವೈದ್ಯ
ಈ ಐದು ಮಂದಿ ಎಲ್ಲಿ ಇಲ್ಲವೋ ಅಲ್ಲಿ ಒಂದು ದಿನವೂ ಕೂಡಾ ವಾಸಿಸಕೂಡದು.

Where rich, savant, king, river and a physician are not present
one should not stay even for a day.

ಕನ್ನಡ ವಿಭಾಗ

ನನ್ನ ಹೆಮ್ಮೆ ಇದು 'ಪೂರ್ಣಪ್ರಜ್ಞ'

ವೈಷ್ಣವಿ ವಿ. ನಾಯಕ್
ಪ್ರಥಮ ಬಿ.ಬಿ.ಎ.

ನನ್ನಯ ಹೆಮ್ಮೆ ಇದು ಪೂರ್ಣಪ್ರಜ್ಞ
ಶಿಕ್ಷಣಕೆ ಕೊಡುಗೆ ಅದು ಬಹುಮಾನ್ಯ
ಜಿಲ್ಲೆ ರಾಜ್ಯದ ಎಲ್ಲೆಯ ಮೀರಿ
ಪೂರ್ಣಪ್ರಜ್ಞದ ಹೆಸರು ಹಾರಿದೆ ಭಾರಿ
ನನ್ನಯ ಹೆಮ್ಮೆ ಇದು ಪೂರ್ಣಪ್ರಜ್ಞ

ಬದುಕಿಗೆ ಬೇಕಾದ ಶಿಕ್ಷಣ ನೀಡಿ
ವಿದ್ಯಾಧಿದಾತೆಯ ಮನತುಂಬಿ ಬೇಡಿ
ಕಲೆ, ಸಾಹಿತ್ಯದ ಮೋಡಿಯ ಮಾಡಿ
ಎಲ್ಲೆಡೆ ಹರಡಿದೆ ಕಂಪನು ನೋಡಿ
ನನ್ನಯ ಹೆಮ್ಮೆ ಇದು ಪೂರ್ಣಪ್ರಜ್ಞ

ಸಾಧನೆಯ ಹಾದಿ ಸಾಗಿದೆ ದೂರ
ಕಡಿತಗೊಂಡಿದೆ ಸೋಲಿನ ಭಾರ
ಗೆದ್ದರೆ ಎಲ್ಲೆಡೆ ಮನವು ಹಗುರ
ನೀ ಕುಣಿದಾಡುತ ಮೊಗವ ತೋರ
ನನ್ನಯ ಹೆಮ್ಮೆ ಇದು ಪೂರ್ಣಪ್ರಜ್ಞ

ಕ್ರೀಡಾಭಿಮಾನದ ಮನದಲಿ ಬೆಳೆಸಿ
ಮುಂದಿನ ಗುರಿಯನು ಎದುರಲಿ ನಿಲಿಸಿ
ಪರಿಶ್ರಮದ ಹಾದಿಯಲ್ಲಿ ಎಡೆಬಿಡದೆ ದುಡಿಸಿ
ಶಿಸ್ತು, ಸಂಯಮದ ಕಠಿಣದಿ ನಡೆಸಿ
ನನ್ನಯ ಹೆಮ್ಮೆ ಇದು ಪೂರ್ಣಪ್ರಜ್ಞ

ಹಾರಲಿ ಬಾವುಟ ಪೂರ್ಣಪ್ರಜ್ಞದ ಚಿಲುಮೆ
ನಾಡಿಗೆ ಇಂಥಹ ಸಂಸ್ಥೆಯೇ ಹೆಮ್ಮೆ
ಬರೆಯುವ ಇತಿಹಾಸವ ಮತ್ತೆ ಒಮ್ಮೆ
ಎಲ್ಲರೂ ಬೆಳಗಲಿ ಜೊತೆಯಲಿ ಜಾಣ್ಮೆ
ನನ್ನಯ ಹೆಮ್ಮೆ ಇದು ಪೂರ್ಣಪ್ರಜ್ಞ

ಕ್ಷಮಿಸು ಒಮ್ಮೆ ನೀ

ಚಿತ್ರ ನೋಡಿ ಕವನ ಸ್ಪರ್ಧೆಯ ಬಹುಮಾನಿತ ಕವನ

ಪವಿತ್ರ
ದ್ವಿತೀಯ ಬಿ.ಎಸ್ಸಿ

ಆಧುನಿಕತೆಯ ಮಾಯಾಲೋಕ ಹಿಂದೆ
ಕೈ ಹಿಡಿದು ನಡೆಯುವ ಆಸೆ ಹೊತ್ತೆ ನಾನು,
ಕಣ್ಣ ರೆಪ್ಪೆಯಲೆ ಎಲ್ಲಾ ನಿರ್ವಹಿಸುವ
ಆಗದ ಬಯಕೆಯೊಂದಿಗೆ,
ದಟ್ಟಡವಿಯ ನೀರವತೆಯ ಸೀಳಿ ಹರಿವ ಝರಿಯ
ಜುಳು ಜುಳು ನಾದ ಹಿಡಿಸಲಿಲ್ಲ ಈ ಕಟು ಹೃದಯಕ್ಕೆ
ಖಗಮೃಗಗಳ ನಲಿವ ಕೂಗು
ಇಂಪಾಗಲಿಲ್ಲ ಈ ಕಿವುಡು ಕಿವಿಗೆ.
ಎಲ್ಲಾ ನನ್ನದಾಗಬೇಕೆಂಬ ಆರ್ತನಾದವು ಅಂತಯೇ ಅವಳಿಗೆ ಕೇಳಲಿಲ್ಲ.
ಜಗದ ಎಲ್ಲಾ ಖುಷಿಯ ನಗುವು ನನಗೆ ಸಿಗಬೇಕು,
ಆಧುನಿಕ ಸುಖದಲ್ಲಿ ಎಲ್ಲವನ್ನೂ ಮರೀಬೇಕು,
ಒಲವ ಧಾರೆ ಪ್ರಕೃತಿಯನ್ನು ಪಾದದಡಿಯಲ್ಲಿ ತುಳಿದು
ಎದೆಯೆತ್ತರಿಸಿ ನಡೆಯುವುದ ಕಲೀಬೇಕು,
ಎಂಬ ಹುಚ್ಚು ಆಸೆಯೊಂದಿಗೆ ಹುಚ್ಚನಂತೆ
ಹುಚ್ಚು ಕುದುರೆಯ ಹಿಂದೆ ಕಾಲಿಗೆ ಗಾಲಿ ಕಟ್ಟಿ ಓಡತೊಡಗಿದೆ,
ನಿಜವಾದ ಬದುಕಿನ ಅರ್ಥ ತಿಳಿಯುವ ವೇಳೆಗೆ
ತಿಳಿಯದ ದೂರವ ಕ್ರಮಿಸಿದ್ದೆ.
ನಡೆದು ಬಂದ ಹಾದಿಯನ್ನೊಮ್ಮೆ ತಿರುಗಿ ನೋಡಿದರೆ
ತುಳಿದ ದಾರಿಯ ಭಯಾನಕತೆಗೆ ಮನಸು ಬೆವರುತ್ತಿದೆ.
ಬದಲಾವಣೆ ಪ್ರಕೃತಿ ಧರ್ಮ...ಆದರೆ
ಬದಲಾಗಿಸಲಿ ಹೇಗೆ ನಾ ಮಾಡಿದ ಕರ್ಮ.
ನನಗೇನು ಹಕ್ಕಿದೆ ನಾ ಮುಗ್ಧ ಪ್ರಕೃತಿಯ ಮೇಲೆ...
ನಿನ್ನ ಒಲವು–ಚೆಲುವಿಲ್ಲದೆ ನಾ ಹೇಗೆ ಕಳೆಯಲಿ ನಾಳೆ.
ಮೊಣಕಾಲಮೇಲೆ ತಲೆಯೂರಿ ಬಿಕ್ಕಳಿಸುತ್ತಿದ್ದಾಳೆ ಆ ಪ್ರೀತಿಯ ದಾರೆ....
ದೂರದಲ್ಲೇ ನಾ ನಿಂತಲ್ಲೇ ಕಲ್ಲಾಗಿದ್ದೇನೆ.
ಎಲ್ಲಾ ನನ್ನದೆನುವ ಹುಚ್ಚು ಬಯಕೆಗೆ
ಬಲಿಯಾಗಿಸಿದೆ ನಿನ್ನ ನಾ...,
ಕಂಡ ಕನಸು ಕಣ್ಣಾಲಿಯ ಜಲಪಾತವಾಯಿತು.
ನನ್ನ ಕರ್ಮದ ಫಲವು ನನಗಲ್ಲದೆ
ನನ್ನ ಮುಂದಿನ ಜನಾಂಗಕ್ಕೂ ಅನುಭವಿಸುವಂತಾಯಿತು
ನಾ ಮಾಡಿದ ತಪ್ಪೇನೆಂದು ಅರಿವಾಯಿತು....ಆದರೆ,
ಅರಿತರು ಅದ ಅರಿಯುವ ಗೋಜಿಗ ಮಾಡದಾದೆ
ನನ್ನ ಸ್ವಾರ್ಥದ ಕಂದಕಕ್ಕೆ, ನಿಸ್ವಾರ್ಥಿಯಾದ ನಿನ್ನ ನಾ ತಳ್ಳಿದೆ
ಕ್ಷಮಿಸಿ ಬಿಡು ನೀ ನನ್ನ
ಇದ ಕೇಳುವ ಅಧಿಕಾರ ನನಗಿಲ್ಲ....
ಆದರೂ ಕ್ಷಮಿಸು ಒಮ್ಮೆ ನೀ
ಇನ್ನೆಂದು ಮರೆಯೆನು ನಿನ್ನ....

ಓ ನನ್ನ ಕನಸೆ

ರಮ್ಯಾ ಭಟ್
ದ್ವಿತೀಯ ಬಿ.ಎಸ್ಸಿ.

ಕನಸು ನನಸಾಗದೆ
ಉಳಿದಿರುವ ಕನಸೇ
ನೀನೇಕೆ ಕನಸಾಗಿರುವೆ
ನನಸಾಗಬಾರದೇ ಓ ನನ್ನ ಕನಸೆ....

ಹಸಿ ಕೂಸಿನಂತಹ ಕನಸೇ
ಹುಸಿಯಾಗಿ ಯಾಕೆ ಇರುವೆ
ನೈಜತ್ವವ ಕಾಣಬಯಸುವೆ ನಾ
ನಿನ್ನನ್ನು ಓ ನನ್ನ ಕನಸೆ....

ಮನವು ತುಂಬಿದೆ ನಿನ್ನ
ನೀನೇಕೆ ನನಸಾಗಿ ಖಾಲಿಮಾಡದಿರುವೆ
ಹೊಸ ಕನಸ ಕಾಣ ಬಯಸಲೂ
ನೀ ಸಾಕಾರವಾಗಬೇಕು ಓ ನನ್ನ ಕನಸೆ....

ಮನಸಿನ ಮಾತು ಕೇಳದೆ ಕನಸೆ
ನೀನೇಕೆ ಮೌನತಾಳಿರುವೆ
ತುಸು ನನ್ನ ಮಾತು ಕೇಳಿ
ನನಸಾಗುವ ಓ ನನ್ನ ಕನಸೆ...

ಕನಸು ನನಸುಗಳ ಮಧ್ಯೆ
ಮನಸು ನಗುವ ಮರೆತಿದೆ
ನನಸಾಗಿ ನೀ ಖುಷಿಯ ತಾ
ಓ ನನ್ನ ಕನಸೆ....

ನನ್ನ ಪ್ರೀತಿಯ ಪುಟ್ಟ ತಂಗಿ

ಹರ್ಷಿತಾ ಆಚಾರ್ಯ
ತೃತೀಯ ಬಿ.ಎಸ್ಸಿ.

ಮೊದಲ ಬಾರಿಯ ಪುಟ್ಟ ಕೈಗಳ ಸ್ಪರ್ಶ
ಹಿಡಿಸಿದೆ ಹುಚ್ಚು ನನ್ನನ್ನ
ಬೇಕಂತಲೇ ಕೇಳಿ ಪಡೆದಿಹೆ
ಈ ನನ್ನ ಪುಟ್ಟ ತಂಗಿಯನ್ನ
ಹರುಷದಲ್ಲಿ ಬರಮಾಡಿಕೊಂಡೆ
ಅವಳನು ನಮ್ಮ ಮನೆಗೆ
ನನ್ನ ಜೀವದಲಿ ಬೆರೆತು ಹೋದಳಾಕೆ
ಕಷ್ಟವಿದೆ ಮುರಿಯುವುದಕೆ ಈ ಬಂಧನವನ್ನ
ತಂದಿಹಳು ಸಿಹಿಯನು ನನ್ನೀ ಜೀವದಲಿ
ಬಿಟ್ಟಿರಲಾಗದು ಅವಳನು ಈ ನನ್ನ ಬದುಕಿನಲಿ
ಆ ಪುಟ್ಟ ಬೆರಳುಗಳು ದೊಡ್ಡದಾಗಿವೆ ಈಗ
ಪ್ರತಿಯೊಂದನ್ನು ಹಂಚುವಳು ನನ್ನೊಂದಿಗೆ ಬೇಗ
ಒಂದು ದಿನ ಮಾತು ತಪ್ಪಿದರೂ
ಚಡಪಡಿಕೆ ಈಗ
ಆದರೂ ತೋರಿಸದೆ
ಜಗಳವಾಡುವೆ ಬೇಗ
ಆಕೆಯನು ಬಿಟ್ಟರೆ ನನಗಿಲ್ಲ ಸ್ನೇಹಿತರು
ನನಗಾರು ಬೇಕಿಲ್ಲ ಆದಕೂ ಮೀರಿದವರು
ಆದ್ದರಿಂದಲೇ ನಾ ಪ್ರೀತಿಸುವೆನು ಆಕೆಯನು
ಅದಕ್ಕೋಸ್ಕರನೇ ಜೀವದಲ್ಲಿ ಬದುಕುವೆನು ನಾನು
ನನ್ನ ಪ್ರೀತಿಯ ಪುಟ್ಟ ತಂಗಿಯ ಬಗ್ಗೆ ಹೇಳುವೆನು ನಾನು
ಹೇಳಿ ಮುಗಿಯದು ಆಕೆಯ ತುಂಟಾಟದ ಚೆಲುವನು
ಆಕೆಯೇ ಸರ್ವಸ್ವವು ಎನಗೆ
ಆಕೆಯನು ಬಿಟ್ಟರೆ ಬೇರಾರಿಲ್ಲ ನನಗೆ
ಬದುಕಿ ಬಾಳಲಿ ಸುಖದಲಿ ಆಕೆಯು
ದೇವರು ಹರಸಲಿ ಈ ನನ್ನ ಪುಟ್ಟ ತಂಗಿಯನ್ನು
ಈ ನನ್ನ ಪುಟ್ಟ ತಂಗಿಯನ್ನು

ಶಿಕ್ಷಣ

ಕು. ಪ್ರಶಾಂತಿ
ರಸಾಯನಶಾಸ್ತ್ರ ವಿಭಾಗ

ಶಿಕ್ಷಣ ಪದವೇ ಶ್ರೇಷ್ಠ
ಉತ್ಕೃಷ್ಟವಾದ ಜೌನತ್ಯ !
ತಾಯಿಯ ಗರ್ಭದಿಂದ ಜನಿಸಿದ ಮಗುವು
ನೋಡಿ ಕಲಿಯುವುದು ವಿಸ್ಮಯದಿಂದ !
ಶಿಕ್ಷಣವೇ ಅದರ ಬಾಳಿನ ಬೆಳಕು...
ಪಡೆಯುವುದು ಜ್ಞಾನವ ಜೀವನ ಶಿಕ್ಷಣದೊಳು...

ಕಲಿಕೆ ಎಂದೂ ಅಪರಿಪೂರ್ಣ
ಜ್ಞಾನಾರ್ಜನೆಗಿಲ್ಲ ಕೊನೆಯೆಂದೂ...
ಶಾಲೆಯ ಕಲಿಕೆಗಿದು ಅಸೀಮಿತ..
ಸಮಾಜ, ಪ್ರಕೃತಿ, ಪುಸ್ತಕದಲಿ,
ವಿಕಸಿತ ವ್ಯಕ್ತಿತ್ವದಲಿ
ಜೀವನವೇ ಮುಗಿಯದ ಶಿಕ್ಷಣ...

ಇರಬೇಕು ಕಲಿಕೆ ಹರಿಯುವ ನೀರಂತೆ
ಇಲ್ಲದಿದ್ದರೆ ಬಾಳೆಂದೂ ಬರಡಂತೆ...
ಯಾವುದಿದ್ದರೇನು ಜ್ಞಾನವಿಲ್ಲದೆಡೆ?
ಕಲಿತಷ್ಟೂ ಹಂಚಿದಷ್ಟೂ
ಹೆಚ್ಚುವುದು ಜ್ಞನ...
ತಿದ್ದಿಕೊಳ್ಳಲು ಬದುಕು,
ಬೇಕು ವಿದ್ಯೆಯ ಪ್ರಭೆ...
ವಿದ್ಯಾಭ್ಯಾಸದ ನಡೆಯೇ
ಭವಿಷ್ಯ ರೂಪದ ನಿರ್ಧಾರಕ...

ಬೌದ್ಧಿಕ ಮಾನಸಿಕ ಆಧ್ಯಾತ್ಮಿಕ ಶಿಕ್ಷಣ
ಮಗುವಿನ ಸರ್ವತೋಮುಖ ಪ್ರಗತಿಗೆ ಕಾರಣ...
ಏನೂ ಅರಿಯದ ಮುಗ್ಧ ಮನಗಳಿಗೆ
ಕನಸುಗಳ ಕಂಗಳಿಗೆ
ಶೋಧನೆಯಲಿ, ನೈತಿಕ ಮೌಲ್ಯಗಳ ತಳಹದಿಯಲಿ
ಜ್ಞಾನಧಾರೆಯ
ಎರೆದು ಸಚ್ಚಾರಿತ್ರ್ಯ ನಿರ್ಮಾಣದಲಿ
ಶಿಕ್ಷಣದ ಸಾರ್ಥಕತೆ...

ಮನಸನು ಗುರಿಯಲಿ ಕೇಂದ್ರೀಕರಿಸಿ
ಏಕಾಗ್ರತೆಯಲಿ, ಜ್ಞಾನದ ತಪಸ್ಸಲಿ
ಮಸ್ತಕ ಬೆಳೆದು, ಅದ್ಭುತ ಸಾಧನೆಯೊಂದಿಗೆ
ಪೂರ್ಣತೆಯೆಡೆಗೆ ಸಾಗಿದರೆ ಶಿಕ್ಷಣವೇ ಪಾವನ...

ಶಿಕ್ಷಣ ಬದುಕಿನ ಅದ್ವಿತೀಯ ಶೀರ್ಷಿಕೆ...
ಜ್ಞಾನದ ಬೆಳಕು ಮೂಡಿಸುವುದೇ
ಶ್ರೇಷ್ಠ ಶಿಕ್ಷಣದ ಸತ್ಪಾತ್ರ....
ಮೌಲ್ಯ ಅರಿತು ಬೆಳಗಿಸಬೇಕು ಮಾನವತೆಯ
ಉಜ್ವಲತೆಯಲಿ...

ಮೌನವೊಂದು ಮಾತಾದಾಗ

ರಕ್ಷಾ ಜಿ. ಜಿ.
ಪ್ರಥಮ ಬಿ.ಕಾಂ.

ಮನದ ಮೌನವೊಂದು ಹೊರಡಿ ಮಾತಾಗಿ,
ನನ್ನ ಈ ಬೆರಳಂಚಲಿ ಅರಳಿ ಅಕ್ಷರಗಳಾಗಿ,
ಮುಡಿಗೆ ಮುಡುಪಾದ ಕಲೆ ಪ್ರಾಸವಾಗಿ,
ಅಂತರಾಳದ ಮಾತು ಗೆರೆಯೊಂದರ ಮೇಲೆ
ಕೂಡಿಟ್ಟ ಅಕ್ಷರಗಳ ಮಾಲೆ ಕವಿತೆಯಾಗಿ
ಕವಿಗೆ ಇಂಪೆರಗುವ ಸಂಗೀತದ ಶ್ರುತಿಸೆಲೆಗಳಲ್ಲಿ
ನುಲಿದು ನರ್ತಿಸುವ ಪ್ರಾಸ ಗೀತೆಗಳೆಡೆಯಲ್ಲಿ
ನನ್ನ ಮೌನವು ಕೂಡ ಒಂದು ಹಾಡಾಯಿತು...!
ಗೀಚಿದ ಸಾಲುಗಳೆಡೆಯಲ್ಲಿ ಅರಳಿದ ಭಾವನೆಗಳೆಷ್ಟು?
ಆ ಭಾವನೆಗಳ ಹಿಂದಿನ ನೆನಪುಗಳೆಷ್ಟು?
ಎಲ್ಲಾ ಮರೆತು ಮರೆಯದಂತಿರುವ ಈ ಮೌನ...
ಚಂಗನೆ ನೆಗೆದು ಈ ಕಾಗದದ ಮೈಗಂಟಿತು..!
ಭಾವಯಾನದ ಮುಗ್ಧ ಮೌನರಾಗಗಳೆಲ್ಲಿ?
ನನ್ನ ಮುಂದಿರುವ ಈ ಕಾಗದದಲ್ಲಿ...!
ನುಡಿದ ಮಾತಿಗಿಂತ ಮೌನ ಪ್ರಾಸವಾಗಿಹುದೇ?
ನಾ ಗೀಚಿದ ಸಾಲುಗಳು ನನ್ನಲ್ಲಿಯೇ ಗುಣುಗುಟ್ಟಿದವು...
ಉತ್ತರ ಸಿಗದೆ ಮತ್ತೆ ಮನ ಮೌನಿಯಾಯಿತು...

ಬದುಕಿನ ಪಯಣ

ಚೈತ್ರ ಹೆಚ್. ಆರ್.
ದ್ವಿತೀಯ ಎಂ.ಎಸ್ಸಿ.

ಮನಸು ಭಾವನೆಯ ಹಿಡಿತದಲೋ
ಭಾವನೆಯು ಮನಸಿನ ಹಿಡಿತದಲೋ
ಅರಿಯದೆ ಕುಳಿತಿರಲು ಮೌನಿಯಾಗಿ
ಆದರೂ ಬರುತಿದೆ ಪದಗಳು ಸಾಲಾಗಿ
ಅರ್ಥವೆಂಬುದು ಪದಗಳಿಗೆ ಸಿಗದೋ
ಪದಗಳೇ ಅರ್ಥವನು ಅರಿಯದೋ
ಅರಿವಿನ ಪಯಣವದು ನೀಡುವುದು ಹಿತವನ್ನೇ
ಜೊತೆಯಲಿ ಆತ್ಮೀಯರು ಇರುವರೆಗೆ
ಎಂದು ಮುಗಿಯುವ ಪಯಣವೋ
ಮುಗಿಯದ ಕಗ್ಗಂಟಿನ ನೀತಿಕತೆಯೋ

ರೈತ ಚೇತನ

ವೈಷ್ಣವಿ ವಿ. ನಾಯಕ್
ಪ್ರಥಮ ಬಿ.ಬಿ.ಎ.

ಮಳೆ–ಮಳೆ ತುಂತುರು ಮಳೆ ಚಿಗುರಿದ ಬೆಳೆ ಹಸಿರಿನ ಕಳೆ ಸೊಬಗಿನ ತಾಳೆ,
ಅಡೆತಡೆಗಳಿಂದ ಕೂಡಿದ ಧರೆ ನೀರಿನ ತೊರೆ ಸೀಳಿ–ನುಸುಳಿ ಹರಿತು ತಣಿಸಿತು– ಇಳೆ
ಧರೆಯೊಳಗಿನ ಝರಿ ತೊರೆಗಳು ಉಕ್ಕಿ ಹರಿದು ಹಸಿರಿನಂದದೊಳು ಮರೆಯಾಗಿ
ಒಲವಿನೊಳು ಹೊಮ್ಮುವುದು ಫಸಲಿನ ಚೆಲುವಿನಲ್ಲಿ ರೈತನ ಗೆಲುವಾಗಿ
ಕಂಪನು ಸೂಸಿ ಪೈರನು ಹಾಸಿ ಫಸಲಿನ ಮಣ್ಣು ಬೆಳೆಯನು ಪೋಷಿಸಿದೆ
ತಂಪಿನೊಡೆ ಬೀಸುವ ಗಾಳಿಯು ಸಂಪಿಗೆಯೆಂದು ಸೊಂಪಾಗಿ ಬೆಳೆದಿಹ ತೆನೆಯನು ತೂಗಿದೆ
ತೆನೆಯ ಲಾಲನೆ ಪಾಲನೆಯನು ಸಹನೆಯಿಂದ ಚಾಲನೆಯಲ್ಲಿರಿಸುವ ಚಿಂತನೆ
ಹಸಿರಿನ ಕಲ್ಪನೆಯೊಳು ಸಾಧನೆಗೈಯುವ ಕಾಮನೆ ರೈತ ಭಾವನೆಯೊಳಡಗಿದೆ ಸುಮ್ಮನೆ
ಸತತ ದುಡಿತದಲ್ಲಿ ನಿರತ, ತನ್ನ ತಾನೇ ಮರೆತ ದೇಶದ ಬೆನ್ನಲುಬಾಗಿಹ ರೈತ
ಮುಗಿಲ ಬಾಗಿಲನು ನೋಡುವ ನೇಗಿಲನೂರಿಸಿ ಹಲವರು ಹಸಿವು ನೀಗಿಸಿ ಬಾಳುತ
ಎಲ್ಲ ಸೀಮೆಗಳ ಸೀಳಿ ಗಾಳಿಯಂದದಿ ನುಸುಳುವ ನೀರಿನ ಸುಳಿಯಂತೆ ಗೋಳು
ಕಷ್ಟಗಳ ಸುಳಿಯೊಳಗೆ ತುಳಿದ ಸಹನೆಯೊಳು ತಾಳುವ ರೈತನ ಅರಿವಿನ ಬಾಳು
ಅರಿವಿಲ್ಲದ ಗುರಿಗೂ ನೆರವಿಗಾರಿಲ್ಲದ ರೈತನ ಬದುಕಿನ ತಾರೆಗೂ ಇಲ್ಲವಾಗಿದೆ ಉತ್ತರ
ತೆರೆಮರೆಯಿಂದ ಸರಿಸಿ ಗತಕಲವ ಸ್ಮರಿಸಿ ನೋಡುತಿರೆ ರೈತನ ಬದುಕು ಕಣ್ಣೀರಿನ ಚಿತ್ತಾರ
ಹಂತಕ ಕಿರಾತಕ ನಡುವೆಯೂ ನಿವಾರ್ಥ ಜಾತಕದ ರೈ ಇಹಲೋಕದ ಜನಸೇವಕ
ಪ್ರಕೃತಿಯ ನೈತಿಕತೆಯ ನಾಟಕದ ನಾಯಕ ಈ ರೈತ ಸಾಧಕ ಹೊಸ ತಳಿಯ ಶೋಧಕ
ಹಗೆತನವ ದಮನ ಮಾಡಿ ಗೆಳೆತನದ ಕಂಪನು ಬಯಸಿ ಭಾವುಕದಿ ಕಾದಿಹ ರೈತ ಜೀವನ ಪಾವನ
ಜನನದಿಂದಲೇ ಬೆಳೆಗಾರಿಕೆಯ ಮನನ ಮಾಡಿ ಮಿಲನದೊಳು
ಸಮಾನವಾಗಿ ದುಡಿವ ರೈತ ಚೇತನಕ್ಕೆ ನಮನ

ನನ್ನ ನೆಚ್ಚಿನ ಶಿಕ್ಷಕ

ಸೌಜನ್ಯ
ದ್ವಿತೀಯ ಬಿ.ಎಸ್ಸಿ.

ನನಗೇನು ಬೇಕಿಲ್ಲ ನೀ ಸಂಪಾದಿಸು ಜ್ಞಾನವೆಂದ..
ಹೇಗೆ ವರ್ಣಿಸಲಿ ಗುರು–ಶಿಷ್ಯರ ಸಂಬಂಧ
ಕೋಪದಿ ಬೈದರೂ ಮತ್ತೆ ಕರೆದು ಬುದ್ದಿ ಹೇಳುವ ತಾಯಾದರು
ನಿನ್ನ ಕೈಲಾಗುತ್ತದೆ ಪ್ರಯತ್ನಿಸು ಎಂದು ಬೆನ್ನೆಲುಬಾಗೋ ತಂದೆಯಾದರು
ನಿನ್ನ ಸಾಧನೆಯೇ ನನ್ನ ಹೆಮ್ಮೆ ಎಂಬ ಅಪರಂಜಿ ಇವರು
ಎಷ್ಟೋ ಸಾಧಕರ ಜಗತ್ತಿಗೆ ಪರಿಚಯಿಸಿದ ಮಹಾನ್ ಶಕ್ತಿ ಇವರು
ನನ್ನ ಸಾಧನೆಗೆ ನೀವೇ ಸ್ಫೂರ್ತಿ ಗುರುಗಳೇ
ನಿಮ್ಮಿಂದ ಸ್ಫೂರ್ತಿ ಪಡೆದೆವು ಗುರುದಕ್ಷಿಣೆಯಾಗಿ ನಿಮ್ಮ ಮುಂದಿದೆ ನಮ್ಮ ಸಾಧನೆಗಳೇ
ನಮಗೆ ಸ್ಫೂರ್ತಿ ನೀವು...ಕೀರ್ತಿ ತರುವೆವು ನಾವು...

ನೂರು ಮನಸುಗಳು ಸಾವಿರಾರು ಕನಸುಗಳು

ಸೌಜನ್ಯ
ದ್ವಿತೀಯ ಬಿ.ಎಸ್ಸಿ.

ನಾನಾ ಬಗೆಯ ಪುಸ್ತಕಗಳು...ವಿವಿಧ ರೀತಿಯಲ್ಲಿ ವಿವರಿಸುವ ಗುರುಗಳು...
ವರ್ಷಕ್ಕಾರು ರೆಕಾರ್ಡ್‌ಗಳು..ತಪ್ಪಾದರೆ ಗುರುಗಳ ನಾನ್‌ಸ್ಟಾಪ್ ಬೈಗುಳಗಳು
ನನ್ನಂತೆ ನನ್ನ ವಿದ್ಯಾರ್ಥಿ ಸೆಮಿನಾರ್ ಮಾಡಿದಳೆಂದು ಖುಷಿಪಟ್ಟು ಗುರುವಾದ ಹೊಗಳಿಕೆಯ ಮಾತುಗಳು
ನಗುವಿಂದ ಶುರುವಾದ ಕ್ಲಾಸ್‌ಗಳು. ಹೆದರಿಕೆ ಹುಟ್ಟಿಸಿದ ಸರ್‌ಪ್ರೈಸ್ ಟೆಸ್ಟ್‌ಗಳು
ಸರ್ ಟೆಸ್ಟ್‌ಬೇಡವೆಂದು ಗುರುಗಳ ಮನವೊಲಿಸುವ ವಿದ್ಯಾರ್ಥಿಗಳು
ಅಬ್ಬ ನನ್ನ ಗುರುಗಳೆಂದರೆ,
ವಿದ್ಯಾರ್ಥಿ ಹುಷಾರು ತಪ್ಪಿದರೆ ಕಾಳಜಿ ವಹಿಸುವ ಮಾನವೀಯ ಮನಗಳು
ವಿದ್ಯಾರ್ಥಿಯ ಸಾಧನೆಯ ನೋಡಿ ನಗುಹೊತ್ತ ಹೆಮ್ಮೆಯ ಮುಖಗಳು...
ಕ್ಲಾಸಲ್ಲಿ ಬೈದರೂ ಛೇ ಬೈಯಬಾರದಿತ್ತೇನೋ ಎಂದ ನೊಂದ ಕಣ್ಣುಗಳು...
ಎಷ್ಟು ಬಾರಿ ಪ್ರಶ್ನೆ ಕೇಳಿದರೂ ನಮ್ಮನಾಲಿಸುವ ತಾಳ್ಮೆಯ ಕಿವಿಗಳು...
ತನ್ನ ವಿದ್ಯಾರ್ಥಿಯ ಸಾಧನೆಯ ಕಂಡು ಹೆಮ್ಮೆಯಿಂದ ಚಪ್ಪಾಳೆ ತಟ್ಟುವ ಕೈಗಳು...
ಗುರುಗಳೇ ನಿಮಗಿದೋ ನಮ್ಮ ನೂರು ನಮನಗಳು...

ನಾನು ನಿನ್ನ ಕಂದ

ಪವಿತ್ರ
ದ್ವಿತೀಯ ಬಿ.ಎಸ್ಸಿ.

ಕಿರುನಗೆ ಹೊತ್ತು, ಕಾಲ್ಗೆಜ್ಜೆ ತೊಟ್ಟು,
ಮನಸಾರೆ ಗರಿಬಿಚ್ಚಿ ನವಿಲಾಗ ಬಯಸಿದೆ
ಕೈಬಳೆ ನಾದದಲ್ಲಿ ಕೋಗಿಲೆ ಇಂಪ ಕೇಳಬಯಸಿದೆ
ಶೃಂಗಾರದಲ್ಲೇ ಎಲ್ಲರ ಮನಸೆಳೆಯಬಯಸಿದೆ
ಆದರೇ....ಜಗವ ಕಾಣುವ ಮೊದಲೇ
ಕಮರಿ ಹೋಯಿತು ನನ್ನೆಲ್ಲಾ ಬಯಕೆ
ನನ್ನವರೆಂದುಕೊಂಡೆ ಅಮ್ಮಾ...
ನನ್ನ ಸುತ್ತಾ ಇರುವವರನ್ನೆಲ್ಲಾ...
ಜಗವೇನೆಂದು ಅರಿಯುವ ಮೊದಲೇ
ನನ್ನವರಿಂದಲೇ ತಿರಸ್ಕೃತವಾದೆ...
ನಿನ್ನ ಗರ್ಭದ ಗುಡಿಯು ನನ್ನ ರಕ್ಷದ ಕವಚವೆಂದುಕೊಂಡೆ
ಕೊನೆಗೇ...ಎಲ್ಲರಿಂದ ದೂರಾಗಿ
ನಿನಗೂ ಬೇಡವಾಗಿ ಹೋದೆ...
ಯಶೋದೆ ನೀನಮ್ಮಾ...
ಅಂತೆಯೇ ನೀ ಬಯಸಿದ ಹೃಷಿಕೇಶನನ್ನಾ...
ಅದಕ್ಕೆಂದೇ ನೀ ನಿಲ್ಲಿಸಲು ಮುಂದಾದೆ ನೀ ನನ್ನ ಉಸಿರನ್ನ.
ನಿನಗೆ ನಾ ಕೂಗಿ ಕೂಗಿ ಹೇಳಬಯಸಿದೆ
ನೀನೆ ನನ್ನ ಉಸಿರಮ್ಮಾ...
ಕುರುಡಾಗಿ ಕಂಡೆ ಕನಸು ನಾನು
ನಿನ್ನ ಬೆಚ್ಚಗಿನ ಬೆರಳ ಹಿಡಿದು ನಡೆಯಬೇಕೆಂದು,
ನಿನ್ನ ಮಡಿಲಲ್ಲಿ ಬೆಚ್ಚಗೆ ಹುದುಗಬೇಕೆಂದು,
ನಿನ್ನೆಲ್ಲಾ ನಲಿವಿಗೂ ಕಾರಣವಾಗಬೇಕೆಂದು.
ಆದರಿಂದೂ...ನಿನ್ನ ಕಂಬನಿಗೆ ಕಾರಣವಾಗಿಹೆನು.
ಏನಾದರೂ, ಹೇಗಾದರೂ, ನಿನ್ನ ದೇಹದ ಕುಡಿ ನಾನು,
ಹೆಣ್ಣೆಂಬ ಮಾತ್ರಕ್ಕೆ ನಿನ್ನ ಜಗದಿಂದ ತಳ್ಳಿದೆ ನನ್ನ ನೀನು,
ಹೇಗೆ ಹೇಳಲಿ ನಿನಗೆ ನನ್ನ ಜಗವೇ ನೀನೆಂದು ...
ಉಸಿರು ನಿಂತರೂ ಉಸಿರಾಗಿರುವೆ ನೀ ನನಗಿಂದು.
ಮತ್ತೆ ಬರುವೆ ನಾನು...
ತಿಳಿದಿದೆ ನನಗೆ ನೀ ನನ್ನ ಬಯಸುವೆಯೆಂದು...

ಕರುಣೆ

ಕು. ಪ್ರಶಾಂತಿ
ರಸಾಯನಶಾಸ್ತ್ರ ವಿಭಾಗ

ಎಲ್ಲಿಂದ ಕರುಣೆ? ಎಲ್ಲಿಂದ ನ್ಯಾಯ?
ಕಾಣದಾಗಿದೆ ಕಣ್ಣುಗಳು...
ಅಲ್ಲೊಂದು ಸುಳ್ಳು.... ಇಲ್ಲೊಂದು ಹಿಂಸೆ...
ಕೊನೆಯಿಲ್ಲವೆ ಈ ಕ್ರೂರತೆಗಳಿಗೆ?
ಇನ್ನಾದರೂ ಕರುಣೆಯ ಭಾವ ಸಿಂಚನದಿ

ಕರುಗುವುದೇ ದ್ವೇಷ?
ನಾನು ಅನ್ನೋ ಅಹಂಕಾರದಲ್ಲಿರುವೆ ನೀನು...!
ಇನ್ನೂ ನೀ ಅರಿಯಲಿಲ್ಲ ಮನುಜ...
ನಿನ್ನ ಯುಕ್ತಿ ದೇವ ಶಕ್ತಿಯಲ್ಲಡಗಿದೆ...!
ಅವನ ಕಾರುಣ್ಯವಿಲ್ಲದಿದ್ದರೆ ತಪ್ಪಲ್ಲ ನಿನಗೆ ಕಾಠಿಣ್ಯ...!
ಏನಿದ್ದರೇನು ನಿನ್ನಲಿ? ದಯವಿಲ್ಲದಿದ್ದರೆ?
ಮಾನವತೆಯೇ ಅಳಿಯುತ್ತಿರುವ ಜಗದಲಿ....
ಕುರುಣೆಯಲ್ಲಿ ನಿಂತಿದೆ ಜಗದ ಉಳಿವು..
ದಯೆಯಿಲ್ಲದೆ ಕಟುಕನಾಗಬೇಡ
ಬದುಕಬೇಕು ನೀನು... ಬದುಕಿಸಬೇಕು ನೀನು...
ಇದೇ ನಿನ್ನ ಧರ್ಮ...

ಅಲ್ಲಿ ಇಲ್ಲೆಂದು ಏಕೆ ಹುಡುಕುತ್ತಿರುವೆ ದೇವರನು?
ಇನ್ನೂ ಅರಿಯದೆ ನಿನಗೆ?
ನಿನ್ನ ಮನದ ಕರುಣೆಯಲಿ ಅಡಗಿಹನವನು...!
ನಿನ್ನ ಮೌಢ್ಯದಲಿ ಕಣ್ಣಿದ್ದು ಕಾಣದಾಗಿಹೆ ನೀನವನನು..
ಕರುಣೆ ಇರಲಿ ಸಕಲ ಜೀವ ಭಾವಗಳಲಿ
ಅಂತರಂಗದಲಿ ಕರುಣೆ ಚಿಗುರಲೆಂದೂ...

ಸಕಲ ಜೀವಗಳಿಗೂ ಭಾವವಿದೆ...
ಮನ ಮರುಗಲೆಂದೂ ಜೀವಗಳ ಸಂಕಷ್ಟಕೆ...
ಮರೆಯಬೇಡ ಕಾರುಣ್ಯತೆ ನೀನು...
ನೀನು ನೀಡಿದ ಭಾವ... ನಿನ್ನೆಡೆಗೆ ತಿರುಗುತ್ತದೆ...!
ಇದೇ ಜಗದ ಧರ್ಮ...!

ಹೇ ದೇವ, ಕೃಪೆ ತೋರು.. ಜೀವ ರಾಶಿಗಳ ಮೇಲೆ...
ನೊಂದ ಮನಸುಗಳ ಕದಡದಿರು..
ಕರುಣೆ ಇಲ್ಲದಂತೆ ಮನವ ಮಾಡದಿರು...
ಸ್ವಚ್ಛ ಮನಸುಗಳ ಹುಟ್ಟಿಸುತಲಿರು...
ನಿನ್ನ ಕರುಣೆಯ ಕಡಲು
ಜಗದ ದುಃಖಗಳ ತೊಳೆಯಲೆಂದೂ...!

ಮನೆಯಲ್ಲೇ ಇರೋಣ

ಉಮೇಶ್ ಬಾಗ್ವತ್
ಪ್ರಥಮ ಬಿ.ಕಾಂ

ಸುಗಮ ಸುಂದರ ಜೀವನವು
ಸಾಗುತ್ತಲಿತ್ತು ದಿನವೆಲ್ಲವು
ಸಾವಿರಾರು ಕನಸುಗಳ ಹೊತ್ತು
ಜಗವು ನಡೆಯುತಲಿತ್ತು
ಕನಸುಗಳನ್ನು ಹಾಳು ಮಾಡಲೆಂಬಂತೆ
ಕರೋನ ಬಂದಿತು ಮಹಾಮಾರಿಯಂತೆ
ಜಗವೇ ಒಂದಾಯಿತಿಂದು
ಮಾಯಾಮಾರಿಯ ಹೊಡೆದೋಡಿಸಲೆಂದು
ಪ್ರಾಣವನೇ ಲೆಕ್ಕಿಸದೇ ಹೋರಾಡುತಿಹರು
ಜಗವ ಉಳಿಸಲು ಹಲವು ಜನರು
ಜನಸೇವೆಯೇ ಜನಾರ್ಧನನ ಸೇವೆಯಂದು
ದುಡಿಯುತಿಹರು ಅವರಿಂದು
ಮಹಾಮಾರಿಯ ಸರಪಳಿಯ ಕಳಚೋಣ
ದಿನವೆಲ್ಲವು ಮನೆಯಲ್ಲೇ ಇರೋಣ
ನಮ್ಮ ಪ್ರಾಣವ ಉಳಿಸಿಕೊಳ್ಳೋಣ
ಜೊತೆಗೆ ದೇಶವನ್ನು ಉಳಿಸೋಣ
ಮಹಾಮಾರಿಯ ಗೆಲ್ಲಲು
ಮನೆಯ ಒಳಗಡೆ ಇರುವುದೇ ಮಹಾ ಅಸ್ತ್ರವು
ಎಂದರಿತು ನಾವೆಲ್ಲರೂ ಮನೆಯಲ್ಲೇ ಇರೋಣವೆಂದು
ಕೇಳಿಕೊಳ್ಳುತ್ತಿರುವೆನು ನಾನಿಂದು

ಸಮರಕ್ಕೆ ಸಜ್ಜಾದ ಭಾರತ

ರಕ್ಷಾ ಜಿ.ಜಿ.
ಪ್ರಥಮ ಬಿ.ಕಾಂ.

ಕೊರೊನಾ ಎಂಬ ರೋಗದ ಸುಳಿಯಲ್ಲಿ
ಸಿಲುಕದ ದೇಶಗಳಿಲ್ಲ ಹೆದರದ ಜನರಿಲ್ಲ
ಜಗತ್ತಲ್ಲೇ ಮುಂದುವರೆದ ದೇಶಗಳಲ್ಲೂ
ಸಾವಿನ ಭಯ ನಿಲ್ಲುತ್ತಿಲ್ಲ

ಮಹಾಮಾರಿಯ ತೀವ್ರತೆಯನ್ನು ಹಿಮ್ಮೆಟ್ಟಿಸಲು
ಮೈಕೊಡವಿ ನಿಂತಿದೆ ನಮ್ಮ ಭಾರತ
ದಿಟ್ಟ ನಾಯಕನ ಮುಂದಾಳತ್ವದಲ್ಲಿ
ರೋಗದ ಅಂತ್ಯಕ್ಕೆ ಪಣತೊಟ್ಟಿತು ಭಾರತ

ರೋಗದ ಭೀತಿಯಿಂದ ದೇಶವೇ ಸ್ಥಬ್ದವಾಗಿರುವಾಗ
ವೈದ್ಯರು ದೇವರಂತೆ ಜೀವರಕ್ಷಣೆಗಿಳಿದರು
ಜನರಲ್ಲಿ ಸಾಮಾಜಿಕ ಕಳಕಳಿಯನ್ನು ಮೂಡಿಸಲು
ಪೋಲಿಸರು ಅವರೊಂದಿಗೆ ಕೈಜೋಡಿಸಿದರು

ರೋಗವನ್ನು ಹಿಮ್ಮೆಟ್ಟಿಸಲು ಎಲ್ಲರೂ ಮನೆಯಲ್ಲಿಯೇ ಇರೋಣ
ನಮ್ಮ ಶುಚಿತ್ವವನ್ನು ನಾವು ಕಾಪಾಡಿಕೊಳ್ಳೋಣ
ಸಾಮಾಜಿಕ ಅಂತರದ ನಿಯಮ ಪಾಲಿಸೋಣ
ಉತ್ತಮ ಗುಣಮಟ್ಟದ ಮಾಸ್ಕ್ ಧರಿಸೋಣ

ನಮ್ಮ ಈ ಸಹಕಾರವೇ ವೈದ್ಯರಿಗೆ ಸ್ಫೂರ್ತಿ
ಇದುವೇ ರೋಗ ಓಡಿಸುವ ರೀತಿ
ಮತ್ತೆ ನಾವೆಲ್ಲರೂ ಒಂದಾಗಿ ಹೊರಡೋಣ
ಕೊರೋನಾವನ್ನು ದೇಶದಿಂದ ಓಡಿಸೋಣ.

यान्ति न्यायप्रवृत्तस्य तिर्यञ्चोऽपि सहायताम् ।
अपन्थानं तु गच्छन्तं सोदरोऽपि विमुञ्चति ॥

ಯಾಂತಿ ನ್ಯಾಯಪ್ರವೃತ್ತಸ್ಯ ತಿರ್ಯಂಚೋಽಪಿ ಸಹಾಯತಾಮ್ ।
ಅಪಂಥಾನಂ ತು ಗಚ್ಛಂತಂ ಸೋದರೋಽಪಿ ವಿಮುಂಚತಿ ॥

ನ್ಯಾಯದಲ್ಲಿರುವವನಿಗೆ ಪಶುಪಕ್ಷಿ ಮೊದಲಾದವುಗಳೂ ಕೂಡಾ ಸಹಾಯವನ್ನು ಮಾಡುತ್ತವೆ.
ದಾರಿ ಬಿಟ್ಟು ಹೋಗುವವನನ್ನು ಸಹೋದರನು ಕೂಡಾ ಬಿಟ್ಟುಬಿಡುತ್ತಾನೆ.

Animals and birds do help man, who is in right path. But one who leaves it, even his brothers will abandon him.

ಕರುಳ ಕೂಗು

ರಮ್ಯಾ ಭಟ್
ದ್ವಿತೀಯ ಬಿ.ಎಸ್ಸಿ.

ನಿನ್ನ ಕಣ್ಣೀರು ನೆಲಸೇರಲು ಬಿಡದ ಕೈಗಳಿವು
ಕಷ್ಟಕಾಲದಲ್ಲಿ ಒಂಟಿ ಮಾಡದೆ ನಾ ನಿನ್ನ ಕೈ ಹಿಡಿದೆ
ಖುಷಿಯಲ್ಲೂ ನೋವಿನಲ್ಲೂ ಒಟ್ಟಿಗೆ ಇದ್ದ ಕೈಗಳು
ಕೊನೆವರೆಗೂ ಕೈಹಿಡಿದಂತೆ ಕಾಣುತಿದೆ ಈ ಕಣ್ಣಿಗೆ

ಖುಷಿಯಿಂದ ನಿನಗೆ ಕೈತುತ್ತು ನೀಡಿದಾ ಕೈಗಳಿವುವು
ಸೋತಾಗ ನಿನ್ನನ್ನು ಸಂತೈಸಿದ ಕೈಗಳಿದು
ಜಾರಿ ಬಿದ್ದಾಗ ಮೇಲಕ್ಕೆತ್ತಿದ ನಿನ್ನ ಕೈಗಳನು
ಕೊನೆಯವರೆಗೂ ಕೈ ಹಿಡಿದು ನಡೆಸುವಂತೆ ಅನಿಸಿದೆ ಈ ಮನಕೆ
ಆದರೆ....
ಮಗು ನಿನ್ನ ಮಸಣಯಾತ್ರೆಗೂ ಕೈಜೋಡಿಸಬೇಕೆ
ಇದೇ ನನ್ನ ಕೈಗಳನು...?
ನಿನಗಾಗಿ ನಾ ಬೇಡುವೆ ಕೊನೆವರೆಗೂ ಕೈ ಜೋಡಿಸಿ ಇದೇ ನನ್ನ ಕೈಗಳನು....

ಮಗು....
ನಿನ್ನ ಕಾಲುಗಳು ದಾರಿ ತೋರಿಸುತ್ತಿದೆಯೇ
ಸುಡುತ್ತಿರುವ ಆ ಕಟ್ಟಿಗೆಯ ಮಧ್ಯದಿ?
ಕನಸುಗಳು ತುಂಬಿದ ನಿನ್ನ ಪುಟ್ಟ ಕಣ್ಣುಗಳು
ಸುಟ್ಟು ಕಪ್ಪಗಾಯಿತೇ?

ದೂರವಿರಿಸಿದೆವು ದುಷ್ಟ ದೃಷ್ಟಿಯಿಂದ ಈ ನಿನ್ನ ಕೈಗಳನ್ನು
ಸಂತಸದ ಸಮಯವ ಕಳೆದೆವು ಈ ನಿನ್ನ ಕೈಗಳೊಂದಿಗೆ
ಆದರೆ ಕಳುಹಿಸಿದೆ ಸ್ಮಶಾನಕ್ಕೆ ನಿನ್ನನ್ನು ಇದೇ ಕೈಗಳಿಂದ
ಕಳುಹಿಸಿದೆ ಸುಡಲು ಇದೇ ಕೈಗಳಿಂದ
ಮಗು.....
ನಿನ್ನ ಅಣ್ಣನು ಅಳುತಿರುವನು ನಿನಗಾಗಿ
ನಿನ್ನ ಅನ್ನದ ತಟ್ಟೆ ಹುಡುಕುತಿದೆ ನಿನ್ನನ್ನು
ನಿನ್ನ ಅಂಗಿಗಳು ನೋವಿನಲ್ಲಿ ತೂಗಾಡುತ್ತಾ ಆತ್ಮಹತ್ಯೆಗೆ ಶರಣಾಗಿವೆ

ನಿನ್ನ ಪಾತ್ರವು ಈ ಭೂಮಿಯಲ್ಲಿ ಕೊನೆಗೊಂಡಿತೇ?
ನಿನ್ನ ಅಭಿನಯವು ಸ್ಮಶಾನದಲ್ಲಿ ಪ್ರಾರಂಭವಾಯಿತೇ?
ನಿನ್ನ ಹೊಸ ಅಭಿನಯಕ್ಕೆ ಕಣ್ಣೀರೇ ಚಪ್ಪಾಳೆಯಾಯಿತೇ?
ನಿನ್ನ ಕೊನೆಯ ವಿದಾಯವ ಈ ಕಣ್ಣು ಸಹಿಸದೇ ಹೋಯಿತು..!

ಇಂದಿನ ಯುವ ಭಾರತ

ದೀಪಾಶ್ರೀ
ಪ್ರಥಮ ಬಿ.ಎಸ್ಸಿ.

ಇಂದಿನ ಯುವ ಭಾರತವೆಂಬ ನಾಡಿಗೆ
ಮೋದಿಯೇ ಮೂಲಮಂತ್ರವೆಂದು ತಿಳಿದು ಬರೆದೆ,
ಜಗವ ಮಿನುಗಲು ದಾರಿ ತೋರಿದ
ವಿಶ್ವಜಗಕೆ ಸಾರಿ ನಿಂತ....
ನಂಬಿಕೆಯ ಗಿಡವ ನೆಟ್ಟು
ನಗುವ ಮುಖದಿ ಮಂದಹಾಸ ಬೀರಿ
ಆತ್ಮವಿಶ್ವಾಸವೆಂಬ ಭದ್ರ ಬುನಾದಿ ಹಾಕಿ
ತಿರುಗಿ ನೋಡುತಿಹವು ಹಲವು ದೇಶಗಳು ಭಯದಿ ನಮ್ಮನು
ಚಾಚಿದವು ಕೈಯ ಸಹಾಯವ ಬೇಡಿ
ನಾಡಿನೊಳಗಿನ ವಿಘ್ನ ಕಳೆಯಲು
ಸಿಕ್ಕ ಯುವ ಭಾರತವೆಂಬ ಅಸ್ತ್ರ ಬಳಸಿ
ನಡುಗಿಸಿದ ವಿಶ್ವದೆದೆಯ ತಟ್ಟಿ
ಹೆಮ್ಮೆಯಿಂದ ಹೇಳು ನೀ ನಮ್ಮ ದೇಶ ಭಾರತ...
ವಿಶ್ವಗುರು ಭಾರತ.

लौकिकानां हि साधूनामर्थं वागनुवर्तते ।
ऋषीणां पुनराद्यानां वाचमर्थो नु धावति ॥

ಲೌಕಿಕಾನಾಂ ಹಿ ಸಾಧೂನಾಮರ್ಥಂ ವಾಗನುವರ್ತತೇ ।
ಋಷೀಣಾಂ ಪುನರಾದ್ಯಾನಾಂ ವಾಚಮರ್ಥೋ ನು ಧಾವತಿ ॥

ಲೋಕದಲ್ಲಿರುವ ಸಾಧಾರಣ ಸಜ್ಜನರ ಮಾತು ಅರ್ಥವನ್ನು
ಅನುಸರಿಸುತ್ತದೆ ಅಂದರೆ ಅರ್ಥವನ್ನು ನೋಡಿ ಅವರು
ಶಬ್ದವನ್ನು ಬಳಸುತ್ತಾರೆ. ಆದರೆ ಆದ್ಯ ಋಷಿಗಳ ಮಾತು
ಅರ್ಥವನ್ನು ಅನುಸರಿಸುವುದಲ್ಲ, ಮತ್ತೇನು?
ಅರ್ಥವೇ ಮಾತನ್ನು ಅನುಸರಿಸುತ್ತದೆ ಅಂದರೆ
ಅವರು ಹೇಳಿದ ಮಾತು ಫಲಿಸುತ್ತದೆ.

ಉಳಿಸು ಜಲವನು

ಉಮೇಶ್ ಬಾಗ್ವತ್
ಪ್ರಥಮ ಬಿ.ಕಾಂ.

ಜನನ ಪಡೆದಿರುವಿರಿ ನೀವು
ಈ ಸ್ವರ್ಗದಂತಹ ಧರೆಯಲಿ
ಏನ ಸಾಧಿಸಲು ಬಂದಿರಿ ನೀವು
ಈ ಜಗದಲ್ಲಿ

ನಿನ್ನ ಪರಿಯ ಅರಿತು ನೀ ಬಾಳು
ಜಗವ ಮಾಡದಿರು ನೀ ಹಾಳು
ಪ್ರಕೃತಿಗೆ ನಾನೇನು ಮಾಡುತ್ತಿರುವೆ
ಒಮ್ಮೆ ಯೋಚಿಸು ಮನದಲ್ಲಿ

ಏನೋ ಸಾಧಿಸಬೇಕೆಂಬ ಹಂಬಲದಿ
ಮಳೆಯಲ್ಲಿ ನಿಂತು ಗಿಡಕ್ಕೆ ನೀರು
ಹಾಕುವ ಕೆಲಸ ಮಾಡಬೇಡ
ಓ ಮರಳು ಮಾನವ

ಇದ್ದಾಗ ದುರುಪಯೋಗ ಪಡಿಸಿಕೊಂಡು
ಇಲ್ಲದಿರುವಾಗ ಹಾಹಾಕಾರವೇತಕೆ
ಸಂರಕ್ಷಿಸು ಜಲವನು ಉಳಿಸಿಕೋ
ನಿನ್ನ ಪ್ರಾಣವನು

ತನಗೆ ಬೇಕಾದಷ್ಟು ಇದೆ ಎಂಬ
ಅಹಂನಿಂದ ಅತಿಯಾಗಿ ಬಳಸಿಕೊಂಡಿಯಂದಾದರೆ
ನಾಶಪಡಿಸಿಕೊಳ್ಳುವೆ ನಿನ್ನ ವಂಶವನು
ಓ ದುರಾಸೆಯ ಮಾನವನೇ

ಉಳಿಸು ಜಲವನು
ಸಂರಕ್ಷಿಸುವುದದು ಜಗವನು

ಅಣು ಪರಮಾಣು

ಕು. ಪ್ರಶಾಂತಿ
ರಸಾಯನಶಾಸ್ತ್ರ ವಿಭಾಗ

ಬ್ರಹ್ಮಾಂಡದ ಅಸ್ತಿತ್ವಕ್ಕೆ
ಮೂಲ ಸೂತ್ರವೇ ಅಣು–ಪರಮಾಣು !
ಜಗದ ಮೂಲ ಸತ್ವವೂ ನೀನು....
ವಿಶ್ವವೇ ನಿನ್ನ ರೂಪವು...
ಆ ಸೂರ್ಯಚಂದ್ರಾದಿ ಗ್ರಹ ಉಪಗ್ರಹ
ನಕ್ಷತ್ರ ಗ್ಯಾಲಾಕ್ಸಿಗಳೂ ನಿನ್ನಿಂದಲೇ....
ಜೀವ ಸೃಷ್ಟಿಯ ಅಸ್ತಿತ್ವವೂ ನೀನೇ....
ಅಪರಿಮಿತ ಪರಿಧಿಯೊಳಗೆ
ನಿನ್ನ ಅಮೋಘ ವಿಸ್ತಾರತೆಗೆ
ತಿಳಿಯುವ ಕುತೂಹಲದಿ ಉದ್ಭವಿಸಿದೆ
ಪ್ರಶ್ನೆ ಮನದಲಿ ಅನವರತ....
ವಿಶ್ವವೇ ಪರಮಾಣುಗಳಲ್ಲೋ?
ಪರಮಾಣುವೇ ವಿಶ್ವದಲ್ಲೋ?
ಅಸಂಖ್ಯ ಅಕಲ್ಪಿತ ಉತ್ತರದಿ ದಿಗ್ಭ್ರಮೆಗೊಂಡಿದೆ ಮನ !!!
ಸಮಸ್ತ ಚರಾಚರಗಳಲ್ಲೂ
ಪ್ರತಿ ಕಣಕಣದಲ್ಲೂ ತುಂಬಿ
ನೀನೇ ಶೋಭಿಸುತ್ತಿರುವೆ !
ಎಲ್ಲಾ ರೂಪ–ಸ್ವರೂಪಕೆ
ಗುಣಾವಗುಣಗಳ ಗಣನೆಗೆ
ವಿಭಿನ್ನ ಜೀವ ವ್ಯಕ್ತಿತ್ವಕೆ
ವೈವಿಧ್ಯಮಯ ಪ್ರಭೇದಕೆ
ಕಾರಣೀಕರ್ತವೇ ನೀನು !
ಅತಿಸೂಕ್ಷ್ಮ ಮೂಲಧಾತುವೇ ನೀನು...
ಅವಿನಾಶಿತ ಅವಿಭಾಗಿತ
ನೀನೆನ್ನುವ ಕಲ್ಪನೆ...
ಆದರೆ ನೀನೋ ಕೂಡಿಹೆ
ಭೇದ್ಯ ಕಣಗಳ ಸಹಿತ !
ಬೇರೆ ಕಣಗಳೊಡನೆ ಸೇರಿ
ನೀಡುವೆ ವಿಧ–ವಿಧ ಧಾತು!
ವಿಶ್ವ ಪಥದ ಆರಂಭ
ಅಂತ್ಯಗಳೆರಡೂ ನೀನಾಗಿರುವೆ...
ಸೃಷ್ಟಿಯ ಅಸ್ತಿತ್ವ ನಿನ್ನಲಿದೆ...
ಎಲ್ಲಾ ವಿಜ್ಞಾನ ಶಾಸ್ತ್ರಗಳಲ್ಲೂ
ನೀನೇ ಮಿನುಗುತ್ತಿರುವೆ...
ಬೆರಗಾಗಿದೆ ಮನ ನಿನ್ನ ಅವಿಸ್ಮರಣೆಗೆ !
ಬಣ್ಣಿಸಲು ಪದಗಳಿಲ್ಲದೆ ಮೂಕವಿಸ್ಮಿತಳಾಗಿರುವೆ!!!

ಅಂದಹಾಗೆ ಬದಲಾಗಬೇಕಾದದ್ದು ಏನು?

ನಮಿತಾ ಎನ್. ಆರ್. ರಾವ್
ತೃತೀಯ ಬಿ.ಕಾಂ.

ಈಗಿರುವ ಸಮಾಜವು ಮೊದಲು
ಬದಲಾಗಬೇಕು ಎನ್ನುವವರು
ಏನನ್ನೇ ಅರಿತಿದ್ದರೂ ಅವರು
ತಿಳಿಯದಿದ್ದದ್ದೇ ಇವೆ ಸುಮಾರು

ಸರ್ಕಾರಕ್ಕೆ ತೆರಿಗೆ ಕಟ್ಟದವರು
ಹೇಳುವರು, ಆಡಳಿತ ಸುಧಾರಿಸಬೇಕೆಂದು ...
ಸರ್ಕಾರದ ದುಡ್ಡು ಎಷ್ಟೇ ತಿಂದರೂ ಸಾಕಾಗದ,
ರಾಜಕಾರಣಿಗಳು ಹೇಳುವರು, ಸರ್ಕಾರವೇ ಬದಲಾಗಬೇಕೆಂದು...

ತಮ್ಮದೇನೇ ಇರಲಿ, ಎಲ್ಲರೂ
ಬಯಸುವುದು, ಪರರ ಬದಲಾವಣೆ
ಬೇರೆಯವರನ್ನೇ ದೂರುತಲಿದ್ದರೇ,
ಕೊನೆಯವರೆಗೂ ಇದೇ ಬವಣೆ...

ನಿನ್ನ ಜೀವನವನ್ನು ಬಿಟ್ಟು,
ಬೇರೆಯವರ ಚಿಂತೆ ನಿನಗೇಕೆ?
ಅಧಿಕಪ್ರಸಂಗವೆಂಬುದು ಅತಿಯಾದರ
ನಿನಗೇ ಕಷ್ಟವಾಗುವುದು, ಜೋಕೆ !!!

ಸಿಕ್ಕಿರುವ ಜನ್ಮವಿಡೀ ಹೀಗೆ,
ಪರರ ಯೋಚನೆಯಲ್ಲೇ ಕಳೆಯುತ
ನಿನ್ನ ಗುರಿಯನ್ನೇ ಕೊನೆಗೆ
ಮರೆಯುವುದು ಖಂಡಿತ...

ಇದ್ದವರಿಗೆಲ್ಲೇ ಬುದ್ಧಿ ಹೇಳುತ್ತಾ ನೀನೇ
ಬದಲಿಸುವೆ ಬಣ್ಣವನ್ನು ನಿಮಿಷಕ್ಕೊಂದು ...
ಆಮೇಲೆ ಹೇಳುವೆ, ನಗು ನಗುತಾ,
"ಬದಲಾವಣೆಯೇ ಜಗದ ನಿಯಮ" ಎಂದು....

ಹೆಣ್ಣಾ ಆಗದೆ....ಗಂಡೂ ಆಗದೆ....

ಪವಿತ್ರ
ದ್ವಿತೀಯ ಬಿ.ಎಸ್ಸಿ.

ಕನಸುಗಳ ಆಗರವನ್ನೇ ಹೊತ್ತು,
ನನಸಾಗಿಸಬೇಕೆಂಬ ಪಣ ತೊಟ್ಟ,
ಎಲ್ಲರಂತೆ ತಾಯಿಯಪ್ಪುಗೆಯಲ್ಲೇ ನಿಂತು,
ಭೂಸ್ಪರ್ಷ ಮಾಡಿದೆ ನಾನು....
ಕಂದನೆಂಬ ಕುರುಡು ಮಮತೆಯಲಿ ಮುದ್ದಿಸಿ,
ನಿನ್ನೆದೆಯ ಅಮೃತವನ್ನು ನನಗುಣಿಸಿ
ನನ್ನ ಬದುಕ ತೃಷೆಯ ತಣಿಸಿ
ಕೈ ಹಿಡಿದು ನಡೆಸಿದೆ ನೀನು...
ನಿನ್ನೆಲ್ಲಾ ಕನಸುಗಳಿಗೂ ರುವಾರಿಯಾದೆ ನಾನು
ದೊರಕಿತು ನಿನ್ನಪ್ಪುಗೆ, ಬಯಸೆನು ನಾನಿನ್ನೇನು...
ಆದರೆ ನಡುದಾರಿಯಲ್ಲೇ ಹರಿಯಿತು
ಕನಸುಗಳು ಮೂಟೆ...
ನಿನ್ನಪ್ಪುಗೆಯಿಂದ ದೂರವಾಗದಿದ್ದರೂ ನಾ
ಮನಸ್ಸಿಂದ ದೂರ ದೂರ ಸರಿದಿರುವೆ,
ಕುಡಿ ಮೀಸೆಯ ಮುಖದಲ್ಲಿ ಕಿರುಲಜ್ಜೆ ಇಣುಕಿದೆ,
ಕೈ ಬೀಸಿ ನಡೆಯಬೇಕಾದವನು, ಕೈ ಬಳೆ ತೊಡಬೇಕೆನಿಸಿದೆ
ನನ್ನೆಲ್ಲಾ ದುಗುಡಗಳಿಗೆ ಕಾರಣ ಎಲ್ಲಿ ಹುಡುಕಲಿ...?
ನನ್ನ ಪಾಲಿಸಿದ ನಿನ್ನಲ್ಲಿ ಹೇಗೆ ಮೊರೆಯಿಡಲಿ?...
ನನ್ನದೆ ತಪ್ಪೆಂದು ದೂರವ ನಿಮ್ಮನ್ನೆಂದು ನಾ ದೂರೆನು.
ಎಲ್ಲಾ ಅವಮಾನ ನೋವುಗಳನ್ನು ಸಹಿಸಿ ನಿಂತಿಹೆನು
ಎಲ್ಲರ ಪಾಲಿಗೆ ಇನ್ನೂ...
ಹೆಣ್ಣು ಆಗದೆ, ...ಗಂಡೂ ಆಗದೇ...
ನಾನೇ ಕೊರಗಿ ಕರಗುತಿರುವೆನು.
ಎಲ್ಲರಿಂದ ಸ್ವೀಕೃತವೂ ಆಗದೇ...
ಸಂಪೂರ್ಣ ತಿರಸ್ಕೃತವೂ ಆಗದೇ...
ನನ್ನಲ್ಲೇ ನಲುಗುತಿರುವೆನು.
ನಾನೆಂದು ನನ್ನ ಇರುವಿಕೆಗೆ ದೂರುವುದಿಲ್ಲ.
ಅಂತೆಯೇ ನಾನೆಂದು ಹೆದರಿ ಕೂರುವುದು ಇಲ್ಲ.
ಭಗವಂತನ ಆಣತಿಯಂತೆ ನಿನ್ನ ಗರ್ಭದಲ್ಲಿ ಜನಿಸಿದೆ ನಾನು
ಕೊನೆವರೆಗೂ ನಿಲ್ಲದೆ ಬದುಕುವೆ ಇನ್ನೂ....

ಅರಿಯಲಾಗದ ಅಪರೂಪ ಅಪ್ಪಾ

ರಮ್ಯಾ ಭಟ್
ದ್ವಿತೀಯ ಬಿ.ಎಸ್ಸಿ.

ಅಂಬಾರಿಯಲ್ಲಿನ ಅರಗಿಣಿಯ
ಅಪಾಯದಲಿ ಅಂಜದಂತೆ
ಅಂಗೈಲಿರಿಸಿ ಅಳದಂತೆ
ಅರಮನೆಯ ಅರಸಿಯಂತೆ
ಆಡಿಸಿ ಆರಕ್ಷಿಸಿದವನು ಅಪ್ಪಾ....

ಅರಿಗಳಿಲ್ಲದೇ ಅನುದಿನವು
ಆನಂದದಿ ಅರಳುವ ಅರವಿಂದಕೆ
ಅರಿವಿನ ಅಮೃತವ ಅಂತರಂಗದಿ
ಅಚ್ಚುಗೊಳಿಸಿದವನು ಅಪ್ಪಾ...

ಅಜ್ಞಾನವ ಅಂತರಂಗದಿ
ಅಂತರಗೊಳಿಸಿ ಅನುಕ್ಷಣವು
ಅಂಜದಂತೆ ಅಂಬೆಗಾಲಿಡುವಾಗಿನಿಂದ
ಅಭಯವ ಅಚಲವಾಗಿಸಿದ
ಅನುರಾಧೆಯ ಅಣ್ಣಾ ಅಪ್ಪಾ...

ಅದೃಷ್ಟದಿಂದ ಅರಸಿ
ಆರಿಸಿದ ಅಮ್ಮನ ಅರಸ
ಅಂಬರದಷ್ಟು ಅರಿವ ಅಡಗಿಸಿಕೊಂಡ
ಅರಿಯಲಾಗದ ಅಪರೂಪ ಅಪ್ಪಾ...

न्यायागतस्य द्रव्यस्य बोद्धव्यौ द्वावतिक्रमौ ।
अपात्रे प्रतिपत्तिश्च पात्रे चाप्रतिपादनम् ॥

ನ್ಯಾಯಾರ್ಜಿತಸ್ಯ ದ್ರವ್ಯಸ್ಯ ಬೊದ್ಧವ್ಯೌ ದ್ವಾವತಿಕ್ರಮೌ ।
ಅಪಾತ್ರೇ ಪ್ರತಿಪತ್ತಿಶ್ಚ ಪಾತ್ರೇ ಚಾಪ್ರತಿಪಾದನಮ್ ॥

ನ್ಯಾಯಮಾರ್ಗದಿಂದ ಬಂದಿರುವ ದುಡ್ಡಿನ ವಿಷಯದಲ್ಲಿ
ಎರಡು ವಿಧವಾದ ಅಪರಾಧಗಳು ಸಂಭವಿಸುತ್ತವೆ ।
ಅಯೋಗ್ಯನಿಗೆ ಕೊಡುವುದು ಒಂದು,
ಯೋಗ್ಯನಿಗೆ ಕೊಡದಿರುವುದು ಇನ್ನೊಂದು.

ವಿ–ಜ್ಞಾನ

ಕು. ಪ್ರಶಾಂತಿ
ರಸಾಯನಶಾಸ್ತ್ರ ವಿಭಾಗ

ವಿ–ಜ್ಞಾನ ! ಜೀವ– ನಿರ್ಜೀವ
ಖಗೋಳದ ಸಂಕೀರ್ಣತೆ ನೀನು...
ಮೊಗೆದಷ್ಟು ಮುಗಿಯದ
ಅಕ್ಷಯ ಜ್ಞಾನ ಸಾಗರ!
ನಿನ್ನನ್ನು ಏನೆಂದು ಕರೆಯಲಿ ?
ವಿಶ್ವಾಸಾರ್ಹ ಅನ್ವಯಕ?
ತಾರ್ಕಿಕ ವಿವರಕ?
ಜ್ಞಾನದ ಪರಿಶೋದಕ?
ಭವಿಷ್ಯ ಜ್ಞಾನ ನಿರೂಪಕ...?
ಇಡೀ ವಿಶ್ವ ಪರೀಕ್ಷಣೀಯ
ವಾಸ್ತವತೆಯ ಮೈಲಿಗಲ್ಲು ನೀನು !
ನೀನಾಗಿರುವೆ ಜ್ಞಾನದ
ಅಗಣಿತ ಅಸ್ಥಿರ ಪ್ರಕಾರ...
ನಿನ್ನ ಅಸ್ತಿತ್ವ ವಿಶ್ವದ
ಆರಂಭಕ್ಕಿಂತಲೂ ಮೊದಲು..
ಆದಿ–ಅಂತ್ಯ ರಹಿತನು ನೀನೆಂಬ ಊಹೆ...
ನೀನೇ ನಿಸರ್ಗದ ಅಳಿಯದ ಜ್ಞಾನ...
ಅನ್ವೇಷಣೆ ಮಾಡಿದಷ್ಟೂ ಮುಗಿಯದ ಅನಂತವ್ಯೂಹ !
ಪ್ರಕೃತಿ ಪರಿಕಲ್ಪನೆಯ ಆವಿಷ್ಕಾರ, ಶೋಧನೆ, ಆಲೋಚನೆ,
ತತ್ವಸಿದ್ಧಾಂತಗಳೆಲ್ಲಾ ನಿನ್ನಿಂದಲೇ...
ಪ್ರಯೋಗಾತ್ಮಕ ವಿವರಣೆ
ಊಹಾತ್ಮಕ ಕಲ್ಪನೆ,
ಅನ್ವೇಷಣಾ ಸೈದ್ಧಾಂತಿಕತೆ,
ವ್ಯವಸ್ಥಿತ ವೀಕ್ಷಣೆ, ಸತ್ಯ ಪರಿಶೋಧನೆಯಲಿ ನಿನ್ನ
ಪರಿಭ್ರಮಣೆ...
ನೀನು ವಿಶ್ವವ್ಯಾಪಿ ತುಲನಾತ್ಮಕ
ಪೂರಕ ಜ್ಞಾನ ದೃಷ್ಟಾಂತ...
ನಿನ್ನ ಪ್ರಗತಿಯಲ್ಲೇ
ಬೌದ್ಧಿಕ ಜ್ಞಾನದ ಬೆಳವಣಿಗೆ...
ಅದ್ವಿತೀಯ ಸಿದ್ಧಾಂತಗಳ ತಳಹದಿಯೇ
ಪ್ರಾಯೋಗಿಕ ಸಾಕ್ಷ್ಯಗಳ ಸೃಷ್ಟಿಯಲ್ಲಡಗಿದೆ...
ನೀನೇ ಈ ಹುದುಗಿರುವ
ಕೌತುಕತೆಯ ಪುನರುತ್ಥಾನ!
ಸಾಧ್ಯತಾ ಪ್ರಯೋಗದ ಅನುಮೋದಿತ
ಕಾರ್ಯತತ್ಪರತೆಯ ಅನುಸಂದಾನಕ!
ನಿನ್ನ ಅನಿಶ್ಚಿತ ಅನ್ವೇಷಣೆಯ
ಅಸೀಮಿತ ಪುನರುತ್ಪಾದನೆ
ಸ್ವತಂತ್ರ ಸಂಶೋಧನೆಯಲಿ ಸೃಜನಶೀಲತೆಯಲಿ
ಮನುಕುಲಕೆ ಹೊಸ ಆಯಾಮವಾಗಿ
ಪ್ರಜ್ವಲಿಸಲಿ...

प्रसादो निष्फलो यस्य क्रोधश्चापि निरर्थकः ।
न तं भर्तारमिच्छन्ति पतिं षण्ढमिव स्त्रियः ॥

ಪ್ರಸಾದೋ ನಿಷ್ಫಲೋ ಯಸ್ಯ ಕ್ರೋಧಶ್ಚಾಪಿ ನಿರರ್ಥಕಃ ।
ನ ತಂ ಭರ್ತಾರಮಿಚ್ಛಂತಿ ಪತಿಂ ಷಂಡಮಿವ ಸ್ತ್ರಿಯಃ ॥

ಯಾವನ ಪ್ರಸನ್ನತೆ ಮತ್ತು ಸಿಟ್ಟು ಇವೆರಡೂ ಕೂಡಾ ನಿಷ್ಫಲಗಳೋ
ಜನರು ಅವನನ್ನು ಷಂಡನಾದ ಗಂಡನನ್ನು ಸ್ತ್ರೀಯರು ಎಂಬಂತೆ ಮೆಚ್ಚುವುದಿಲ್ಲ.

ಅಣ್ಣಾ

ಸ್ನೇಹಾ
ದ್ವಿತೀಯ ಬಿ.ಕಾಂ

ಇರಲಿಲ್ಲ ಅಣ್ಣ ನನಗೆ ಬಾಲ್ಯದಲ್ಲಿ
ಅವನ ಪ್ರೀತಿ ಸಿಗಲಿಲ್ಲ ಆ ವಯಸ್ಸಿನಲ್ಲಿ
ಬೇಸರವಾಗುತ್ತಿತ್ತು ನನ್ನೀ ಮನಸ್ಸಿನಲ್ಲಿ
ನಿಂತಾಗ ನನ್ನ ಗೆಳತಿಯ ಅಣ್ಣ ಅವಳ ಪಕ್ಕದಲ್ಲಿ
ಯೋಚನೆಯೂ ಇರಲಿಲ್ಲ ನನಗೆ
ಬರುವನೆಂದೂ ಅಣ್ಣ ನನ್ನ ಪುಟ್ಟ ಪ್ರಪಂಚದಲ್ಲಿ

ಯಾವ ಜನ್ಮದ ಪುಣ್ಯವೋ ಕಾಣೆ
ನೀ ಸಿಕ್ಕಿದೆ ನನ್ನ ಬದುಕಿನಲ್ಲಿ
ನೀಗಿಸಿದೆ ಅಣ್ಣನಿಲ್ಲದ ಕೊರತೆಯ
ತೋರಿಸಿದೆ ಎಲ್ಲಿಲ್ಲದ ಮಮತೆಯ
ಆದರೆ...
ಅಣ್ಣಾ....ನಿನ್ನೊಂದಿಗಿದ್ದ ಆ ದಿನ
ಖುಷಿಯಿಂದ ಕೂಡಿತ್ತು ನನ್ನೀ ಮನ
ನೀನಂದು ತೋರಿದ ಕಾಳಜಿಯನ್ನು ಮರೆಯನು ಎಂದಿಗೂ ನಾ..
ಆದರೆ ಈಗ...
ಎಲ್ಲಿ ಹೋಯಿತು ನಿನ್ನ ಮಮತೆ
ಈ ನಿನ್ನ ತಂಗಿಯ ಬಗ್ಗೆ...?
ಮೋಸ ಮಾಡಿದ ಯಾರನ್ನೋ ನೆನೆದು
ನನ್ನಿಂದ ದೂರ ಹೋದರೆ ಹೇಗೆ?
ಅಣ್ಣಾ...ನೀ ಬಂದರೆ ನನಗೆ
ಮಳೆ ಬಂದಂತೆ ಈ ನನ್ನ ಭೂಮಿಗೆ
ಯಾರೇ ಇದ್ದರೂ ನನ್ನೊಂದಿಗೆ
ನನ್ನ ಹೃದಯದ ಮೊದಲ ಸ್ಥಾನ ನಿನಗೆ...
ನನ್ನ ತೊರೆದು ಹೋಗುವೆಯೋ...
ಜೊತೆಯಲಿ ಇರುವೆಯೋ...
ತಿಳಿದಿಲ್ಲ ನನಗೆ
ಆದರೂ...
ಎಂದಿಗೂ...ಈ ಜೀವ ಕಾಯುವುದು
ಈ ನನ್ನ ಅಣ್ಣನ ಪ್ರೀತಿಗೆ...

ಅಮ್ಮ (ತಾಯಿ)

ಶ್ರೀಶ
ದ್ವಿತೀಯ ಬಿ.ಕಾಂ.

ಕಣ್ಣಿಗೆ ಕಾಣುವ ದೇವರು ತಾಯಿ
ನಮ್ಮೆಲ್ಲರ ಕರುಣಾಮಯಿ
ಒಂಭತ್ತು ತಿಂಗಳು ಹೊಟ್ಟೆಯಲ್ಲಿಟ್ಟು ಕಾಪಾಡಿದ ಮಾತೆ
ಯಾರಿಗೆ ಗೊತ್ತಿಲ್ಲ ಈ ಕಷ್ಟದ ಚರಿತೆ
ಮಗುವಾಗಿರುವಾಗ ಎದೆಹಾಲುಣಿಸಿದ ದಾತೆ
ಈ ಮಾತೆ ಎಷ್ಟು ಪರಮ ಪುನೀತೆ
ನಾವು ಅಳುವಾಗ ನಕ್ಕು ನಲಿಸುವಳು
ಹೊಟ್ಟೆ ಹಸಿದಾಗ ಕೈ ತುತ್ತ ಕೊಡುವಳು
ಪುಟ್ಟ ಹೆಜ್ಜೆ ಇಡುವಾಗ ಕೈ ಹಿಡಿದು ನಡೆಸುವಳು
ಅಮ್ಮಾ....ಎಂದು ಕರೆದಾಗ ಪ್ರೀತಿಯಿಂದ ಬರುವಳು
ಅವಳು ನಮ್ಮನ್ನು ಪ್ರೀತಿ, ಮಮತೆಯಿಂದ ಹಾರೈಸುವಳು
ಅ ಆ ಒ ಈ ಕಲಿಸಿದಳು
ಆಡಿ ಪಾಡಿ ಕುಣಿಸಿದಳು
ಶಾಲೆಗೆ ನಮ್ಮನು ಕಳಿಸಿದಳು
ಕೈಯನು ಹಿಡಿದು ಬರೆಸಿದಳು
ನಮ್ಮೆಲ್ಲರ ಭವಿಷ್ಯವನು ಬೆಳಗಿದವಳು
ಅವಳೇ ನಮ್ಮ ತಾಯಿ....ಮಾತೆ....ಕರುಣಾಮಯಿ...ಅವಳೆ ವಾತ್ಸಲ್ಯಮಯಿ.

ಸೂರ್ಯ

ಶ್ರೀಶ
ದ್ವಿತೀಯ ಬಿ.ಕಾಂ.

ಓ ಸೂರ್ಯನೆ ನೀನೆಂಥಹ ಪ್ರಜ್ವಲಿಸುವ ಬೆಳಕು
ದಿನ ಬೆಳಗಾದರೆ ಮನೆ ತುಂಬ ಪಳ ಪಳಕು
ಎಣ್ಣೆ ಇಲ್ಲದೆ ಉರಿಯುವ ಜ್ಯೋತಿ
ನಮ್ಮೆಲ್ಲರ ಭಾಗ್ಯ ನೀ ಪ್ರಜ್ವಲಿಸುವ ರೀತಿ
ಲೋಕದಲ್ಲಿ ಹೆಚ್ಚಿದೆ ನಿನ್ನೆಯ ಗಾಂಭೀರ್ಯ
ನೀನು ದಿನಾಲು ಬರುವುದು ಅನಿವಾರ್ಯ

ಭೂತಾಯಿಯ ಒಡಲ ಬೇಗೆ

ರಕ್ಷಾ ಜಿ.ಜಿ.
ಪ್ರಥಮ ಬಿ.ಕಾಂ.

ಹಸಿರಾದ ಧರೆಯು ನೆಲಕಚ್ಚಿ ಹೋಗಿರಲು,
ತಿಳಿನೀರ ಹನಿಕೊಳಲವು ಯಮಕೂಪವಾಗಿರಲು,
ಬಾನಂಗಳದ ಬೆಳಕು ಬೆಂಕಿ ಬೇಗೆಯಾಗಿರಲು
ಭಾರೀ ಕೊಡಲಿಯ ಏಟು ಭೂಮಿಯನ್ನು ಒಡೆದು ಮುತ್ತಿಕ್ಕಿರಲು

ಕಾಗದದ ಅಡಿಯಂಚು ಅರಳಿಸಿ ಮರೆಯಾದಂತೆ
ಹಸಿರಸಿರ ಒಡಲಪುಟ ಅಳಿಸಿ ಬರಿದಾಯಿತು
ಬರಡಾದ ಮರದ ರೆಂಬೆಕೊಂಬೆಗಳ ಕಥೆಯು
ಭೂತಾಯಿಯ ಕಣ್ಣೀರ ಕಥೆ ಹೇಳುತಿತ್ತು.

ಒಂದೆಡೆ ಕಾರ್ಖಾನೆಯ ಬಿಂಬ ಕಣ್ಣುಹೊಕ್ಕಿರಲು,
ಅದರಡಿಯ ಭೂಸಿರಿಯು ನೆನಪಿನಂಗಳ ಸೇರಿತ್ತು.
ದಣಿವಾದ ಮನುಜನಿಗೆ ನೆರಳಾಗಿ ನಿಂತ ಮರ
ಅವನ ದುರಾಸೆಯ ಕೊಡಲಿ ಏಟಿಗೆ ನೆಲಕ್ಕುರುಳಿತ್ತು

ಬರಡು ಭೂಮಿಯ ಭಾವ ಬರಿದಾಗದಿರಲೆಂದು,
ಮನಸಾರೆ ಸಂತೈಸುತ್ತಿವೆ ಮೂಕಪ್ರಾಣಿಗಳು
ಬುದ್ಧಿ–ಜ್ಞಾನ ಇದ್ದೂ ಅಜ್ಞಾನಿಯಂತೆ ವರ್ತಿಸುವ ಮಾನವನಿಗೆ,
ಹೊಂದಿಕೆಯ ಪಾಠ ಕಲಿಸುತ್ತಿರುವ ಮುಗ್ಧ ಪಕ್ಷಿಗಳು

ಒಂದೆಡೆ ಅಮೃತ ಉಣಿಸುವ ಮರಗಳು
ಇನ್ನೊಂದೆಡೆ ಉಸಿರು ಗಟ್ಟಿಸುವ ವಿಷಾನಿಲಗಳು
ಇವೆರಡರ ನಡುವಿನ ಪೈಪೋಟಿಯ ಜ್ವಾಲೆ ಕುದಿಯುತ್ತಿತ್ತು
ಇತ್ತ ಭೂತಾಯಿಯ ಮನ ಈ ಕೃತ್ಯಕ್ಕೆ ಮರುಗುತ್ತಿತ್ತು

ಮಾತೆಯ ಈ ದುಃಖ ಕಷ್ಟಗಳು ಅರ್ಥವಾಗದೇ ಹೋದಾಗ
ನಮ್ಮ ಜೀವನಕ್ಕೂ ನರಕಕ್ಕೂ ವ್ಯತ್ಯಾಸವೇನು?
ನಮ್ಮನ್ನು ಸಲಹುವ ಮಾತೆಯ ಕಣ್ಣೀರು ಒರೆಸದ ಕೈಗಳು
ಇದ್ದೂ ಸಾಧಿಸುವ ಕಾರ್ಯ ಏನು?

ನನಸಾಗಲಿ ಗೆಳತಿ ನಿನ್ನ ಕನಸಿನ ಕೂಸು

ಆಶುಕವನ ಸ್ಪರ್ಧೆಯ ಬಹುಮಾನಿತ ಕವನ

ರಮ್ಯಾ ಭಟ್
ದ್ವಿತೀಯ ಬಿ.ಎಸ್ಸಿ.

ಮುಖದ ಮಾಧುರ್ಯದ ಮಧುವ ಮನದಲಿ
ಮುದ್ರಿಸುವ ಮನಗಳ ಮಲೆನಾಡಿನ
ಮರೀಚಿಕೆಯಂತೆ ಮರಳುಮಾಡಿ ಮಾಯವಾಗುವ
ಮಾಯಗಾತಿ ಈ ನನ್ನ ಗೆಳತಿ

ಹನಿಮಳೆಯಲಿ ಹಾಡುತ ಹೋಗುವ
ಹೊಂಬಣ್ಣದಿ ಹೊಳೆಯುವ ಹುರುಪಿನ
ಹೊನಲ ಹೊಂದಿರುವ ಹರ್ಷದಿಂದಿರುವ
ಹೃದಯವತಿ ಈ ನನ್ನ ಗೆಳತಿ

ಪ್ರಜ್ಞೆಯಿಂದ ಪ್ರಫುಲ್ಲವಾಗಿರುವ
ಪ್ರಶಾಂತಿಯ ಪ್ರಿಯಳಾದ ವತಿಯ
ಪ್ರೇಮದಿಂದ ಪುಲಕಿತಳಾಗಿರುವ ಪ್ರತಿಭಾವಂತೆ
ಪ್ರಭಾವಶಾಲಿ ಈ ನನ್ನ ಗೆಳತಿ

ಬಂಜರು ಭೂಮಿಯ ಬಾಳಲಿ
ಭರವಸೆಯ ಬೆಳಕಾಗಿ ಬಂದವಳು
ಬದುಕಿಗೆ ಭಾವನೆಯ ಬಣ್ಣ ಹಚ್ಚಿ
ಬೆಳದಿಂಗಳ ಬಾಲೆ ಈ ನನ್ನ ಗೆಳತಿ

ಗಲ್ ಗಲ್ ಗೆಜ್ಜೆಗೆ ಗಾನ ತುಂಬುವ
ಗಾಳಿಗೂ ಜೀವತುಂಬುವ ಗುಣಯುಕ್ತ
ಎಲ್ಲರ ಗಮನ ಸೆಳೆಯುವ
ಗಂಗೆಯಷ್ಟು ಪಾವಿತ್ರ್ಯ ಈ ನನ್ನ ಗೆಳತಿ

ಕೊರಳಲಿ ಕನಕದ ಕರಿಮಣಿಯಿಂದ
ಕಣ್ಣಿನ ಕಾಡಿಗೆ ಕೆಂಪು ಕೆನ್ನೆಯಿಂದ ಕಂಗೊಳಿಸುವ
ಕಣ್ಣೀರು ಕೆಳಜಾರದಂತೆ ಕೈಹಿಡಿವ
ಕರುಣಾಮಯಿ ಈ ನನ್ನ ಗೆಳತಿ

ರಮಣೀಯ ರಮ್ಯತೆಯಲಿ ರಂಜಿಸುವ
ರವಿಯಂತಹ ರಂಗಿನಿಂದಿರುವ
ರಾಮನನ್ನು ರಕ್ತದಲ್ಲಿ ರಕ್ತಗತವಾಗಿಸಿಕೊಂಡ
ರಾಣಿ ಈ ನನ್ನ ಗೆಳತಿ

ಅಂಬರದಷ್ಟು ಅಂದವ ಅಡಗಿಸಿಕೊಂಡು
ಅನುದಿನವೂ ಅಲಂಕಾರವಿಲ್ಲದೆ ಅಂದವಾಗಿರುವ
ಅದೃಷ್ಟದಿಂದ ಅರಸಿ ಆರಿಸಿದ
ಅತ್ಯದ್ಭುತ ಅಪರಂಜಿ ಈ ನನ್ನ ಗೆಳತಿ

ಸ್ನೇಹಿತರೊಂದಿಗಿನ ಸುಮಧುರ ಸ್ನೇಹದ
ಸಿಹಿಯ ಸವಿಯುವ ಸೊಬಗಿ
ಸವಿನೆನಪಿನ ಸಾಗರದಲಿ ಸಾಗುತಿರುವ
ಸೌಂದರ್ಯವತಿ ಈ ನನ್ನ ಗೆಳತಿ

ಬಾನೆತ್ತರಕ್ಕೇರಿದರೂ ಭುವಿಯಾಳದ ಒಲವು
ಬಣ್ಣದ ಲೋಕದಿ ಬೆಳಗಿ ಹೊಳೆವ ಕಂಗಳ ಚೆಲುವು
ಈ ಪ್ರೀತಿ ಈ ನೆಲಕೆ ಬದುಕು ತುಂಬುವ ರೀತಿ
ಕಂಡ ಕನಸು ನನಸಾಗಲೆಂದು ಮನದುಂಬಿ ಹಾರೈಸುವೆ ಗೆಳತಿ

यस्मै देवाः प्रयच्छन्ति पुरुषाय पराभवम् ।
बुद्धिं तस्यापकर्षन्ति सोऽवाचीनानि पश्यति ॥

ಯಸ್ಮೈ ದೇವಾಃ ಪ್ರಯಚ್ಛಂತಿ ಪುರುಷಾಯ ಪರಾಭವಮ್ ।
ಬುದ್ಧಿಂ ತಸ್ಯಾಪಕರ್ಷಂತಿ ಸೋಽವಾಚೀನಾನಿ ಪಶ್ಯತಿ ॥

ದೇವತೆಗಳು ಯಾವಾತನಿಗೆ ಪರಾಜಯವನ್ನು ನೀಡಬೇಕೆಂದು ಅಪೇಕ್ಷಿಸುತ್ತಾರೋ
ಅವರು ಆತನ ಬುದ್ಧಿಯನ್ನು ಎಳೆದುಕೊಂಡು ಬಿಡುತ್ತಾರೆ. ಆಗ ಆತ ಎಲ್ಲವನ್ನು ವಿಪರೀತವಾಗಿ ನೋಡುತ್ತಾನೆ.

ಹನಿಗವನಗಳು

(ಹನಿಗವನ ಸ್ಪರ್ಧೆಯ ಬಹುಮಾನಿತ ಹನಿಗಳು)

ಪವಿತ್ರ
ದ್ವಿತೀಯ ಬಿ.ಎಸ್ಸಿ.

ಬದುಕ ಪಥ

ಪರರ ಮಾತಿಗೆ ಬದುಕ
ಮೇಣವಾಗಿಸಬೇಡ ಮನುಜ...
ಬದುಕ ನಿಶೆಯ ತೊರೆದು
ಶಲಾಕೆಯಂತಾಗು, ಇದುವೇ ನಿಜ....

ದ್ವಂದ್ವ

ಎಲೆಯುದುರಿದ ಹಸಿವೃಕ್ಷಕ್ಕೆ
ಬಿರುಗಾಳಿಯ ಭಯ ತಗುಲಿದೆ....
ದೃಢವಾಗಿ ನಿಲ್ಲಲೇ??!
ಇಲ್ಲ ನಿಂತಲ್ಲೇ ನಲುಗಲೆ??!
ಮನದಲ್ಲಿ ಗೊಂದಲದ ಯುದ್ಧ ನಡೆದಿದೆ...

ಹೂ ಮನಸು

ಎಲೆ ಮೇಲಿದ್ದರೆ ತಾನೇ ನಿನ್ನ ಚೆಲುವು
ಯಾರಿಗಾಗಿ ಕಾದಿರಿಸಿರುವೆ ನಿನ್ನ ಒಲವು
ಇನ್ಯಾರೋ ನಿನ್ನ ಹಿಸುಕಿ
ಸಂತೋಷಿಸುತ್ತಾರೆ ಆದರೆ ಇರಲಿ...
ನೀ ನಲುಗದಿರು, ಬಂದದ್ದು ಬರಲಿ.
ನಿನ್ನ ಕೊನೆ ಅವರ ಗೆಲುವಾದರೆ
ಅದ ನೀ ನಗುವಿಂದ ಸ್ವೀಕರಿಸು
ಅದಕ್ಕಾಗಿ ಪರರಿಗಾಗಿ ನಿನ್ನನ್ನೇ
ನೀ ಗಂಧವಾಗಿಸು

ವಿನಂತಿ

ಕಳೆದಂತಹ ಕ್ಷಣವ
ಕೊಡು ನನಗೆ ಮರಳಿ...
ಪ್ರತಿ ಕ್ಷಣ ನನ್ನ ಮರಣ
ನಿನ್ನ ನೆನಪಲ್ಲಿ ನರಳಿ...

ನೀ ನನ್ನೊಲವು

ಭಾವನೆಗಳ ಸೆರಗು ಜಾರಿದೆ
ಕಲ್ಪನೆಗಳ ಬಂಧ ಸರಿದಿದೆ
ಬೆಳಗೋ ಬಾನ ಚಂದಿರನು
ಮನೆಗಲ್ಲದೆ ಮನಕೂ ಬಂದಾಗಿದೆ
ಆದರೆ ನನ್ನ ಮನದ ಮಾತು
ಒಲವಿನಲಿ ಹೇಳಬೇಕೆನಿಸಿದೆ.

ಮೂಕ ಪ್ರೀತಿ

ಮೌನ ಭಾವಗಳ ಸುಳಿಯಲ್ಲಿ
ಮೂಕ ಮನದ ಪಿಸುಮಾತು...
ಕಂಡು ಕೇಳದಂತೆ ನೀ ಆಲಿಸು
ನನ್ನೆದೆಗೆ ಆತು

ಹುಚ್ಚು ಕನಸು

ಕುರುಡಾಗಿ ಹೊರಟೆ,
ಕಾಣದೊಂದು ಕನಸ ಹುಡುಕಿ....
ನನಸಾಗುವ ಮಾತಿನ್ನೆಲ್ಲಿ,
ಮರುಳಾದೆ ನಾ ದುಡುಕಿ...

ಕನಸ ರಥ

ಕನಸುಗಳ ಹೊತ್ತಿರುವ ರಥದ
ಸಾರಥಿಯಾಗಿರುವೆ ನಾ....
ದಾರಿಯೆತ್ತ ತಿಳಿಯದಾಗಿದೆ....
ನನಸಾಗಿಸುವ ಚಿತ್ತ ಮನಸ್ಸಲ್ಲಿ ಮೂಡಿ
ಅರ್ಥೈಸದ ಚಿತ್ರವಾಗಿದೆ

ಹಂಬಲ

ಬಣ್ಣದ ಬದುಕ ಬದಿಗೆ ಸರಿಸಿ
ಭಾವನೆಗಳ ರೇಖೆ ಬಿಡಿಸಿ
ಬದುಕ ನಿಜ ದಾರಿಯ ಅರ್ಥೈಸಿ
ಗೆಲುವನ್ನು ಹಂಬಲಿಸಿರುವೆ

ಮಿಡಿತ

ಚೈತ್ರ ಹೆಚ್. ಆರ್.
ದ್ವಿತೀಯ ಎಂ.ಎಸ್ಸಿ.

ಅಮ್ಮನ ಮಡಿಲಲಿ ಮಗುವಿನ ಆಲಾಪನೆ
ಮಾತಿನ ಜೋಗುಳದಲಿ ಮಗ್ನಳಾದೆಯಾ ಬಾಲೆ
ತಾಯಿಯ ಮಮಕಾರದ ಅದ್ಭುತ ನರ್ತನವು
ಮಗುವಿನ ಕಣ್ಣಂಚಲಿ ಕೋಲ್ಮಿಂಚಾಗಿದೆ.

ಮೌನ

ನಂಬಿಕೆಯ ಅರಮನೆಯು ಅರಗಂತೆ ಕರಗಿರಲು
ಭಾವನೆಯ ಪಾಶದಲ್ಲಿ ಮನಸೀಗ ಬೆಂದಿರಲು
ಓ ಗೆಳತಿ...ಸಹಿಸೆನು ನಿನ್ನ ಮೌನದ ಅಲಂಕಾರವನು

ಬಾಳು

ತುಳಿದು ಬಾಳದಿರು ಓ ಮನುಜ ತಿಳಿದು ಬಾಳು
ತುಳಿದು ಬಾಳುವ ಬಾಳ್ವೆ ಅಳಿದು ಹೋಗುವವರೆಗೆ
ತಿಳಿದು ಬಾಳುವ ಬಾಳ್ವೆಯಲಿ ಅಳಿದರೂ ಉಳಿಯುವೆ...

ಕರುಣೆ

ಕರುಣೆಯ ಕಡಲೊಳು ಮಿಂದೆದ್ದ ಮೇಲೂ
ಸ್ವಾರ್ಥದ ಛಾಯೆಯು ಮರೆಮಾಚಿಲ್ಲ...
ಬದಲಾವಣೆಯನು ಮನ ಧಿಕ್ಕರಿಸುತಿದೆ
ತಿಳಿದಿರಲಿ ಓ ಮನಸೇ ಕರುಣೆ ಬಲಹೀನತೆಯಲ್ಲ...

ಮನಸು/ಮುನಿಸು

ಮೌನದ ಮನಸಲಿ ಮುನಿಸಿಲ್ಲ
ಮುನಿಸಿದ ಮನಸಿಗೆ ಮಾತೇ ಇಲ್ಲ
ಮೌನವೇ ಮನಸಿನ ಮುನಿಸಲ್ಲ
ಮುನಿದ ಮನಕೆ ಪರ ಮನದ ಪರಿವಿಲ್ಲ...

ಜೀವನ ಚಕ್ರ

(ಬಹುಮಾನಿತ ಚಿತ್ರಕಥೆ)

ಶ್ರೀಲತಾ
ದ್ವಿತೀಯ ಎಂ.ಎಸ್ಸಿ.

ಅಜ್ಜ ! ಅಜ್ಜ ! ಎಲ್ಲಿದ್ರಿ? ಕೂಗುತ್ತಲೇ ಇದ್ದಳು ಪಾವನಿ. ಸಂಜೆ ಐದಾದರೂ ಮನೆಯ ಕಡೆಗೆ ಹೋಗುವ ಪರಿವೇ ಇಲ್ಲ. ಹುಡುಗಿಗೆ ಅವಳ ಪ್ರೀತಿಯ ಅಜ್ಜನಿಗಾಗಿ ಕೂಗುತ್ತಾ, ಬಸ್‌ಸ್ಟ್ಯಾಂಡಲ್ಲಿ ಅಲೆಯುತ್ತಲೇ ಇದ್ದಾಳೆ. ಸಂಜೆ ಗಂಟೆ ಐದಾದುದರಿಂದ ಸೂರ್ಯ ತನ್ನ ಬಿಸಿಲಿನ ಪ್ರಖರತೆಯನ್ನು ಕಡಿಮೆ ಮಾಡಿದ್ದ. ಆ ತಿಳಿ ಬಿಸಿಲಿನಲ್ಲಿ ಬಸ್‌ಸ್ಟ್ಯಾಂಡಿನ ಮೂಲೆಯಿಂದ ಪಾವನಿಯ ಅಜ್ಜ ಬಂದಾಗ ಪಾವನಿಗಾದ ಖುಷಿ ಅಷ್ಟಿಷ್ಟಲ್ಲ. ಓಡಿಹೋಗಿ ಬಿಗಿದಪ್ಪಿ ಮುದ್ದಾಡಿ ಬಿಟ್ಟಳು ಪಾವನಿ.

ಅಷ್ಟಕ್ಕೂ ಅಜ್ಜ ಪಾವನಿಯ ಸ್ವಂತ ಅಜ್ಜ ಅಲ್ಲ. ಬಸ್‌ಸ್ಟ್ಯಾಂಡಿನಲ್ಲಿ ಮಲಗಿರುವ ಅಲೆಮಾರಿ ಎನ್ನಬಹುದು. ನಿಜವಾದ ಹೆಸರು ನಾರಾಯಣ ಅಲಿಯಾಸ್ ಡಾ। ನಾರಾಯಣ. ಒಂದು ಕಾಲದಲ್ಲಿ ನಿಟ್ಟೂರಿನ ಏಕೈಕ ಪಿ.ಹೆಚ್.ಡಿ. ಪದವೀಧರರು ನಮ್ಮ ಅಜ್ಜ. ಹೆಸರಿಗೆ ತಕ್ಕಂತೆ ಇಡೀ ಊರಿನಲ್ಲಿ ಎಲ್ಲರಿಗೂ ಡಾ । ನಾರಾಯಣ ಅಂದರೆ ಶ್ರೀಮನ್ನಾರಾಯಣನ ಅಪರಾವತಾರ. ಯಾರೇ ಏನೇ ಬೇಡಿ ಬಂದರೂ ಇಲ್ಲ ಎನ್ನದ ಕಲಿಯುಗದ ಕರ್ಣ. ಕಲಿಯುಗ ತಾನೇ ! ಕಷ್ಟ ಬಂದಾಗ ಕೈ ಹಿಡಿದು ಎತ್ತೋರು ಕಮ್ಮಿ. ಹಾಗೆ ನಾರಾಯಣರು ಸಾಲದಲಿ ವುಳುಗಿ ಮೇಲೇಳಲಾರದೆ ಬೀದಿಗೆ ಬಂದದ್ದು.

ಇನ್ನು ನಮ್ಮ ಪಾವನಿ. ಇವಳು ಎರಡನೇ ತರಗತಿಯ ವಿದ್ಯಾರ್ಥಿನಿ. ಶಾಲೆಯ ಹತ್ತಿರವೇ ಇದ್ದ ಬಸ್‌ಸ್ಟ್ಯಾಂಡಿನಲ್ಲಿ ಒಮ್ಮೆ ವಿಚಿತ್ರ ವಿಚಿತ್ರ ಅಂಗಿ ಹಾಕಿದವರನ್ನು ಕಂಡಳು. ಮನೆಯಲ್ಲಿ ಅದೇ ಪುರಾಣ. 'ಅಮ್ಮಾ! ನಾನು...ನಾನು ಶಾಲೆಯಿಂದ ಬರ್ತಾ ಇದ್ನಾ. ಬಸ್ಸ್ಟ್ಯಾಂಡಿನಲ್ಲಿ ಒಬ್ರನ್ ಕಂಡೆ...ಅಮ್ಮ ಅವ್ರು ತುಂಬಾ ಬೇಜಾರಲ್ಲಿದ್ದರು. ಬೆನ್ನು ಬಾಗಿತ್ತು. ಬಟ್ಟೆ ಹರ್ದು ಹೋಗಿತ್ತು. ಗಡ್ಡ ಉದ್ದ ಇತ್ತು...ಕೋಲು ಹಿಡಿದು ನಿಧಾನಕ್ಕೆ'... ಪಾವನಿಯ ವಿವರಣೆ ನಡೆಯುತ್ತಲೇ ಇತ್ತು. 'ಅಮ್ಮಾ...ಮಹಾರಾಣಿಯವರೇ ಶಾಲೆಯಲ್ಲಿ ಇದನ್ನೇ ಹೇಳಿಕೊಟ್ರಾ? ಅದೆಷ್ಟು ಅಂತ ಮಾತಾಡ್ತೀ? ಅವರ್ಯಾರೋ ಭಿಕ್ಷುಕರಿರಬೇಕು. ಕೆಲಸ ಮಾಡಿ ದುಡಿದು ತಿಂದ್ರೆ ಚೆನ್ನಾಗೇ ಇರ್ತಾರೆ. ಉದಾಸೀನ ಮಾಡಿದ್ರೆ ಹಾಗೇ ಆಗೋದು.' ಭವಾನಿದೇವಿಯವರು ಮಗಳನ್ನು ಕುರಿತು ಹೇಳಿದರು.

ನಮ್ಮ ಪಟಪಟಪಟಾಕಿ ಮಾತಿನ ಪಾವನಿಯವರು ಈ ಬಾರಿ ತುಂಬಾ ಗಂಭೀರವಾದ ಮುಗ್ಧ ಮುಖವನ್ನು ಅಮ್ಮನಿಗೆ ತೋರಿಸುತ್ತಾ ಒಂದೇ ಪ್ರಶ್ನೆ ಕೇಳಿದಳು. 'ಅಮ್ಮಾ ವಯಸ್ಸಾದವರನ್ನು ನಾವು ಯಾಕೆ ಸಾಕಬಾರದು?' ಒಮ್ಮೆ ಬೆಚ್ಚಿಬಿದ್ದಳು ಭವಾನಿ. ಆರು ವರ್ಷದ ಮಗುವಿನ ಬಾಯಲ್ಲಿ ಇಂಥಾ ದೊಡ್ಡ ಪ್ರಶ್ನೆ. ಅಮ್ಮನ ಉತ್ತರಕ್ಕೂ ಕಾಯದೇ ಪಾವನಿ ಹೇಳಿಯೇ ಬಿಟ್ಟಳು. ಆ ಅಜ್ಜನನ್ನು ಮನೆಗೆ ಕರೀಬಹುದು, ಸಾಕಬಹುದು, ಅಂತಾದ್ರೆ ಮಾತ್ರ ನಾನು ಊಟ ಮಾಡ್ತೀನಿ ಇಲ್ದಿದ್ರೆ ಏನೂ ಬೇಡ ಅಂತ.

ಯಾರಿಗಾದರೂ ಸಿಟ್ಟು ಬರಲ್ವಾ? ಸಣ್ಣ ಮಕ್ಕಳು ಮಾತಾಡಲೀ ಅಂತ ಬಿಟ್ರೆ ಇಷ್ಟೊಂದು ಮಾತಾಡೋದಾ? ಭವಾನಿ ರೇಗಿಯೇ ಬಿಟ್ಟಳು. ಮನೆಗೆ ಅಪ್ಪ ಬಂದು ಬುದ್ಧಿವಾದ ಹೇಳ್ತೂ ತನ್ನ ಮಾತನ್ನು ಸಡಿಲಿಸಲೊಪ್ಪಲಿಲ್ಲ ಪಾವನಿ. ಕೊನೆಗೆ ದೊಡ್ಡವರೇ ಅವಳ ಮಾತಿಗೆ ಅಸ್ತು ಅಂದೇ ಬಿಟ್ಟರು. ಆ ಖುಷಿಯಲ್ಲೇ ಮರುದಿನ ಅಜ್ಜನನ್ನು ಹುಡುಕಿದ್ದು ಪಾವನಿ. ಯಾವಾಗಿನಿಂದ ಇಟ್ಟುಕೊಂಡು ತಿರುಗುತ್ತಿದ್ದ ಬಟ್ಟೆ ಗಂಟೋ ದೇವರೇ ಬಲ್ಲ! ಅದನ್ನು ಹೊತ್ತುಕೊಂಡೇ ಬೆನ್ನು ಮತ್ತಷ್ಟು ಬಾಗಿತ್ತು.

ಸ್ನಾನ ಮಾಡದೇ ಕಾಲವಾಗಿ ಮೈಯೆಲ್ಲಾ ನಾರುತ್ತಿದ್ದರೂ ಪಾವನಿಗೆ ಅದರ ಪರಿವೇ ಇಲ್ಲ. ಅಜ್ಜ

ಮನೆಗೆ ಬರ್ತಾರೆ ಅನ್ನೋ ಖುಷಿನೇ ತುಂಬಿತ್ತು ಅವಳಲ್ಲಿ. ಅಪ್ಪ–ಮಗಳು ನಾರಾಯಣರನ್ನು ಮನೆಗೆ ಬರುವಂತೆ ಕರೆದರು. ಎಷ್ಟೇ ಆದರೂ, ಸ್ವಾಭಿಮಾನದಿಂದ ಬದುಕಿದ್ದ ಡಾ। ನಾರಾಯಣರು (ಅಜ್ಜ) ಕೂಡಲೇ ಯಾರೋ ಮನೆಗೆ ಕರೆದರು ಎಂದಾಗ ಹೋಗುತ್ತಾರೆಯೇ? ಇಲ್ಲವೇ ಇಲ್ಲ. ಆದರೆ ಪಾವನಿ ಮೇಡಮ್ ಅವರು ಬಿಡಬೇಕಲ್ಲ. ಪುಟ್ಟ ಹುಡುಗಿಯ ಹಠಕ್ಕೆ ದೊಡ್ಡವರೇ ಸೋಲಬೇಕಾಯಿತು. ಅಜ್ಜ ಮನೆಯೆಡೆಗೆ ಹೊರಟೇ ಬಿಟ್ಟರು.

ಮನೆ ಕಂಡಾಗ ಅಜ್ಜ ಒಂದೆಡೆ ನಿಂತು ಬಿಟ್ಟರು. ಒಂದು ಕಾಲದಲ್ಲಿ ತನ್ನದೇ ಸ್ವಂತ ಮನೆ. ಬಂಗಲೆ ಕೈಕಾಲುಗಳಿಗೆ ಆಳುಗಳು ಊರವರಿಗೆ ತಾವೇ ದೊಡ್ಡ ಮನುಷ್ಯರು. ಅರವತ್ತು ವರ್ಷಗಳ ಕಾಲ ನಿಟ್ಟೂರಿನಲ್ಲಿ ಮಹಾರಾಜರಂತಿದ್ದು. ಹದಿನಾರು ವರ್ಷಗಳನ್ನು ಬೀದಿಯಲ್ಲಿ ಅಲೆಯುತ್ತಲೇ ಕಳೆದದ್ದು. ಎಲ್ಲವೂ ನೆನಪಾಯಿತು ಅಜ್ಜನಿಗೆ. ಮೊಮ್ಮಗಳ ರೀತಿಯಲ್ಲಿ ಪಾವನಿಯನ್ನು ಕಂಡು ಬಾವುಕರಾದರು ಅಜ್ಜ. ಆ ಉದ್ದವಾದ ಗಡ್ಡಗಳ ಸಂದಿಯಿಂದಲೂ ಆನಂದ ಭಾಷ್ಪ ಹರಿದು ಭೂಮಿಗೆ ಮುತ್ತಿಕ್ಕುತಿತ್ತು.

ಗೊತ್ತು ಗುರಿಯಿಲ್ಲದ ವೃದ್ಧರು. ಅವರು ಹೇಗೋ ಏನೋ ಗೊತ್ತಿಲ್ಲ. ಈ ಪಾವನಿ ಮಾತಿಗೆ ಅವಳಪ್ಪ ಕುಣಿತಾರೆ. ನಾನಿಲ್ಲಿ ಸಾಯೋದು. ಮನೆಯಲ್ಲಿರೋ ಮೂರು ಜನರಿಗೆ ಅಡಿಗೆ ಮಾಡೋದೇ ಕಷ್ಟ. ಇನ್ನು ಇದು ಬೇರೆ ಗೊಣಗುತ್ತಲೇ ಬಾಗಿಲು ತೆಗೆದಳು ಭವಾನಿ. ಎದುರಿಗಿದ್ದ ಗೂನು ಬೆನ್ನಿನ ವೃದ್ಧರನ್ನು ಕಂಡು ಮೂಕಳಾದಳು. ಅವಳಿಗೆ ಸಂತೋಷ ದುಃಖ ಬೇಸರ ಎಲ್ಲ ಒಮ್ಮೆಲೇ ಉಂಟಾಗಿ ಅಳುವುದಕ್ಕೆ ಶುರುಮಾಡಿದ್ದಳು. ಪಾವನಿ ಅಮ್ಮಾ ಯಾಕೆ ಏನಾಯ್ತೇ ಅಂದಾಗಲೇ ಭವಾನಿ ಅರಿವಿಗೆ ಬಂದಿದ್ದು ತಾನು ಕಂಡಿದ್ದು ಕಾಣುತ್ತಿರುವುದು ಸತ್ಯ ಅಂತ. ಒಮ್ಮೆಲೇ ಅಜ್ಜನ ಕಾಲಿಗೆ ಬಿದ್ದಳು ಭವಾನಿ.

ಆಶ್ಚರ್ಯ ! ನಿನ್ನೆಯಿಂದ ಒಂದೇ ಸಮನೆ ಗೊಣಗುತ್ತಿದ್ದ ಹೆಂಡತಿಯೇ ಇವಳಾ! ಎಂದು ಕಣ್ಣು ಬಿಟ್ಟು ಕಾಣುತ್ತಿದ್ದರು ಪಾವನಿಯ ಅಪ್ಪ ಸುಂದರ್‌ರಾವ್. ಅಜ್ಜನ ಮುಖದಲ್ಲಿ ಮಂದಹಾಸ. ತೃಪ್ತಿಯ ನಗೆ..ಭವಾನಿ ತಡ ಮಾಡಲಿಲ್ಲ. ನಾರಾಯಣರನ್ನು ಮನೆ ಒಳಗೆ ಕರೆದು ಸ್ನಾನ ಮಾಡಿಸಿ, ಗಂಡನ ಕೈಯಲ್ಲಿ ಅವರ ಗಡ್ಡವನ್ನೆಲ್ಲಾ ತೆಗೆಯಲಿಕ್ಕೆ ಹೇಳಿ, ಹೊಸ ಬಟ್ಟೆ ತರಿಸಿ, ನಾರಾಯಣರನ್ನು ಒಳ್ಳೆ ಸಿನಿಮಾನಟರಂತೆ ಕಂಗೊಳಿಸುವ ರೀತಿಯಲ್ಲಿ ತಯಾರು ಮಾಡಿದ್ದಳು. ಪಾವನಿಗೆ ಖುಷಿ ಅಂದರೆ ಅಷ್ಟಿಷ್ಟಲ್ಲ. ಇದೆಲ್ಲದರ ನಡುವೆ ಹಬ್ಬದ ಊಟವೂ ತಯಾರಾಗಿತ್ತು. ಈಗ ಮಾತಾಡದೇ ಮೌನವಾಗಿ ಕಕ್ಕಾಬಿಕ್ಕಿಯಾಗಿ ಎಲ್ಲ ಕೆಲಸ ಮಾಡುತ್ತಾ, ಹೆಂಡತಿಗೆ ಏನಾಗಿದೆ? ಎಂದು ಯೋಚಿಸುತ್ತಿರುವ ಮಹಾನುಭಾವರು ಸುಂದರ್‌ರಾವ್.

ಊಟ ಬಡಿಸುತ್ತಾ ಭವಾನಿ ಶುರು ಮಾಡಿದಳು ಮಾತನಾಡಲು. ನಾನೂ ಸಹ ಬೀದಿಯಲ್ಲಿ ಬಿದ್ದ ಮಗು. ಹೆಣ್ಣು ಮಗು ಅಂತಾ ನನ್ನ ಹೆತ್ತ ತಂದೆ ತಾಯಿ ಕಸದ ತೊಟ್ಟಿಯಲ್ಲಿ ಬಿಸಾಡಿ ಹೋಗಿದ್ದರಂತೆ. ಆಗ ಈ ಅಪ್ಪ ಅಂದರೆ ಪಾವನಿಯ ಅಜ್ಜ ನನ್ನನ್ನು ಒಂದು ಆಶ್ರಮಕ್ಕೆ ಸೇರಿಸಿ, ನನ್ನ ವಿದ್ಯಾಭ್ಯಾಸದ ಖರ್ಚನ್ನೆಲ್ಲಾ ನೋಡಿಕೊಂಡ್ರು. ಆಮೇಲೆ ಇದ್ದಕ್ಕಿದ್ದ ಹಾಗೆ ನಿಟ್ಟೂರಿನಲ್ಲಿ ಇವರ ಬಗ್ಗೆ ಮಾಹಿತಿನೇ ಸಿಗದಂತಾಯ್ತು. ನಾನು ಇವರನ್ನು ಹುಡುಕಿ ಹೋಗುವಾಗ ತಡವಾಗಿತ್ತು. "ರೀ...ನಾನು ಹೇಳಿದ್ನಲ್ಲಾ....ನನ್ನಪ್ಪ ಡಾ। ನಾರಾಯಣ ಅಂತ... ಅವರು ಇವರೇ". ಕಣ್ಣಲ್ಲಿ ನೀರು ಧಾರಾಕಾರವಾಗಿ ಹರಿಯುತ್ತಲೇ ಇತ್ತು. ಪಾವನಿ ಬಿಟ್ಟ ಕಣ್ಣು ಮುಚ್ಚದೇ ಪಿಳಿ ಪಿಳಿ ನೋಡುತ್ತಾ ಇದ್ದಳು.

ಅಜ್ಜ ಅಂದರೆ ನಾರಾಯಣರು ಮಾತನಾಡಲಿ ಎಂದು ಎಲ್ಲರೂ ಕಾಯುತ್ತಾ ಕೂತಿದ್ದರು. ಎಲ್ಲರ ತಟ್ಟೆಯಿಂದ ಒಂದು ಚೂರು ಅನ್ನ ಕಡಿಮೆಯಾಗಿರಲಿಲ್ಲ. ನನ್ನ ಪೂರ್ವಜನ್ಮದ ಪುಣ್ಯವೋ ಪಾಪದ ಫಲವೋ ನನಗೆ ಗೊತ್ತಿಲ್ಲ. ಈ ಜನ್ಮದಲ್ಲಿ ಎಲ್ಲರಿಗೂ ಒಳ್ಳೆಯದನ್ನೇ ಬಯಸಿದ್ರೂ ಹಿಂದಿನ ಜನ್ಮದ ಪಾಪ ಕಾರ್ಯದ ಫಲವಾಗಿ ಬೀದಿಗೆ ಬರುವಂತಾಯ್ತು. ಆದರೆ ಒಂದು ಸಣ್ಣ ಕಾರ್ಯ... ಈ ಮಗು (ಭವಾನಿ)ವನ್ನು

ಓದಿಸಿದ್ದು. ಇಂದು ಅವಳೇ ನನ್ನನ್ನು ಸಾಕುವಂತಾಗಿದ್ದಾಳೆ. ನಾನು ಮದುವೆಯಾಗಿ, ನನ್ನದೇ ಸ್ವಂತ ಮಕ್ಕಳಿದ್ದರೂ ಈ ರೀತಿ ಆತಿಥ್ಯ ಮಾಡುತ್ತಿದ್ದರೋ ನಾ ಕಾಣೆ ಮಾತು ಮುಂದುವರೆಯಲಿಲ್ಲ.

ಮನೆಯಲ್ಲೀಗ ಸಂಭ್ರಮವೋ ಸಂಭ್ರಮ. ಅಜ್ಜ–ಮೊಮ್ಮಗಳ ಆಟ–ಪಾಠ–ತರಲೆ– ಬುದ್ಧಿವಾದ. ಮನೆ ಈಗ ತುಂಬಿ ತುಳುಕುತ್ತಿತ್ತು. ಕೋಲು ಹಿಡಿದು ಹರಿದ ಬಟ್ಟೆ ಹಾಕಿಕೊಳ್ಳುತ್ತಿದ್ದ ಅಜ್ಜ. ಈಗ ಚಂದದ ಜುಬ್ಬಾ ಪೈಜಾಮ ಹಾಕಿ ನಡೆಯುತ್ತಿದ್ದಾರೆ. ಒಮ್ಮೆ ಸಿರಿತನ, ನಂತರ ಬಡತನ, ಮತ್ತೆ ಸಿರಿತನ. ಜೀವನ ಚಕ್ರ ತಿರುಗುತ್ತಲೇ ಇರುತ್ತದೆ. ಏನೂ ಅರ್ಥವಾಗದ ಜೀವನದಲ್ಲಿ ನೋವು ನಲಿವುಗಳು ಖಚಿತ. ಕೊಟ್ಟು ತಿಂದ ಪುಣ್ಯ ನಮ್ಮನ್ನು ಕಾವಲಾಗಿ ಕಾಯುತ್ತದೆ ಎಂಬ ಅಜ್ಜನ ನೀತಿ ಪಾಠ ನೂರಕ್ಕೆ ನೂರು ಸತ್ಯ.

ಪ್ರಕೃತಿ ಸೊಬಗಿನ ವಯ್ಯಾರಿ– ಉತ್ತರ ಕನ್ನಡ

ಕೆ. ನಾಗರಾಜ ಹೆಗಡೆ
ದ್ವಿತೀಯ ಬಿ.ಎಸ್ಸಿ.

'ದೇಶ ಸುತ್ತು ಕೋಶ ಓದು' ಹೇಳುದ್ ಒಂದು ಪ್ರಸಿದ್ಧ ನಾಣ್ಣುಡಿ. ನಮ್ ಅನುಭವ ಮತ್ತೆ ಅಭಿವ್ಯಕ್ತಿ ಶಕ್ತಿ ಹೇಳುದ್ ವಿಸ್ತಾರ ಆಗೆಕಾರೆ ಈ ಗಾದೆನಾ ಪಾಲನೆ ಮಾಡುದ್ ಅಗತ್ಯ. ಹಂಗಾಯಿ ಮನುಷ್ಯನ್ ಆಸಕ್ತಿಗಳಲ್ಲಿ ಪ್ರವಾಸಕ್ಕೂ ಆದ್ಯತೆ ಇದ್ದು. ಈ ಪ್ರವಾಸ ಹೇಳುದ್ರಲ್ ಮೂರ್ ನಮ್ಮಿ. ಐತಿಹಾಸಿಕ ಸ್ಥಳ. ಧಾರ್ಮಿಕ ಸ್ಥಳ, ಹಂಗೆ ಮತ್ತೊಂದು ಪ್ರಕೃತಿ ತಾಣಗಳು. ಹಿಂದೆಲ್ಲಾ ನಮ್ಮವ್ವು ದೇವಸ್ಥಾನ ಎಲ್ಲಾವಾ ಬೆಟ್ಟದ್ ಮೇಲೆ ಇಲ್ಲದ್ರ್ ನದಿ ಅಂಚಿಂಗೆ ಕಟ್ತಿಪ್ಪ. ಹಂಗಾಯಿ ತೀರ್ಥಯಾತ್ರೆ ಸಂಪ್ತಿಗ್ ಮನೋಲ್ಲಾಸಾನೂ ಶಿಕ್ತಿಪ್ಪು. ಆದ್ರ್ ಈಗ ಧಾರ್ಮಿಕ ಕ್ಷೇತ್ರ ಎಲ್ಲಾವಾ ವಾಣಿಜ್ಯ ಕೇಂದ್ರ ಹೇಳು ನಮ್ಮಿ ಆಯೋಯ್ದು.

ಸುಮಾರ್ ದೇಶ್ದಲ್ಲಿ ಪ್ರವಾಸ ಹೇಳುದ್ ಒಂದು ಪ್ರಮುಖವಾದದ್ ಉದ್ಯಮ. ಆದ್ರೆ ಭಾರತದಲ್ಲಿ ಆ ನಮ್ಮಿ ಪ್ರಾಮುಖ್ಯತೆ ಇಲ್ಲೆ. ಜಗತ್‌ಪ್ರಸಿದ್ಧವಾದದ್ ಸುಮಾರು ಆಕರ್ಷಕ ಸ್ಥಳ ನಮ್ಮಲ್ ಇದ್ದು. ಆದ್ರ್ ಅದ್ರ್ ಅಭಿವೃದ್ಧಿ ಮಾಡು ಪ್ರಯತ್ನಾವಾ ಸರ್ಕಾರ ಮಾಡ್ದಾಂಗ್ ಕಾಣ್ತೆಲೆ. ಕರ್ನಾಟಕದಲ್ಲೂ ಪ್ರವಾಸೋದ್ಯಮ ಹೇಳುದ್ ನಿರ್ಲಕ್ಷ್ಯ ಆದದ್ ವಲಯ.

ನಂಗ್ ಒಂದೊಂದ್ ಸಲ ಅನ್ಸ್ತು. ನಾವು ಜಗತ್ತಿಂದ್ ಸುಮಾರ್ ದೇಶ ನೋಡ್ತ, ನೋಡೆ ಹೇಳ್ ಜಾನ್ಸ್ಕ್ಯತ್ತ. ಆದ್ರ್ ಕರ್ನಾಟಕಾನೇ ಇನ್ನೂ ಸರಿ ನೋಡ್ಯಾಯ್ಲೆ ಹೇಳಿ. ನಮ್ ಕೊಡಗು, ಕರಾವಳಿ ಮತ್ ಮಲ್ನಾಡ್ ಹಂಗೇಯ ಉತ್ತರಕನ್ನಡ ಜಿಲ್ಲೆಯೂ ಒಂದ್ ಪ್ರಕೃತಿ ಸೊಬಗಿಂದ್ ತಾಣ. ಬಯಲ್‌ಸೀಮ್, ಮಲ್ನಾಡ್ ಹಂಗೆ ಕರಾವಳಿ ಇವೆಲ್ಲಾದ್ರ್ ಲಕ್ಷಣ ಹೊಂದ್ಕ್ಯಂಡಿದ್ದದ್ ಕರ್ನಾಟಕದ್ ಒಂದ್ ಜಿಲ್ಲೆ ಉತ್ತರ ಕನ್ನಡ ಹೇಳ್ಲಕ್ಕು. ಇಲ್ಲಿನ್ ಎಲ್ಲಾ ನಮ್ಮಿ ವೈವಿಧ್ಯತೆ ಅಚ್ಚರಿ ಮೂಡ್ಸ್ತು. ಆದ್ರೆ ಈ ವಿಚಾರ್ದಲ್ ಈ ಜಿಲ್ಲೆಗೆ ಹೆಚ್ಚ ಪ್ರಚಾರ ಸಿಕ್ದಾಂಗ್ ಕಾಣ್ತೆಲ್ಲ.

ಇಂತ ಈ ಉತ್ತರಕನ್ನಡ ಜಿಲ್ಯಲ್ಲಿ ಯಲ್ಲಾಪುರ ಹೇಳು ತಾಲೂಕ್ ಇದ್ದು. ಇದೊಂದೇ ತಾಲೂಕ್ನಲ್ಲಿ ಸುಮಾರ್ ಪ್ರವಾಸಿ ತಾಣ ಇದ್ದು.

ಮಿನಿ ನಯಾಗರ ಹೇಳ್ ಇಲ್ಲಿ ಜನ್ರ್ ಕರ್ಯು ಸಾತೊಡ್ಡಿ ಜಲಪಾತ. ಆದ್ರ್ ಸುತ್ಲ್ ಪರಿಸರದಿಂದ್ಲೇ ಜನ್ರ್ ಆಕರ್ಷಣೆ ಮಾಡ್ತು. ಒಂದ್ ಬದಿಗೆ ಎತ್ತರದ್ ಕಡಿದಾದದ್ ಗೋಡೆ, ಮತ್ತೊಂದ್ ಬದೀಗೆ ಹಸೀರ್ ಕಾಡು. ಇದ್ರ ಮಧ್ಯಲ್ ಸುಮಾರ್ 50 ಅಡಿ ಎತ್ರ್ದಿಂದ ನೀರು ಬೀಳುದು ನಯನಮನೋಹರ. ಈ ಸಾತೊಡ್ಡಿ ಜಲಪಾತ ಹೇಳುದು

ಕಲ್ಲರಮನೆ ಘಟ್ಟ ಪ್ರದೇಶದ್ ಸುಮಾರ್ ಸಣ್ ಸಣ್ ತೊರೆ ಕೂಡಿ ಆದದ್ದು. ಹಂಗೇ ಹರ್ದ್ ಹೋದದ್ ನೀರು ಮುಂದ್ ಹೋಯಿ ಕಾಳಿನದಿಗ್ ಕಟ್ಟಿದ್ ಅಣೆಕಟ್ಟ್‌ನ ಹಿನ್ನೀರಿಂಗ್ ಹೋಯ್ ಕೂಡ್ತು. ಈ ಸಾತೊಡ್ಡಿ ಫಾಲ್ಸು ಸುಮಾರು 25 ಕಿ.ಮೀ. ಇದ್ದು ಯಲ್ಲಾಪುರದಿಂದ. ಆದ್ರೆ ಇಲ್ ಹೋಪ್ಲೆ ಒಳದಾರಿ ವ್ಯವಸ್ಥೆ ಅಷ್ಟೇನ್ ಚೊಲೋ ಇಲ್ಲೆ. ಯಲ್ಲಾಪುರ್ದ್ ಬದಿಂದ್ ಹೋಪಾಗ ಮೊದ್ಲ್ ಕಾಳಿನದಿ ಅಣೆಕಟ್ಟ್ ಹಿನ್ನೀರು ಶಿಕ್ತು. ಕಡಿಗ್ ಮುಂದ್ ಹೋಯಿ ಗಾಡಿ ಮಡ್ಗಿಕ್ ಸುಮರ್ 1 ಕಿಮೀ. ನೆಡ್ಕಂಡ್ ಹೋಗೆಕಾವ್ತು. ನೆಡ್ಕಂಡ್ ಹೋಪುದು ಒಂದ್ ನಮ್ಮಿ ಅದ್ಭುತ ಅನುಭವ. ಇದು ವನಭೋಜನ ಮಾಡ್ಲೆ ಮಸ್ತ್ ಜಾಗ.

ಸಾತೊಡ್ಡಿಗ್ ಹೋಗೆಕಾರೆ ಒಳದಾರಿ ಹಿಡ್ಯೆಕಾವ್ತು. ಆದ್ರೆ ಮತ್ತೊಂದ್ ಫಾಲ್ಸ್ ಇದ್ದು ಮಾಗೋಡು ಹೇಳಿ. ಹೆದ್ದಾರಿಯಿಂದ 18 ಕಿ.ಮೀ. ಗೇ ಅದ್ ಶಿಕ್ಯೋವ್ತು. ಧಾರವಾಡದ್ ಹಕ್ರಿಂದ್ ಶಾಲ್ಮಲಾ ನದಿ ಮುಂದೆ ಗಂಗಾವಳಿ ಆಯಿ ಕಡಿಗೆ ಬೇಡ್ತಿ ಆಯಿ ಅರಬ್ಬೀ ಸಮುದ್ರಕ್ ಕೂಡ್ತು. ಈ ನದಿನೇ ಮಾಗೋಡ್ ಹಕ್ರಿ ಸುಮಾರ್ 600 ಅಡಿ ಮೇಲಿಂದ ಕಣಿವೆಗ್ ಬೀಳ್ತು. ಅದೇ ಮಾಗೋಡ್ ಜಲಪಾತ. ಇದ್ರ್ ಹಿಂದ್ ಬದಿಗ್ ಎಲ್ಲಾ ಪಶ್ಚಿಮ ಘಟ್ಟದ್ ಸಾಲು. ಹಂಗೆ ಕೆಳಗ್ ನೋಡಿರೆ ಪಾತಾಳ್ದ ಹಾಂಗ್ ಕಾಂಬು ಕಣಿವೆ. ಈ ಫಾಲ್ಸ್ ಹತ್ರಾನೇ ಜೇನುಕಲ್ಲು ಗುಡ್ಡ ಹೇಳ್ ಒಂದ್ ಜಾಗ ಇದ್ದು. ಅದ್ ಬೇಕಾರೆ ಅತ್ಯದ್ಭುತ ಜಾಗ. ಪಶ್ಚಿಮದಲ್ಲಿ ಸೂರ್ಯಾಸ್ತ ನೋಡ್ಲ್ ಸುಂದರ ಸ್ಥಳ.

ಮನುಷ್ಯಾಂಗ್ ಬೇಕಪ್ಪು ಶುದ್ಧಗಾಳಿ, ಕುಡೀಲ್ ನೀರು ಇವೆಲ್ಲಾ ಪ್ರಕೃತಿನೇ ಕೊಟ್ಟದ್ದು. ಪರಿಸರ ನಾಶ ಮಾಡಿರ್ ಎಂತಾ ಹೇಳುದ್ ನಾವ್ ಮೊದ್ಲ್ ತೆಳ್ಕಳೆ. ಇಂತ ಚಂದ ಕಳ್ಕಂಡ್ರ್ ಮತ್ ಶಿಕ್ತೆ್ಲ, ಹಂಗಾಯಿ ಸರ್ಕಾರಾನೂ ಇದ್ರ್ ಬಗ್ಗೆ ಒಂದ್ ನಿರ್ಧಾರಕ್ ಬಂದು ಎಲ್ಲಾ ಪ್ರವಾಸಿ ಸ್ಥಳಾನೂ ಅಭಿವೃದ್ಧಿ ಮಾಡ್ವಾಂಗಾಗ್ಲಿ ಹೇಳುದೇ ಎಲ್ಲವ್ರ್ ವಿನಂತಿ...

ಸ್ವಾಮಿ ವಿವೇಕಾನಂದರ ವಿಚಾರ ಹಾಗೂ ರಾಷ್ಟ್ರೀಯತೆ

(ಪ್ರಬಂಧ ಸ್ಪರ್ಧೆಯಲ್ಲಿ ಮೊದಲ ಸ್ಥಾನ ಪಡೆದ ಬರಹ)

ಪಾವನಾ
ತೃತೀಯ ಬಿ.ಕಾಂ.

ಆಧುನಿಕ ಭಾರತದ ರಾಷ್ಟ್ರೀಯ ಬದುಕಿನಲ್ಲಿ ಸಕ್ರಿಯವಾಗಿ ಭಾಗವಹಿಸುವ ಪ್ರತಿಯೊಬ್ಬರೂ ಅವಶ್ಯವಾಗಿ ರೂಢಿಸಿಕೊಳ್ಳಬೇಕಾದ ಮನೋಭಾವಕ್ಕೆ ಸ್ಫೂರ್ತಿಯನ್ನು ಸ್ವಾಮಿ ವಿವೇಕಾನಂದರ ಚಿಂತನೆಗಳಿಂದ ಪಡೆಯಬೇಕಾಗಿದೆ ಎಂಬುದನ್ನು ನಿರೂಪಿಸುವ ಯು.ಎನ್. ಸಂಗನ್ನಾಳಮಠ ಅವರು ದಾವಣಗೆರೆ ಜಿಲ್ಲೆಯ ಹೊನ್ನಾಳಿ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ರಾಜ್ಯಶಾಸ್ತ್ರ ಉಪನ್ಯಾಸಕರಾಗಿದ್ದಾರೆ.

ಏಳಿ! ಎದ್ದೇಳಿ! ನಿಮ್ಮ ಭವಿಷ್ಯವನ್ನು ರೂಪಿಸುವ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತುಕೊಳ್ಳಿ. ನಿಮ್ಮ ಉತ್ತರೋತ್ತರ ಶ್ರೇಯಸ್ಸಿಗೆ ಬೇಕಾದ ಎಲ್ಲ ಶಕ್ತಿ ಸಾಮರ್ಥ್ಯಗಳೂ ನಿಮ್ಮೊಳಗೇ ಇವೆ. ಮನಸ್ಸು ಮಾಡಿ, ಏಳಿ ಎದ್ದೇಳಿ, ಭವ್ಯ ಭವಿಷ್ಯತ್ತಿನ ನಿರ್ಮಾಣಕ್ಕೆ ಇಂದೇ ಅಡಿ ಇಡಿ ಎಂದು ತಮ್ಮ ಶಕ್ತಿಯುತ ವ್ಯಕ್ತಿತ್ವ, ಪ್ರಭಾವಪೂರ್ಣವಾಗ್ಮಿತ್ವ ಮತ್ತು ಪ್ರಚೋದಕ ಬರಹಗಳ ಮೂಲಕ ನಮ್ಮ ರಾಷ್ಟ್ರಚೇತನವನ್ನು ಜಾಗೃತಗೊಳಿಸಿ–ನಮ್ಮ ಸಂಸ್ಕೃತಿಯ ಬಗ್ಗೆ ಹೆಮ್ಮೆಯನ್ನು ಕುದುರಿಸಿ ಸ್ವತಂತ್ರ ಭಾರತ ನಿರ್ಮಾಣಕ್ಕೆ ಬುನಾದಿಯನ್ನು ಹಾಕಿದ ಮಹಾವ್ಯಕ್ತಿ ಸ್ವಾಮಿ ವಿವೇಕಾನಂದರು. ತಮ್ಮ ವಿಚಾರಗಳಿಗೆ ಅನುಸಾರವಾಗಿ ಭಾರತೀಯ ಸಮಾಜವನ್ನು ಬದಲಾವಣೆ ಮಾಡಲು

ಬಯಸಿದರು. ವೈಜ್ಞಾನಿಕ ಪ್ರಜಾಪ್ರಭುತ್ವದ ಕಲ್ಪನೆಯಲ್ಲಿ ಜಾತಿಪದ್ಧತಿಯಿಂದ ಮುಕ್ತವಾದ ನವಭಾರತದ ನಿರ್ಮಾಣದ ಕನಸನ್ನು ಕಂಡಿದ್ದರು.

ಸ್ವಾಮಿ ವಿವೇಕಾನಂದರು ಓರ್ವ ಅದ್ವಿತೀಯ ದೇಶಭಕ್ತ. ಸುಧಾರಕ ಹಾಗೂ ಸಂಘಟಕರು ಮಾತ್ರವಲ್ಲ ರಾಷ್ಟ್ರೀಯ ಪುನರುತ್ಥಾನದ ಶಕ್ತಿಗಳನ್ನು ಹೊಡೆದೆಬ್ಬಿಸಿ ಆಂಗ್ಲ ಆಡಳಿತದ ಹೊಡೆತಕ್ಕೆ ತತ್ತರಿಸಿ ದಾಸ್ಯದಲ್ಲಿ ಮುಳಿಗಿದ್ದ ನಮ್ಮ ನಾಡಿನ ರಾಷ್ಟ್ರೀಯ ಪುನರುತ್ಥಾನಕ್ಕೆ ಹಾದಿ ಸುಗಮಗೊಳಿಸಿದ ಅಗ್ರಗಣ್ಯರೂ ಅಹುದು. ಭಾರತದಲ್ಲಿಯ ಚದುರಿಹೋದ ಆಧ್ಯಾತ್ಮಿಕ ಶಕ್ತಿಗಳನ್ನು ಒಗ್ಗೂಡಿಸಿದಾಗಲೇ ನಮ್ಮ ರಾಷ್ಟ್ರೀಯ ಏಕತೆಯು ಸಾಧ್ಯವಾದೀತು ಎನ್ನುತ್ತಿದ್ದರು ಸ್ವಾಮೀಜಿ. ಸಮಾನ ಆಧ್ಯಾತ್ಮಿಕ ಶ್ರುತಿಗೆ ಮಿಡಿಯುವ ಹೃದಯಗಳ ಸಮ್ಮಿಲನವೇ ಭಾರತದಲ್ಲಿನ ರಾಷ್ಟ್ರ ಎನಿಸಿತು ಎಂದು ಅವರು ದೃಢವಾಗಿ ನಂಬಿದ್ದರು. ಅವರ ಈ ಸರ್ವಶಕ್ತಿಗಳ ಸಂಚಯವು ತುರ್ತಾಗಿ ಆಗಬೇಕಾಗಿರುವ ಇಂದಿನ ಸಂದರ್ಭದಲ್ಲಿ ನಾವು ಆಳವಾಗಿ ಮನಗಾಣಬೇಕಾಗಿದೆ.

ಸ್ವಾಮಿ ವಿವೇಕಾನಂದರು ರಾಜಕಾರಣಿಯಲ್ಲ, ರಾಜಕೀಯ ಚಿಂತಕರು ಎಂದು ಸಾಮಾನ್ಯವಾಗಿ ಯಾರನ್ನು ತಿಳಿಯುತ್ತಾರೋ ಅಂತಹ ರಾಜಕೀಯ ಚಿಂತಕರೂ ಅಲ್ಲ. ಅವರು ಆಧ್ಯಾತ್ಮವಾದಿ ಅದರೂ ರಾಷ್ಟ್ರೀಯತಾ ವಾದಕ್ಕೂ, ರಾಷ್ಟ್ರೀಯ ಪ್ರಜ್ಞೆಯ ಬೆಳವಣಿಗೆಗೂ, ಸಾಮಾಜಿಕ ಪ್ರಜ್ಞೆಯ ಜಾಗೃತಿಗೂ ಸ್ಫೂರ್ತಿಯನ್ನೂ ಚಾಲನೆಯನ್ನೂ ಕೊಟ್ಟವರಲ್ಲಿ ವಿವೇಕಾನಂದರಿಗೆ ಮೊದಲ ಸ್ಥಾನವಿದೆ. ಅವರ ಸಮಕಾಲೀನ ರಾಷ್ಟ್ರಚಿಂತಕರಲ್ಲಿ ರಾಜಕೀಯದಿಂದ ನಿರ್ಲಿಪ್ತರಾಗಿದ್ದವರೆಂದರೆ ಸ್ವಾಮಿ ವಿವೇಕಾನಂದರು ಒಬ್ಬರೇ.

ರಾಜಕೀಯ ಸ್ವಾತಂತ್ರ್ಯ

ಪಾಶ್ಚಾತ್ಯ ದೇಶಗಳಲ್ಲಿ ದಿಗ್ವಿಜಯವನ್ನು ಮಾಡಿ, ಭಾರತಕ್ಕೆ ಮರಳಿ ಬಂದಾಗ ಮದ್ರಾಸಿನಲ್ಲಿ ಕೆಲವು ಕಾಲೇಜು ವಿದ್ಯಾರ್ಥಿಗಳು ಅವರನ್ನು ಕಾಣಲು ಬಂದಾಗ ಅದು ಗುಲಾಮಗಿರಿಯ ದಿನಗಳಾದ್ದರಿಂದ ಸ್ವರಾಜ್ಯಪ್ರಾಪ್ತಿಯ ಹೋರಾಟದ ಬಗ್ಗೆ ಮಾತು ನಡೆದಿತ್ತು. ಆಗ ಓರ್ವ ವಿದ್ಯಾರ್ಥಿ ನೇರವಾಗಿ ಈ ರೀತಿ ಸ್ವಾಮಿ ವಿವೇಕಾನಂದರನ್ನು ಪ್ರಶ್ನಿಸಿದ. "ಸ್ವಾಮೀಜಿ ನೀವಂತೂ ಕಷಾಯ ವಸ್ತ್ರಧಾರಿಗಳು. ಪ್ರಾಯಶಃ ಯಾವುದೇ ವಿಧದ ಹೋರಾಟದಲ್ಲಿ ನೇರವಾಗಿ ಪಾಲುಗೊಳ್ಳಲು ನಿಮಗೆ ಸಾಧ್ಯವಾಗಲಾರದು. ಆದರೂ ಸ್ವರಾಜ್ಯದ ಹೋರಾಟವನ್ನು ಬೆಂಬಲಿಸಿ ನೀವೊಂದು ಹೇಳಿಕೆಯನ್ನೇಕೆ ನೀಡಬಾರದು?" ಈ ಪ್ರಶ್ನೆ ಕೇಳಿ ಸ್ವಾಮೀಜಿ ಈ ರೀತಿ ಗುಡುಗಿದರು. "ನಿಮಗೆ ಯೋಗ್ಯತೆ ಇದ್ದದ್ದೇ ಆದರೆ ಸ್ವರಾಜ್ಯವನ್ನು ನಾಳೆಯೇ ನಿಮಗೆ ತಂದುಕೊಡಬಲ್ಲೆ. ಆದರೆ ಅದನ್ನು ಜೀರ್ಣಿಸಬಲ್ಲಂತಹ ಜನರೆಲ್ಲಿದ್ದಾರೆ?" ಸ್ವರಾಜ್ಯ ಎಂದರೆ ಹೊಣೆಗಾರಿಕೆ ಎಂಬುದು ಗಳಿಸಿದುದನ್ನು ಅನುಭವಿಸಲು ಸಹ ಪೂರ್ವಭಾವಿಯಾಗಿ ಅನಿವಾರ್ಯವಾಗಿ ಇರಲೇಬೇಕಾದ ಯೋಗ್ಯತೆ ನಮ್ಮ ಸಮಾಜದಲ್ಲಿ ಇಲ್ಲವಲ್ಲ ಎನ್ನುವುದೇ ಸ್ವಾಮೀಜಿಯವರಿಗಿದ್ದ ಚಿಂತೆ.

ಒಬ್ಬ ಸಾಮಾನ್ಯ ವ್ಯಕ್ತಿಗೆ ರಾಜಕೀಯ ದಾಸ್ಯವು ಅಸಾಧಾರಣ ಎಂದು ತೋರದಿರಬಹುದು. ಅವನ ನಿತ್ಯ ಜೀವನದ ಕಿರುದಿಗಂತದ ಪರಿಮಿತಿಯಲ್ಲಿ ಅವನ ನಿತ್ಯದ ಕಾರ್ಯಕ್ರಮದ ಚೌಕಟ್ಟಿಗೇನೂ ಭಂಗ ಬಾರದಿದ್ದರೆ. ಆದರೆ ಅದೇ ವ್ಯಕ್ತಿಗೆ ರಾಜಕೀಯ ಪ್ರಜ್ಞೆ ಉಂಟಾಗಿ ಅವನ ಸ್ವಾತಂತ್ರ್ಯ ಮತ್ತು ಆತ್ಮಗೌರವಗಳ ಮೌಲ್ಯದ ಪರಿಜ್ಞಾನಕ್ಕೆ ಆ ದಾಸ್ಯದಿಂದ ಆಘಾತವೊದಗಿದಾಗ ಅವನಿಗದು ವಿಷಪ್ರಾಯವಾಗುತ್ತದೆ. ಈ ಮೌಲ್ಯಗಳ ಪ್ರಜ್ಞೆ ಉದಯವಾದೊಡನೆಯೇ ಅವನಿಗೆ ರಾಜಕೀಯ ವ್ಯಕ್ತಿತ್ವ ದೊರಕುತ್ತದೆ. ಕೇವಲ ಲೌಕಿಕವು ಭೌತಿಕವೂ ಆದ ಭದ್ರತೆಗಿಂತ ಸ್ವಾತಂತ್ರ್ಯಕ್ಕೆ ಹೆಚ್ಚು ಬೆಲೆಕಟ್ಟುವಂತಹ ಒಬ್ಬ ವ್ಯಕ್ತಿ ಅವನಾಗುತ್ತಾನೆ ಎಂದು ಸ್ವಾಮಿ ರಂಗನಾಥಾನಂದರು ಹೇಳುತ್ತಾರೆ. ಅಂದರೆ ರಾಜಕೀಯ ಸ್ವಾತಂತ್ರ್ಯವನ್ನು ಅನುಭವಿಸುವ ಮಟ್ಟಕ್ಕೆ ವ್ಯಕ್ತಿಯು ಬೆಳೆಯಬೇಕು. ಆಗ ಸ್ವಾತಂತ್ರ್ಯಕ್ಕೆ ಬೆಲೆ ಬರುತ್ತದೆ. ಇಲ್ಲದಿದ್ದರೆ ಸ್ವಾತಂತ್ರ್ಯವು ಅರಾಜಕತೆಗೆ ಕಾರಣವಾಗುತ್ತದೆ.

ರಾಷ್ಟ್ರೀಯತೆ

"ಭಾರತದ ದುಃಸ್ಥಿತಿಗೆ ಕಾರಣ ಬಡಜನರ ಪರಿಸ್ಥಿತಿಯೇ. ವಿದೇಶಿ ಆಕ್ರಮಣಕಾರರು, ಧರ್ಮದ ಗುತ್ತಿಗೆ ಹಿಡಿದವರು ಶತಮಾನಗಳ ಕಾಲ ಈ ಜನಸಮೂಹವನ್ನು ತುಳಿಯುತ್ತ ಹೋದರು. ಕಟ್ಟಕಡೆಗೆ ಈ ಭಾರತದ ಬಡಜನರು ತಾವು ಮನುಷ್ಯರೆಂಬುದನ್ನೇ ಮರೆತರು" ಇವು ಸ್ವಾಮಿ ವಿವೇಕಾನಂದರ ನುಡಿ.

ಸ್ವಾಮಿ ವಿವೇಕಾನಂದರನ್ನು ಬಿಟ್ಟು ಭಾರತದ ಬಡಜನರ ಪರವಾಗಿ ಅಷ್ಟೊಂದು ತೀವ್ರ ಮರುಕದಿಂದ ತಡೆಯಲಾರದ ನೋವಿನಿಂದ ಮಾತಾಡಿ, ಅವರ ಪರವಾಗಿ ವಾದಿಸಿದ ಮತ್ತೊಬ್ಬ ಆಧ್ಯಾತ್ಮಿಕ ವೀರರನ್ನು ದೇಶ ಕಂಡರಿಯದು. ಇಡೀ ರಾಷ್ಟ್ರ ಒಂದು ಮತ್ತು ಪ್ರತಿಯೊಬ್ಬ ಭಾರತೀಯನೂ ಅಭ್ಯುದಯವನ್ನು ಕಾಣುವಂತಾಗಬೇಕೆಂಬ ಹಂಬಲವೇ ರಾಷ್ಟ್ರೀಯ ಪ್ರಜ್ಞೆಯ ಮೂಲ. ಈ ಭಾವದ ಬೀಜಾರೋಪಣೆಯನ್ನು ತಮ್ಮ ಬದುಕು ಹಾಗೂ ಕಾರ್ಯದ ಮೂಲಕ ಮಾಡಿದ ಸ್ವಾಮೀಜಿ ರಾಷ್ಟ್ರೀಯತೆಯ ಜ್ವಲಂತ ಪ್ರತೀಕವಾದರು. ತುಳಿತಕ್ಕೆ ಒಳಗಾದ ಲಕ್ಷಗಟ್ಟಲೆ ಬಡಜನರ ಹೃದಯದ ರಕ್ತದಿಂದ ಅವರ ಶ್ರಮದ ಫಲದಿಂದ ವಿದ್ಯಾಭ್ಯಾಸ ಪಡೆದು ಸುಖಸೌಕರ್ಯಗಳಲ್ಲಿ ತೇಲಾಡುವವರು ಈ ಜನರ ಒಳಿತನ್ನು ಕುರಿತು ಸ್ವಲ್ಪವಾದರೂ ಯೋಚಿಸದಿದ್ದರೆ ಅಂಥವರನ್ನು ದೇಶದ್ರೋಹಿ ಅಥವಾ ವಂಚಕರೆನ್ನುತ್ತೇನೆ ಎಂದರು ಸ್ವಾಮೀಜಿಯವರು.

ಮತ್ತೊಬ್ಬನಿಗೆ ಯಾವುದು ಒಳ್ಳೆಯದೊ ಅದನ್ನು – ನಾನು ಮಾಡುವುದರಿಂದ ಮಾತ್ರ ನನ್ನ ಒಳ್ಳೆಯದನ್ನು ಸಾಧಿಸಬಹುದು. ಬೇರೆ ಮಾರ್ಗವೇ ಇಲ್ಲ.

ಸ್ವಾಮಿ ವಿವೇಕಾನಂದ.

ಸ್ವಾಮೀಜಿಯವರ ಹೃದಯಾಂತರಾಳದಿಂದ ಹೊರಟ ಆ ದಿವ್ಯಾನುಕಂಪದ ಸ್ಪಂದನ ಅಜ್ಞಾತವಾಗಿ ಅಸಂಖ್ಯ ಸಹೃದಯರ, ಮುಖಂಡರ ಹೃದಯಲ್ಲಿ ಪ್ರತಿಧ್ವನಿಸಿ ಈ ನೂರು ವರ್ಷಗಳಲ್ಲಿ ಸರಕಾರ ಮತ್ತು ಖಾಸಗಿ ಸಂಸ್ಥೆಗಳ ಮೂಲಕ ದೀನದಲಿತರ ಅಭ್ಯುದಯಕ್ಕಾಗಿ ಅಸಂಖ್ಯ ಕಾರ್ಯಕ್ರಮಗಳನ್ನು ಕೈಗೊಂಡಿರುವುದನ್ನು ಕಾಣುತ್ತೇವೆ. ಮಾತ್ರವಲ್ಲ, ದೀನದಲಿತರು ಆತ್ಮವಿಶ್ವಾಸ ಹಾಗೂ ಗೆಲುವಿನಿಂದ ಮೆಲ್ಲನೆ ಉನ್ನತಿಯ ಪಥದಲ್ಲಿ ಮುನ್ನಡೆಯುತ್ತಿದ್ದಾರೆ ಎಂಬುದೂ ಈಗ ಗಮನಿಸಬೇಕಾದ ಸಂಗತಿ.

ಸ್ವಾಮಿ ವಿವೇಕಾನಂದರು ಭಾರತದಲ್ಲಿ ಯಾವ ಪಕ್ಷವು ಸಾಧಿಸದೇ ಇದ್ದಷ್ಟು ರಾಷ್ಟ್ರಭಕ್ತಿಯ ಜಾಗೃತಿಯನ್ನು ಸಾಧಿಸಿದ್ದಾರೆ. ಅವರ ಬದುಕು, ಬರಹ ಮತ್ತು ಭಾಷಣಗಳು ಅಂದಿನಿಂದ ಇಂದಿನವರೆಗೂ ಯುವಜನರ ಮೇಲೆ ವರ್ಚಸ್ಸನ್ನು ಬೀರುತ್ತಲೇ ಬಂದಿವೆ. ರಾಷ್ಟ್ರೀಯತಾವಾದವು ರಾಜಕೀಯ ಶಕ್ತಿ ಮಾತ್ರವಾಗಿರದೆ ಆಧ್ಯಾತ್ಮಿಕ ಶಕ್ತಿಯೂ ಆಗಿದೆ ಎಂಬುದನ್ನು ತೋರಿಸಿದವರಲ್ಲಿ ವಿವೇಕಾನಂದರು ಪ್ರಮುಖರು. ಅವರು ಸಾಂಸ್ಕೃತಿಕ ಆಂದೋಲನದ ಚಳುವಳಿಯ ಪ್ರವರ್ತಕರು. ಜನತೆಯ ಸಂಸ್ಕೃತಿ ಅವರ ರಾಜಕೀಯವನ್ನು ರೂಪಿಸುತ್ತವೆ, ಸಾಂಸ್ಕೃತಿಕ ಮತ್ತು ರಾಜಕೀಯ ಪುನರುಜ್ಜೀವನಗಳ ಸಮ್ಮಿಲನದಿಂದ ಸಂಪೂರ್ಣ ಪುನರುಜ್ಜೀವನ ಸಾಧ್ಯ ಎಂದು ಅವರು ನಂಬಿದ್ದರು.

ಪ್ರಜಾತಂತ್ರ

"ದೇಶ ವಿದೇಶಗಳಲ್ಲಿನ ನನ್ನ ಸಂಚಾರದ ನಂತರ ಸಂಘಟನೆ ಇಲ್ಲದೆ ಯಾವುದೇ ಹಿರಿದಾದ ಶಾಶ್ವತ ಕಾರ್ಯವನ್ನೂ ಮಾಡಲಾಗುವುದಿಲ್ಲ ಎಂಬ ನಿಷ್ಕರ್ಷೆಗೆ ನಾನು ಬಂದಿದ್ದೇನೆ. ಆದರೆ ಭಾರತದಂಥ ದೇಶದಲ್ಲಿ ಇಂದಿನ ನಮ್ಮ ಪರಿಸ್ಥಿತಿಯಲ್ಲಿ ಲೋಕತಂತ್ರದ ಆಧಾರದ ಮೇಲೆ ಸಂಘಟನೆಯನ್ನು ಕಟ್ಟುವುದು ಯೋಗ್ಯವಾಗಲಾರದು. ಪ್ರಜಾತಂತ್ರ ಎಂದೊಡನೆ ಪ್ರತಿಯೊಬ್ಬ ಸದಸ್ಯನಿಗೂ ಸಮಾನ ಹಕ್ಕು ಬರುತ್ತದೆ ಮತ್ತು ಸಮೂಹದ ಬಹುಮತದಂತೆ ನಿರ್ಣಯ ಕೈಗೊಳ್ಳಬೇಕಾಗುತ್ತದೆ. ಪಶ್ಚಿಮದಲ್ಲಾದರೆ ಇದು ನಡೆದೀತು. ಅಲ್ಲಿ ಪರಿಸ್ಥಿತಿ ಭಿನ್ನವಾಗಿದೆ. ನಮ್ಮಲ್ಲೂ ಸಹ ವಿದ್ಯಾಪ್ರಸಾರ ನಡೆದು ಸಮಾಜದ ಒಟ್ಟು ಹಿತಕ್ಕಾಗಿ ನಮ್ಮ

ವ್ಯಕ್ತಿಗತ ಹಿತಾಸಕ್ತಿಗಳನ್ನು ಬಿಟ್ಟು ಮೇಲೇಳುವ ಸ್ವಾರ್ಥತ್ಯಾಗದ ಪಾಠವನ್ನು ನಾನು ಕಲಿತನಂತರವೇ ಪ್ರಜಾತಂತ್ರದ ತಳಹದಿಯ ಮೇಲೆ ಕೆಲಸ ಮಾಡಲು ಬಂದೀತು..ಮುಂದೆ ಕಾಲಕ್ರಮದಲ್ಲಿ ಸರ್ವಸದಸ್ಯರ ಮತ ಹಾಗೂ ಸಮ್ಮತಿಯಂತೆ ಕಾರ್ಯ ನಡೆಸಲು ಅಡ್ಡಿ ಇಲ್ಲ". ಸ್ವಾಮಿ ವಿವೇಕಾನಂದರ ಈ ವಿಚಾರಗಳನ್ನು ಗಮನಿಸಿದಾಗ ವಿದ್ಯಾವಂತ ಸುಶಿಕ್ಷಿತ ಮತದಾರರಿಂದ ಮತ್ತು ನಿಸ್ವಾರ್ಥಿ ಪ್ರಜಾ ನಾಯಕರಿಂದ ಪ್ರಜಾತಂತ್ರ ಯಶಸ್ವಿಯಾಗುತ್ತದೆ ಎಂಬ ಸಿದ್ಧಾಂತ ವ್ಯಕ್ತವಾಗುತ್ತವೆ. ಪ್ರಜಾತಂತ್ರಕ್ಕೆ ಉತ್ತಮ ಸಂಘಟನೆ ಅವಶ್ಯ.

ನಾಯಕರ ಬಗ್ಗೆ

ಉತ್ತಮ ನಾಯಕನ ಗುಣಗಳನ್ನು ಸ್ವಾಮಿ ವಿವೇಕಾನಂದರು ಈ ರೀತಿ ಗುರುತಿಸುತ್ತಾರೆ. "ನಾಯಕನ ಶೀಲವು ಪೂರ್ಣಶುದ್ಧವಿದ್ದಾಗಲೇ ಅವನ ಬಗ್ಗೆ ಶ್ರದ್ಧೆ, ವಿಶ್ವಾಸ ಸದಾಕಾಲಕ್ಕೂ ಉಳಿಯುತ್ತದೆ. ನಾಯಕನು ಒಂದು ಆಯುಷ್ಯದಲ್ಲಿ ತಯಾರಾಗುವವನಲ್ಲ. ಅದಕ್ಕಾಗಿ ಅವನು ಹುಟ್ಟಿ ಬರಬೇಕು. ತೀರ ಭಿನ್ನ ಭಿನ್ನ ಪ್ರವೃತ್ತಿಯ ಜನರನ್ನು ಅವರ ಹೃದಯದಲ್ಲಿನ ಸಮಾನ ಭಾವ ಭಾವನೆಗಳ ಸೂತ್ರದಲ್ಲಿ ಪೋಣಿಸಿ ಅವರನ್ನು ಕಾರ್ಯಗೊಳಿಸುವುದರಲ್ಲಿದೆ ನಾಯಕನ ನಿಜವಾದ ಸತ್ವಪರೀಕ್ಷೆ. ಇದು ಸ್ವಾಭಾವಿಕವಾಗಿಯೇ ಆಗಬೇಕಾದಂತಹುದು.

ನಾಯಕನು ದಾಸಸ್ಯ ದಾಸ ಅಂದರೆ ದಾಸರಲ್ಲಿ ದಾಸನಾಗಬೇಕಾಗುತ್ತದೆ. ಎಲ್ಲರಿಗೂ ಸೇವಕನಾಗಬಲ್ಲವನೇ ಎಲ್ಲರಿಗೂ ಸ್ವಾಮಿ ಆಗುವನು. ಅವನಲ್ಲಿ ಅಸೂಯೆ, ಸ್ವಾರ್ಥತೆಯ ಲವಲೇಶವೂ ಇರಬಾರದು. ಆಗಲೇ ನಿಜವಾದ ನಾಯಕನಾಗಬಲ್ಲ. ಇನ್ನೊಂದು ಗುಣವೆಂದರೆ ನಿಷ್ಪಕ್ಷಪಾತ. ಯಾರ ಪ್ರೀತಿಯಲ್ಲಿ ಉಚ್ಚ ನೀಚ ಎಂಬ ಬೇಧಭಾವ ಇರುತ್ತದೆಯೋ ಅವನೆಂದಿಗೂ ನಾಯಕನಾಗಲಾರ".

ಸ್ವಾಮೀಜಿಯವರ ಅಭಿಪ್ರಾಯದ ಪ್ರಕಾರ ನಾಯಕನಾಗಲು ಮೊದಲನೆಯದಾಗಿ ಜನ್ಮಜಾತ ಲೋಕಸಂಗ್ರಹ ಕೌಶಲ್ಯ, ಎರಡನೆಯದಾಗಿ ನಿಸ್ವಾರ್ಥತೆ, ಮೂರನೆಯದಾಗಿ ನಿಷ್ಪಕ್ಷಪಾತ. ಇವು ಅವಶ್ಯವಾಗಿ ಬೇಕು. ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿನಿಧಿಗಳು ಜನ ಸೇವಕರಾಗಬೇಕಾದರೆ ಈ ಗುಣಗಳು ಅವಶ್ಯ. ಆಗ ಅವರು ನಿಜವಾದ ನಾಯಕರು ಎಂದು ಕರೆಯಲು ಯೋಗ್ಯರಾಗುವರು.

ಜಾಗತೀಕರಣ

ಪ್ರಪಂಚದ ಜನಾಂಗಗಳನ್ನು ಬಾಹ್ಯ ಮತ್ತು ಆಂತರಿಕ ಪ್ರವೃತ್ತಿಯುಳ್ಳವರೆಂದು ವಿಂಗಡಿಸಬಹುದು. ಪಾಶ್ಚಾತ್ಯರು ಬಾಹ್ಯ ಪ್ರಕೃತಿಯನ್ನು ನಿಗ್ರಹಿಸಿದರೆ, ಪೌರಾತ್ಯರು ಆಂತರಿಕ ಪ್ರಕೃತಿಯನ್ನು ನಿಗ್ರಹಿಸಿರುವವರು. ಈ ನಿಗ್ರಹದಲ್ಲಿ ಹೋರಾಟವಿದೆ, ಸಾಧನೆ ಇದೆ. ತ್ಯಾಗವಿದೆ. ಪ್ರಪಂಚಕ್ಕೆ ಈಗ ಬೇಕಾಗಿರುವುದು ವಿನಿಮಯ, ಸಂಪರ್ಕ ಮತ್ತು ಸಂಬಂಧ ಈ ಚಿಂತನೆಯನ್ನು ಕುರಿತು ವಿವೇಕಾನಂದರು– ಭಾರತೀಯರು ಯುರೋಪಿಯನ್‌ರಿಂದ ಬಾಹ್ಯಪ್ರಕೃತಿಯನ್ನು ಹೇಗೆ ನಿಗ್ರಹಿಸಬೇಕು ಎಂಬುದನ್ನೂ ಯುರೋಪಿಯನ್ನರು ಭಾರತೀಯರಿಂದ ಆಂತರಿಕ ಪ್ರಕೃತಿಯನ್ನು ಹೇಗೆ ನಿಗ್ರಹಿಸಬೇಕು ಎಂಬುದನ್ನೂ ಅರಿತುಕೊಳ್ಳಬೇಕು, ಆಗ ಹಿಂದುವಾಗಲಿ ಯುರೋಪಿಯನ್‌ರಾಗಲಿ ಇರವುದಿಲ್ಲ. ಆಗ ಬಾಹ್ಯ ಆಂತರಿಕ ಪ್ರಕೃತಿಯನ್ನು ಗೆದ್ದ ಒಂದು ಆದರ್ಶ ಸಂಯುಕ್ತ ಜನಾಂಗ ಒಂದೇ ಇರುವುದು ಎಂದಿದ್ದಾರೆ. ಈ ಒಂದು ಆದರ್ಶ ಸ್ಥಿತಿಯ ಸ್ಥಾಪನೆಯನ್ನು ಅರಿತರೆ ಜಾಗತೀಕರಣದ ಸ್ಥಾಪನೆಯಾದಂತೆ. ಆದರೆ ವ್ಯಾಪಾರೀಕರಣವೇ ಜಾಗತೀಕರಣದ ಅಂತರಂಗವಾಗಿರುವುದು ಮನುಕುಲದ ದುರದೃಷ್ಟವಲ್ಲದೆ ಮತ್ತೇನು? ವಿವೇಕಾನಂದರು ಹೇಳಿದ ಈ ಹಾದಿಯಲ್ಲಿ ಇನ್ನು ಮುಂದಾದರೂ ಸಾಗುವ ಕನಿಷ್ಠ ಪ್ರಯತ್ನವನ್ನು ಸರ್ಕಾರಗಳಾಗಲಿ ಸುಧಾರಕರಾಗಲಿ ಪ್ರಾಮಾಣಿಕವಾಗಿ ಮಾಡುವರೇ? ನಾಶದ ದವಡೆಗೆ ಸಿಕ್ಕಿರುವ ಭಾರತ ತನ್ನಲ್ಲಿ ಬಂಧನಗಳಿಂದ ಬಿಡುಗಡೆ ಹೊಂದಿ ಅದು ವಿಶ್ವದ ಮಾರ್ಗದರ್ಶಿಯಾಗಲು ಯತ್ನಿಸುವುದೇ?

ಸ್ವಾಮಿ ವಿವೇಕಾನಂದರು ಯಾವುದೇ ರಾಜಕೀಯ ಸಂದೇಶವನ್ನು ನೇರವಾಗಿ ನೀಡದಿದ್ದರೂ ಅವರ ವ್ಯಕ್ತಿತ್ವದ,

ಬರವಣಿಗೆಯ ಸಂಪರ್ಕಕ್ಕೆ ಬಂದ ಪ್ರತಿಯೊಬ್ಬರೂ ದೇಶಭಕ್ತಿಯ ಅಂಶಗಳನ್ನೂ, ರಾಜಕೀಯ ಪ್ರಜ್ಞೆಯನ್ನೂ ಬೆಳೆಸಿಕೊಂಡರು. ಕಡೆಯ ಪಕ್ಷ ಬಂಗಾಳಕ್ಕೆ ಸಂಬಂಧಿಸಿದಂತೆ ಆಧುನಿಕ ರಾಷ್ಟ್ರೀಯ ಚಳುವಳಿಯ ಆಧ್ಯಾತ್ಮಿಕಪಿತನೆಂದು ವಿವೇಕಾನಂದರನ್ನು ಪರಿಗಣಿಸಬಹುದು ಎಂದು ಹೇಳಿದ್ದಾರೆ ನೇತಾಜಿ ಸುಭಾಷ್‌ಚಂದ್ರ ಬೋಸರು. ಇಂದಿನ ಸ್ವಾತಂತ್ರ್ಯ ಚಳುವಳಿಯ ಮೂಲ ಸ್ವಾಮೀಜಿಯ ಸಂದೇಶಕ್ಕೆ ಋಣಿಯಾಗಿದೆ. ಭಾರತ ಸ್ವತಂತ್ರವಾಗಬೇಕಾದರೆ ಅದು ವಿಶೇಷವಾಗಿ ಹಿಂದೂಧರ್ಮದ ಅಥವಾ ಇಸ್ಲಾಂಧರ್ಮದ ನಾಡಾಗುವುದು ಸಾಧ್ಯವಿಲ್ಲ. ಅದು ರಾಷ್ಟ್ರೀಯತೆಯ ಆದರ್ಶದಿಂದ ಸ್ಫೂರ್ತಿಗೊಂಡು ವಿಭಿನ್ನ ಧಾರ್ಮಿಕ ಸಮಾಜಗಳ ಒಂದು ಏಕೀಕೃತ ನಾಡಾಗಬೇಕು. ಅದಕ್ಕಾಗಿ ಭಾರತೀಯ ಧರ್ಮಗಳ ಸಾಮರಸ್ಯದ ಸಂದೇಶವನ್ನು ತುಂಬು ಹೃದಯದಿಂದ ಒಪ್ಪಿಕೊಳ್ಳಬೇಕು. ಅದು ರಾಮಕೃಷ್ಣ–ವಿವೇಕಾನಂದರ ಸಂದೇಶ. ಸ್ವಾತಂತ್ರ್ಯವೇ ಆತ್ಮದ ಹಾಡು ಇದು ಸ್ವಾಮೀಜಿಯ ಹೃದಯಾಂತರಾಳದಿಂದ ಹೊಮ್ಮಿ ಇಡೀ ದೇಶವನ್ನು ಸೆರೆಹಿಡಿದು ಬಹುಮಟ್ಟಿಗೆ ಮರುಳು ಮಾಡಿದ ಸಂದೇಶ ಸ್ವಾಮಿ ವಿವೇಕಾನಂದರು ಒಂದು ಕಡೆ ಮಾನವನಿಗೆ ಎಲ್ಲ ಸಂಕೋಲೆಗಳನ್ನು ಕಳಚಿಕೊಂಡು ನಿಜವಾದ ಮಾನವನ್ನಾಗಿರಲು ಕರೆಕೊಟ್ಟರು ಮತ್ತು ಇನ್ನೊಂದು ಕಡೆ ಧರ್ಮಸಾಮರಸ್ಯದ ಸಂದೇಶವನ್ನು ಬೋಧಿಸುವುದರ ಮೂಲಕ ಭಾರತದಲ್ಲಿ ನಿಜವಾದ ರಾಷ್ಟ್ರೀಯತೆಯ ತಳಹದಿಯನ್ನು ಹಾಕಿದರು.

ವಿವೇಕಾನಂದರು, ಪದದ ಸಾಮಾನ್ಯ ಅರ್ಥದಲ್ಲಿ ರಾಜಕಾರಣಿಯಾಗಿರಲಿಲ್ಲ. ಆದರೂ ಅವರು ಭಾರತದಲ್ಲಿ ರಾಷ್ಟ್ರೀಯ ಆಂದೋಲನದ ಶ್ರೇಷ್ಠ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದರು. – ಜವಹರಲಾಲ್ ನೆಹರೂ.

ಇತ್ತೀಚೆಗೆ ಇಡೀ ದೇಶದಲ್ಲಿ ಸ್ವಾಮಿ ವಿವೇಕಾನಂದರ ಉಪದೇಶಗಳ ಮೇಲೆ ಎಲ್ಲಿಲ್ಲದ ಆಸಕ್ತಿ ಉಂಟಾಗುತ್ತಿರುವುದು ಸಂತಸದ ವಿಷಯ. ಈ ದೇಶ ಈಗ ಅಪ್ರಾಮಾಣಿಕವಾದ ಸಮಾಜವಾದ ಮತ್ತು ಜಾತ್ಯಾತೀತತೆಯನ್ನು ಆಚರಿಸುತ್ತಿದೆ. ಅದರ ಫಲ ಕೋಮುವಾದಿತನ, ಕೋಮುಗಲಭೆ. ಇಂದಿನ ಡೋಂಗಿ ಜಾತ್ಯಾತೀತವಾದಿಗಳು ಸ್ವಾಮೀಜಿಯವರ ಜೀವನದ ಮೂಲ ಸಂದೇಶವಾದ ರಾಷ್ಟ್ರೀಯತೆಯನ್ನು ಒಪ್ಪಿಕೊಳ್ಳಬೇಕು.

दुर्जनः परिहर्तव्यो विद्ययालङ्कृतोऽपि सन् ।
मणिना भूषितः सर्पः किमसौ न भयङ्करः ॥
-नीतिशतकम्

ದುರ್ಜನಃ ಪರಿಹರ್ತವ್ಯೋ ವಿದ್ಯಯಾಲಂಕೃತೋಽಪಿ ಸನ್ ।
ಮಣಿನಾ ಭೂಷಿತಃ ಸರ್ಪಃ ಕಿಮಸೌ ನ ಭಯಂಕರಃ ॥

ವಿದ್ಯೆಯಿದ್ದರೂ ಕೂಡಾ ದುರ್ಜನನಾದರೆ ಆತನನ್ನು ಬಿಡುವುದೇ ಒಳಿತು.
ಮಣಿಯಿಂದ ಅಲಂಕೃತವಾಗಿದ್ದರೂ ಸರ್ಪ ವಿಷದಿಂದಾಗಿ ಭಯಾನಕವಲ್ಲವೇ?

ಅಪ್ಪ ನನಗೆ ಭರವಸೆಯ ಬೆಳಕು

ಅಶ್ವಿನಿ ಡಿ.,
ದ್ವಿತೀಯ ಎಂ.ಕಾಂ.

ಒಂದು ಚಿಕ್ಕ ಸಸ್ಯ ಹೆಮ್ಮರವಾಗಿ ಬೆಳೆಯಬೇಕಾದರೆ ಅದನ್ನು ಪೋಷಿಸುವ ಕೈಗಳೇ ಅದಕ್ಕೆ ಕಾರಣವಂತೆ. ಅದೇ ರೀತಿ ಬದುಕಿನ ಸಾಧನೆಗಳ ಮುಖ್ಯ ಶಕ್ತಿ. ನನ್ನ ಅವ್ವ–ಅಮ್ಮ. ನನ್ನ ಬದುಕಿನ ಕಣ್ಣುಗಳು.

ಅವರ ಪ್ರೀತಿ ನಿಷ್ಕಲ್ಮಷವಾದದ್ದು. ಬೇರೆ ಯಾರಿಂದಲೂ ಸಿಗಲಾರದ್ದು. ತನ್ನ ಹೊರತು ಶ್ರೇಯಾಭಿವೃದ್ಧಿಗೆ ಜೀವನವನ್ನು ಮುಡಿಪಾಗಿಟ್ಟ ವ್ಯಕ್ತಿ ಅವ್ವ. ಬಹುಷಃ ಪದಗಳಲ್ಲಿ ಅಪ್ಪ ಅಮ್ಮನ ಸಂಬಂಧಗಳನ್ನು ಪ್ರೀತಿಯನ್ನು ವಿವರಿಸಲಾಗದು.

ನನ್ನೂರು ಚಿಕ್ಕಮಗಳೂರು ಸದಾ ಹಸಿರಿನಿಂದ ತುಂಬಿರುವ ಮಲೆನಾಡು, ಕಲೆ–ಸಂಸ್ಕೃತಿಗಳ ಬೀಡು, ಈ ಚಿಕ್ಕಮಗಳೂರು ತಾಲ್ಲೂಕಿಗೆ ಸೇರಿಕೊಂಡಿರುವ ಒಂದು ಸುಂದರ ಗ್ರಾಮವೆ ಬಾಳೆಕೊಪ್ಪ. ಅದುವೆ ನಾನಿರುವ ಊರು.

ನಮ್ಮ ಮನೆಯಿಂದ ಶಾಲಾ–ಕಾಲೇಜಿಗೆ ಹೋಗಬೇಕೆಂದರೆ ಸುಮಾರು 3 ಕಿ.ಮೀ. ಗದ್ದೆತೋಟಗಳನ್ನು ದಾಟಿ ನಡೆದುಕೊಂಡು ಬಸ್ಟ್ಯಾಂಡ್‌ಗೆ ಬರಬೇಕು. ಇರುವುದೊಂದೆ ಸಾರಿಗೆ ಬಸ್ ಅದು ಮಿಸ್ ಆದರೆ ಮತ್ತೆ ಬಸ್ ಇಲ್ಲ.

ನನ್ನಪ್ಪ ಕೂಲಿಕೆಲಸ ಮಾಡುತ್ತಾರೆ. ಅಮ್ಮ ಕೂಡ ಕಾಫಿತೋಟದ ಕೆಲಸಕ್ಕೆ ಹೋಗುತ್ತಾರೆ. ಅವರಿಬ್ಬರ ಮುದ್ದಿನ ಒಬ್ಬಳೇ ಮಗಳು ನಾನು.

ನನ್ನ ವಿದ್ಯಾಭ್ಯಾಸಕ್ಕೆ ಯಾವ ತೊಂದರೆಯೂ ಆಗಬಾರದೆಂದು ಐದನೇ ತರಗತಿಯಲ್ಲೆ ನನ್ನನ್ನು ಹಾಸ್ಟೆಲ್‌ಗೆ ಸೇರಿಸಿದರು. ಪ್ರೌಢಶಿಕ್ಷಣ ಪದವಿಪೂರ್ವ ಮತ್ತು ಪದವಿ ಶಿಕ್ಷಣವನ್ನು ಹಾಸ್ಟೆಲಿನಲ್ಲಿದ್ದುಕೊಂಡು ಮುಗಿಸಿ, ನನ್ನ ಸ್ನಾತಕೋತ್ತರ ಪದವಿ ಶಿಕ್ಷಣವನ್ನು ಸಹ ಹಾಸ್ಟೆಲ್‌ನಲ್ಲಿದ್ದುಕೊಂಡೆ ಮುಂದುವರಿಸುತ್ತಿದ್ದೇನೆ.

ಅಪ್ಪ ಅಮ್ಮ ಇಬ್ಬರು ಸಹ ನಾನು ಹಾಸ್ಟೆಲ್‌ನಲ್ಲಿದ್ದ ಪ್ರತಿಕ್ಷಣವು ಕೂಡ ನನ್ನ ಬಗ್ಗೆಯ ಚಿಂತಿಸುತ್ತಿದ್ದರು. ಒಂದು ದಿನವೂ ನನ್ನೊಂದಿಗೆ ಮಾತನಾಡದೆ ಇದ್ದವರಲ್ಲ. ಭಾನುವಾರಕ್ಕಾಗಿಯೆ ಕಾದು ಹಾಸ್ಟೆಲ್‌ಗೆ ಬಂದು ಮಾತನಾಡಿಸಿ ತಿಂಡಿ ದುಡ್ಡು ಎಲ್ಲಾ ಕೊಟ್ಟು ಮುದ್ದಾಡಿ ಹೋಗುತ್ತಿದ್ದರು. ಆಹಾ ಆ ಕ್ಷಣ ಅಚ್ಚುಮೆಚ್ಚು...

ಅವರು ನನ್ನನ್ನು ಹಾಸ್ಟೆಲ್‌ಗೆ ಸೇರಿಸಲು ಕಾರಣ ಇಷ್ಟೆ. ನನ್ನ ಮುಂದಿನ ವಿದ್ಯಾಭ್ಯಾಸದ ಬಗ್ಗೆ ಅವರ ಚಿಂತೆ. ಹಾಗೂ ನನ್ನೆಲ್ಲಾ ಕನಸುಗಳನ್ನು ನನಸಾಗಿಸುವ ದೃಢ ನಿರ್ಧಾರ. ಬದುಕು ಒಂದು ರೂಪಾಯಿಯ ಮೌಲ್ಯವನ್ನು ಕಲಿಸಿಕೊಟ್ಟಿತ್ತು. ಹಾಸ್ಟೆಲ್ ಎಂಬುವುದು ನನಗೆ ಸಮಯದ ಸದುಪಯೋಗವನ್ನು ಹಾಗೂ ಜೀವನದ ಮಹತ್ವವನ್ನು ತಿಳಿಸಿಕೊಟ್ಟಿತ್ತು.

ಅಪ್ಪ, ಅದೊಂದು ಸುಂದರ ಜಗತ್ತು...ವಿವರಿಸಿದರೂ ಮುಗಿಯದ ಸುಂದರ ಪದ. ಜೀವನದ ಬವಣೆಗಳ ನಿಜವಾದ ಮಾಲಿಕೆ ಮಕ್ಕಳ ಕನಸ್ಸು ಮನಸ್ಸುಗಳ ಮದ್ಯವರ್ತಿ. ಭಾವನೆಗಳ ಲೋಕದ ರಾಜನಾತ. ಸುಂದರ ಬದುಕಿನ ಶಿಲ್ಪಿ. ಅಪ್ಪ ಕೇವಲ ಎರಡಕ್ಷರದ ಪದ ಆದರೆ ಸಾವಿರ ಸಾವಿರ ಭಾವನೆಯನ್ನೊಳಗೊಂಡ ಪುಟ್ಟ ಮನಸ್ಸಿನ ವಿಶಾಲ ಪ್ರಪಂಚ.

ಆತನದ್ದೋ ಸುಂದರ ಜಗತ್ತು. ಅಲ್ಲಿ ಪ್ರೀತಿ ವಾತ್ಸಲ್ಯ ತ್ಯಾಗಗಳು ಅವನ ಆಸ್ತಿಗಳು ಈ ದೊಡ್ಡ ಜಗದಲ್ಲಿ ಪುಟ್ಟ ಮನೆಯ ಮಾಡಿ ಮನಗಳ ಭಾವಕೊಂಡಿಯಲ್ಲಿ ಬಂಧಿಸಿದ ಭಾವ ಜೀವಿ. ಆತನ ಕಷ್ಟ ನೂರಿರಬಹುದು. ಆದರೆ ಚಿಕ್ಕ ಖುಷಿಯನ್ನು ಸಾವಿರ ಪರಿಯಾಗಿ ಹೇಳುವ ಸೋಜಿಗಾರ, ತನ್ನ ಚಿಕ್ಕ ಕಣ್ಣಿನಿಂದ ದೊಡ್ಡ ಪ್ರಪಂಚವನ್ನು ಸೃಷ್ಟಿಸಿ ಅಡಿಸುವ ಅವನ ಕೈಗಳಿಗೆ ನೂರು ನಮಸ್ಕಾರ.

ಪ್ರತಿಹೆಣ್ಣಿನ ಮೊದಲ ಪ್ರೇರಣಾ ಶಕ್ತಿ. ಆಕೆ ಆರಾಧಿಸುವ ಮೊದಲ ದೇವರು... ಎಲ್ಲಾ ನೋವನ್ನು ತನ್ನಲ್ಲೆ ಇಟ್ಟು, ನಗು ಮೊಗವ ಹೊತ್ತು ಮನೆಯ ಜವಾಬ್ದಾರಿಗಳ ಸಾಗಿಸುವ ಆತ ನಿಜಕ್ಕೂ ದೇವನೇ ಸರಿ.

ಬಿದ್ದಾಗ ಅತ್ತಾಗ ಖುಷಿಯಾದಾಗ ಅಪ್ಪಾ ಎನ್ನುವ ಮಗಳ ಸ್ಫೂರ್ತಿಯ ಚಿಲುಮೆ ಶಕ್ತಿಯ ರೂಪ. ಜೀವನದ ಮಾರ್ಗದರ್ಶಕ, ಹಾಗೆ ಬದುಕಿನ ದಾರಿಯನ್ನು ತೋರಿಸುವ ಒಂದೊಳ್ಳೆ ಸ್ನೇಹಿತ ಅಪ್ಪಾನೆ, ಮಗಳ ಬಾಳ ನೌಕೆಯ ಸಾರಥಿಯು ಆತನೇ.

ಅಮ್ಮ ಬೈದರೆ ಕೇರೆ ಮಾಡದ ಮಗಳು. ಅದೇ ಅಪ್ಪ ಬೈದಾಗ ಕಣ್ಣೀರ ಧಾರೆಯನ್ನೇ ಸುರಿಸುತ್ತಾರೆ. ಅಪ್ಪ ಮಗಳ ಪ್ರೀತಿ ವಾತ್ಸಲ್ಯವನ್ನು ಪದಗಳಲ್ಲಿ ಬಣ್ಣಿಸಲು ಆಗದು...

ಬದುಕು ನೂರು ತಿರುವುಗಳ ಕವಲು ದಾರಿ... ಈ ಭಾವ ಜೀವಿಗೆ ನೋವಿರದಿರು...ಮನೆಯ ಮಂದಿಯ ನಗುವ ತವಕ ಹೊತ್ತ ಅಪ್ಪನಿಗೆ ಮುಖದ ತುಂಬ ನಗುವಿರಲಿ ಗೆಲುವಿರಲಿ...

ಅಪ್ಪ–ಅಮ್ಮನ ಪ್ರತಿಕ್ಷಣದ ಖುಷಿಗೂ ಕಾರಣ ನಾನಾಗುವಾಸೆ. ಕಲಿಕೆಗೆ ಎಂದು ಕೊನೆಯಿಲ್ಲ. ಬದುಕಿನ ಕೊನೆ ಕ್ಷಣದವರೆಗೂ ಹೊಸ ವಿಚಾರಗಳನ್ನು ಕಲಿಯುತ್ತೇವೆ ಎಂಬುವುದು ನಿಜ.

ಅಪ್ಪನಿರುವಾಗ ಜೊತೆಯಲ್ಲಿ...
ಉಳಿದವರೆಲ್ಲಾ ದೂರದಲ್ಲಿ...!
ಅಪ್ಪನಿರುವ ಕ್ಷಣಮಾತ್ರದಲಿ...
ನನ್ನೆಲ್ಲಾ ನೋವುಗಳು ಮರೆಯಲಿ...!
ಅಪ್ಪನೆದುರು ಜಗದಲ್ಲಿ ...
ಬೇರಾರಿಲ್ಲ ಮೊದಲಲ್ಲಿ...
ಅಪ್ಪನ ಕಣ್ಣಲ್ಲಿ ನನ್ನೆಲ್ಲಾ ಕನಸುಗಳು ಅರಳಲಿ...
ಕೇಳಿದನ್ನು ಕೊಡಿಸದಿದ್ದಾಗ ಅಮ್ಮ ಕೊಟ್ಟ ಮುತ್ತು
ಅದನ್ನು ಮರೆಸಿ ಸಮಾಧಾನಿಸಿತು...
ಬೇಕೆಂದು ಹಠಮಾಡಿದಾಗ ಅಪ್ಪಕೊಟ್ಟ ಪೆಟ್ಟು
ಆ ವಸ್ತುವಿನ ಬೆಲೆ ತಿಳಿಸಿತು...
ನಂತರ ಕಷ್ಟ ಪಟ್ಟು ಅದನ್ನು ತಂದುಕೊಟ್ಟಾಗ
ಅವರ ಪ್ರೀತಿಯೆ ಸಾಕೆನಿಸಿತು...

ನನ್ನ ವಿದ್ಯಾರ್ಥಿಜೀವನದ ಕೊನೆಯಂಚಿನಲ್ಲಿದ್ದೇನೆ. ಮುಂದಿನ ಭವಿಷ್ಯದ ನಿರ್ಧಾರ ನನ್ನ ಕೈಯಲ್ಲಿದೆ. ಅಪ್ಪ ಅಮ್ಮ ಕಷ್ಟಪಟ್ಟು ಓದಿಸಿದಕ್ಕೆ ಸಾರ್ಥಕತೆಯನ್ನು ಒದಗಿಸುವ ಜವಾಬ್ದಾರಿ ನನ್ನದಾಗಿದೆ ಈಗ. ನನ್ನ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಿಸಿದ ನನ್ನ ಜೀವನ ನಿರೂಪಿಸಿಕೊಟ್ಟಲು ದಾರಿಮಾಡಿಕೊಟ್ಟಿರುವ ನನ್ನ ತಂದೆ, ತಾಯಿಗೆ ಕೋಟಿ ನಮನಗಳು ಹಾಗೂ ನನ್ನ ಚಟುವಟಿಕೆಗಳನ್ನು ಗುರುತಿಸಿ ಪ್ರೋತ್ಸಾಹಿಸಿದ ನನ್ನೆಲ್ಲಾ ಗುರುಗಳಿಗೂ ನನ್ನ ಅನಂತಾನಂತ ಧನ್ಯವಾದಗಳು. ಸುಂದರ ವಿದ್ಯಾರ್ಥಿಜೀವನ, ಮಧುರ ನೆನಪುಗಳೊಂದಿಗೆ ಎಂದಿಗೂ ಅಮರ.

मौनं कालविलम्बश्च प्रयाणं भूमिदर्शनम् ।
भ्रुकुट्यन्यमुखी वार्ता नकारः षड्विधः स्मृतः ॥

ಮೌನಂ ಕಾಲವಿಲಂಬಶ್ಚ ಪ್ರಯಾಣಂ ಭೂಮಿದರ್ಶನಮ್ ।
ಭ್ರುಕುಟ್ಯನ್ಯಮುಖೀ ವಾರ್ತಾ ನಕಾರಃ ಷಡ್ವಿಧಃ ಸ್ಮೃತಃ ॥

ಮೌನ, ವಿಲಂಬಿಸುವುದು, ಹೊರಟುಹೋಗುವುದು,
ಭೂಮಿಯನ್ನೇ ನೋಡುತ್ತಿರುವುದು,
ಹುಬ್ಬನ್ನು ಓರೆಯಾಗಿಸಿಕೊಂಡಿರುವುದು ಮತ್ತು
ಅನ್ಯರೊಂದಿಗೆ ಮಾತಾಡುತ್ತಿರುವುದು ಎಂಬುದಾಗಿ
ನಿಷೇಧದ ಐದು ರೂಪಗಳು.

Silence, delay, walking out,
staring down at the earth,
wrinkling eye brows and conversations with
others these are five forms of prohibition.

ಸಾವಿರ ಶಾಲೆಗಳ ಪಯಣ

ದಿನೇಶ್ ಹೆಬ್ಬಾರ್
ತೃತೀಯ ಬಿ.ಎಸ್ಸಿ.

"ಭೌತ ವಿಜ್ಞಾನದಲ್ಲಿ ಏನುಂಟು ? ಏನಿಲ್ಲ ? ನೀನೊಮ್ಮೆ ಒಳಹೊಕ್ಕು ನೋಡುಬಾರಾ ಯಾವುದೋ ಮೂಲೆಯಲಿ ಕೈಕಟ್ಟಿ ಕುಳಿತರೆ ತಿಳಿಯುವುದೇ ಅದರ ವೈವಿದ್ಯ ವಿಸ್ತಾರ ?"

ಇದು ಡಾ॥ ಎ.ಪಿ. ಭಟ್ ಸರ್ ಯಾವಾಗಲೂ ಹೇಳುವ ಮಾತು. ಎಲ್ಲರೂ ಮೊಬೈಲ್ ನೋಡುತ್ತಾ ತಲೆತಗ್ಗಿಸಿ ಕುಳಿತಿರುವಾಗ, "ತಲೆಯೆತ್ತಿ ಒಮ್ಮೆ ಆಕಾಶವನ್ನು ನೋಡಿ ಗ್ರಹತಾರೆ ನಕ್ಷತ್ರಗಳು ನನ್ನನ್ನು ಒಮ್ಮೆ ನೋಡಿ ಎಂದು ಹೊಳೆಯುತ್ತಿವೆ, ಅವುಗಳ ಅಗಾಧತೆಯನ್ನು ನೋಡಿ ಆಶ್ಚರ್ಯಪಡಿ" ಎನ್ನುತ್ತಾ ಆಕಾಶದ ವೈಭವಗಳನ್ನು ಎಲ್ಲರಿಗೂ ಮನದಟ್ಟು ಮಾಡಿಸಿದವರು. ಖಗೋಳದಲ್ಲಿ ಏನೇ ಒಂದು ಹೊಸಾ ವಿದ್ಯಾಮಾನ ಘಟಿಸಲಿದ್ದರೂ ನಮ್ಮೆಲ್ಲರಿಗೂ ಮೊದಲು ನೆನಪಾಗುವುದು ಎ.ಪಿ. ಭಟ್ ಸರ್. ಸುಮಾರು 30 ವರ್ಷಗಳಿಂದ ರಾಜ್ಯದ ಮೂಲೆ ಮೂಲೆಗೆ ತೆರಳಿ ಆಕಾಶವೀಕ್ಷಣೆ ಕಾರ್ಯಕ್ರಮ ನಡೆಸಿಕೊಡುತ್ತಾ ಬಂದವರು. ಮೊದಲಿಗೆ "ಆರ್ಯಭಟ್ ಆಕಾಶ ವೀಕ್ಷಕರ ಸಂಘ" ವನ್ನು ಕಟ್ಟಿ ನಂತರ ಶ್ರೀ ಶ್ರೀ ವಿಭುದೇಶತೀರ್ಥರ ಸಲಹೆಯಂತೆ "ಪೂರ್ಣಪ್ರಜ್ಞ ಹವ್ಯಾಸಿ ಖಗೋಳ ವೀಕ್ಷಕರ ಸಂಘ (PAAC) ಎಂದು ಮರುನಾಮಕರಣ ಮಾಡಿ ಖಗೋಳ ವಿಸ್ಮಯಗಳನ್ನು ಸಂಭ್ರಮಿಸುತ್ತಾ ಬಂದವರು. ಅವರು ಸುಮಾರು ವರ್ಷಗಳಿಂದ ಕಾದು ಕುಳಿತದ್ದು ಅದೊಂದು ಅಪರೂಪದ ಖಗೋಳ ವಿಸ್ಮಯಕ್ಕಾಗಿ. ಅದೇ "ಕಂಕಣ ಸೂರ್ಯಗ್ರಹಣ" ಅವರ ಮಾತಿನಲ್ಲೇ ಹೇಳುವುದಾದರೇ "ಅಯ್ಯಯ್ಯೋ ಗ್ರಹಣ ಬಂತು ಎನ್ನುವುದಲ್ಲಾ. ಆಹಾ !! ಗ್ರಹಣ ಬಂತು ಎಂದು ಸಂಭ್ರಮಿಸಬೇಕು. ಇದೊಂದು ಪ್ರಕೃತಿಯ ಅದ್ಭುತವಾದ ಆಟ. ಬೇಕು ಎಂದಾಗೆಲ್ಲಾ ಗ್ರಹಣ ಸಿಗುವುದಿಲ್ಲ. ಶತಮಾನಕ್ಕೊಂದು ಸೂರ್ಯಗ್ರಹಣ, ಅದರಲ್ಲೂ ಸೂರ್ಯ ಒಂದು ಬಳೆಯ ಹಾಗೆ ಕಾಣುವುದು ಎಂದರೆ ಅದೊಂದು ಅದ್ಭುತ ದಿನ. ಹಾಗಾಗಿ ಇದನ್ನು ನಾನು ಕಂಕಣ ಸೂರ್ಯಗ್ರಹಣ ಸಂಭ್ರಮ ಎಂದು ಕರೆಯುತ್ತೇನೆ" ಅವರು ಆ ಮಾತು ಹೇಳುವುದಕ್ಕೆ ಬಲವಾದ ಕಾರಣ ಏನೆಂದರೆ, ಒಮ್ಮೆ ಡಿಸೆಂಬರ್–26–2019 ಕ್ಕೆ ಆ ಗ್ರಹಣ ಆದಮೇಲೆ ಮತ್ತು ದಕ್ಷಿಣ ಭಾರತಕ್ಕೆ ಈ ಗ್ರಹಣ ಬರುವುದು 2064 ಕ್ಕೆ. ಹಾಗಾಗಿ ಎಲ್ಲರೂ ಈ ಖಗೋಳ ವಿಸ್ಮಯವನ್ನು ಸುರಕ್ಷಿತವಾಗಿ ನೋಡಿ ಆನಂದಿಸಬೇಕು. ಶಾಲೆಗಳಿಗೆ ರಜೆಕೊಟ್ಟು ಮನೆಯಲ್ಲಿ ಹೋಗಿ ಕುಳಿತುಕೊಳ್ಳುವುದಲ್ಲ. ಎಲ್ಲರೂ ಇದರ ಹಿಂದಿನ ವಿಜ್ಞಾನವನ್ನು ತಿಳಿಯಬೇಕು ಎನ್ನುವುದು ಅವರ ಕನಸು.

"ಇಡೀ ರಾಜ್ಯದ ಮಕ್ಕಳು ಸುರಕ್ಷಿತವಾಗಿ ಗ್ರಹಣವನ್ನು ವೀಕ್ಷಿಸಬೇಕು. ಹಾಗಾಗಿ ಕರ್ನಾಟಕದ ಒಂದು ಸಾವಿರ ಶಾಲೆಗಳಿಗೆ ಈ ಉಪಕರಣವನ್ನು ವಿತರಿಸಬೇಕು. ಒಂದು ಸಾವಿರ ಶಾಲೆಯ ಮಕ್ಕಳಿಗೆ ನಾವು ಗ್ರಹಣ ಜಾಗೃತಿಯನ್ನು ಮೂಡಿಸಬೇಕು" ಎನ್ನುವ ಮಾತಿನೊಂದಿಗೆ ಅವರ ಮುಂದಿನ ಗುರಿಯನ್ನು ಅವರು ತಿಳಿಸಿದ್ದಾಗಿತ್ತು. ಹಾಗಾಗಿ ಒಂದು ಸಾವಿರ ಪಿನ್‌ಹೋಲ್ ಉಪಕರಣ ತಯಾರಿಸುವ ಜವಾಬ್ದಾರಿ ನಮ್ಮ ಮೇಲಿತ್ತು. ಹಾಗಾಗಿ PAAC ನ ಅಂದಿನ ಸ್ಟೂಡೆಂಟ್ ಸೆಕ್ರೆಟರಿ ಆಗಿದ್ದ ನಿತಿನ್, ಅವನೊಟ್ಟಿಗೆ ಸುಹಾಸ್ ರಾವ್ ಮತ್ತು ನಾನು ವೆಂಕಟರಮಣ ಉಪಾಧ್ಯಾಯರ ಹತ್ತಿರ ಹೋಗಿ ಪಿನ್‌ಹೋಲ್ ಉಪಕರಣವನ್ನು ತಯಾರಿಸುವ ವಿಧಾನ ಕಲಿತುಕೊಂಡು ಬಂದೆವು. ಎ.ಪಿ.ಭಟ್ ಸರ್ ಬೇಕಿದ್ದರೆ 1000 ಉಪಕರಣವನ್ನು ಉಪಾಧ್ಯಾಯರ ಹತ್ತಿರವೇ ಮಾಡಿಸಬಹುದಿತ್ತು. ಆದರೆ ಅವರ ಯೋಚನೆ ಬೇರೆ. ತನ್ನ ವಿದ್ಯಾರ್ಥಿಗಳು ಇದನ್ನು ಮಾಡಲು ಕಲಿಯಬೇಕು. ಕಷ್ಟಪಟ್ಟು ತಯಾರಿಸಿದರೆ ಅದರ ಮಹತ್ವ ತಿಳಿಯುತ್ತದೆ ಎಂದು. ಹಾಗಾಗಿ ಉಪಾಧ್ಯಾಯರ ಮಾರ್ಗದರ್ಶನದಲ್ಲಿ ಎ.ಪಿ. ಭಟ್ ಸರ್ ಅವರ ನಾಯಕತ್ವದಲ್ಲಿ 1000 ಕ್ಕೂ ಅಧಿಕ ಪಿನ್‌ಹೋಲ್ ಉಪಕರಣಗಳನ್ನು ನಮ್ಮ ಕಾಲೇಜಿನಲ್ಲೇ ತಯಾರಿಸಲಾಯಿತು. ಇದರೊಟ್ಟಿಗೆ ಗ್ರಹಣದ ಕುರಿತು ಮಾಹಿತಿ ನೀಡುವ ಒಂದಿಷ್ಟು ಚಾರ್ಟ್‌ಗಳನ್ನು ತಯಾರಿಸಲಾಯಿತು. ಇನ್ನೇನಿದ್ದರೂ ಸಾವಿರ ಶಾಲೆಗಳ ಪಯಣ ಆರಂಭವಾಗಬೇಕಿತ್ತು.

ಇನ್ನೇನು ಗ್ರಹಣ ಬರುವುದಕ್ಕೆ ಒಂಭತ್ತು ತಿಂಗಳಿದೆ ಎನ್ನುವಾಗ ಎ.ಪಿ. ಭಟ್ ಸರ್‌ಗೆ ನಿವೃತ್ತಿ. ಅವರಿಗೆ ಅದು ಸಂತೋಷದ ವಿಷಯ. ಏಕೆಂದರೆ ಮುಕ್ತವಾಗಿ ಗ್ರಹಣ ಜಾಗೃತಿಗೆ ತೆರಳಬಹುದು ಎಂದು. ಹಾಗಾಗಿ ಶ್ರೀ ಶ್ರೀ ವಿಶ್ವಪ್ರಿಯತೀರ್ಥರ ಆಶೀರ್ವಾದದೊಂದಿಗೆ ಪ್ರಯಾಣ ಆರಂಭವಾಗಿತ್ತು.

"ದಿನೇಶ 30 ಪಿನ್‌ಹೋಲ್, 30 ಕನ್ನಡ ಚಾರ್ಟ್, 30 ಇಂಗ್ಲೀಷ್ ಚಾರ್ಟ್ ತಕೋ, ಜೊತೆಗೆ ಒಂದು 50 ಕನ್ನಡಕ ತಕೋ. 20 ಕನ್ನಡಕ ಹೆಚ್ಚಿದೆ ಅಂತ ಎ.ಪಿ.ಭಟ್ ಸರ್‌ಗೆ ಹೇಳ್ಬೇಡಾ. ಟೆಲಿಸ್ಕೋಪ್ ತೊಕೊಂಡ್ಯಾ ? ಲ್ಯಾಪ್‌ಟಾಪ್ ? ಪ್ರೊಜೆಕ್ಟರ್ ? ನಿನ್ನ ಪಿ.ಪಿ.ಟಿ. ರೆಡಿ ಆಯ್ತಾ ? ಎಲ್ಲಾ ಇನ್ನೊಂದು ಸಲ ಚೆಕ್ ಮಾಡು". ಇದು ಪ್ರತಿದಿನ ಹೊರಡುವಾಗ ಅತುಲ್ ಸರ್ ನನಗೆ ಹೇಳುವ ಮಾತುಗಳು. ಅವರು ಹೇಳಿದ್ದನ್ನೆಲ್ಲವನ್ನು ಎ.ಪಿ.ಭಟ್ ಸರ್ ಅವರ ಕಾರಿನ ಡಿಕ್ಕಿಗೆ ಹಾಕಿದ ಮೇಲೆ ನಮ್ಮ ಪ್ರಯಾಣ ಆರಂಭವಾಗುತ್ತಿತ್ತು. ಮೊದಮೊದಲು ಉಡುಪಿ, ಉತ್ತರ ಕನ್ನಡದ ಶಾಲೆಗಳಿಗೆ ಹೋದೆವು. ಕೆಲವೊಂದು ಕಡೆ ರಾತ್ರಿ ಆಕಾಶ ವೀಕ್ಷಣೆಯೂ ಇರುತ್ತಿತ್ತು. ಮುಗಿಸಿ ಮನೆಗೆ ಬರುವಾಗ ರಾತ್ರಿ 12 ಗಂಟೆ. ಮಾರನೆಯ ದಿನ ಮತ್ತೆ ಪ್ರಯಾಣ ಆರಂಭ. ಅದರಲ್ಲೂ ಎ.ಪಿ. ಭಟ್ ಸರ್ ಅವರೊಂದಿಗೆ ಕಳೆದ ಕ್ಷಣ ಅಮೂಲ್ಯವಾದದ್ದು. ಅವರೊಂದಿಗೆ ಭೌತವಿಜ್ಞಾನವನ್ನು ಚರ್ಚೆ ಮಾಡುತ್ತಾ ಹೋಗುವುದೆಂದರೆ ಅದು ಅತ್ಯಂತ ಶ್ರೇಷ್ಠ ಕ್ಷಣ. ವಿಜ್ಞಾನದೊಂದಿಗೆ ಅವರ ಸಂಶೋಧನಾ ಕ್ಷೇತ್ರದ ಅನುಭವಗಳನ್ನು ಮಾತಾಡುತ್ತಾ ಹೋದರೆ ದಾರಿ ಸವೆದಿದ್ದೇ ತಿಳಿಯುತ್ತಿರಲಿಲ್ಲ. ನನ್ನ ವಯಸ್ಸಿನ ಎರಡರಷ್ಟು ಅವರ ಆಕಾಶ ವೀಕ್ಷಣೆಯ ಅನುಭವ. ಆದರೂ ಮಕ್ಕಳೊಂದಿಗೆ ಮಕ್ಕಳಾಗಿರುವ ಅವರ ಗುಣ ನಮಗೆ ನಿಜಕ್ಕೂ ಆದರ್ಶಪ್ರಾಯವಾದದ್ದು.

ಎ.ಪಿ. ಭಟ್ ಸರ್, ಅತುಲ್ ಸರ್ ಮತ್ತು ನಾನು ದೂರ ದೂರದ ಶಾಲೆಗಳಿಗೆ ಹೋಗುತ್ತಿದ್ದೆವು. ಈಗಂತೂ ನಮ್ಮ ಗುರಿ ದಿನಕ್ಕೆ ಕನಿಷ್ಠ 20 ಶಾಲೆಗಳು. ಒಂದು ದಿನ ಉಡುಪಿಯಲ್ಲಾದರೆ, ಅದೇ ಮಧ್ಯಾಹ್ನ ಮಂಗಳೂರು. ಮಾರನೆ ದಿನ ಶಿವಮೊಗ್ಗ. ಒಂದಿನ ಉತ್ತರ ಕನ್ನಡವಾದರೆ, ಮಾರನೇ ದಿನ ದಾವಣಗೆರೆ. ಆಮೇಲೆ ಚಿಕ್ಕಮಗಳೂರು ನಂತರ ಕೇರಳದವರೆಗೂ ತಲುಪಿದ್ದಾಯಿತು. ಈ ಯಾತ್ರೆಯಲ್ಲಿ ಎ.ಪಿ. ಭಟ್ ಸರ್ ಅವರ ಹಳೆಯ ವಿದ್ಯಾರ್ಥಿಗಳೂ, ಸಹೋದ್ಯೋಗಿಗಳು, ಅವರ ಸ್ನೇಹಿತರು ಎಲ್ಲರೂ ಮಾಡಿದ ಸಹಾಯ ತುಂಬಾ ಅಮೂಲ್ಯವಾದದ್ದು.

ಒಂದೊಂದು ಸಲ ದಿನಕ್ಕೆ 20 ಶಾಲೆಗಳಿಗೆ ಹೋಗುವಾಗ ಕೊನೆಯ ಶಾಲೆಗೆ ತಲುಪುವಾಗ ಎ.ಪಿ. ಭಟ್ ಸರ್‌ಗೆ ತುಂಬಾ ಸುಸ್ತಾಗಿರುತ್ತಿತ್ತು. ಸಭೆ ಪ್ರಾರಂಭವಾಗುವ ಮೊದಲು ಸರ್ ಹೇಳುವ ಮಾತು. "ನನಗೆ ತುಂಬಾ ಸುಸ್ತಾಗಿದೆ. ನಾನು ಬರೀ ಎರಡು ನಿಮಿಷ ಮಾತಾಡ್ತೇನೆ. ಅತುಲ್ ಮತ್ತೆ ದಿನೇಶ ನೀವೇ ಉಳಿದಿದ್ದೆಲ್ಲಾ ಮಾತಾಡಿ" ಆದರೆ ಮಕ್ಕಳನ್ನು ಕಂಡಮೇಲೆ ಅವರ ಉತ್ಸಾಹವನ್ನು ಕಂಡ ಮೇಲೆ ಸುಸ್ತೆಲ್ಲಾ ಮಾಯವಾಗಿ ಎಲ್ಲಾ ಮಾತಾಡಿ ಮುಗಿಸಿಯೇ ಸರ್ ವೇದಿಕೆಯಿಂದ ಕೆಳಗೆ ಇಳಿಯುತ್ತಿದ್ದದ್ದು.

ಮಕ್ಕಳ ಖುಷಿಯಲ್ಲೇ ತನ್ನ ಖುಷಿಯನ್ನು ಕಂಡವರು ಎ.ಪಿ.ಭಟ್ ಸರ್. ಒಂದು ಬಾರಿಯಂತೂ ಸುಮಾರು 35 ಕಿ.ಮೀ. ಹೋದಮೇಲೆ ಸೂರ್ಯನನ್ನು ನೋಡುವ ಕನ್ನಡಕ ಮನೆಯಲ್ಲೇ ಉಳಿದು ಹೋಗಿದೆ ಎನ್ನುವ ವಿಚಾರ ಸರ್‌ಗೆ ನೆನಪಾಯಿತು. ಅವರಿಗೆ ಬಹಳ ಬೇಸರವಾಯಿತು. ಮಕ್ಕಳಿಗೆ ಸೂರ್ಯನನ್ನು ತೋರಿಸಲು ಆಗುವುದಿಲ್ಲವಲ್ಲ ಎಂದು. ಆ ಕನ್ನಡಕದಲ್ಲಿ ಉರಿಯುವ ಸೂರ್ಯ, ಬೆಳದಿಂಗಳ ಚಂದ್ರನಂತೆ ಕಾಣುತ್ತಾನೆ. ಅದನ್ನು ಕಂಡು ಮಕ್ಕಳು ಖುಷಿಯಾಗುವುದಿದೆಯಲ್ಲಾ ಅದು ಅಪೂರ್ವ ಕ್ಷಣ. ಹಾಗಾಗಿ ಕನ್ನಡಕ ಮರೆತುಹೋಯಿತಲ್ಲಾ ಎಂದು ಸರ್‌ಗೆ ಬೇಸರ. ತಕ್ಷಣ ಅವರು ಮಾಡಿದ ಕೆಲಸ ನಾವು ಎಂದು ಮರೆಯುವ ಹಾಗಿಲ್ಲ. ನಾವು ಮುಂದೆ ಹೋಗಬೇಕಿದ್ದ ಕಾರ್ಯಕ್ರಮದ ಮುಖ್ಯಸ್ಥರಿಗೆ ಕರೆ ಮಾಡಿ ನಾವು ಬರುವುದಕ್ಕೆ ಇನ್ನೊಂದು ಗಂಟೆ ತಡವಾಗುತ್ತದೆ ಎಂದರು. ಯಾಕೆಂದು ನಾವು ಸರ್‌ಗೆ ಕೇಳಿದರೆ ಸರ್ ಹೇಳಿದರು ನಾವೀಗ ವಾಪಸ್ ಮನೆಗೆ ಹೋಗಿ ಕನ್ನಡಕ ತೆಗೆದುಕೊಂಡು ಬರೋಣ. ನಮಗೆ ನಂಬಲಿಕ್ಕೇ ಆಗಲಿಲ್ಲ. ಮತ್ತೆ 35 ಕಿ.ಮೀ. ವಾಪಸ್ ಬಂದು ಕನ್ನಡಕ ತೆಗೆದುಕೊಂಡಮೇಲೇ ಅವರಿಗೆ ಸಮಾಧಾನ. ಆ ದಿನ ಕಾರ್ಯಕ್ರಮ ಮುಗಿದಮೇಲೆ ಮಕ್ಕಳು ಆ ಕನ್ನಡಕದಿಂದ

ಸೂರ್ಯನನ್ನು ನೋಡಿ ಆನಂದಿಸುತ್ತಿರಬೇಕಾದರೆ ನಮಗೆ ಅನಿಸಿತು ಸರ್ ಮಾಡಿದ್ದರಲ್ಲಿ ಕಿಂಚಿತ್ತೂ ಲೋಪವಿಲ್ಲ.

ಡಾ॥ ಎ.ಪಿ. ಭಟ್, ದೊಡ್ಡ ದೊಡ್ಡ ವಿಜ್ಞಾನಿಗಳೊಂದಿಗೆ ಕೆಲಸ ಮಾಡಿದವರು. ಆದರೆ ಇದ್ಯಾವುದರ ಬಗ್ಗೆ ಅತಿಯಾದ ಹೆಮ್ಮೆ ಅವರಿಗೆ ಎಂದೂ ಇರಲಿಲ್ಲ. ಅವರ ಉದ್ದೇಶ ಮಕ್ಕಳಿಗೆ ಜ್ಞಾನ ತಲುಪಿಸುವುದು. ಒಮ್ಮೆಯಂತೂ ದಾವಣಗೆರೆಯಲ್ಲಿ ಬೆಳಿಗ್ಗೆ ನಾವು ಸರ್ ಅನ್ನು ಹುಡುಕುತ್ತಿದ್ದೆವು. ಸರ್ ನೋಡಿದರೆ ಅಲ್ಲೇ ಅಕ್ಕಪಕ್ಕದ ಮನೆಯ ಶಾಲೆಗೆ ಹೋಗುವ ಮಕ್ಕಳನ್ನು ಸೇರಿಸಿಕೊಂಡು ವಿಶೇಷ ಕನ್ನಡಕದ ಮೂಲಕ ಸೂರ್ಯನನ್ನು ತೋರಿಸುತ್ತಾ, ಗ್ರಹಣದ ಮಾಹಿತಿ ನೀಡುತ್ತಿದ್ದರು. ಪಿನ್‌ಹೋಲ್ ಮುಖಾಂತರ ಸೂರ್ಯನ ಬಿಂಬವನ್ನು ನೋಡಲು ಕಲಿಸುತ್ತಿದ್ದರು. ಇನ್ನೊಮ್ಮೆ ಪಿಲಿಕುಳದ ಕಾರ್ ಪಾರ್ಕಿಂಗ್‌ನಲ್ಲಿ ಪಿನ್‌ಹೋಲ್ ಉಪಕರಣವನ್ನು ತೆಗೆದು ಅದರ ವಿಜ್ಞಾನವನ್ನು ಚರ್ಚೆ ಮಾಡುತ್ತಿದ್ದರು. ಅವರಿಗೆ ಪ್ರಶ್ನೆ ಕೇಳುವ ಮಕ್ಕಳಿದ್ದರೆ ಸಾಕು ಅದು ಯಾವುದೇ ಸ್ಥಳವಿರಲಿ, ಮಕ್ಕಳ ಎಲ್ಲಾ ಸಂಶಯಗಳನ್ನು ದೂರಮಾಡಿಯೇ ಬರುತ್ತಿದ್ದರು. ಒಟ್ಟಿನಲ್ಲಿ ಎಲ್ಲಿ ಹೋದರೂ ಮಕ್ಕಳು ಅವರನ್ನು ಬಿಡುತ್ತಿರಲಿಲ್ಲ. ಕೆಲವೊಮ್ಮೆ ಆಟೋಗ್ರಾಫ್‌ಗಾಗಿ ನೂರಾರು ಮಕ್ಕಳು ಅಡ್ಡಗಟ್ಟಿದ್ದೂ ಇದೆ.

ಈ ಸಾವಿರ ಶಾಲೆಗಳ ಪಯಣದಲ್ಲಿ ಅವರಿಂದ ಕಲಿತ ವಿಷಯಗಳು ನೂರಾರು. ಸಮಯದ ಮಹತ್ವವಂತೂ ಸರಿಯಾಗಿ ತಿಳಿದಿದ್ದೇ ಅವರ ಸಹವಾಸದಿಂದ. ಯಾವುದೇ ಕಾರ್ಯಕ್ರಮವಾಗಲಿ, ಅರ್ಧಗಂಟೆ ಮುಂಚೆ ಅಲ್ಲಿರಬೇಕು ಎನ್ನುವುದು ಅವರ ತತ್ವ. ಮೊದಮೊದಲು ಪಿ.ಪಿ.ಟಿ. ಎಂದರೆ ನಮಗೆ ಬಹಳ ದೊಡ್ಡ ವಿಷಯ. ಕನಿಷ್ಠ 2 ವಾರ ಬೇಕಿತ್ತು ಮಾಡಲು. ಅವರೊಟ್ಟಿಗೆ ಸೇರಿದ ಮೇಲೆ ಕಾರಿನಲ್ಲೇ ಪಿ.ಪಿ.ಟಿ. ಮಾಡಲು ಕಲಿತಿದ್ದೆವು. ಆಶ್ಚರ್ಯ ಎಂದರೆ ಕಂಕಣ ಸೂರ್ಯಗ್ರಹಣದ ಆಮಂತ್ರಣ ಪತ್ರಿಕೆಯನ್ನು ಮಾಡಿದ್ದು ಕಾರಿನಲ್ಲೇ.

ಶಾಲೆ, ಕಾಲೇಜು, ಶಿಕ್ಷಕರ ತರಬೇತಿ ಕಾರ್ಯಕ್ರಮಗಳು ಈ ರೀತಿಯಾಗಿ ಸುಮಾರು 3 ತಿಂಗಳು ಸುತ್ತಾಡಿದ ಮೇಲೆ ನಮ್ಮ ಗುರಿ ಸೇರಿಯಾಗಿತ್ತು. ಅದೇ ಒಂದು ಸಾವಿರ ಶಾಲೆಗಳನ್ನು ತಲುಪುವ ಗುರಿ. ಅಂದು ಡಿ॥ 24 ನಾನು ಮತ್ತು ಅತುಲ್ ಸರ್ ಎ.ಪಿ. ಭಟ್ ಸರ್‌ಗೆ ಈ ವಿಷಯವನ್ನು ಹೇಳಲು ಕಾತುರತೆಯಿಂದ ಕಾಯುತ್ತಿದ್ದೆವು.ಅಂತೂ ಹೇಳಿಯೂ ಆಯಿತು. "ಸರ್ ನಾವೀಗ ಹೋಗಿ ಬಂದೆವಲ್ಲಾ, ಅದು 1000 ನೇ ಶಾಲೆ. ಸರ್‌ನ ಮಾತಿಗಾಗಿ ಕಾಯುತ್ತಿದ್ದೆವು. ಪ್ರತಿಕ್ರಿಯೆಯೇ ಇಲ್ಲ. ಎ.ಪಿ. ಭಟ್ ಸರ್‌ನ ಕಣ್ಣಂಚಿಂದ ಒಂದು ಹನಿ ಜಾರಿತ್ತು. ಅವರು ಗುರಿ ಸಾಧಿಸಿದ ಆನಂದವನ್ನು ಅನುಭವಿಸುತ್ತಿದ್ದರು.

ಡಿ॥ 25 ಕ್ಕೆ ಒಂದು ದಿನದ ವಿಶ್ರಾಂತಿ. ಡಿ॥ 26 ಕ್ಕೆ ಶತಮಾನದ ಖಗೋಳ ವಿದ್ಯಮಾನ ಕಂಕಣ ಸೂರ್ಯಗ್ರಹಣ. ISRO ದ ಹೆಮ್ಮೆಯ ವಿಜ್ಞಾನಿಗಳಾದ ಪಿ.ಜಿ. ಭಟ್ ಮತ್ತು ನಿವೇದಿತಾ ಬಿ.ಕೆ. ಮುಖ್ಯ ಅತಿಥಿಗಳಾಗಿದ್ದರು. ಇಡೀ ಕಾಲೇಜು ಜನರಿಂದ ತುಂಬಿ ತುಳುಕುತ್ತಿತ್ತು. ಸಾವಿರ ಶಾಲೆಗಳಲ್ಲಿ ಸುಮಾರು 5 ಲಕ್ಷಕ್ಕೂ ಅಧಿಕ ಮಕ್ಕಳಿಗೆ ಗ್ರಹಣದ ಮಹತ್ವ ತಿಳಿಸಿದ ಎ.ಪಿ. ಭಟ್ ಸರ್‌ಗೆ ಒಂದು ಸನ್ಮಾನ ಕಾರ್ಯಕ್ರಮವೂ ಇತ್ತು. ಸಾವಿರಾರು ಜನರ ಸಮ್ಮುಖದಲ್ಲಿ ಕಂಕಣ ಸೂರ್ಯಗ್ರಹಣ ನೋಡಿದ ಅನುಭವ ಎಂದೂ ಮರೆಯಲು ಅಸಾಧ್ಯ.

ಅವರೊಂದಿಗೆ ಕಳೆದ ಆ ದಿನಗಳು ಅಪೂರ್ವವಾದದ್ದು. ಸಮುದ್ರದಲ್ಲಿ ಎಷ್ಟೇ ನೀರಿದ್ದರೂ ಕಪ್ಪೆ ಚಿಪ್ಪಿನಲ್ಲಿ ಸೇರಿದ ಹನಿ ಮಾತ್ರ ಮುತ್ತಾಗುತ್ತದೆ. ಹಾಗೆಯೇ ಜೀವನದಲ್ಲಿ ಯಾರ್ಯಾರೊಂದಿಗೋ ಎಷ್ಟೆಷ್ಟೋ ಸಮಯ ಕಳೆದಿರುತ್ತೇವೆ. ಅದರಲ್ಲಿ ಎ.ಪಿ. ಭಟ್ ಸರ್‌ರಂತಹ ಮೇಧಾವಿಗಳೊಂದಿಗೆ ಕಳೆದ ಕ್ಷಣಗಳು ಮಾತ್ರ ಜೀವನದ ಸಾರ್ಥಕ ಕ್ಷಣಗಳು. ಅದೇ ಕಾರಣಕ್ಕೆ ಅವರು ಕನ್ನಡದ ಪ್ರತಿಷ್ಠಿತ ಸುದ್ದಿವಾಹಿನಿಯಾದ ಪಬ್ಲಿಕ್ ಟಿ.ವಿ.ಯಲ್ಲಿ ಪಬ್ಲಿಕ್ ಹಿರೋ ಆಗಿ ಮಿಂಚಿದ್ದು. ಅಂತಹವರ ಬಗ್ಗೆ ಹೇಳಲಿಚ್ಛಿಸುವುದು ಒಂದೇ ಮಾತು.

"ನಿನ್ನಡಿಯ ಹುಡಿಯೆನ್ನ ಮುಡಿಯ ಸಿಂಗರಿಸಿರಲಿ
ಕಡೆಗಾನೂ ಹುಡಿಯಾಗಿ ನಿನ್ನಡಿಯ
ಸೇರಿಕೊಂಡಿರಲಿ"

ತಿರುವುಗಳ ಸುತ್ತ

ಪೂರ್ಣಚಂದ್ರ
ದ್ವಿತೀಯ ಎಂ.ಎಸ್ಸಿ.

ಇಬ್ಬರು ಸಹೋದರರಲ್ಲಿ ಆದಿತ್ಯ ದೊಡ್ಡವನು, ಆಕಾಶ್ ಸಣ್ಣವನು. ಇವರಿಬ್ಬರಿಗೂ ಅಮೂಲ್ಯ ಎಂಬ ಮುದ್ದು ತಂಗಿ. ಆದರೆ ಅಮೂಲ್ಯ ಸ್ವಲ್ಪ ಹಠಮಾರಿ. ತನ್ನದೇ ಆಗಬೇಕೆಂಬ ಹಠ ಅವಳಿಗೆ. ಅಣ್ಣ ಆದಿತ್ಯ ಬೇರೆ ಊರಿನಲ್ಲಿ ಖಾಸಗಿ ಕಂಪೆನಿಯಲ್ಲಿ ಉದ್ಯೋಗದಲ್ಲಿದ್ದರೆ, ತಮ್ಮ ಆಕಾಶ್, ವಿದ್ಯೆ ಮುಗಿಸಿ ಇನ್ನೇನು ಉದ್ಯೋಗದ ಹುಡುಕಾಟದಲ್ಲಿದ್ದಾನೆ. ತಂಗಿ ಅಮೂಲ್ಯ ಇನ್ನೂ ಡಿಗ್ರಿ ಕಲಿಯುತ್ತಿರುವ ಹುಡುಗಿ. ಆಕಾಶ್ ಅಮೂಲ್ಯನನ್ನು ನೋಡಿಕೊಂಡು ಮನೆಯಲ್ಲಿದ್ದರೆ (ಹೆತ್ತವರೊಂದಿಗೆ) ಆದಿತ್ಯ ಉದ್ಯೋಗದ ನಿಮಿತ್ತ ಬೇರೆ ಊರಿನಲ್ಲಿ ಇರುತ್ತಾನೆ.

ಆಕಾಶ್, ಒಂದು ಬಿಝಿನೆಸ್ ಆರಂಭ ಮಾಡ್ಕೋಬೇಕು ಅಂತ ಅಂದುಕೊಂಡಿದ್ದಾನೆ. ಇವರದ್ದು ಮಧ್ಯಮವರ್ಗದ ಮನೆತನವಾದ್ದರಿಂದ ವ್ಯವಹಾರ ಮಾಡಲು ಹಣದ ಕೊರತೆಯಿರುತ್ತದೆ. ಅಣ್ಣನಿಂದಲೂ ಅಷ್ಟೇನೂ ದೊಡ್ಡಮಟ್ಟದ ಹಣ ದೊರಕುವುದಿಲ್ಲ. ಹಾಗಾಗಿ ಆಕಾಶ್, ಅವನ ಸ್ನೇಹಿತ ವಿಜಯ್ ಬಳಿ ಕೇಳುತ್ತಾನೆ. ವಿಜಯ್ ಬಳಿ ಹಣ ಇರುವುದಿಲ್ಲ. ಆದರೆ ಅವನು, ಒಬ್ಬನಲ್ಲಿಗೆ ಆಕಾಶ್‌ನನ್ನು ಕಳುಹಿಸುತ್ತಾನೆ. ಅವನ ಹೆಸರು ವಿಶಾಲ್. ವಿಶಾಲ್ ಆಗರ್ಭ ಶ್ರೀಮಂತ. ಹಾಗಾಗಿ ವಿಶಾಲ್‌ನ ಬಳಿಗೆ ಹೋದರೆ ನಿನಗೆ ಸಹಾಯವಾದೀತು ಎಂದು ವಿಜಯ್ ಆಕಾಶ್‌ಗೆ ಹೇಳುತ್ತಾನೆ.

ವಿಜಯನ ಸಲಹೆ ಮೇರೆಗೆ ಆಕಾಶ್, ವಿಶಾಲ್‌ನಲ್ಲಿಗೆ ಬರುತ್ತಾನೆ. ತನ್ನ ಪರಿಚಯ ಮಾಡಿಕೊಂಡು, ತನ್ನ ಉದ್ದೇಶ ಮತ್ತು ತಾನು ತಾನು ವಿಜಯ್‌ನ ಸಲಹೆ ಮೇರೆಗೆ ಇಲ್ಲಿಗೆ ಬಂದಿರುವುದಾಗಿ ಹೇಳುತ್ತಾನೆ. ತನಗೆ 15,00,000/–ದ ಅವಶ್ಯಕತೆ ಇದೆ ಎಂದು ಹೇಳುತ್ತಾನೆ. ಅದಕ್ಕೆ ವಿಶಾಲ್ ಒಪ್ಪಿಕೊಂಡು, 15 ಲಕ್ಷದ ಜತೆಗೆ ಬಡ್ಡಿಯನ್ನು ಸೇರಿಸಿ 6 ತಿಂಗಳಲ್ಲಿ ಹಿಂದುರುಗಿಸಬೇಕೆಂದು ಹೇಳುತ್ತಾನೆ. ಅಲ್ಲದೆ ಈಗ ತನ್ನ ಬಳಿ ಕ್ಯಾಶ್ ಇಲ್ಲ. ಇನ್ನೆರಡು ದಿನಗಳಲ್ಲಿ ಬ್ಯಾಂಕ್ ಟ್ರಾನ್ಸ್‌ಫರ್ ಮಾಡುತ್ತೇನೆ ಎಂದು ಹೇಳುತ್ತಾನೆ. ಅದಕ್ಕೆ ಆಕಾಶ್ ಒಪ್ಪಿಕೊಳ್ಳುತ್ತಾನೆ. ಇನ್ನೇನು ಹೊರಡಬೇಕು ಅಲ್ಲಿಂದ ಎನ್ನುವಷ್ಟರಲ್ಲಿ, ವಿಶಾಲ್‌ಗೆ ಒಂದು ಕರೆ ಬರುತ್ತದೆ. ಆಗ ಫೋನ್ ವಾಲ್‌ಪೇಪರ್‌ನಲ್ಲಿ ಅಮೂಲ್ಯಳ ಫೋಟೋವನ್ನು ಆಕಾಶ್ ನೋಡುತ್ತಾನೆ. ಈಗಲೇ ವಿಚಾರಿಸಿದರೆ ತನಗೆ ಸಿಗುವ ಹಣ ಸಿಗುವುದಿಲ್ಲ ಎಂದುಕೊಂಡು ಆಕಾಶ್ ಮನೆಗೆ ಹಿಂದಿರುಗುತ್ತಾನೆ.

ಮನೆಗೆ ಬಂದ ಆಕಾಶ್, ಅಮೂಲ್ಯಳ ಬಗ್ಗೆ ಅನುಮಾನದಿಂದ ಅವಳ ಪ್ರತೀ ಕ್ಷಣಗಳನ್ನು ಗಮನಿಸುತ್ತಲೇ ಬರುತ್ತಾನೆ. ಅವಳು ಕರೆಯಲ್ಲಿ ಗಂಟೆಗಟ್ಟಲೆ ಮಾತಾಡುವುದನ್ನು ಕಾಣುತ್ತಾನೆ. ಯಾವಾಗಲೂ ಮೊಬೈಲ್‌ನಲ್ಲೇ ಕಾಲ ಕಳೆಯುತ್ತಿರುತ್ತಾಳೆ. ಅಮೂಲ್ಯಳ ಈ ವರ್ತನೆಗಳ ಬಗ್ಗೆ ಕೇಳಲೇಬೇಕು ಎಂದು ತೀರ್ಮಾನಿಸಿ ಆಕಾಶ್ ತಂಗಿಯ ಬಳಿ ಕೇಳಿಯೇ ಕೇಳುತ್ತಾನೆ. ಗಂಟೆಗಟ್ಟಲೆ ಅಷ್ಟೊಂದು ಫೋನ್‌ನಲ್ಲಿ ಮಾತನಾಡುತ್ತಿದ್ದೀಯಲ್ಲ. ಯಾರದು ಎಂದು. ಅದಕ್ಕೆ ಅಮೂಲ್ಯ ತಡವರಿಸಿ, ಅದು ನನ್ನ ಕಾಲೇಜು ಫ್ರೆಂಡ್ ಎಂದು ಹೇಳುತ್ತಾಳೆ. ಆದರೆ ಆಕಾಶ್‌ಗೆ ಅನುಮಾನ ಇನ್ನೂ ಜಾಸ್ತಿಯಾಯಿತು.

ಮರುದಿನ, ಆಕಾಶ್ ಕಾಲೇಜ್‌ಗೆ ಹೊರಟ ಅಮೂಲ್ಯಳನ್ನು ಫೋಲೋ ಮಾಡುತ್ತಾನೆ. ಈ ವಿಷಯ ಅಮೂಲ್ಯಳಿಗೆ ಗೊತ್ತಿರುವುದಿಲ್ಲ. ಕಾಲೇಜ್‌ಗೆಂದು ಹೊರಟ ಅಮೂಲ್ಯ, ಕಾಲೇಜ್‌ಗೆ ಹೋಗದೆ, ದೂರದ ಒಂದು ಪಾರ್ಕ್‌ಗೆ ಬರುತ್ತಾಳೆ. ಅವಳನ್ನು ಹಿಂಬಾಲಿಸಿಕೊಂಡು ಆಕಾಶ್ ಕೂಡ ಅದೇ ಪಾರ್ಕ್‌ಗೆ ಬರುತ್ತಾನೆ. ಪಾರ್ಕ್‌ನಲ್ಲಿ ವಿಶಾಲ್, ಅಮೂಲ್ಯಳಿಗೆ ಕಾಯುತ್ತಿರುವುದು ಕಂಡುಬಂತು. ಕೂಡಲೇ ಅಮೂಲ್ಯ ವಿಶಾಲ್‌ನಲ್ಲಿಗೆ ಬಂದು ಅವನನ್ನು ಅಪ್ಪಿಕೊಂಡು ಮುದ್ದಾಡುತ್ತಾಳೆ. ಅವರಿಬ್ಬರೂ ಸ್ವಲ್ಪಹೊತ್ತು ಮಾತನಾಡುತ್ತಿರುತ್ತಾರೆ. ಇವೆಲ್ಲವನ್ನು ಆಕಾಶ್ ಮರೆಯಿಂದ ನೋಡುತ್ತಿರುತ್ತಾನೆ. ಇನ್ನೇನು ಕಾಲೇಜ್‌ಗೆ ಲೇಟ್ ಆಯ್ತು ಅಂತ ಹೇಳಿ ಅಮೂಲ್ಯ ಅಲ್ಲಿಂದ ಹೊರಡುತ್ತಾಳೆ. ಇವರಿಬ್ಬರ ನಡುವೆ ಕೆಲವು ದಿನಗಳಿಂದ ಈ ಪ್ರೇಮ ಸಲ್ಲಾಪ ನಡೆಯುತ್ತಿರಬೇಕು ಎಂದು ಆಕಾಶ್ ಅಂದುಕೊಳ್ಳುತ್ತಾನೆ. ವಿಶಾಲ್ ಶ್ರೀಮಂತ. ಹಣವಿದೆ. ಅಲ್ಲದೆ ಅಮೂಲ್ಯಳನ್ನು ಪ್ರೀತಿಸುತ್ತಿದ್ದಾನೆ. ಒಮ್ಮೆ ತಾನು ಕೂಡ ಭೇಟಿಯಾಗಿದ್ದೇನೆ. ಒಳ್ಳೆಯ ಸಂಬಂಧ, ವಿಶಾಲ್ ಬಳಿ ಈ ವಿಷಯದ ಬಗ್ಗೆ ಮಾತನಾಡುವ ಎಂದುಕೊಂಡು ಮರೆಯಿಂದ

ಹೊರಬರುವಷ್ಟರಲ್ಲಿ ವಿಶಾಲ್ ಯಾರಿಗೋ ಕರೆ ಮಾಡುತ್ತಾನೆ. ಫೋನ್ ಕಾಲ್ ಆದ್ಮೇಲೆ ಅವನೊಂದಿಗೆ ಚರ್ಚಿಸುವ ಎಂದುಕೊಂಡು ಆಕಾಶ್ ಅಲ್ಲೇ ನಿಲ್ಲುತ್ತಾನೆ. (ಎಲ್ಲಿದ್ದನೋ ಅಲ್ಲಿ) ವಿಶಾಲ್‌ನ ಕಾಲ್ ಸಂಭಾಷಣೆಯನ್ನು ಆಕಾಶ್ ಕೇಳಿಸಿಕೊಳ್ಳುತ್ತಾನೆ. ವಿಶಾಲ್‌ನ ಕರೆ ಸಂಭಾಷಣೆ ಹೀಗಿರುತ್ತದೆ. 'ಗುಡ್ ಮಾರ್ನಿಂಗ್ ಡ್ಯಾನಿ ಸರ್. ಇಲ್ಲೊಂದು ಒಳ್ಳೆ ಐಟಮ್ ಸಿಕಿದೆ. ನೋಡಲು ಸುಂದರವಾಗಿಯೂ ಇದ್ದಾಳೆ. ನಿಮ್ಮ ಬೆಲೆ ಎಷ್ಟು ಎಂದು ಹೇಳಿ. ಆದಷ್ಟು ಬೇಗ ಅವಳನ್ನು ನಿಮ್ಮ ಬಳಿ ಕಳುಹಿಸುತ್ತೇನೆ. ಅವಳ ಫೋಟೋವನ್ನು ಫಾರ್ವರ್ಡ್ ಮಾಡಿದ್ದೇನೆ. ಆದಷ್ಟು ಬೇಗ ತಿಳಿಸಿ. 'ವಿಶಾಲ್‌ನ ಈ ಮಾತುಗಳನ್ನು ಕೇಳಿ ಸಿಟ್ಟಾದ ಆಕಾಶ್ ವಿಶಾಲ್‌ನಲ್ಲಿ ಮಾತನಾಡಲು ಹೊರಡುವಾಗ, ವಿಶಾಲ್‌ಗೆ ಅವನ ಗೆಳೆಯ ಕಿರಣ್‌ನ ಕಾಲ್ ಬರುತ್ತದೆ. ಈಗಲೇ ನಿನ್ನನ್ನು ಬೇಟಿಯಾಗಬೇಕು. ಎಲ್ಲಿದ್ದೀಯಾ ಎಂದು ಕಿರಣ್ ಕೇಳಿದಾಗ ವಿಶಾಲ್ ತನ್ನ ಲೊಕೇಶನ್ ಅನ್ನು ಕಿರಣ್‌ಗೆ ತಿಳಿಸಿ, ಕಾಲ್ ಕಟ್ ಮಾಡುತ್ತಾನೆ. ಇತ್ತ ಆಕಾಶ್ ಸಿಟ್ಟಿನಿಂದ ಓಡಿ ಬಂದು ವಿಶಾಲ್‌ನ ಶರ್ಟ್‌ನ ಕಾಲರ್ ಹಿಡಿದು ಗದರಿಸುತ್ತಾನೆ. "ಏಯ್ ನಿನಗೆಷ್ಟೋ ಅಹಂಕಾರ, ಧಿಮಾಕು? ಪಾಪದ ಹುಡುಗಿಯರನ್ನು ಬೇರೆಯವರಿಗೆ ಮಾರುತ್ತೀಯಾ? ಈಗ ನೀನು ಮಾರಲು ಹೊರಟಿರುವ ಅಮೂಲ್ಯ ಯಾರೆಂದು ತಿಳಿದುಕೊಂಡಿದ್ದೀಯಾ? ಅವಳು ನನ್ನ ತಂಗಿ. ನೀನು ಈ ರೀತಿ ಮಾಡುವುದು ಸರಿಯಲ್ಲ. ನಿನಗೂ ತಂಗಿಯೆಂಬ ಒಬ್ಬ ಹೆಣ್ಣು ಮನೆಯಲ್ಲಿದ್ದರೆ ನೀನು ಹೀಗೆ ಮಾಡುತ್ತಿದ್ದೀಯಾ' ಎಂದು ಬುದ್ಧಿವಾದ ಹೇಳುತ್ತಾನೆ.

ಇಷ್ಟೆಲ್ಲ ಕತೆ ಆಯಿತು. ಈಗ ಒಂದು ಟ್ವಿಸ್ಟ್. ಅದೇ ದಿನ ಸಂಜೆ ಆಕಾಶ್‌ನ ಹೆಣ ನೇಣು ಬಿಗಿದ ಸ್ಥಿತಿಯಲ್ಲಿ ಆಕಾಶ್‌ನ ಊರ ಪಕ್ಕದ ಮರದಲ್ಲಿ ಸಿಗುತ್ತದೆ. ಏನು? ಆಕಾಶ್ ಸತ್ತನೇ? ಹೇಗೆ? ಯಾರು ಕೊಲೆ ಮಾಡಿದರೋ? ಅಥವಾ ಸುಸೈಡಾ? ಹಲವಾರು ಪ್ರಶ್ನೆಗಳು ಬರುತ್ತವೆ. ಆಕಾಶ್‌ನ ಮನೆಯವರಿಗೆ ಮತ್ತು ಊರಿನವರಿಗೆ ಇದು ಆತ್ಮಹತ್ಯೆಯಂತೆ ಕಂಡುಬರುತ್ತದೆ. ಆದರೆ, ನಮಗ್ಯಾಕೋ ಇದು ಕೊಲೆಯಂತೆ ಅನ್ನಿಸುವುದಿಲ್ಲವೇ? ಬುದ್ಧಿವಾದ ಹೇಳಲು ಬಂದ ಆಕಾಶ್‌ನನ್ನು ವಿಶಾಲ್ ಕೊಲೆ ಮಾಡಿರಬಹುದೇ????!!

ತಮ್ಮನ ಮರಣದ ಸುದ್ದಿ ಕೇಳಿ, ಅಣ್ಣ ಆದಿತ್ಯ ಒಂದು ತಿಂಗಳ ರಜೆ ತೆಗೆದುಕೊಂಡು ಮನೆಗೆ ಬರುತ್ತಾನೆ. ತಮ್ಮನ ಮರಣೋತ್ತರ ಪರೀಕ್ಷೆಗಳನ್ನು ನಡೆಸುತ್ತಾನೆ. ನಂತರ ಶವಸಂಸ್ಕಾರ ಮುಗಿಸಿ ಮನೆಗೆ ಬರುತ್ತಾನೆ. ಆದಿತ್ಯನಿಗೆ ಆಕಾಶ್‌ನ ಸ್ವಭಾವದ ಬಗ್ಗೆ ಚೆನ್ನಾಗಿ ಗೊತ್ತು. ಅವನು ಎಷ್ಟೇ ಕಷ್ಟಬಂದರೂ ಅವುಗಳನ್ನು ಎದುರಿಸುತ್ತಿದ್ದ. ಸುಸೈಡ್ ಮಾಡಿಕೊಳ್ಳುವವ ಅಲ್ಲ ಅವ. ಇದರಲ್ಲೇನೋ ಅಡಗಿದೆ ಎಂದು ಆದಿತ್ಯ ಅಂದುಕೊಳ್ಳುತ್ತಾನೆ. ಆದಿತ್ಯನಿಗೆ, ಆಕಾಶ್ ಮತ್ತು ವಿಜಯ್ ಸ್ನೇಹಿತರೆಂಬುದು ಗೊತ್ತು. ವಿಜಯ್ ಬಳಿ ಕೇಳಿದರೆ ಏನಾದರೂ ಗೊತ್ತಾಗಬಹುದೆಂದು ವಿಜಯ್‌ಗೆ ಆದಿತ್ಯ ಕಾಲ್ ಮಾಡುತ್ತಾನೆ. ಆಕಾಶ್ ಬಗ್ಗೆ ಕೇಳುತ್ತಾನೆ. ಆಕಾಶ್‌ಗೆ ಲವ್ ಏನಾದ್ರು ಇತ್ತಾ. ಇದಕ್ಕೆಲ್ಲ ಏನು ಕಾರಣ? ಎಂದು ವಿಜಯನಲ್ಲಿ ಕೇಳುತ್ತಾನೆ. ಅದಕ್ಕೆ ವಿಜಯ್, ಆಕಾಶ್‌ಗೆ ಲವ್ವೇನೂ ಇರಲಿಲ್ಲ. ಅವನು ಸದಾ ಬಿಝಿನೆಸ್ ಆರಂಭ ಮಾಡುವ ಬಗ್ಗೆ ಚಿಂತಿಸುತ್ತಿದ್ದ. ಬೇರೆ ಏನೂ ಕೂಡ ನನಗೆ ಗೊತ್ತಿಲ್ಲ ಎಂದು ಹೇಳುತ್ತಾನೆ. ಆದರೆ ಆದಿತ್ಯನಿಗೆ ಯಾಕೋ ಇದು ಕೊಲೆಯೇ. ಅವನನ್ನು ಕೊಲೆ ಮಾಡುವವರು ಯಾರು? ಅವನಿಗೆ ದುಶ್ಮನಿಗಳು ಯಾರಿದ್ದಾರೆ? ಇಂತಹ ಹಲವು ಪ್ರಶ್ನೆಗಳು ಕಾಡುತ್ತಿದ್ದವು. ಮರಣೋತ್ತರ ಪರೀಕ್ಷೆಯ ವಿವರಗಳಿಗಾಗಿ ಆದಿತ್ಯ ಕಾಯುತ್ತಾನೆ.

ಒಂದು ದಿನದ ಬಳಿಕ ಮರಣೋತ್ತರ ಪರೀಕ್ಷೆಯ ಫಲಿತಾಂಶ ಬರುತ್ತದೆ. ಅದರಲ್ಲಿ ಆಕಾಶ್‌ನದ್ದು ಆತ್ಮಹತ್ಯೆಯೆಂದು ಉಲ್ಲೇಖವಾಗಿರುತ್ತದೆ. ಇದರಲ್ಲೇನೋ ಸಂಗತಿ ಅಡಗಿದೆ, ಅದೇನೆಂದು ತಾನೇ ಕಂಡುಹಿಡಿಯುತ್ತೇನೆಂದು ಆದಿತ್ಯ ತೀರ್ಮಾನಿಸುತ್ತಾನೆ.

ಅದೇ ದಿನ ಮಧ್ಯಾಹ್ನ ಆಕಾಶ್‌ನ ಫೋನ್‌ಗೆ ಒಂದು ಮೆಸೇಜ್ ಬರುತ್ತದೆ. ಆ ಮೆಸೇಜ್‌ನ್ನು ಆದಿತ್ಯ ನೋಡುತ್ತಾನೆ. ಆ ಮೆಸೇಜ್ ಅಲ್ಲಿ ಏನಿತ್ತೆಂದರೆ ನಿಮ್ಮ ಬ್ಯಾಂಕ್ ಅಕೌಂಟ್‌ಗೆ 15 ಲಕ್ಷ ಜಮೆ ಮಾಡಲಾಗಿದೆ. ಆದಿತ್ಯನಿಗೆ ಆಶ್ಚರ್ಯವಾಯಿತು. ಅವನಿಗೆ ಇಷ್ಟೊಂದು ಹಣ ಕೊಡುವವರು ಯಾರೆಂದು ಆಲೋಚಿಸುತ್ತಾನೆ.

ಕೂಡಲೆ ಆದಿತ್ಯ ಆಕಾಶ್‌ನ ಫ್ರೆಂಡ್ ವಿಜಯ್‌ಗೆ ಕಾಲ್ ಮಾಡಿ ಈ ಮೆಸೇಜ್‌ನ ಬಗ್ಗೆ ಕೇಳುತ್ತಾನೆ. ಅದಕ್ಕೆ ವಿಜಯ್

ಆಕಾಶ್ ಹಣಕ್ಕೋಸ್ಕರ ಕಷ್ಟಪಡುತ್ತಿದ್ದ. ಅದಕ್ಕೆ ನಾನು ವಿಶಾಲ್ ಎಂಬ ಪರಿಚಯದವನಲ್ಲಿಗೆ ಕಳುಹಿಸಿದ್ದೆ ಆಕಾಶ್‌ನನ್ನು. ಆಮೇಲೆ ಏನಾಯಿತೆಂದು ಗೊತ್ತಿಲ್ಲ ಎಂದು ಹೇಳುತ್ತಾನೆ.

ಇತ್ತ ಅಮೂಲ್ಯ ಅಣ್ಣನನ್ನು ಕಳೆದುಕೊಂಡು ದುಃಖದಲ್ಲಿರುತ್ತಾಳೆ. ಅಲ್ಲದೇ ಅವಳಿಗೆ ಕಳೆದ 2 ದಿನಗಳಿಂದ ವಿಶಾಲ್‌ನ ಯಾವುದೇ ಕರೆಗಳಾಗಲೀ, ಮೆಸೇಜ್‌ಗಳಾಗಲೀ ಬಂದಿರುವುದಿಲ್ಲ. ಇವಳು ಕರೆಗೆ ಪ್ರಯತ್ನಿಸಿದರೂ ಸ್ವಿಚ್ ಆಫ್ ಬರುತ್ತಿತ್ತು. ಅತ್ತ ಆದಿತ್ಯ ವಿಜಯ್‌ನಿಂದ ವಿಶಾಲ್‌ನ ಅಡ್ರೆಸ್ ಪಡೆದುಕೊಂಡು ವಿಶಾಲ್‌ನ ಮನೆಗೆ ಬರುತ್ತಾನೆ.

ಹಾಗಾದರೆ ವಿಶಾಲ್ ಈಗ ಸಿಕ್ಕಿಬೀಳುತ್ತಾನಾ? ಅವನೇ ಕೊಲೆ ಮಾಡಿರಬಹುದಾ? ಕತೆಯಲ್ಲಿ ಇನ್ನೊಂದು ತಿರುವು.

ವಿಶಾಲ್‌ನ ಮನೆಗೆ ಬಂದ ಆದಿತ್ಯನಿಗೆ ವಿಶಾಲ್ ಕಳೆದ 2 ದಿನಗಳಿಂದ ನಾಪತ್ತೆಯಾಗಿರುವುದು ಕಂಡುಬರುತ್ತದೆ. ವಿಶಾಲ್‌ನ ಮನೆಯವರಿಗೆ ಸಾಂತ್ವನ ಹೇಳಿ ಆದಿತ್ಯ ಅಲ್ಲಿಂದ ಹೊರಡಬೇಕು ಎನ್ನುವಷ್ಟರಲ್ಲಿ ಟಿ.ವಿ.ಯಲ್ಲಿ ವಿಶಾಲ್‌ನ ಹೆಣ ಸಮುದ್ರ ತೀರದಲ್ಲಿ ಸಿಕ್ಕಿರುವುದಾಗಿ ತೋರಿಸುತ್ತಾರೆ. ಆದಿತ್ಯನಿಗೆ ಶಾಕ್. ಏನು ವಿಶಾಲ್ ಕೂಡ ಸತ್ತನೇ???!!! ಆದಿತ್ಯನಿಗೆ ಏನೂ ಗೋಚರವಾದಂತಾಯಿತು. ಅಲ್ಲಿಯೇ ತಬ್ಬಿಬ್ಬಾದ. ಮನೆಗೆ ವಾಪಸ್ಸಾದ.

ಹಣಕ್ಕಾಗಿ ವಿಜಯ್‌ನ ಸಲಹೆ ಮೇರೆಗೆ ಆಕಾಶ್ ವಿಶಾಲ್‌ನಲ್ಲಿಗೆ ಬಂದ. ಆಮೇಲೆ ಏನಾಯಿತೋ ಗೊತ್ತಿಲ್ಲ. ವಿಶಾಲ್‌ನನ್ನು ಹುಡುಕಿಕೊಂಡು ಬಂದರೆ ವಿಶಾಲ್ ಕೂಡ ಸತ್ತಿದ್ದಾನೆ. ವಿಶಾಲ್‌ನ ಫ್ರೆಂಡ್ಸ್‌ನ ಬಗ್ಗೆ ವಿಶಾಲ್‌ನ ಹೆತ್ತವರಲ್ಲಿ ಆದಿತ್ಯ ವಿಚಾರಿಸುತ್ತಾನೆ. ಆಗ ಹೆತ್ತವರು ಕಿರಣ್‌ನ ಬಗ್ಗೆ ಹೇಳುತ್ತಾರೆ. ಕಿರಣ್ ಯಾರೆಂದು ಗೊತ್ತಾಯಿತೇ? ಹಿಂದೆ ಆಕಾಶ್, ಅಮೂಲ್ಯ ಮತ್ತು ವಿಶಾಲ್‌ನನ್ನು ಫೋಲೋ ಮಾಡುತ್ತಿರುವಾಗ ವಿಶಾಲ್‌ಗೆ ಕಿರಣ್‌ನಿಂದ ಕಾಲ್ ಬಂದಿರುತ್ತದಲ್ವ. ಅವನೇ ಕಿರಣ್. ಆದಿತ್ಯ ಕಿರಣ್‌ನಲ್ಲಿ, ಕಿರಣ್ ವಿಶಾಲ್‌ನ ಅಂತ್ಯಕ್ರಿಯೆಗೆ ಬಂದಾಗ ವಿಚಾರಿಸುತ್ತಾನೆ. ಅದಕ್ಕೆ ಕಿರಣ್, ನಾವಿಬ್ಬರೂ ಒಳ್ಳೇ ದೋಸ್ತಿಗಳು. ಚಿಕ್ಕಂದಿನಿಂದ ಪರಿಚಯ. ಯಾವಾಗಲೂ ನನ್ನೊಂದಿಗೇ ಇರುತ್ತಿದ್ದ. ಆದರೆ ಕಳೆದ 2 ದಿನಗಳಿಂದ ಅವನ ಸಂಪರ್ಕವೇ ಸಾಧ್ಯವಾಗಲಿಲ್ಲ. ಆದರೆ ಈಗ ಹೀಗಾಯಿತು ಎಂದು ಅಳುತ್ತಾನೆ. ಆದಿತ್ಯ ಏನೂ ವಿಚಾರ ಗೊತ್ತಾಗದೆ ಮನೆಗೆ ಬರುತ್ತಾನೆ.

ಮನೆಗೆ ಬಂದ ಆದಿತ್ಯ, ಆಕಾಶ್, ವಿಶಾಲ್ ಕೊಲೆಯ ಬಗ್ಗೆಯೇ ಯೋಚಿಸುತ್ತಿರುತ್ತಾನೆ. ಸ್ವಲ್ಪ ಹೊತ್ತಲ್ಲಿ ಅಮೂಲ್ಯಳಿಗೆ ಕಾಲ್ ಬರುತ್ತದೆ. ಆದರೆ ಅವಳು ರಿಸೀವ್ ಮಾಡುವುದಿಲ್ಲ. ಏಳೆಂಟು ಬಾರಿ ಕರೆ ಬರುತ್ತದೆ. ಆದರೆ ಅವಳು ರಿಸೀವ್ ಮಾಡುವುದೇ ಇಲ್ಲ. ಆದಿತ್ಯ ತಂಗಿಯ ಬಳಿ ಯಾಕೆ ರಿಸೀವ್ ಮಾಡ್ತಿಲ್ಲ ಯಾರು ಎಂದು ಕೇಳುತ್ತಾನೆ. ಅದಕ್ಕೆ ಅವಳು ಅದೇನೋ ಮುಖ್ಯ ಅಲ್ಲ ಅಂತ ಹೇಳುತ್ತಾಳೆ. ಆದರೆ ಆದಿತ್ಯನಿಗೆ ಅನುಮಾನ ಉಂಟಾಯಿತು. ಅಮೂಲ್ಯ ಸ್ನಾನಕ್ಕೆಂದು ಹೋಗುತ್ತಾಳೆ. ಆಗ ಪುನಃ ಅದೇ ಕಾಲ್ ಬರುತ್ತದೆ. ಆದಿತ್ಯ ಬಂದು ಯಾರದ್ದು ಇದು ಕಾಲ್ ಎಂದು ನೋಡುತ್ತಾನೆ. ಅದರಲ್ಲಿ ಇನ್‌ಕಮಿಂಗ್ ಕಾಲ್ ಇಡಿಯಟ್ ಎಂದು ಬಂದಿರುತ್ತದೆ. ಇಡಿಯಟ್ ಅಂತ ಕಾಂಟಾಕ್ಟ್ ಸೇವ್ ಮಾಡಿಟ್ಟುಕೊಳ್ಳುತ್ತಾರೆಯೇ? ಯಾರಿದು ಎಂದು ಆದಿತ್ಯ ಫೋನ್ ರಿಸೀವ್ ಮಾಡುತ್ತಾನೆ. ರಿಸೀವ್ ಮಾಡಿದ ಕೂಡಲೇ ಆ ಕಡೆಯವ ಅಂದ್ರೆ ಕಾಲ್ ಮಾಡಿದವ, 'ಅಮೂಲ್ಯ ನಿನಗೆ ಎಷ್ಟು ಅಂತ ಕಾಲ್ ಮಾಡುವುದು ರಿಸೀವ್ ಮಾಡ್ಲಿಕ್ಕೆ ಏನು ದಾಡಿ ನಿಂಗೆ?? ನಿನಗೋಸ್ಕರ ಎಷ್ಟು ಕಷ್ಟಪಟ್ಟಿದ್ದೇನೆ ಗೊತ್ತಾ? ನಿನಗೋಸ್ಕರ ನಾನು ಕೊಲೆ ಮಾಡಲೂ ಕೂಡ ಹಿಂದೆ ಸರಿಲಿಲ್ಲ. ಯಾಕೆ? ಯಾಕೆ ಸುಮ್ಮನಿದ್ದೀಯಾ ಮಾತಾಡು' ಎಂದು ಗದರಿಸುತ್ತಾನೆ. ಆಗ ಆದಿತ್ಯ, "ಕೊಲೆಯಾ ಯಾರದ್ದು, ಯಾರು ಮಾಡಿದ್ದು ಯಾರು ನೀನು" ಎಂದು ಪ್ರಶ್ನಿಸುತ್ತಾನೆ. ಆಗ ಕರೆ ಕಟ್ ಆಗುತ್ತದೆ. ಅವನು ಕಾಲ್ ಮಾಡಿದವನು ಅಮೂಲ್ಯವೇ ಮಾತಾಡುವುದು ಎಂದು ಅಷ್ಟೊಂದು ಗದರಿಸಿ ಮಾತಾಡಿದ್ದು. ಗಂಡು ಸ್ವರ ಬಂದ ಕೂಡಲೇ ಇದು ಯಾರೋ ಬೇರೆ ಫೋನ್ ಎತ್ತಿದ್ದಾರೆಂದು ಆತ ಕಾಲ್ ಕಟ್ ಮಾಡಿದ್ದ. ಹಾಗಾದರೆ ಆತ ಯಾರು? ಆತ ಯಾರ ಕೊಲೆ ಮಾಡಿದ್ದ? ಯಾಕೆ ಮಾಡಿದ್ದು?

ಅತ್ತ ಆದಿತ್ಯ, ಅಮೂಲ್ಯಳನ್ನು ಕರೆದು ಬೈಯ್ದು ಆ ಕರೆಯ ಬಗ್ಗೆ ಕೇಳುತ್ತಾನೆ. ಆಗ ಅಮೂಲ್ಯ ಸತ್ಯ ಸಂಗತಿಯನ್ನು ತಿಳಿಸಲು ಮುಂದಾಗುತ್ತಾಳೆ. ಆಕೆಯ ಮಾತುಗಳು ಹೀಗಿವೆ. "ಅವನ ಹೆಸರು ಕಿರಣ್. ಅವನು ನನ್ನನ್ನು ಪ್ರೀತಿಸುತ್ತಿದ್ದ. ಆದರೆ ನನಗೆ ಅವನ ಮೇಲೆ ಇಷ್ಟವಿರಲಿಲ್ಲ. ನಾನು ಎಷ್ಟೇ ಬೇಡವೆಂದರೂ ನನ್ನ

ಹಿಂದೆಯೇ ಬರುತ್ತಿದ್ದ. ಯಾವಾಗಲೂ ಕಾಲ್ ಮಾಡಿ ಸತಾಯಿಸುತ್ತಿದ್ದ. ಆದರೆ ನನಗೆ ಬೇರೊಬ್ಬನ ಮೇಲೆ ಪ್ರೀತಿಯಿತ್ತು. ಅವನ ಹೆಸರು ವಿಶಾಲ್. ಆದರೆ ನಾನು ವಿಶಾಲ್‌ನನ್ನು ಪ್ರೀತಿಸುವುದು ಕಿರಣ್‌ಗೆ ಇಷ್ಟವಿರಲಿಲ್ಲ. ಯಾಕೆಂದರೆ ವಿಶಾಲ್ ಕಿರಣ್ ಇಬ್ರೂ ಫ್ರೆಂಡ್ಸ್. ನಾನು ಎಷ್ಟೇ ಬೇಡಿಕೊಂಡರೂ ಅವನು ನನ್ನ ಬೆನ್ನ ಹಿಂದೆ ಬರುವುದನ್ನು ಬಿಡಲಿಲ್ಲ. ಅದಕ್ಕಾಗಿಯೇ ನಾನು ಅವನನ್ನು ತಿರಸ್ಕರಿಸುತ್ತಾ ಬಂದೆ. ಈಗಲೂ ಅದಕ್ಕೇ ಕಾಲ್ ರಿಸೀವ್ ಮಾಡ್ತಿಲ್ಲ' ಎಂದು ಹೇಳುತ್ತಾಳೆ. ಈ ವಿಷಯ ತಿಳಿದ ಆದಿತ್ಯನಿಗೆ ಅನ್ನಿಸುತ್ತದೆ. ಹಾಗಾದ್ರೆ, ತನಗೆ ಪ್ರೀತಿ ಸಿಕ್ಕಿಲ್ಲವೆಂಬ ಉದ್ದೇಶದಿಂದ ಕಿರಣ್ ವಿಶಾಲ್‌ನನ್ನು ಸಾಯಿಸಿರಬಹುದು. ಆದರೆ ಇವರ ಮಧ್ಯೆ ನನ್ನ ತಮ್ಮ ಆಕಾಶ್ ಎಲ್ಲಿಂದ ಬಂದ? ಇದು ನಿಗೂಢವಾಗಿಯೇ ಉಳಿಯಿತು. ನಿಜ ಸಂಗತಿ ತಿಳಿಯಬೇಕೆಂದರೆ ಕಿರಣ್ ಸಿಗಬೇಕು ಎಂದುಕೊಂಡು ಕಿರಣ್‌ನನ್ನು ಹಿಡಿಯಲು ಹೊರಡುತ್ತಾನೆ ಆದಿತ್ಯ. ಅತ್ತ ಕಿರಣ್, ತನ್ನ ವಿಷಯ ಯಾರಿಗೋ ಗೊತ್ತಾಗಿದೆ ಎಂದು ಪರಾರಿಯಾಗಲು ಯತ್ನಿಸುತ್ತಿರುತ್ತಾನೆ. ಆದರೆ ಆದಿತ್ಯ ಕಿರಣ್‌ನ ಕಾಲ್ ಟ್ರೇಸ್ ಮಾಡಿ, ಕಿರಣ್‌ನನ್ನು ಕಂಡು ಹಿಡಿದು ಅವನಿಗೆ ನಾಲ್ಕು ಬಡಿದು ಹೊಡೆದು ದಬಾಯಿಸಿ ಉಲ್ಟಾ ನೇತು ಹಾಕುತ್ತಾನೆ ಕಿರಣ್‌ನನ್ನು. ಸರಿ ಹೊಡೆದು ಹೊಡೆದು ಕಿರಣ್‌ನ ಬಾಯಿ ಬಿಡಿಸುತ್ತಾನೆ. ಕಿರಣ್ ಕೊಟ್ಟ ಉತ್ತರಗಳು ಹೀಗಿವೆ. 'ನಾನು ಮತ್ತು ವಿಶಾಲ್ ಚಿಕ್ಕಂದಿನಿಂದ ಸ್ನೇಹಿತರು. ನಾನು ಅಮೂಲ್ಯಳನ್ನು ಪ್ರೀತಿಸುತ್ತಿದ್ದೆ. ಆದರೆ ಅಮೂಲ್ಯಳಿಗೆ ನಾನು ಇಷ್ಟವಿರಲಿಲ್ಲ. ಅವಳಿಗೆ ವಿಶಾಲ್ ಹತ್ತಿರವಾದ. ವಿಶಾಲ್ ಕೆಟ್ಟ ಮನುಷ್ಯ. ಹಲವಾರು ಹುಡುಗಿಯರಿಗೆ ಪ್ರೀತಿ ಮಾಡುವ ಮೋಸ ಮಾಡಿ ಹೊರದೇಶಗಳಿಗೆ ಮಾರುತ್ತಿದ್ದ. ಇದಕ್ಕೆ ನಾನೂ ಸಹಾಯ ಮಾಡುತ್ತಿದ್ದೆ. ಆದರೆ ನಾನು ಪ್ರೀತಿಸುತ್ತಿದ್ದ ಅಮೂಲ್ಯಳನ್ನೂ ಕೂಡ ವಿಶಾಲ್ ಮಾರುವ ಯೋಚನೆಯಲ್ಲಿದ್ದಾಗ ನನಗೆ ಅದನ್ನು ಸಹಿಸಲಾಗಲಿಲ್ಲ. ನಾನು ಇಷ್ಟುದಿನ ಒಬ್ಬ ಕೆಟ್ಟ ವ್ಯಕ್ತಿಗೆ ಸಾಥ್ ಕೊಟ್ಟಿದೆ. ಇನ್ನಾದರೂ ಒಳ್ಳೆಯ ದಾರಿ ಹಿಡಿಯಬೇಕು. ಅಮೂಲ್ಯಳನ್ನು ರಕ್ಷಿಸಬೇಕು. ಒಂದೆರಡು ಬಾರಿ ವಿಶಾಲ್‌ಗೆ ನಾವು ಮಾಡುತ್ತಿರುವುದು ತಪ್ಪು ಎಂದು ಹೇಳಿದೆ. ಆದರೆ ಅವನು ಕೇಳಲಿಲ್ಲ. ಇನ್ನು ವಿಶಾಲ್‌ನ ಬಗ್ಗೆ ಅಮೂಲ್ಯಳಲ್ಲಿ ಹೇಳುವ ಅಂತ ಅಂದುಕೊಂಡೆ. ಆದರೆ ಅವಳ ಹತ್ರ ಹೇಳಿದ್ರೆ ಅವಳು ನಂಬುವುದಿಲ್ಲ, ಯಾಕೆಂದ್ರೆ ಅವಳು ವಿಶಾಲ್‌ನ ಮುಷ್ಠಿಯಲ್ಲಿದ್ದಳು. ಹೀಗಾಗಿ ಬೇರೆ ದಾರಿಯಿಲ್ಲದೆ, ಅವನನ್ನು ಕೊಲೆ ಮಾಡಿಯಾದರೂ ಸರಿ ಅಮೂಲ್ಯಳನ್ನು ರಕ್ಷಿಸಬೇಕು ಎಂದುಕೊಂಡೆ. 2 ದಿನಗಳ ಹಿಂದೆ ವಿಶಾಲ್‌ನನ್ನು ಸಾಯಿಸಲೇಬೇಕೆಂದು ತೀರ್ಮಾನಿಸಿ, ಅವನಿಗೆ ಕಾಲ್ ಮಾಡಿದೆ. ಅವನು ಪಾರ್ಕ್‌ನಲ್ಲಿದ್ದೇನೆ ಅಂತ ಅಂದ. ಆದರೆ ಪಾರ್ಕಿಗೆ ಹೋಗುವಷ್ಟರಲ್ಲಿ ಬೇರೆ ಇನ್ಯಾವೋ ಒಬ್ಬ ವಿಶಾಲ್‌ನೊಂದಿಗೆ ಜಗಳವಾಡುತ್ತಿದ್ದ. ಇದೇ ಒಳ್ಳೇ ಸಮಯ ಅಂದುಕೊಂಡೆ. ಅವರಿಬ್ಬರ ನಡುವೆ ಹೊಡೆದಾಟವೇ ನಡೆಯಿತು. ನಾನು ಕೂಡ ಬೇರೊಬ್ಬನಿಗೆ ಒಂದೆರಡು ಪೆಟ್ಟು ಕೊಟ್ಟೆ ಅವರಿಬ್ಬರು ಮುಖಾಮುಖಿಯಾಗಿ ಹೊಡೆದಾಡುತ್ತಿರುವಾಗ ನಾನು ವಿಶಾಲ್‌ನ ಬೆನ್ನಿಗೆ 2, 3 ಬಾರಿ ಚೂರಿಯಿಂದ ಇರಿದೆ. ರಕ್ತದೋಕುಳಿಯೇ ಹರಿದು ವಿಶಾಲ್ ಸ್ಥಳದಲ್ಲೇ ಸಾವನ್ನಪ್ಪಿದ. ಆಗ ಜಗಳವಾಡುತ್ತಿದ್ದ ಇನ್ನೊಬ್ಬ 'ನೀನೇನು ಮಾಡಿದೆ? ನಾನು ಅವನನ್ನು ಸರಿದಾರಿಗೆ ತರುವುದರಲ್ಲಿದ್ದೆ. ಅಷ್ಟರಲ್ಲಿ ನೀನು ಅವನನ್ನು ಸಾಯಿಸಿಯೇ ಬಿಟ್ಟೆ. ನಿಮ್ಮಿಬ್ಬರ ಮಧ್ಯೇ ಏನೇ ಇರಲಿ. ಆದರೆ ಈ ವಿಷಯವನ್ನು ಪೋಲೀಸರಿಗೆ ತಿಳಿಸುವುದು ನನ್ನ ಕರ್ತವ್ಯ' ಎಂದು ಆತ ಫೋನ್ ಎತ್ತಿದ. ನಾನು ತಡೆಯಲು ಹೋದೆ. ಆದರೆ ಅವನು ಕೇಳಲಲಿಲ್ಲ. "ನನ್ನ ತಂಗಿಗಾದ ದ್ರೋಹವನ್ನು ತಡೆಯಲು ಬಂದ ನನಗೆ ಇಂತಹ ಕುಕೃತ್ಯವನ್ನು ನೋಡಬೇಕಾಯಿತು. ನಿನ್ನನ್ನು ಬಿಡುವುದಿಲ್ಲ" ಎಂದು ಮತ್ತೆ ಫೋನ್ ಮಾಡಲು ಪ್ರಯತ್ನಿಸಿದ. ಆಗ ನನಗೆ ಏನು ಮಾಡಲು ತೋಚಲಾಗದೆ, ಸಿಕ್ಕಿದ ದೊಣ್ಣೆಯಿಂದ ತಲೆಗೆ ಬಲವಾಗಿ ಬಡಿದೆ. ಆದರೂ ಆತ ಸುಮ್ಮನಿರಲಿಲ್ಲ. ಆಮೇಲೆ ಆತನ ಕತ್ತು ಹಿಸುಕಿ ಸಾಯಿಸಿಯೇ ಬಿಟ್ಟೆ".

ಆಗ, "ಆದಿತ್ಯ ಇನ್ನೊಬ್ಬನ್ನ ಸಾಯಿಸಿದೆಯೆಂದೆಯಲ್ಲ, ಯಾರದು" ಎಂದು ದಬಾಯಿಸಿದ. ಅದಕ್ಕೆ ಕಿರಣ್ "ಆತನ ಹೆಸರು ಆಕಾಶ್. ಆತನಿಗೆ ಅವನ ತಂಗಿ ಮತ್ತು ವಿಶಾಲ್ ಮಧ್ಯೆ ಏನೋ ನಡೆಯುತ್ತಿದೆ ಎಂದು ಹೇಳಿದವನು ನಾನೇ. ಅವರನ್ನು ಫೋಲೋ ಮಾಡಲು ಹೇಳಿದ್ದು ನಾನೇ. ಆದರೆ ಅಚಾತುರ್ಯದಿಂದ ಆಕಾಶ್ ಸತ್ತುಹೋದ. ವಿಶಾಲ್‌ನ ಹೆಣವನ್ನು ಪಾರ್ಕ್‌ನ ಹತ್ತಿರದಲ್ಲೇ ನದಿಯಿತ್ತು. ಆ ನದಿಗೆ ಎಸೆದೆ. ಇನ್ನು ಆಕಾಶ್‌ನ ಹೆಣವನ್ನು ಎಸೆಯುವಷ್ಟರಲ್ಲಿ

ಅಲ್ಲಿಗೆ ಕೆಲವು ಜನರು ಬಂದ ಹಾಗಾಯಿತು. ಆಕಾಶ್‌ನ ಶವವನ್ನು ನನ್ನ ಕಾರಿನಲ್ಲಿ ತೆಗೆದುಕೊಂಡು ಹೋಗಿ ಯಾರಿಗೂ ಅನುಮಾನ ಬಾರದಂತೆ ಮರಕ್ಕೆ ನೇತು ಹಾಕಿದೆ. ನನ್ನ ಮೇಲೆ ಸಂಶಯ ಬರಬಾರದೆಂದು ಪೋಸ್ಟ್ ಮಾರ್ಟಂ ರಿಪೋರ್ಟನ್ನು ಲಂಚ ಕೊಟ್ಟು ಬದಲಾಯಿಸಿದೆ. ಇಷ್ಟೆಲ್ಲ ಮಾಡಿದ್ದು ಅಮೂಲ್ಯಳೊಂದಿಗಿನ ನನ್ನ ಪ್ರೀತಿಗೋಸ್ಕರ. ಮತ್ತೆ ಯಾವುದೇ ದುರುದ್ದೇಶವಿರಲಿಲ್ಲ".

ಇಷ್ಟು ವಿಷಯ ಕೇಳಿದ ಆದಿತ್ಯ ಕಿರಣ್ ಮೇಲೆ ಒಂದು ಗುಂಡು ಹಾರಿಸುತ್ತಾನೆ. (ಪಿಸ್ತೂಲ್‌ನಿಂದ) ಗುಂಡು ತಾಗಿ ಜೀವ ಹೋಗುತ್ತಿರುವಾಗ ಕಿರಣ್ ಆದಿತ್ಯನನ್ನು ತಾನು ಆಕಾಶ್‌ಗೆ ಏನಾಗಬೇಕೆಂದು ಕೇಳಿಕೊಂಡಾಗ ಆದಿತ್ಯ ಆಕಾಶ್ ನನ್ನ ತಮ್ಮ ಎಂದು ಮತ್ತೊಂದು ಗುಂಡು ಹಾರಿಸುತ್ತಾನೆ. ಕಿರಣ್ ಸತ್ತು ಹೋಗುತ್ತಾನೆ. ಅನೇಕ ತಿರುವುಗಳ ಸುಳಿಯಲ್ಲಿ ಮುಂದೆ ಹೋಗಿ ಆದಿತ್ಯ ತನ್ನ ತಮ್ಮ ಆಕಾಶ್‌ನ ಮರಣದ ಕಾರಣವನ್ನು ತಿಳಿದು ಅದಕ್ಕೆ ಕಾರಣರಾದವರಿಗೆ ತಕ್ಕ ಶಾಸ್ತಿಯನ್ನು ಮಾಡಿದ.

ಗೋತಳಿ

ಎಚ್. ಜಿ. ಸಹನಾ
ದ್ವಿತೀಯ ಬಿ.ಕಾಂ.

ನಾವು ಗೋವುಗಳನ್ನು ರಕ್ಷಿಸಿದರೆ ಅವು ನಮ್ಮನ್ನು ರಕ್ಷಿಸುತ್ತವೆ. ಇಂದಿನ ದಿನಗಳಲ್ಲಿ ಜನರಿಗೆ ಗೋವುಗಳ ಮಹತ್ವ ಅರಿವಾಗುತ್ತಿದೆ. ಜನರು ಗೋ ತಳಿಗಳನ್ನು ರಕ್ಷಿಸುವಲ್ಲಿ ನಿರತರಾಗುತ್ತಿದ್ದಾರೆ. ಇಂದಿನ ದಿನಗಳಲ್ಲಿ ಸಾವಯವ ಕೃಷಿಯು ಮಹತ್ವ ಪಡೆಯುತ್ತಿದೆ. ಸಾವಯವ ಕೃಷಿಗೆ ಗೋ ಉತ್ಪನ್ನಗಳು ಮುಖ್ಯವಾಗಿದೆ. ಈ ಕಾರಣದಿಂದಾಗಿ ಗೋವುಗಳನ್ನು ಸಾಕುವುದು ಅವಶ್ಯವಾಗಿದೆ.

ಗೋವುಗಳಲ್ಲಿ ಅನೇಕ ತಳಿಗಳಿವೆ. ವಿದೇಶಿ ತಳಿಗಳು, ಸ್ವದೇಶಿ ತಳಿಗಳು ಪ್ರಮುಖವಾಗಿವೆ. ಗೋವುಗಳು ಹೆಚ್ಚು ಹಾಲು ನೀಡಬೇಕೆಂಬ ಆಸೆಯಿಂದ ಜನರು ವಿದೇಶಿ ತಳಿಗಳಿಗೆ ಮಾರು ಹೋಗಿ ಸ್ವದೇಶಿ ತಳಿಗಳು ವಿನಾಶದತ್ತ ಸಾಗುತ್ತಿವೆ. ಆದರೆ ನಮ್ಮ ವಾತಾವರಣಕ್ಕೆ ಹೊಂದುವ ಸ್ವದೇಶಿ ತಳಿಗಳನ್ನು ಕಾಪಾಡಿಕೊಳ್ಳುವುದು ಅವಶ್ಯವಾಗಿದೆ. ಜರ್ಸಿ ತಳಿಗಳು ಅನಿವಾರ್ಯ ಮತ್ತು ನಾಟಿತಳಿಗಳು ಕಳಪೆ ಎಂಬ ಭಾವನೆ ಜನರಲ್ಲಿ ಬೇರೂರಿದೆ.

ಈಗ ದೇಶಿ ಮತ್ತು ವಿಧೇಶಿ ತಳಿಗಳ ಬಗ್ಗೆ ತಿಳಿದುಕೊಳ್ಳೋಣ.

ಹೆಚ್.ಎಫ್. ಮತ್ತು ಜರ್ಸಿ ತಳಿಗಳು ಭಾರತದಲ್ಲಿ ಹೆಚ್ಚು ಪ್ರಸಿದ್ಧಿ ಹೊಂದಿವೆ. ಅವು ಹೆಚ್ಚು ಹಾಲು ಕೊಡುತ್ತವೆ ಎಂಬುದು ಜನರ ನಂಬಿಕೆ. ಅವು ಆಮದು ತಳಿಗಳಾದ್ದರಿಂದ ಅವು ನಮ್ಮ ದೇಶದ ವಾತಾವರಣಕ್ಕೆ ಹೊಂದಿಕೊಳ್ಳುವುದು ಕಷ್ಟ. ಅವು ಶೀತ ವಾತಾವರಣದಲ್ಲಿ ಬೆಳೆದ ತಳಿಗಳಾದ್ದರಿಂದ ನಮ್ಮ ದೇಶದ ಉಷ್ಣವಾತಾವರಣದಲ್ಲಿ ಬೆಳೆಯುವುದು ಕಷ್ಟ. ಇವು ಶಾಂತ ಸ್ವಭಾವದ ತಳಿಗಳು. ಇವು ವಿದೇಶಿ ತಳಿಗಳಾದ್ದರಿಂದ ಇವುಗಳಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆ. ಇದರ ಗೊರಸು ಮೃದು, ಕಾರಣ ಕಾಲು ಕೊಳೆ ರೋಗ ಇವುಗಳಿಗೆ ಹೆಚ್ಚು. ಸ್ಥೂಲಕಾಯದ ತಳಿಗಳು ಇವಾದ್ದರಿಂದ ಸಮತೋಲಿತ ಪೌಷ್ಟಿಕ ಆಹಾರ ಇವುಗಳಿಗೆ ಬೇಕು; ಅತೀ ಹೆಚ್ಚು ಆಹಾರ ಇವುಗಳಿಗೆ ಬೇಕು. ಇವುಗಳ ಹಾಲಲ್ಲಿ ಪೌಷ್ಟಿಕಾಂಶ ಕಡಿಮೆ. ಇದರಲ್ಲಿ ವಿಟಮಿನ್ ಅಂಶ ಕಡಿಮೆ. ಮಿಶ್ರ ತಳಿಯ ಗೋಮೂತ್ರದಲ್ಲಿ ಔಷಧೀಯ ಗುಣಗಳು ಕಡಿಮೆ. ವಿದೇಶಿ ತಳಿಗಳಲ್ಲಿ ಕೆಚ್ಚಲು ಬಾವಿನ ಸಮಸ್ಯೆ ಜಾಸ್ತಿ. ವಿದೇಶಿ ತಳಿಗಳ ಹಾಲನ್ನು ಸತತವಾಗಿ ಸೇವಿಸುವುದರಿಂದ ಅನಾರೋಗ್ಯ ಸಮಸ್ಯೆ ಉಂಟಾಗುತ್ತದೆ.

ಇನ್ನು ದೇಶಿ ತಳಿಗಳ ಬಗ್ಗೆ ತಿಳಿದುಕೊಳ್ಳೋಣ. ನಮ್ಮ ದೇಶದಲ್ಲಿ ದನಗಳನ್ನು ಕೃಷಿ ಕೆಲಸದಲ್ಲಿ ಹೆಚ್ಚಾಗಿ ಬಳಸುವುದರಿಂದ ದನಗಳು ಕೆಲಸಗಾರ ತಳಿಗಳಾಗಿ ರೂಪುಗೊಂಡಿದೆ. ಕೇವಲ ನಾಲ್ಕೈದು ತಳಿಗಳು ಮಾತ್ರ ಹೆಚ್ಚು ಹಾಲನ್ನು ನೀಡಬಹುದಾಗಿದೆ. ನಮ್ಮ ದೇಶಿ ತಳಿಗಳು ವಿದೇಶಿಗಳಿಂದ ಹೆಚ್ಚು ಆಕರ್ಷಿತವಾಗಿದೆ, ಮತ್ತು ತುಂಬಾ ಚುರುಕು. ದೇಶಿ ತಳಿಗಳು ಹವಾಮಾನಕ್ಕನುಗುಣವಾಗಿ ಅಭಿವೃದ್ಧಿಯಾಗಿದ್ದರಿಂದ ಅವುಗಳಲ್ಲಿ ರೋಗನಿರೋಧಕ ಶಕ್ತಿ ಹೆಚ್ಚು. ಅಗಲವಾದ ದೊಂಗಲು ಮತ್ತು ಸಡಿಲ ಚರ್ಮದಿಂದಾಗಿ ಚರ್ಮದ ಗಾತ್ರ ದೊಡ್ಡದು. ದೊಡ್ಡ ಗಾತ್ರ ಇರುವುದರಿಂದ ಬೆವರಿನ ಗ್ರಂಥಿಗಳು ಅಧಿಕ. ಕಾರಣ ಉಷ್ಣ ಪ್ರದೇಶದಲ್ಲಿ ಬದುಕಬಲ್ಲವು. ದೇಶಿ ತಳಿಗಳ ಹಾಲಿನಲ್ಲಿ ಹೆಚ್ಚು ಪೌಷ್ಟಿಕಾಂಶ ಮತ್ತು ರೋಗನಿರೋಧಕ ಶಕ್ತಿ ಹೊಂದಿರುತ್ತದೆ. ಇವುಗಳ ಉತ್ಪನ್ನಗಳು ಉಪಯುಕ್ತವಾಗಿದೆ. ಆಯುರ್ವೇದ ಪದ್ಧತಿಯಲ್ಲಿ ಇದರ ಉತ್ಪನ್ನಗಳು ಹೆಚ್ಚು ಬಳಕೆಯಾಗುತ್ತವೆ. ದೇಶಿ ತಳಿಗಳ ನಿರ್ವಹಣೆ ಒಟ್ಟಿನಲ್ಲಿ ಹೆಚ್ಚು ಉತ್ತಮ.

ದೇಶಿ ತಳಿಗಳು ನೂರಕ್ಕೂ ಹೆಚ್ಚಿದ್ದವು. ಆದರೆ ಈಗ 37 ತಳಿಗಳು ರಾಷ್ಟ್ರೀಯ ಪಟ್ಟಿಯಲ್ಲಿ ನಮೂದಿತವಾಗಿವೆ. ಮೊದಲು ಜನಪ್ರಿಯ ಹಾಲಿನ ತಳಿಗಳು:–

1) ಗಿರ್ ತಳಿ:– ಭಾರತದ ಅತ್ಯಂತ ಪುರಾತನ ತಳಿ. ಗುಜರಾತಿನ ಗಿರ್ ಪ್ರದೇಶ ಇದರ ಹುಟ್ಟಿನ ಸ್ಥಳ. ದಿನಕ್ಕೆ 12ರಿಂದ 14 ಲೀಟರ್ ಹಾಲು ಕೊಡುವ ಇದು ಅತೀ ಹೆಚ್ಚು ರೋಗ ನಿರೋಧಕ ಶಕ್ತಿಯನ್ನು ಹೊಂದಿದೆ. ಗಿರ್ ತಳಿಯ ಹೋರಿಗಳು ಹೆಚ್ಚು ಭಾರ ಹೊರಬಲ್ಲವು.
2) ಸಿಂಧಿ: ಇದರ ಮೂಲಸ್ಥಾನ ಪಾಕಿಸ್ತಾನದ ಸಿಂಧ್ ಪ್ರದೇಶ. ಇದು 33 ದೇಶಗಳಲ್ಲಿ ಹೆಚ್ಚು ಹೈನು ಪದಾರ್ಥ ನೀಡುವ ತಳಿಯಾಗಿದೆ. ಇದು ಎಲ್ಲಾ ಹವಾಮಾನದಲ್ಲೂ ಹೆಚ್ಚು ಹಾಲು ನೀಡಬಲ್ಲದು. ಗೋ ಶಾಲೆಗಳಲ್ಲಿ ಈ ತಳಿಗಳು ಬಳಸಲ್ಪಡುತ್ತದೆ.
3) ರಾಠಿ ತಳಿ: ಪಶ್ಚಿಮ ರಾಜಸ್ಥಾನ ಇದರ ಮೂಲ. ಇದರಲ್ಲಿ 2 ವಿಧ ಒಂದು ರಾಠ ಮತ್ತೊಂದು ರಾಠಿ. ಇವು ಹೆಚ್ಚು ಹಾಲು ನೀಡುತ್ತವೆ.
4) ಗಂಗಾ ತೀರಿ: ಗಂಗಾ ತೀರದಲ್ಲಿ ಹೆಚ್ಚು ಕಾಣ ಬರುವ ತಳಿ ಇದು. ವಾರಣಾಸಿಯಲ್ಲಿ ಹೆಚ್ಚು ಕಂಡು ಬರುತ್ತವೆ. ಇದು ಹೆಚ್ಚು ಹಾಲು ನೀಡಬಲ್ಲದು.
5) ವಾಲಕಂದಾರಿ: ಮಹಾರಾಷ್ಟ್ರ ಇದರ ಮೂಲ. ಇದು ರಾಜವಂಶದ ಹೆಸರನ್ನು ಪಡೆದಿದೆ.

ಇನ್ನೂ ಹಲವಾರು ತಳಿಗಳಿವೆ. ನಾಹೀವಾಲ, ಧಾರವಾರಕರ, ದೇವನಿ ತಳಿ, ಗೌಳವ ತಳಿ ಮುಂತಾದವುಗಳು.

ಮಲೆನಾಡಗಿಡ್ಡ ಇವುಗಳ ಉತ್ಪನ್ನಗಳು ಆಯುರ್ವೇದ ಪದ್ಧತಿಯಲ್ಲಿ ಹೆಚ್ಚು ಉಪಯೋಗ ಬರುವಂತದ್ದಾಗಿದೆ. ಕಾಸರಗೋಡು ತಳಿ, ವೆಬೂರು ತಳಿ, ಕೃಷ್ಣಾ ತೀರ ತಳಿ, ಖಿಲಾರಿ ತಳಿ, ತಾಂಗಿ ತಳಿ, ಬರಗೂರು ತಳಿ, ಕಂಗಾಯಂ ತಳಿ, ಲಿಬಾಚೆರಿ ತಳಿ, ಮಾಳಿ ತಳಿ, ನಿಮಾರಿ ತಳಿ ಇತ್ಯಾದಿ. ಹೀಗೆ ಭಾರತದ ಗೋ ತಳಿಗಳು ಹೆಚ್ಚು ಉಪಯುಕ್ತವಾಗಿದೆ. ಈ ತಳಿಗಳನ್ನು ಹೆಚ್ಚು ಪ್ರಸಿದ್ಧಿಗೊಳಿಸಿ ಅವು ನಶಿಸದಂತೆ ಬೆಳೆಸಿಕೊಂಡು ಬರುವುದು ನಮ್ಮ ಕರ್ತವ್ಯವಾಗಿದೆ.

खलः करोति दुर्वृत्तं नूनं फलति साधुषु ।
दशाननोऽहरत्सीतां बन्धनं च महोदधेः ॥

ಖಲಃ ಕರೋತಿ ದುರ್ವೃತ್ತಂ ನೂನಂ ಫಲತಿ ಸಾಧುಷು ।
ದಶಾನನೋಽಹರತ್ ಸೀತಾಂ ಬಂಧನಂ ಚ ಮಹೋದಧೇಃ ॥

ದುರ್ಜನನು ಕೆಟ್ಟ ಕೆಲಸವನ್ನು ಮಾಡುತ್ತಾನೆ. ಆದರೆ ಅದರ ಪರಿಣಾಮ ಆಗುವುದು ಮಾತ್ರ ಸಜ್ಜನರಲ್ಲಿ.
ಯಾಕೆಂದರೆ ರಾವಣ ಸೀತೆಯನ್ನು ಅಪಹರಿಸಿದ. ಆದರೆ ಸೇತುವೆಯಿಂದ ಬಂಧನ ಮಾತ್ರ ಸಾಗರಕ್ಕೆ.

ಉಡುಪಿ ಪರ್ಯಾಯ ಉತ್ಸವ

(ವಿದ್ಯಾರ್ಥಿ ವೇದಿಕೆ ಏರ್ಪಡಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಬರಹ)

ಪ್ರಜ್ಞಾ ಜೆ.ಕೆ.
ಪ್ರಥಮ ಬಿ.ಕಾಂ.

ಪೀಠಿಕೆ :

ಪೊಡವಿಗೊಡೆಯನ ಬೀಡಾದ ಉಡುಪಿ ದೇವಾಲಯಗಳ ನಾಡೆಂದು ಪ್ರಸಿದ್ಧಿಯಾದದ್ದಲ್ಲದೆ ಭೂಕೈಲಾಸವೆಂದು ಕರೆಸಿಕೊಂಡಿದೆ. ಸಪ್ತಕ್ಷೇತ್ರಗಳಲ್ಲಿ ಒಂದಾದ ದ್ವಾರಾವತಿಯನ್ನು ತೊರೆದು, ಮದ್ವಾಚಾರ್ಯರಿಗೆ ಒಲಿದು, ವಿಶ್ವರೂಪವನ್ನೇ ಪ್ರಪಂಚಮುಖಕ್ಕೆ ಪ್ರಕಟಿಸಿದ ವಿಶ್ವವಂದ್ಯನಾದ ಶ್ರೀ ಕೃಷ್ಣ ಪರಮಾತ್ಮನು ನೆಲೆನಿಂತ ಪುಣ್ಯ ತಾಣ. ಇಲ್ಲಿ ಅಷ್ಟಮಠದ ಯತಿವರೇಣ್ಯರಿಂದ ಇಷ್ಟ ಪೂಜೆ ಸ್ವೀಕರಿಸುವ ಶ್ರೀ ಕೃಷ್ಣಪರಮಾತ್ಮನನ್ನು ಪ್ರತಿಷ್ಠಾಪಿಸಿದವರು ಆಚಾರ್ಯೋತ್ತಮ ಮಧ್ವರು. ಕೃಷ್ಣನ ಪೂಜೆಗಾಗಿ, ಮಧ್ವಮತ ಪ್ರಸಾರಕ್ಕಾಗಿ ಅಷ್ಟಮಠಗಳನ್ನು ಸ್ಥಾಪಿಸಿ, ನಿರಂತರವಾಗಿ ಅಷ್ಟಯತಿಗಳಿಂದ ಪೂಜೆ ನಡೆಯುಬೇಕೆಂದು ತೀರ್ಮಾನಿಸಿದರು. ಮೊದಲು ಎಂಟು ಯತಿಗಳಿಗೆ ಎರಡು ತಿಂಗಳಿಗೊಮ್ಮೆ ಪೂಜೆ ನಡೆಸುವ ಸೌಭಾಗ್ಯ ಇತ್ತು. ಇದನ್ನು ಯತಿಗಳಲ್ಲಿ ಒಬ್ಬರಾದ ಸೋದೆ ಶ್ರೀ ವಾದಿರಾಜ ತೀರ್ಥರು ಎರಡು ವರ್ಷಗಳಿಗೊಮ್ಮೆ ನಡೆಸಬೇಕಾಗಿ ಬದಲಾಯಿಸಿದರು. ಕೃಷ್ಣನ ಪೂಜೆಗೆಂದೇ ಪರ್ಯಾಯ ವ್ಯವಸ್ಥೆ ಅರ್ಥಾತ್ ಒಬ್ಬರ ನಂತರ ಒಬ್ಬರು ಪೂಜೆ ನಡೆಸುವ ವ್ಯವಸ್ಥೆಯಾಗಿತ್ತು. ಕೃಷ್ಣನ ಪೂಜೆಯೇ ಪರ್ಯಾಯದ ಮುಖ್ಯ ಉದೇಶ. ಅಲ್ಲದೆ ಮಧ್ವಾಚಾರ್ಯರು ಕೃಷ್ಣನ ಪೂಜೆಗೆ ಎಂಟು ಮಂದಿ ಯತಿಗಳನ್ನು ಈ ಕಾರಣಕ್ಕಾಗಿ ನಿಯೋಜಿಸಿದ್ದರು. ಏಕೆಂದರೆ, ವಿಷ್ಣುವಿನ ಅಷ್ಟಮ ಅವತಾರ, ಕೃಷ್ಣನ ಅವತಾರ ಅಷ್ಟಮಿಯಂದು. ತಾಯಿಯು ಅಷ್ಟಮ ಗರ್ಭದಲ್ಲಿ ಜನಿಸಿದವನು, ಎಂಟು ಮಂದಿ ಸ್ತ್ರೀಯರನ್ನು ವಿವಾಹವಾದವನು. ಹಾಗಾಗಿ ಕೃಷ್ಣನ ಪೂಜೆಗೂ ಅಷ್ಟಯತಿಗಳು. ಈ ಪರ್ಯಾಯದ ಪೂಜಾ ವ್ಯವಸ್ಥೆಯನ್ನು ಸಪರ್ಯಾ ಪರ್ಯಾಯ ಎಂದೂ ಕರೆಯಲಾಗಿದೆ. ಸಪರ್ಯಾ ಎಂದರೆ ಪೂಜೆ. ಪರ್ಯಾಯ ಎಂದರೆ ಪರಿಪರಿ ಆಯಾತಿ. ಅಂದರೆ ಪುನರಾವರ್ತನೆಗೊಂಡು ಬರುವುದು ಎಂದರ್ಥ. ಜೀವನದಲ್ಲಿ ಪುನರಾವರ್ತನೆಗೊಂಡು ಬರುವುದೆಂದರೆ ಅದು ಪೂಜೆ ಮಾತ್ರ.

ವಿವರಣೆ :

ಒಬ್ಬ ಯತಿ ತನ್ನ ಎರಡು ವರ್ಷದ ಪೂಜಾ ಕೈಂಕರ್ಯವನ್ನು ಪೂರೈಸಿ, ಮುಂದಿನ ಸರದಿಯಲ್ಲಿರುವ ಮಠದ ಯತಿಗಳವರಿಗೆ ಹಸ್ತಾಂತರಿಸುವ ಸಂಭ್ರಮವೇ ಪರ್ಯಾಯೋತ್ಸವ. ಪರ್ಯಾಯ ಉತ್ಸವದ ಸಿದ್ಧತೆಯು ಒಂದು ವರ್ಷದ ಮೊದಲೇ ಪ್ರಾರಂಭವಾಗುತ್ತದೆ. ಆರಂಭದಲ್ಲಿ ಕೆಲವೊಂದು ಸಂಪ್ರದಾಯುರೀತ್ಯಾ ಕಾರ್ಯಗಳಿವೆ. ಮೊದಲನೆಯದಾಗಿ,

ಬಾಳೆ ಮುಹೂರ್ತ : ಹಿಂದಕ್ಕೆ ಮಠಕ್ಕೆ ಜಮೀನು, ಹೊಲಗದ್ದೆಗಳಿದ್ದ ಸಮಯದಲ್ಲಿ ಪರ್ಯಾಯಕ್ಕೆ ಬೇಕಾದ ಅಂದರೆ ಪೂಜೆಗೆ ಬೇಕಾಗುವ ಬಾಳೆ ಎಲೆ, ನೈವೇದ್ಯಕ್ಕೆ ಬಾಳೆಹಣ್ಣು ಹಾಗೂ ಅರ್ಚನೆಗಾಗಿ ತುಳಸೀ ಗಿಡವನ್ನು ನೆಡುತ್ತಾರೆ.

ಅಕ್ಕಿ ಮುಹೂರ್ತ : ಪರ್ಯಾಯ ಹಾಗೂ ಎರಡು ವರ್ಷಗಳ ಕಾಲ ಬೇಕಾಗುವ ಅಕ್ಕಿಯ ಸಂಗ್ರಹಣೆ.

ಕಟ್ಟಿಗೆ ಮುಹೂರ್ತ : ಉರುವಲಿಗಾಗಿ ಕಟ್ಟಿಗೆಯ ಸಂಗ್ರಹಣೆ.

ಭತ್ತ ಮುಹೂರ್ತ: ಅಕ್ಕಿಗಾಗಿ ಭತ್ತ.

ಈ ಎಲ್ಲಾ ಕಾರ್ಯಕ್ರಮಗಳನ್ನು ಅಗತ್ಯತೆಗಳನ್ನು ಅಗತ್ಯವಾಗಿ ಸಂಗ್ರಹಣೆ ಮಾಡುವ ಆರಂಭವಾಗಿದೆ.

ಪುರಪ್ರವೇಶ :

ಪರ್ಯಾಯ ಪೀಠವನ್ನೇರುವ ಯತಿಗಳು ತೀರ್ಥಕ್ಷೇತ್ರಗಳಿಗೆ ಭೇಟಿ ನೀಡಿ ಉಡುಪಿಗೆ ಬರುವ ಸಂದರ್ಭದಲ್ಲಿ ಉಡುಪಿಯ ಎಲ್ಲಾ ಗಣ್ಯರು ಅಥವಾ ಮುಖಂಡರು, ಶಿಕ್ಷಣ ಸಂಸ್ಥೆಗಳು ಹಾಗೂ ಎಲ್ಲಾ ಸಂಸ್ಥೆಗಳು ಶ್ರೀಗಳನ್ನು ಆದರದಿಂದ ರಥಬೀದಿಗೆ ಸ್ವಾಗತಿಸುವ ಸುಸಂದರ್ಭವಾಗಿದೆ. ಈ ಸಮಾರಂಭವು ಜನವರಿಯ ಮೊದಲ ವಾರದಲ್ಲಿ ನಡೆಯುತ್ತದೆ. ಪರ್ಯಾಯಕ್ಕಿಂತ ಹದಿನೈದು ದಿನಗಳ ಮೊದಲು. ಅದಲ್ಲದೆ, ಪೀಠಾರೋಹಣದ ಯತಿಗಳು ಹಾಗೂ ಪರ್ಯಾಯದ ಮಠದವರು ಉಳಿದ ಮಠಕ್ಕೆ ಭೇಟಿ ನೀಡಿ ಅಕ್ಕಿ, ಬೇಳೆ, ದವಸ–ಧಾನ್ಯಗಳನ್ನು ಕೊಟ್ಟು, ಪೀಠಾರೋಹಣ ಮಾಡುವ ಯತಿಗಳು ಉಳಿದ ಮಠಾಧಿಪತಿಗಳನ್ನು ಆದರದಿಂದ ಆಹ್ವಾನಿಸುತ್ತಾರೆ. ಅದಲ್ಲದೆ ಊರ ಪರವೂರಿನಿಂದ ಹೊರೆಕಾಣಿಕೆಯು ಸಮರ್ಪಿಸಲ್ಪಡುತ್ತದೆ. ಇತ್ತೀಚೆಗೆ ನಡೆದ ನಮ್ಮ ವಿದ್ಯಾಲಯಕ್ಕೆ ಸಂಬಂಧಿಸಿದ ಶ್ರೀ ಅದಮಾರು ಮಠದ ಪುರಪ್ರವೇಶಕ್ಕೆ ವಿದ್ಯಾಲಯದ ಎಲ್ಲಾ ವಿದ್ಯಾರ್ಥಿಗಳು ಸೇರಿದಂತೆ ಹಲವಾರು ಭಕ್ತಾಭಿಮಾನಿಗಳು ಆ ಪುರಪ್ರವೇಶದ ಮೆರವಣಿಗೆಯಲ್ಲಿ ಕೈಜೋಡಿಸಿಕೊಂಡು ಅಥವಾ ಭಾಗಿಯಾಗಿ ಆ ಪುರಪ್ರವೇಶದ ರಂಗನ್ನು ಹೆಚ್ಚಿಸಿದ್ದಾರೆ. ಈ ಪುರಪ್ರವೇಶದಲ್ಲಿ ಐವತ್ತಕ್ಕೂ ಹೆಚ್ಚಿನ ಕಲಾತಂಡಗಳು ತಮ್ಮ ಕಲೆಯಿಂದಾಗಿ ಜನಮನ ರಂಜಿಸಿದವು. ಅಲ್ಲದೇ ಸಾಂಪ್ರದಾಯಿಕ ರಂಗು ಮನೆ ಮಾಡಿತ್ತು. ನಮ್ಮ ಕಾಲೇಜಿನ ವಿದ್ಯಾರ್ಥಿಗಳು ವಿವಿಧ ರೀತಿಯ–ಪಶ್ಚಿಮಬಂಗಾಳ, ಒರಿಸ್ಸಾ, ಕೇರಳ, ತೆಲಂಗಾಣ, ಕೊಡುಗು ಹೀಗೆ ನಾನಾ ಕಡೆಯ ಪೋಷಾಕು ತೊಟ್ಟು ನೆರೆದಿದ್ದ ಜನರನ್ನು ಜನಪದ ಶೈಲಿಯಲ್ಲಿ ರಂಜಿಸಿದರು. ಇನ್ನು ಕೆಲವರು ಕೋಲಾಟ, ನೃತ್ಯ, ಕೃಷ್ಣರಾಧೆ, ಕಂಸಾಳೆ, ಡೊಳ್ಳು ಕುಣಿತ, ಗೊಂಬೆ ಸೆಟ್, ಚಿಲಿಪಿಲಿ ಗೊಂಬೆ, ಚೆಂಡೆ ಸಹಿತ ಕೋಲಾಟ, ಭಜನೆ ಕುಣಿತಗಳೊಂದಿಗೆ ನೃತ್ಯವನ್ನು ಮಾಡುತ್ತಾ, ಮೆರವಣಿಗೆಯ ಮೆರುಗನ್ನು ಹೆಚ್ಚಿಸಿದರು. ಹೊರೆಕಾಣಿಕೆಗಳೂ ಜೊತೆಗಿದ್ದವು. ಮುಖ್ಯವಾಗಿ ಶ್ರೀ ಶ್ರೀ ಈಶಪ್ರಿಯತೀರ್ಥ ಸ್ವಾಮೀಜಿ ಜೋಡುಕಟ್ಟೆಯಲ್ಲಿ ಪೂಜೆಯನ್ನು ನೆರವೇರಿಸಿ ಮೆರವಣಿಗೆಯಲ್ಲಿ ಅಲಂಕೃತವಾದ ಚಿನ್ನದ ಪಲ್ಲಕ್ಕಿಯಲ್ಲಿ ಪಟ್ಟದ ದೇವರನ್ನು ಇರಿಸಿ, ಪ್ರಪ್ರಥಮ ಬಾರಿಗೆ ಕಾಲ್ನಡಿಗೆಯಲ್ಲೇ ರಥಬೀದಿಗೆ ಬಂದು ಎಲ್ಲರ ಮೆಚ್ಚುಗೆಗೆ ಪಾತ್ರರಾದರು.

ಪರ್ಯಾಯದ ಶೋಭಾಯಾತ್ರೆ

ಜನವರಿ ಹದಿನೆಂಟು ಉಷಃಕಾಲದಲ್ಲಿ ಪರ್ಯಾಯ ಪೀಠವನ್ನೇರುವ ಸ್ವಾಮಿಗಳು ಉಡುಪಿ ಸಮೀಪದ ದಂಡತೀರ್ಥ ಎಂಬಲ್ಲಿ ತೀರ್ಥಸ್ನಾನ ಮಾಡಿಕೊಂಡು ಊರಿಗೆ ಊರೇ ಪರ್ಯಾಯಕ್ಕೆ ಸಜ್ಜಾದ ಮೆರವಣಿಗೆಯಲ್ಲಿ ಭಾಗಿಯಾಗುತ್ತಾರೆ. ನಂತರ ಜೋಡುಕಟ್ಟೆಯಲ್ಲಿ ದೇವರಿಗೆ ಪೂಜೆಯನ್ನು ಮಾಡಿ, ಉಳಿದ ಮಠದ ಸ್ವಾಮೀಜಿಗಳೊಂದಿಗೆ ಪರ್ಯಾಯ ಪೀಠವನ್ನೇರಲಿರುವ ಸ್ವಾಮೀಜಿಯು ಸಾಗುತ್ತಾರೆ. ಈ ಪರ್ಯಾಯದ ಸಮಾರಂಭವನ್ನು ನೋಡಲು ಪ್ರವಾಹೋಪಾದಿಯಲ್ಲಿ ಲಕ್ಷೋಪಲಕ್ಷ ಸಂಖ್ಯೆಯು ಶ್ರೀಕೃಷ್ಣನ ಭಕ್ತರು ಆ ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತಾರೆ. ಜನರು ಮುಖ್ಯ ರಸ್ತೆಗಳಲ್ಲಿ, ದೊಡ್ಡ–ದೊಡ್ಡ ಕಟ್ಟಡಗಳ ಮೇಲೆ, ಇಕ್ಕೆಲಗಳಲ್ಲಿ ಹಾಗೂ ಮನೆಯ ಗೋಡೆಯ ಮೇಲೆ ಹತ್ತಿಕೊಂಡು ಪರ್ಯಾಯದ ಮೆರವಣಿಗೆಯ ಸಮಾರಂಭವನ್ನು ಆಸ್ವಾದಿಸುತ್ತಾರೆ. ಪರ್ಯಾಯದ ಸಾಂಪ್ರದಾಯಿಕತೆಯನ್ನು ಎತ್ತಿ ಹಿಡಿಯುವಂತೆ, ಲಕ್ಷ್ಮೀ ಶೋಭಾನೆ, ವಿಷ್ಣು ಸಹಸ್ರನಾಮ, ಭಜನೆ ಮುಂತಾದ ಧಾರ್ಮಿಕ ಕಾರ್ಯಕ್ರಮಗಳು ಸಾಂಪ್ರದಾಯಿಕ ಮೆರುಗನ್ನು ಹೆಚ್ಚಿಸುತ್ತವೆ. ಅಷ್ಟೇ ಅಲ್ಲ, ಡೊಳ್ಳು ಕುಣಿತ, ಕಂಸಾಳೆ, ಕೋಲಾಟ, ವಿದ್ಯಾರ್ಥಿಗಳ ನೃತ್ಯ, ಇಸ್ರೋ ವೀಕ್ಷಣೆ, ಬೆಳ್ಳಿರಥದಲ್ಲಿ ಕೃಷ್ಣ, ಆಂಜನೇಯ, ವೃಂದಾವನ ಆಕೃತಿಯಲ್ಲಿ ಕುಳಿತು ಮಹಿಳೆಯರ ಭಜನೆ,

ಚೆಂಡೆ, ನಗಾರಿಗಳು, ವಾದ್ಯ ಅಲ್ಲದೆ ರಾಮಮಂದಿರದಲ್ಲಿ ಪೇಜಾವರ ಶ್ರೀಗಳು ಪೂಜೆಮಾಡುವ ಟ್ಯಾಬ್ಲೋ, ತುಳುನಾಡಿನ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಹುಲಿವೇಷ, ಗೋವಿನ ತಳಿಯ ಬಗೆ, ಬೆಂಕಿಯ ಚಕ್ರಗಳು. ಹೀಗೆ ಹಲವಾರು ಕಲಾ ತಂಡಗಳು ಹಾಗೂ ಟ್ಯಾಬ್ಲೋಗಳು ಮೆರವಣಿಗೆಯ ಮೆರುಗನ್ನು ಹೆಚ್ಚಿದವು. ಅಲ್ಲದೇ ನಗರಾಭಿವೃದ್ಧಿಯ ಕಡೆಯಿಂದ ಸ್ವಚ್ಛತೆಯ ಬಗೆಗಿನ ಟ್ಯಾಬ್ಲೋ, ಕೃಷಿ ಇಲಾಖೆಯ ಕಡೆಯಿಂದ ಕೃಷಿ ಸೊಬಗಿನ ಟ್ಯಾಬ್ಲೋ, ನಂತರ ಪಂಚಾಯತಿ ವತಿಯಿಂದ ಭಜನೆಯನ್ನು ಹಾಡಿದರು. ಇವೆಲ್ಲವೂ ಒಂದು ಕಡೆ ಆದರೆ ಇನ್ನೊಂದೆಡೆ ಸಾವಿರಾರು ಹೂವುಗಳಿಂದ ಹಾಗೂ ಹಸಿರು ತಿಳಿ ಎಲೆಗಳಿಂದ ರಮ್ಯ ಮನೋಹರವಾಗಿ ಅದಮಾರು ಪರ್ಯಾಯದ ದರ್ಬಾರು ವೇದಿಕೆ ಸಜ್ಜಾಯಿತು. ಜಾಜಿ, ಮಲ್ಲಿಗೆ, ದುಂಡು ಮಲ್ಲಿಗೆ, ಚೆಂಡು ಹೂ, ಸಂಪಿಗೆ, ಗುಲಾಬಿ ಹೀಗೆ ಸಾವಿರಾರು ಹೂವುಗಳ ನಡುವೆ ಸಂಪ್ರದಾಯದ ಸಂಕೇತದಂತೆ ತೆಂಗಿನ ಗರಿಗಳು, ಸೀಯಾಳ, ಕೆಂದಾಳ, ಅಡಿಕೆ ಮೊದಲಾದವುಗಳನ್ನು ಇರಿಸಿ ಮತ್ತಷ್ಟೂ ಸಾಂಪ್ರದಾಯಿಕ ಮೆರುಗನ್ನು ನೀಡಲಾಯಿತು. ಇವೆಲ್ಲವೂ ಬುಡಗಟ್ಟು ಜನಾಂಗದವರು ನಿರ್ಮಿಸಿದ್ದು ಎನ್ನಲಾಗಿದೆ. ಅಲ್ಲದೆ ಆ ದರ್ಬಾರ್ ಹಾಗೂ ಪರ್ಯಾಯದ ಮೆರವಣಿಗೆಯು ಪ್ಲಾಸ್ಟಿಕ್ ಮುಕ್ತವಾಗಿತ್ತು ಎನ್ನುವುದು ಗಮನಾರ್ಹ ಸಂಗತಿ.

ಪರ್ಯಾಯ ಉತ್ಸವದ ಮುಖ್ಯ ಭಾಗ ಎಂದರೆ ಸರ್ವಜ್ಞ ಪೀಠಾರೋಹಣ. ಹಿಂದೆ ಸರ್ವಜ್ಞ ಪೀಠಾರೋಹಣದಲ್ಲಿ ಶ್ರೀ ಮದ್ವರು ಕೃಷ್ಣನ ಪೂಜೆಯನ್ನು ಮಾಡುವ ದೀಕ್ಷೆಯಲ್ಲಿದ್ದಾಗ, ತಮ್ಮ ಜಪ–ತಪಗಳನ್ನು ಈ ಸರ್ವಜ್ಞ ಪೀಠದ ಮೇಲೆ ಮಾಡುತ್ತಿದ್ದರು. ಹಾಗಾಗಿ ಯಾರು ಪರ್ಯಾಯ ಪೀಠ ಏರುತ್ತಾರೋ ಅವರು ಈ ಸರ್ವಜ್ಞ ಪೀಠದ ಮೇಲೆ ಕುಳಿತುಕೊಳ್ಳಬೇಕು ಮತ್ತು ಅವರಿಗೆ ಪೀಠಾವರೋಹಣ ಸ್ವಾಮೀಜಿ ಅಕ್ಷಯಪಾತ್ರೆ, ಸಟ್ಟುಗ ಹಾಗೂ ಕೀಲಿಕೈಯನ್ನು ಕೊಡುತ್ತಾರೆ. ಈ ಸಮಯದಲ್ಲಿ ಪೀಠಾವರೋಹಣ ಸ್ವಾಮೀಜಿಗಳೇ ಪರ್ಯಾಯ ಸ್ವಾಮೀಜಿಗಳನ್ನು ಆದರದಿಂದ ರಥಬೀದಿಗೆ ಸ್ವಾಗತಿಸುವುದು. ಅಲ್ಲದೆ, ಪರ್ಯಾಯ ಸ್ವಾಮೀಜಿ ಮಧ್ವರ ಸರೋವರದಲ್ಲಿ ಕಾಲು ತೊಳೆದು, ನಂತರ ನವರಂಧ್ರಗಳ ಕಿಂಡಿಯಲ್ಲಿ ಕೃಷ್ಣನನ್ನು ಕಂಡು ನಂತರ ಗರ್ಭಗುಡಿಗೆ ಆಗಮಿಸಿ ಪೂಜೆಯನ್ನು ಮಾಡುತ್ತಾರೆ.

ಸ್ವಾರಸ್ಯ

ಉಡುಪಿ ಪರ್ಯಾಯ ಮಹೋತ್ಸವದ ಸಡಗರ ಒಂದೇ ಇಲ್ಲಿ ಎಲ್ಲಾ ರೀತಿಯ ಜನರು ತಮ್ಮ ಜಾತಿ–ಧರ್ಮವನ್ನು ಮರೆತು ಒಗ್ಗೂಡುವ ಸಮಾರಂಭ. ಮಾತ್ರವಲ್ಲ ಈ ಉತ್ಸವಕ್ಕೆ ಪ್ರವಾಹೋಪಾದಿಯಲ್ಲಿ ಕೃಷ್ಣನ ಭಕ್ತರು ನೆರೆದಿರುತ್ತಾರೆ. ಇಡೀ ಉಡುಪಿಯು ಜಗಮಗಿಸುವ ದೀಪದಿಂದ ಕಂಗೊಳಿಸುತ್ತಿರುತ್ತದೆ. ಸಾಮಾಜಿಕವಾಗಿಯೂ ರಸ್ತೆಯ ದುರಸ್ತಿ, ಸ್ವಚ್ಛತೆಯ ಕಾರ್ಯಕ್ರಮಗಳು ನಡೆಯುತ್ತದೆ. ಹಾಗಾಗಿಯೇ ಉಡುಪಿ ಪರ್ಯಾಯ ಮಹೋತ್ಸವವೆಂದರೆ ನಮಗೆಲ್ಲರಿಗೂ ಸಂಭ್ರಮ.

सुरामत्तः कपिः कश्चिद्वृश्चिकेनात्तदंशनः ।
श्लिष्टः पुनः पिशाचेन न ब्रूयां किं करिष्यति ॥

ಸುರಾಮತ್ತಃ ಕಪಿಃ ಕಶ್ಚಿದ್ ವೃಶ್ಚಿಕೇಣಾತ್ತದಂಶನಃ ।
ಶ್ಲಿಷ್ಟಃ ಪುನಃ ಪಿಶಾಚೇನ ನ ಬ್ರೂಯಾಂ ಕಿಂ ಕರಿಷ್ಯತಿ ॥

ಮೊದಲೇ ಅದು ಮಂಗ.
ಅದರಲ್ಲಿಯೂ ಅದು ಹೆಂಡ ಕುಡಿದಿದೆ.
ಅದರಲ್ಲಿಯೂ ಅದು ಚೇಳಿನಿಂದ ಕಚ್ಚಲ್ಪಟ್ಟಿದೆ ಎಂದ ಮೇಲೆ ಕೇಳಬೇಕೇ? ಅಷ್ಟು ಸಾಲದೆಂಬಂತೆ ಪಿಶಾಚಿಯೊಂದು ಪುನಃ ಅದನ್ನು ಆಲಿಂಗಿಸಿಕೊಂಡಿದೆ.
ಅದರ ಸ್ಥಿತಿ ಹೇಗಿರಬಹುದು? ಹೇಳಲು ಸಾಧ್ಯವಿಲ್ಲ.

ಎನ್.ಎಸ್.ಎಸ್. ಕ್ಯಾಂಪ್‌ನ ಏಳು ದಿನದ ಸಿಹಿ ನೆನಪುಗಳು

ವಸಂತ್
ಪ್ರಥಮ ಬಿ.ಎ.

ಎನ್.ಎಸ್.ಎಸ್. ಎಂದರೆ ರಾಷ್ಟ್ರೀಯ ಸೇವಾ ಯೋಜನೆ ನಾವು ಎನ್.ಎಸ್.ಎಸ್. ಶಿಬಿರಾರ್ಥಿಗಳು ಸದಾ ರಾಷ್ಟ್ರೀಯ ಸೇವೆಗೆ ಸಿದ್ಧರಾಗಿರುತ್ತೇವೆ. ನಮ್ಮ ಕ್ಯಾಂಪ್‌ಗೆ ಮೊದಲ ಸೆಮಿಸ್ಟರ್‌ನಿಂದಲೇ ಕಾಯುತ್ತಿದ್ದೆವು. ಕೊನೆಗೂ ಆ ದಿನ ಬಂದೇ ಬಿಟ್ಟಿತು. ದಿನಾಂಕ 24 ಡಿಸೆಂಬರ್ ತಿಂಗಳು 2019 ಬೆಳಿಗ್ಗೆ ಸುಮಾರು 11 ಗಂಟೆಗೆ ನಮಗಾಗಿ ಬಸ್ ಪೂರ್ಣಪ್ರಜ್ಞ ಕಾಲೇಜಿನ ಆವರಣದಲ್ಲಿ ಕಾಯ್ತಾ ಇದ್ದಿತು. ನಾವೆಲ್ಲ ಒಂದು ವಾರಕ್ಕೆ ಬೇಕಾದಷ್ಟು ಬಟ್ಟೆ, ಪ್ಲೇಟ್, ಲೋಟ, ಬ್ರಷ್, ಪೇಸ್ಟ್, ಸೆಂಟ್, ಮಲಗುವುದಕ್ಕೆ ಹಾಸಿಗೆ ಬೇಕಾದ ವಸ್ತುಗಳನ್ನು ಬ್ಯಾಗ್‌ನಲ್ಲಿ ಇಟ್ಟುಕೊಂಡಿದ್ದೆವು. ಈ ವಿಷಯದಲ್ಲಿ ಹುಡುಗಿಯರ ಬ್ಯಾಗ್ ದೊಡ್ಡದಾಗಿತ್ತು. ಮೇಕ್‌ಅಪ್ ಕಿಟ್ ಇತ್ಯಾದಿ. ಬಸ್ಸಿನಲ್ಲಿ ಕುಳಿತು ಪ್ರಯಾಣ ಮಾಡುತ್ತಿರುವಾಗ ಮನದಲ್ಲಿ ರಾಶಿ ಪ್ರಶ್ನೆಗಳು ಮೂಡುತ್ತಿದ್ದವು. ಅಲ್ಲಿ ಒಂದು ವಾರ ಏನೆಲ್ಲಾ ಕೆಲಸ ಕೊಡುತ್ತಾರೆ? ಅಲ್ಲಿ ಊಟ ಹೇಗಿರುತ್ತೆ? ಬೆಳಿಗ್ಗೆ ಎಷ್ಟು ಬೇಗ ಎಬ್ಬಿಸುತ್ತಾರೆ? ಮೊಬೈಲ್ ಉಪಯೋಗಿಸಲು ಅನುಮತಿ ಇದೆಯಾ ಇಲ್ಲವಾ ಎಂಬ ಗೊಂದಲ. ಇನ್ನೊಂದು ಕಡೆ ಖುಷಿಯು ಕೂಡ. ನನ್ನ ಸಹಪಾಠಿ ಗೆಳೆಯರೊಟ್ಟಿಗೆ ಒಂದು ವಾರ ಸಮಯ ಕಳೆಯುತ್ತೇನೆಂದು. ಮನದಲ್ಲಿ ಇರುವ ಯೋಚನೆ ಮಾತ್ರ ಮುಗಿಯಲಿಲ್ಲ. ಆದರೆ ಬಸ್ಸು ಮಾತ್ರ ಮಧ್ಯಾಹ್ನದ ಹೊತ್ತಿಗೆ ನಮ್ಮ ಶಿಬಿರವನ್ನು ತಲುಪಿಯೇ ಬಿಟ್ಟಿತು. ಎಲ್ಲರೂ ತಮ್ಮ ತಮ್ಮ ಬ್ಯಾಗ್‌ಗಳನ್ನು ತೆಗೆದುಕೊಂಡು ಕಾಲೇಜಿನ ಒಳಗೆ ಹೆಜ್ಜೆ ಹಾಕಿದೆವು. ಹುಡುಗಿಯರಿಗೆ ಎರಡು ತರಗತಿಯ ಕೋಣೆಗಳಲ್ಲಿ ಉಳಿದುಕೊಳ್ಳುವುದಕ್ಕೆ ಸ್ವಚ್ಛಗೊಳಿಸತೊಡಗಿದರು. ನಾವು ನಮ್ಮ ಕೋಣೆಗಳನ್ನು ಸ್ವಚ್ಛಗೊಳಿಸಿ ಕಾಲೇಜಿನ ಗೇಟಿನ ಹತ್ತಿರ ಶಿಬಿರದ ಧ್ವಜದ ಕಂಬಗಳನ್ನು ಹಾಕುತ್ತಿದ್ದೆವು. ಆದರೆ ಮಧ್ಯಾಹ್ನ ಆದ ಕಾರಣ ಹೊಟ್ಟೆ ಮಾತ್ರ ಊಟಕ್ಕೆ ಕಾಯ್ತಾ ಇದ್ದಿತು. ಮಧ್ಯಾಹ್ನ ಊಟ ಮುಗಿಸಿ ಶಿಬಿರಕ್ಕೆ ಬೇಕಾದ ವ್ಯವಸ್ಥೆ ಮಾಡತೊಡಗಿದವು. ಸಾಯಂಕಾಲ ಸ್ವಲ್ಪ ಹೊತ್ತು ಆಟ ಆಡಲು ಶುರು ಮಾಡಿದೆವು. ಸೂರ್ಯ ಮುಳುಗಿ ಸಾಯಂಕಾಲ ಕಳೆದೇ ಬಿಟ್ಟಿತು.

ಈಗ ನಮ್ಮ ನಿಜವಾದ ಟಾಸ್ಕ್ ಶುರುವಾಗತೊಡಗಿತು. ನಾವು 120 ಶಿಬಿರಾರ್ಥಿಗಳು ಇದ್ದೆವು. ಎಲ್ಲ ಶಿಬಿರಾರ್ಥಿಗಳನ್ನು ಒಟ್ಟುಗೂಡಿಸಿ ನಮ್ಮ ಅಧ್ಯಾಪಕರು ಗುಂಪುಗಳನ್ನಾಗಿ ವಿಂಗಡಿಸತೊಡಗಿದರು. ಆದರೆ ನಮ್ಮ ಮನಸ್ಸು ಮಾತ್ರ ಸಹಪಾಠಿ ಗೆಳೆಯರೇ ನಮ್ಮ ಗುಂಪಿಗೆ ಬರಲಿ ಎಂದು ಬಯಸುತ್ತಾ ಇತ್ತು. ಅಲ್ಲಿ ಬಂದದ್ದೇ ಬೇರೆ ಗೆಳೆಯರು/ಗೆಳತಿಯರು. ಈ ಗುಂಪಿನ ಉದ್ದೇಶವೇ ಬೇರೆ ಬೇರೆ ಗೆಳೆಯ/ಗೆಳತಿಯರು ಒಟ್ಟಿಗೆ ಸೇರಿ ಒಬ್ಬರಿಗೊಬ್ಬರ ಪರಿಚಯರಾಗಿ ಒಗ್ಗಟ್ಟಿನಿಂದ ಮುನ್ನಡೆಯಲೆಂದು. ಗುಂಪುಗಳು ಹೀಗಿದ್ದವು. ಹಿಮಾದ್ರಿ, ಶೇಷಾದ್ರಿ, ಅರುಣಾದ್ರಿ, ಸಹ್ಯಾದ್ರಿ ಮತ್ತು ರಜತಾದ್ರಿ ಎಂದು 5 ಗುಂಪುಗಳನ್ನಾಗಿ ವಿಂಗಡಿಸಿದರು. ನಮ್ಮ ಗುಂಪಿನಲ್ಲಿ ಒಟ್ಟು 16 ಜನ ಶಿಬಿರಾರ್ಥಿಗಳು ಇದ್ದರು. ಅದರಲ್ಲಿ 4 ಜನ ಮಾತ್ರ ಹುಡುಗರು ಉಳಿದ 12 ಜನ ಹುಡುಗಿಯರೇ. ನಮ್ಮ ಕಾಲೇಜಿನ ಹಾಗೆ ಹುಡುಗಿಯರದ್ದೇ ಇಲ್ಲಿಯೂ ಸಾಮ್ರಾಜ್ಯ. ವಿದ್ಯಾರ್ಥಿಗಳಿಂದ ಹಿಡಿದು ಅಧ್ಯಾಪಕರವರೆಗೆ ಹೆಣ್ಣುಮಕ್ಕಳೇ ಹೆಚ್ಚು. ಮುಕ್ಕಾಲುಭಾಗ ಹುಡುಗಿಯರಿದ್ದರೆ ಕಾಲುಭಾಗ ಅಷ್ಟೇ ಹುಡುಗರು. ಇಲ್ಲಿ ಕ್ಯಾಂಪ್ನಲ್ಲೂ ಹಾಗೆ ಹುಡುಗಿಯರದ್ದೇ ಮೇಲುಗೈ. ಎಲ್ಲ ಗುಂಪುಗಳಿಗೆ ಒಬ್ಬೊಬ್ಬ ನಾಯಕರನ್ನಾಗಿ ಮಾಡಿ ಎಲ್ಲ ಗುಂಪುಗಳಿಗೆ ಜವಾಬ್ದಾರಿ ಕೆಲಸವನ್ನು ಕೊಟ್ಟರು ಅವತ್ತು ರಾತ್ರಿಯ ಊಟ ಮುಗಿಸಿ ನಾಳೆಯ ಸಿದ್ಧತೆ ನಡೆಸಿದೆವು. ರಾತ್ರಿ 12 ಗಂಟೆಯವರೆಗೆ ಪ್ರಾಕ್ಟಿಸ್ ಮಾಡಿ ಎಲ್ಲ ತಂಡದವರು ಮಲಗಿಕೊಂಡೆವು. ಮಲಗುವಾಗ ಮೊಬೈಲ್ ಉಪಯೋಗಿಸುವ ಅಭ್ಯಾಸ. ಆದರೆ ಮೊಬೈಲ್ ಉಪಯೋಗಿಸಲು ಅನುಮತಿ ಇಲ್ಲದಿದ್ದ ಕಾರಣ ನನ್ನ ಮನಸ್ಸು ಇವತ್ತಿಂದ ಒಂದು ವಾರ

ಮೊಬೈಲ್‌ನಿಂದ ದೂರವಿರಲು ನಿರ್ಧರಿಸಿತು. ನಾನು ಯಾವತ್ತೂ ಮೊಬೈಲ್ ಇಲ್ಲದೆ ಇದ್ದವನಲ್ಲ ಅದು ಹೇಗೆ ಒಂದು ವಾರ ಮೊಬೈಲ್ ಬಿಟ್ಟು ಇದ್ದೆನೋ. ಗೊತ್ತೇ ಆಗಲಿಲ್ಲ. ಆ ಶಿಬಿರವೇ ಹಾಗೆ ಎಲ್ಲವನ್ನು ಮರೆಸಿಬಿಡುತ್ತದೆ. ಬೆಳಿಗ್ಗೆ 5.30ಕ್ಕೆ ದಿನ ಪ್ರಾರಂಭವಾಯಿತು. 6 ಗಂಟೆಗೆ ಯೋಗ ಕ್ಲಾಸ್ ಇದ್ದಿತು. 6 ರಿಂದ 7 ರ ವರೆಗೆ ಯೋಗ ಮಾಡಿದೆವು. ನಾನು ಕರಾಟೆ ಕಲಿತ ಕಾರಣದಿಂದ ನನಗೆ ಯೋಗ ಮಾಡಲು ಸುಲಭವಾಯಿತು. ನನ್ನ ಯೋಗಾಸನವನ್ನು ಕಂಡು ಯೋಗದ ಅಧ್ಯಾಪಕರು ಮೆಚ್ಚುಗೆ ವ್ಯಕ್ತಪಡಿಸಿದರು. ಯೋಗದ ನಂತರ ಪ್ರಾರ್ಥನೆ ಶುರುವಾಯಿತು. ಕೆಲವು ಶಿಬಿರಾರ್ಥಿಗಳು ಅರ್ಧ ಪ್ರಾರ್ಥನೆಯನ್ನು ಕಲಿತಿದ್ದರು. ಆ ಕೆಲವರಲ್ಲಿ ನಾನೂ ಒಬ್ಬ. ಸರ್ ಒಬ್ಬೊಬ್ಬರನ್ನು ಕರೆಸಿ ಪ್ರಾರ್ಥನೆಯನ್ನು ಕೇಳಿಯೇ ಬಿಟ್ಟರು. ಕಲಿಯದೇ ಇದ್ದ ಶಿಬಿರಾರ್ಥಿಗಳು ಎಲ್ಲರೂ ಅವತ್ತು ಸಿಕ್ಕಿ ಹಾಕಿಕೊಂಡರು. ಅಂಥವರಿಗೆ ತರ ತರಹದ ಫನಿಷಮೆಂಟ್ ಕೊಟ್ಟರು. ಬಾತುಕೋಳಿ ನಡಿಗೆ, ಮೈದಾನದಲ್ಲಿ ಅವರು ಎಳೆದಷ್ಟೂ ಓಟ ಕೆಲವರು ಕಷ್ಟ ಪಟ್ಟು ಇನ್ನು ಕೆಲವರು ಇಷ್ಟ ಪಟ್ಟು ಫನಿಷಮೆಂಟ್ ಅನುಭವಿಸಿದರು. ನಂತರ ಕಷಾಯ ಕುಡಿಯಲು ಕೊಡುತ್ತಿದ್ದರು. ನಾನಂತು ಕಷ್ಟಪಟ್ಟು ಕಷಾಯ ಕುಡಿಯುತ್ತಿದ್ದೆ. ಅಲ್ಲಿ ಕಷಾಯ ಕುಡಿದ ಕಾರಣ ಈಗ ಮನೆಯಲ್ಲೂ ಕಷಾಯದ ಭಯವಿಲ್ಲ. ನಂತರ ಒಂದು ಗಂಟೆ ಶ್ರಮದಾನ ಮಾಡಬೇಕಿತ್ತು. ಅದಾದ ನಂತರ ತಿಂಡಿಗೆ ಕುಳಿತುಕೊಂಡೆವು. ತಿಂಡಿ ತಿನ್ನುವಾಗ ಕಲಿತ ಪಾಠವೇ ಬೇರೆ. ಮನೆಯಲ್ಲಿ ತಿಂಡಿ ಪ್ಲೇಟ್ಗೆ ಬೀಳುತ್ತಿದ್ದಂತೆ ಹೊಟ್ಟೆ ಒಳಗೆ ಸೇರಿರುತ್ತಿತ್ತು. ಆದರೆ ಇಲ್ಲಿ ಎಲ್ಲರಿಗು ಬಡಿಸುವವರೆಗೆ ಕಾಯಬೇಕಿತ್ತು. ನಂತರ ತಿಂಡಿ ತಿನ್ನುವ ಮುನ್ನ ಪ್ರಾರ್ಥನೆ ಹೇಳಿ ತಿನ್ನಬೇಕಿತ್ತು. ತಿನ್ನುವಾಗ ಮಾತನಾಡಲು ಇಲ್ಲ. ನಮಗೆ ಆದ ನಗೆ ಚಟಾಕಿಗಳನ್ನು ಹಂಚಿಕೊಳ್ಳಲು ಅದೇ ಸಮಯ. ಬೈಗುಳ ತಿನ್ನುತ್ತಾ ಗೆಳೆಯರೊಟ್ಟಿಗೆ ಹಂಚಿಕೊಳ್ಳುತ್ತಿದ್ದೆವು. ತಿಂಡಿಯ ಬಳಿಕ 12 ಗಂಟೆಯತನಕ ಶ್ರಮದಾನ ಈ ಶ್ರಮದಾನದಲ್ಲಿ ಮಿತಿಮೀರಿ ಬೆಳೆದ ಕಳೆಗಳನ್ನು ಕೀಳುವುದು, ಮುಳ್ಳು ಗಿಡಗಳನ್ನು ಕತ್ತರಿಸುವುದು ಇದೇ ಕೆಲಸ. ಕೆಲಸದ ಸಮಯದಲ್ಲಿ ಕೈಗಳಿಗೆ ಮುಳ್ಳು ಪರಚಿಕೊಂಡು ಹಾಗೋ ಹೀಗೋ ಏನೋದ ಚೇಷ್ಟೆಗಳೊಂದಿಗೆ ಕೆಲಸವನ್ನು ಮಾಡುತ್ತಿದ್ದೆವು. ಪ್ರತಿಯೊಬ್ಬರ ಪರಿಚಯ ಆದದ್ದೇ ಈ ಶ್ರಮದಾನದಲ್ಲಿ. ನಂತರ ಮಧ್ಯಾಹ್ನ ಸ್ನಾನ ಮುಗಿಸಿ ಮಧ್ಯಾಹ್ನದ ಊಟದ ನಂತರ ಸ್ವಚ್ಛತೆಯ ಕೆಲಸ. ಅದಾದ ಬಳಿಕ ಸಾಯಂಕಾಲದ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವುದು. ಸಾಯಂಕಾಲ ಕಾರ್ಯಕ್ರಮಗಳು ನಡೆಯುತ್ತಿದ್ದವು. ಕಸದಿಂದ ರಸ ಮಾಡುವುದು ಹೇಗೆ ಎಂದು ತಿಳಿದುಕೊಂಡೆವು. ಸ್ಮಾರ್ಟ್ ಸಿಟಿಯ ಬಗ್ಗೆ ಚರ್ಚೆ ನಡೆಸಿ ತಿಳಿದುಕೊಂಡೆವು. ಸ್ಥಳೀಯರಿಂದ ಕಾರ್ಯಕ್ರಮಗಳು ನಡೆಯುತ್ತಿದ್ದವು. ಕಾರ್ಯಕ್ರಮದ ನಂತರ ಅವಲೋಕನದ ಸಮಯ. ಇದು ನನಗೆ ಇಡೀ ದಿನದಲ್ಲಿ ಕಷ್ಟಕರವಾದ ಸಮಯವಾಗಿತ್ತು. ಯಾಕೆಂದರೆ ಅವಲೋಕನದ ಸಮಯದಲ್ಲಿ ಇಡೀ ದಿದ ನಮ್ಮ ಎಲ್ಲ ಕೆಲಸ ಮಾಡುವಾಗ ಆದ ತಪ್ಪುಗಳನ್ನು ತಿಳಿಸಿ ಹೇಳಿ ಬೈಯುತ್ತಿದ್ದರು. ಒಂದು ಚಿಕ್ಕ ತಪ್ಪಿದ್ದರೂ ಅದನ್ನು ಸಹ ಬಿಡದೆ ವಿಚಾರಿಸಿ ಮೊದಲ ದಿನದ ಅವಲೋಕನದ ನಂತರ ನಾನು ಕ್ಯಾಂಪ್‌ಗೆ ಬರುವುದು ಬೇಡವಿತ್ತೆಂದು ಎನಿಸತೊಡಗಿತು. ನನ್ನ ಗೆಳೆಯರ ಅನಿಸಿಕೆ ಕೂಡ ಅದೇ ಆಗಿತ್ತು. ರಾತ್ರಿ ಊಟದ ನಂತರ ಪುನಃ ನಾಳೆಯ ತಯಾರಿ, ರಾತ್ರಿ ಮಲಗುವ ಮುನ್ನವೇ ಆಗಬೇಕಿತ್ತು. ಹೀಗೆ 3 ದಿನ ಕಳೆಯಿತು.

ನಾಲ್ಕನೆಯ ದಿನ ಇದ್ದದ್ದು ಕೆಸರು ಗದ್ದೆ. ಈ 7 ದಿನದ ಶಿಬಿರದಲ್ಲಿ ಈ ನಾಲ್ಕನೇ ದಿನ ಮರೆಯಲಾಗದ ದಿನವಾಗಿತ್ತು. ಕೆಸರುಗದ್ದೆಯಲ್ಲಿ ನಾಟಿ ಮಾಡುವುದು ಆಟವಾಡುವುದು ಮತ್ತೊಬ್ಬರಿಗೆ ಬೇಕಂತನೇ ಕೆಸರು ರಟ್ಟಿಸುವುದು ಹೀಗೆ ಹಲವು ಚೇಷ್ಟೆಗಳು. ಈ ಕೆಸರು ಗದ್ದೆಯ ಬಗ್ಗೆ ಈ ಒಂದೇ ಲೇಖನದಲ್ಲಿ ಹೇಳಲು ಸಾಧ್ಯವಿಲ್ಲ. ಹಗ್ಗಜಗ್ಗಾಟ, ಓಟದ ಸ್ಪರ್ದೆ, ಉಪ್ಪುಮೂಟೆ ಓಟ ಹೀಗೆ ಹಲವಾರು ಆಟಗಳನ್ನು ಆಡಿದೆವು. ಮೇಡಮ್, ಸರ್‌ನವರನ್ನು ಸಹ ಕೆಸರಲ್ಲಿ ಮುಳುಗಿಸಿಬಿಟ್ಟೆವು. ಅಷ್ಟೊಂದು ಸುಂದರದ ಆ ಕ್ಷಣಗಳು ಇದನ್ನು ಹಂಚಿಕೊಳ್ಳುವಾಗ ಮನಸ್ಸಿಗೆ ಈಗಲೂ ಖುಷಿ

ನೀಡುತ್ತದೆ. ಕೆಸರು ಗದ್ದೆಯ ನಂತರ ನಮಗೆ ಎನಿಸಿದ್ದು, ಈ ಒಂದು ವಾರದ ಶಿಬಿರ ಎರಡು ವಾರ ಇರಬೇಕಿತ್ತು ಎಂದು. ಸೀನಿಯರ್ಸ್ ಸಹವಾಸವೂ ಹಾಗೆ. ನಮ್ಮ ಹೆಜ್ಜೆ ಹೆಜ್ಜೆಗೂ ಅವರ ಅನುಭವ ಮಾತುಗಳು. ಅವರ ಸಹಾಯ ಕೂಡ ಮರೆಯಲಾಗದು. ಎಲ್ಲ ಶಿಬಿರಾರ್ಥಿಗಳಿಗೆ ಹೀಗೆ. ಮನೆಗೆ ಹಿಂತಿರುಗುವ ಕೊನೆಯ ದಿನ ಬಂದೇ ಬಿಟ್ಟಿತು. ಆದರೆ ಯಾರಿಗೂ ಮನೆಗೆ ಹಿಂತಿರುಗಲು ಮನಸ್ಸೇ ಇರಲಿಲ್ಲ. ನಾವು ಇಲ್ಲಿ ಜೀವನದಲ್ಲಿ ಅಳವಡಿಸಿಕೊಳ್ಳುವಂತಹ ಒಳ್ಳೆಯ ಪಾಠಗಳನ್ನು ಕಲಿತೆವು. ಶಿಸ್ತು, ಸಮಯಪಾಲನೆ, ಒಗ್ಗಟ್ಟಾಗಿ ಕೆಲಸ ಮಾಡುವುದನ್ನು ಕಲಿತೆವು. ಇದರಿಂದ ಒಗ್ಗಟ್ಟಿನಲ್ಲಿ ಬಲವಿದೆ ಎಂಬ ಗಾದೆ ಮಾತು ನನಗೆ ನಿಜವೆನಿಸಿತು.

ನನಗೆ ಕಾಲೇಜಿನಲ್ಲಿ ಸೇರಿದ ಮೇಲೆ ನಮ್ಮ ಕ್ಲಾಸಿನವರ ಪರಿಚಯ ಬಿಟ್ಟರೆ ಬೇರೆಯವರ ಪರಿಚಯ ಇರಲಿಲ್ಲ. ಈ ಕ್ಯಾಂಪ್‌ಗೆ ಬಂದ ಬಳಿಕ ಎಲ್ಲ ಶಿಬಿರಾರ್ಥಿಗಳ ಪರಿಚಯವಾಯಿತು. ಕೊನೆಯ ದಿನ ಮನೆಗೆ ಹಿಂತಿರುಗುವ ದಿನ ಬಂದೇ ಬಿಟ್ಟಿತು. ಆ ಕೊನೆಯ ದಿನದ ಅವಲೋಕನದಲ್ಲಿ ಎಲ್ಲರ ಕಣ್ಣುಗಳಲ್ಲಿ ಕಂಬನಿಗಳು ತುಂಬಿ ಬರತೊಡಗಿದವು. ಸರ್ ಮೇಡಂನವರ ಕಣ್ಣುಗಳಲ್ಲಿಯೂ ಸಹ. ಅಷ್ಟೊಂದು ಪ್ರೀತಿ ಬಾಂಧವ್ಯ ಬೆಳೆದುಬಿಟ್ಟಿತ್ತು. ನಮಗೆಲ್ಲರಿಗೂ ನಮ್ಮ ಕುಟುಂಬ ಎಂಬ ಭಾವನೆ ಮೂಡತೊಡಗಿತು. ಅಷ್ಟೊಂದು ಪ್ರೀತಿ, ಕಾಳಜಿ, ಜವಾಬ್ದಾರಿ ಮತ್ತು ಒಬ್ಬರಿಗೊಬ್ಬರು ಮಾಡುವ ಸಹಾಯ. ನನಗೆ ನೆನಪಾಗುವುದು ಆ ಸಿಹಿ (ಸಿಹಿ) ಪನಿಶ್ಮೆಂಟ್‌ಗಳು, ಅವಲೋಕನದ ಮುದ್ದಾದ ಬೈಗುಳಗಳು, ನಾವು ತಪ್ಪುಮಾಡಿದಾಗ ಸೀನಿಯರ್ಸ್ ಸಲಹೆಗಳು. ಈ ಕ್ಷಣಗಳು ಮತ್ತೊಮ್ಮೆ ಅನುಭವಿಸಬೇಕೆಂದು ಎನಿಸುತ್ತದೆ. ಬದುಕೇ ಹೀಗೆ ಅಲ್ವಾ? ಆ ಸುಂದರ ಕ್ಷಣಗಳು ಮರೆಯಲಾಗದ ನೆನಪುಗಳಾಗಿಯೇ ಉಳಿದುಬಿಡುತ್ತವೆ.

ಆತ್ಮದ ಆಸೆ

ಸಿಂಚನ ಆರ್. ಬಾಯರ್
ದ್ವಿತೀಯ ಬಿ.ಎಸ್ಸಿ.

ಆತ್ಮ ಎಂದೊಡನೆ ನೆನಪಾಗುವ ಮೊದಲ ಪದ ದೆವ್ವ, ಭೂತ, ಪಿಶಾಚಿ ಇತ್ಯಾದಿ. ಆದರೆ ಈ ಭೂತ, ಪಿಶಾಚಿ ಎಂಬುದು ನಿಜವೆ? ಇದು ನಂಬುವಂತದ್ದೇ?

ಸಣ್ಣ ಮಕ್ಕಳಿಗೆ ಹೆದರಿಸುವ ಸಲುವಾಗಿ ಅನೇಕ ಬಗೆಯ ಭೂತದ ಕಥೆಗಳನ್ನು ಹೇಳಿ ಹೆದರಿಸುವುದು ಸಾಮಾನ್ಯ. ಅಲ್ಲದೆ ಇದರ ಬಗ್ಗೆ ಅನೇಕ ಮೂಢ ನಂಬಿಕೆಗಳೂ ರೂಢಿಯಲ್ಲಿದೆ.

ಆತ್ಮಕ್ಕೂ ನಮ್ಮ ದೇಶ ಕಾಯುವ ಸೈನಿಕನಿಗೂ ಏನು ಸಂಬಂಧ? ರೈತನು ದೇಶದ ಬೆನ್ನೆಲುಬು ಅದೇ ರೀತಿ ಸೈನಿಕ ನಮ್ಮ ರಾಷ್ಟ್ರದ ಹೆಮ್ಮೆ.

ಇದುವರೆಗೂ ಸೈನಿಕನ ವೀರ ಮರಣ, ಪದವಿ, ಅವರ ತ್ಯಾಗ, ನಿಷ್ಠೆ, ಬಲಿದಾನ, ದೇಶದ ಬಗೆಗಿನ ಅಭಿಮಾನದ ಬಗ್ಗೆ ತಿಳಿದಿರುತ್ತದೆ. ಆದರೆ ಸೈನಿಕನ ಆತ್ಮದ ಕುರಿತು ಕಥೆ ಎಂದರೆ ಒಮ್ಮೆಲೆ ಎದೆ ಜುಮ್ಮೆನ್ನುವುದು ಸಹಜ; ಆಶ್ಚರ್ಯ ಕೂಡ.

ಪ್ರತಿ ಬೇಸಿಗೆ ರಜಾ ದಿನಗಳಲ್ಲಿ ನಮ್ಮ ಕುಟುಂಬದವರೆಲ್ಲರೂ ಸೇರಿ ಒಂದು ಸ್ವಲ್ಪ ದಿನ ಯಾವುದಾದರೂ ಐತಿಹಾಸಿಕ ಸ್ಥಳಗಳು ಅಂದರೆ ಐಹೊಳೆ, ಹಂಪೆ, ಹೊಸಪೇಟೆ, ರಾಮೇಶ್ವರ, ಕನ್ಯಾಕುಮಾರಿ ಇತ್ಯಾದಿ ಧಾರ್ಮಿಕ ಸ್ಥಳಗಳು; ರಾಜ ಮಹಾರಾಜರು ಆಳಿದ ಸ್ಥಳಗಳು ಹೀಗೆ ಹಲವಾರು ಸ್ಥಳಗಳನ್ನು ನೋಡಿದ್ದೇವೆ. ಆದರೆ ಹಿಂದಿನ ಬಾರಿ ಹೋಗಿದ್ದ ಸಿಕ್ಕಿಮ್ ರಾಜ್ಯದಲ್ಲಿನ ಗ್ಯಾಂಗ್‌ಟಾಕ್ ಎಂಬ ಪ್ರದೇಶವು ತುಂಬಾ ಅಚ್ಚರಿಯನ್ನುಂಟು ಮಾಡಿದ ಸ್ಥಳ. ಝಿರೋ ಪಾಯಿಂಟ್, ಹಿಮದಿಂದ ತುಂಬಿದ ಪ್ರದೇಶಕ್ಕೆ ಹೋಗುವಾಗ ಮೊದಲಿಗೆ ಯಾಮ್‌ತಂಗ್ ಎಂಬ ದೊಡ್ಡ ಕಣಿವೆಯನ್ನು ಹಾದುಹೋಗುವಾಗ ಅಲ್ಲಿ ಒಂದು ಪ್ರಸಿದ್ಧ ಪ್ರವಾಸಿ ಸ್ಥಳ ಸಿಕ್ಕಿತು. ಅದೇ ಈ ಬಾಬ ಸಾಹೇಬರ ಮಂದಿರ (ಸಮಾಧಿ ಸ್ಥಳ). ಅಲ್ಲಿನ ಮಾಹಿತಿಯ ಪ್ರಕಾರ ಆ ಕಥೆಯನ್ನು ಈ ಲೇಖನದ ಮೂಲಕ ತಿಳಿಸುತ್ತೇನೆ.

ಹರಭಜನ್ ಎಂದೊಡನೆ ನೆನಪಿಗೆ ಬರುವುದೊಂದೇ ನಮ್ಮ ಭಾರತದ ಕ್ರಿಕೆಟಿಗ. ಆದರೆ...ಇದು ಒಂದು ವಿಭಿನ್ನ ರೀತಿಯ ಆತ್ಮದೊಡನೆಯ ಸೈನಿಕನ ಕಥೆ.

ಸಾವಿನ ನಂತರವೂ ಒಬ್ಬ ಸೈನಿಕ ತನ್ನ ದೇಶದ ಗಡಿ ಕಾಯುತ್ತಾನೆಂದರೆ ಅದು ನಂಬಲಸಾಧ್ಯವಾದ ಮಾತು. ಆದರೆ, ಭಾರತದ ಗಡಿಭಾಗದ ಜನರಲ್ಲಿ ಇಂಥದೊಂದು ನಂಬಿಕೆಯಿದೆ. ಸಿಕ್ಕಿಂ ಬಳಿ ಇರುವ ಭಾರತ–ಚೀನಾ ಗಡಿಭಾಗ ನಾಥು ಲಾ ಪಾಸ್. ಇಲ್ಲಿ ನಮ್ಮ ದೇಶದ ಗಡಿ ಭಾಗವನ್ನು ಭಾರತೀಯ ಸೈನಿಕನೊಬ್ಬ ತನ್ನ ಸಾವಿನ ನಂತರವೂ ಕಾಯುತ್ತಿದ್ದಾನೆ ಎಂದು ಸ್ಥಳೀಯರು ಹಾಗೂ ಆ ಭಾಗದಲ್ಲಿ ಕಾರ್ಯನಿರತರಾದ ಸೈನಿಕರು ನಂಬುತ್ತಾರೆ.

ಸತ್ತ ನಂತರವೂ ದೇಶದ ಗಡಿ ಕಾಯುತ್ತಿದ್ದಾನೆ ಎನ್ನುವ ನಂಬಿಕೆಯ ಮೂಲಕ ಜನರ ಮನಸ್ಸಿನೊಳಗೆ ಜೀವಂತನಾಗಿರುವ ವ್ಯಕ್ತಿ ಪಂಜಾಬ್ ರೆಜಿಮೆಂಟಿನ ಸೈನಿಕ ಬಾಬಾ ಹರಭಜನ್ ಸಿಂಗ್. ಆತ ಕಳೆದ 49 ವರ್ಷಗಳಿಂದ ತನ್ನ ಪಹರೆಯ ಕಾರ್ಯ ನಿರ್ವಹಿಸುತ್ತಿದ್ದಾನಂತೆ. ಹರಭಜನ್ ಸಿಂಗ್‌ನ ಆತ್ಮ ಚೀನಿ ಸೈನಿಕರಿಂದ ಭಾರತಕ್ಕೆ ಒದಗಬಹುದಾದ ಅಪಾಯ ಹಾಗೂ ಗಡಿಭಾಗದಲ್ಲಿ ಅವರ ಸೈನಿಕರ ಚಲನವಲನಗಳನ್ನು ನಮ್ಮ ಸೈನಿಕರಿಗೆ ಮೊದಲೇ ತಿಳಿಸುತ್ತದಂತೆ.

ಭಾರತದ ಸೈನಿಕರು ಮಾತ್ರವಲ್ಲ, ಚೀನೀ ಪಡೆಯಲ್ಲೂ ಬಾಬಾ ಬಗ್ಗೆ ನಂಬಿಕೆಯಿದೆ. ಈ ಕಾರಣದಿಂದಾಗಿ ಬೇರೆ ದೇಶಗಳ ಸೈನಿಕರ ನಡುವೆ ನಡೆಯುವ ಪ್ರತಿಧ್ವಜ ಕವಾಯಿತಿನಲ್ಲಿ ಬಾಬಾನಿಗಾಗಿ ಖಾಲಿ ಖುರ್ಚಿಯೊಂದನ್ನು ಇಟ್ಟಿರುತ್ತಾರೆ. ಯಾರೀ ಬಾಬಾ?

ಬಾಬಾ ಎಂದು ಕರೆಸಿಕೊಳ್ಳುವ ಹರಭಜನ್ ಸಿಂಗ್ ಒಬ್ಬ ಸಾಮಾನ್ಯ ಭಾರತೀಯ ಸೈನಿಕ. ಆತ ಜನಿಸಿದ್ದು, ಪಂಜಾಬಿನ ಗುಜರಾವಾಲಾ ಜಿಲ್ಲೆಯ ಸಡ್ರಾನಾ ಎಂಬ ಹಳ್ಳಿಯ ಪಂಜಾಬಿ ಕುಟುಂಬದಲ್ಲಿ ಆಗಸ್ಟ್ 20ರ 1946ರಲ್ಲಿ. ತನ್ನ ಹಳ್ಳಿಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ ನಂತರ, 1965ರಲ್ಲಿ ಪಟ್ಟಿ ಪಂಜಾಬ್‌ನ ಪಿ.ವಿ.ಡಿ ಪ್ರೌಢಶಾಲೆಯಲ್ಲಿ ಕಲಿತು, ನಂತರ ಅಮೃತಸರದ ಪಂಜಾಬ್ ರೆಜಿಮೆಂಟಿನಲ್ಲಿ ಸೈನಿಕನಾಗಿ ಸೇರ್ಪಡೆಯಾದರು.

1968ರ ಅಕ್ಟೋಬರ್ 4 ರಂದು ಹರಭಜನ್ ತನ್ನ ಬೆಟಾಲಿಯನ್ನಿನ ಪ್ರಧಾನ ಕಚೇರಿ ತುಕ್ಲಾದಿಂದ ಡೆಂಗ್ ಚಕ್ಲಾಗೆ ಹೇಸರಗತ್ತೆಗಳ ಮೂಲಕ ಸಾಮಾನುಗಳನ್ನು ಸಾಗಿಸುತ್ತಿದ್ದಾಗ, ಕಾಲುಜಾರಿ ವೇಗವಾಗಿ ಹರಿಯುತ್ತಿರುವ ನದಿಯ ಪ್ರವಾಹದಲ್ಲಿ ಮುಳುಗಿ ಕೊಚ್ಚಿಕೊಂಡು ಹೋದರು. ಸೈನಿಕರು ಎಷ್ಟು ಹುಡುಕಿದರೂ ಆತನಾಗಲೀ, ಹೆಣವಾಗಲೀ ಸಿಗಲಿಲ್ಲ. ಸಾವಿಗೀಡಾದ ಹರಭಜನ್ ತನ್ನ ರೆಜಿಮೆಂಟಿನ ಗೆಳೆಯನ ಕನಸಿನಲ್ಲಿ ಕಾಣಿಸಿಕೊಂಡು, ತನ್ನ ಹೆಣ ಇಂತಹ ಸ್ಥಳದಲ್ಲಿದೆಯೆಂದು ತಿಳಿಸಿದರಲ್ಲದೆ, ತನ್ನ ನೆನಪಿಗಾಗಿ ಸಮಾಧಿಯನ್ನು ನಿರ್ಮಿಸಬೇಕೆಂದು ಹೇಳಿದನಂತೆ. ಅದರಂತೆ, ಪಂಜಾಬ್ ರೆಜಿಮೆಂಟ್ ಹರಭಜನ್ ಬಂಕರ್ ಇದ್ದಲ್ಲಿ ಸಮಾಧಿಯನ್ನು ನಿರ್ಮಿಸಿ ಅದಕ್ಕೆ ಮಂದಿರ ರೂಪವನ್ನು ನೀಡಿದೆ. ದಿನಕಳೆದಂತೆ ಬಾಬಾನ ಚಮತ್ಕಾರಗಳು ಹೆಚ್ಚಾಗತೊಡಗಿ, ಬಹಳಷ್ಟು ಜನರಿಗೆ ಬಾಬಾನಲ್ಲಿ ಶ್ರದ್ಧೆ, ಭಕ್ತಿ ಅಧಿಕಗೊಂಡು, ಭಕ್ತ ಸಮೂಹವೇ ರೂಪುಗೊಂಡಿದೆ.

ಗಡಿ ಪ್ರದೇಶದಲ್ಲಿ ಅತಿ ಎತ್ತರದಲ್ಲಿರುವ ಬಾಬಾ ಮಂದಿರಕ್ಕೆ ಹೋಗುವುದು ಕಷ್ಟವಾದುದರಿಂದ ಭಕ್ತಜನರ ಅನುಕೂಲಕ್ಕಾಗಿ, ಗ್ಯಾಂಗ್‌ಟಾಕ್‌ನಿಂದ ನಾಥುಲಾಗೆ ಹೋಗುವ ಮಾರ್ಗದ ಬಳಿ, ಬಾಬಾನ ಹೊಸ ಮಂದಿರ ಕಟ್ಟಿ, ಅದಕ್ಕೆ ಹರಭಜನ್ ಸಿಂಗ್ ಬಾಬಾ ಮಂದಿರ್ ಎಂದು ನಾಮಕರಣ ಮಾಡಲಾಗಿದೆ. ಈ ಎರಡೂ ದೇವಾಲಯಗಳ ನಿರ್ವಹಣೆಯ ಕಾರ್ಯವನ್ನು ಭಾರತೀಯ ಪಂಜಾಬ್ ರೆಜಿಮೆಂಟ್ ವಹಿಸಿಕೊಂಡಿದೆ. ಹೊಸತಾಗಿ ಕಟ್ಟಿಸಿದ ಬಾಬಾ ಮಂದಿರವು ಮೂರು ಗರ್ಭಗುಡಿಗಳನ್ನು ಹೊಂದಿದ್ದು, ಮಧ್ಯದ ಗರ್ಭಗುಡಿಯಲ್ಲಿ ಬಾಬಾನ ದೊಡ್ಡ ಫೋಟೋ ಇದೆ. ಅದರ ಜೊತೆಗೆ ಹಿಂದೂ ದೇವತೆಗಳ ಫೋಟೋ ಮತ್ತು ಸಿಖ್ ಗುರುಗಳ ಫೋಟೋಗಳಿವೆ. ಬಲಭಾಗದ

ಗರ್ಭಗುಡಿಯಲ್ಲಿ, ಬಾಬಾ ಬಳಸುತ್ತಿದ್ದ ಬಟ್ಟೆ, ಬೂಟು, ಚಪ್ಪಲಿ, ಹಾಸಿಗೆ, ಮಿಲಿಟರಿ ಸಮವಸ್ತ್ರ ಮುಂತಾದವುಗಳಿವೆ. ಎಡಭಾಗದ ಗರ್ಭಗುಡಿಯಲ್ಲಿ ನೀರು ತುಂಬಿದ ಬಹಳಷ್ಟು ಬಾಟಲಿಗಳಿವೆ.

ಪ್ರತಿವರ್ಷ ಅಕ್ಟೋಬರ್ 27ರ ಕಾಲ್ದಳ ದಿನಾಚರಣೆಯಂದು ಅಲ್ಲಿರುವ ಭಾರತೀಯ ಸೈನಿಕರು ಬಾಬಾ ಹಾಗೂ ಯುದ್ಧದಲ್ಲಿ ಪ್ರಾಣತೆತ್ತ ನಮ್ಮ ವೀರ ಸೈನಿಕರ ಸ್ಮರಣಾರ್ಥ ಸಮಾಧಿಗೆ ಹೂಮಾಲೆ ಅರ್ಪಿಸುತ್ತಾರೆ. ಪ್ರತಿ ಭಾನುವಾರ ಮತ್ತು ಮಂಗಳವಾರ ಬಾಬಾ ಮಂದಿರದಲ್ಲಿ ಪೂಜೆ ಹಾಗೂ ಪ್ರಸಾದರೂಪದಲ್ಲಿ ಅನ್ನಸಂತರ್ಪಣೆ ನಡೆಯುತ್ತದೆ.

ಸಾವಿನ ನಂತರವೂ ಬಾಬಾ, ಸೈನಿಕನ ಕರ್ತವ್ಯ ನಿರ್ವಹಿಸುತ್ತಿದ್ದಾನೆಂದು ಅವನ ಕುಟುಂಬದವರಿಗೆ ಸೈನ್ಯದಲ್ಲಿ ಒಂದು ಹುದ್ದೆಯನ್ನೂ ನೀಡಲಾಗಿದೆ. ಬಾಬಾಗೆ ಪ್ರತಿವರ್ಷ ಎರಡು ತಿಂಗಳು ರಜೆಯಿದ್ದು, ಆತ ಬಳಸುತ್ತಿದ್ದ ಸಕಲ ವಸ್ತುಗಳ ಜೊತೆಗೆ ಬಾಬಾನನ್ನು ಅವರ ಊರಿಗೆ ರೈಲಿನ ಮೂಲಕ ಕಳುಹಿಸುತ್ತಿದ್ದರು. ಅವನಿಗಾಗಿ ಒಂದು ಬೋಗಿಯನು ಕಾಯ್ದಿರಿಸಿ, ಜೊತೆಗೆ ಮೂವರು ಸೈನಿಕರು ಹೋಗುತ್ತಿದ್ದರು. ಬಾಬಾ ಊರಿಗೆ ಹೋಗಿಬರುವುದು ಒಂದು ಧಾರ್ಮಿಕ ವಿಧಿಯ ರೂಪ ತಳೆಯತೊಡಗಿತ್ತಲ್ಲದೆ, ಈ ಸಂದರ್ಭದಲ್ಲಿ ಜನಸ್ತೋಮವೇ ಸೇರತೊಡಗಿತು. ವಿಚಾರವಾದಿಗಳು ಇದೊಂದು ಮೂಢನಂಬಿಕೆಯೆಂದು ವಾದಿಸಿ, ಇಂತಹ ಮೂಢನಂಬಿಕೆ ಸೈನ್ಯದಲ್ಲಿರಕೂಡದೆಂದು ಕೋರ್ಟಿನ ಬಾಗಿಲನ್ನು ತಟ್ಟಿದರು. ನ್ಯಾಯಾಲಯದ ಆದೇಶದಂತೆ ಈ ಬಗೆಯ ವಿಧಿಯನ್ನು ಈಗ ನಿಲ್ಲಿಸಲಾಗಿದೆ. ಬಾಬಾ ಮಂದಿರದ ಕೋಣೆಯನ್ನು ಪ್ರತಿದಿನ ಗುಡಿಸಿ, ಬೂಟುಗಳನ್ನು ಪಾಲಿಶ್ ಮಾಡಿ, ಹಾಸಿಗೆ ಸಿಂಪಡಿಸಿ, ಇಸ್ತ್ರಿ ಮಾಡಿದ ಸಮವಸ್ತ್ರಗಳನ್ನು ಇಟ್ಟಿರುತ್ತಾರೆ. ಬಾಬಾ ಮಂದಿರವು ಜನರ ಹಾಗೂ ಸೈನಿಕರ ಶ್ರದ್ಧಾಕೇಂದ್ರವಾಗಿದೆ. ಇಲ್ಲಿ ಕಾರ್ಯನಿರತರಾಗುವ ಪ್ರತಿಯೊಬ್ಬ ಸೈನಿಕನು ಹಾಗೂ ಇತ್ತ ಬರುವ ಪ್ರವಾಸಿಗಳು ಮತ್ತು ಸ್ಥಳೀಯ ಜನರು ಬಾಬಾನ ಆಶೀರ್ವಾದ ಪಡೆಯಲು ಬರುತ್ತಾರೆ. ಕುಡಿಯುವ ನೀರನ್ನು ಬಾಟಲಿಯಲ್ಲಿ ತುಂಬಿಟ್ಟು ಬಾಬಾ ಮಂದಿರದಲ್ಲಿ ಮೂರು ದಿನಗಳವರೆಗೆ ಇಟ್ಟರೆ, ಅದರಲ್ಲಿ ಔಷಧಿ ಗುಣ ತುಂಬಿರುತ್ತದೆಯೆಂದು, ಅದನ್ನು 21 ದಿನಗಳವರೆಗೆ ಕುಡಿದಲ್ಲಿ ರೋಗ ನಿವಾರಣೆಯಾಗುವುದೆಂಬ ವಿಶ್ವಾಸ ಭಕ್ತರಲ್ಲಿದೆ. ಆದುದರಿಂದ ಈ ಮಂದಿರದಲ್ಲಿ ನೀರು ತುಂಬಿದ ಬಹಳಷ್ಟು ಬಾಟಲಿಗಳು ಕಂಡುಬರುತ್ತದೆ. ಆ ನೀರನ್ನು ಕುಡಿಯುವ ಭಕ್ತರಿಗೆ, 21 ದಿನ ಮಾಂಸಾಹಾರ ಹಾಗೂ ಮದ್ಯಪಾನ ನಿಷಿದ್ಧ.

ಪವಾಡಪುರುಷನಾಗಿ ಬಾಬಾ ಎನಿಸಿಕೊಂಡಿರುವ ಹರಭಜನ್, ಕುದುರೆ ಸವಾರಿ ಮಾಡುತ್ತ ಗಡಿರಕ್ಷಣೆ ಮಾಡುತ್ತಿರುವರು ಎಂದು ಉಭಯ ಗಡಿಯ ಸೈನಿಕರೂ ಕಣ್ಣಾರೆ ನೋಡಿರುವುದಾಗಿ ಹೇಳುತ್ತಾರೆ. ಅಲ್ಲದೆ ನಮ್ಮ ಭಾಗದ ಸೈನಿಕ, ಗಡಿಕಾವಲಿನ ತನ್ನ ಕರ್ತವ್ಯವನ್ನು ಮಾಡದಿದ್ದಲ್ಲಿ ಬಾಬಾ ಅಂಥವರಿಗೆ ಶಿಕ್ಷೆ ನೀಡುವ ಮೂಲಕ ಕರ್ತವ್ಯ ನಿಷ್ಠೆ ಬಗ್ಗೆ ಎಚ್ಚರಿಸುವರು ಎಂಬ ನಂಬಿಕೆ ಹೊಂದಿರುವರು.

ಭಗವದ್ಗೀತೆಯಲ್ಲಿನ ಶ್ರೀಕೃಷ್ಣನ ಮಾತು: ಆತ್ಮವು ಶ್ರೀಹರಿಯ ಒಂದು ಭಾಗ. ಪಂಚಭೂತಗಳಲ್ಲದೆ ಇತರ ಯಾವುದೇ ಹರಿತ ವಸ್ತುವಿನಿಂದಾಗಲಿ ಆತ್ಮದ ನಾಶ ಅಸಾಧ್ಯ.

ಆತ್ಮದ ಬಗ್ಗೆ ಅಷ್ಟಾಗಿ ನಂಬಿಕೆ ಇರಲಿಲ್ಲ. ಆದರೆ ಈ ಮೇಲ್ಕಂಡ ಕಥೆಯ ಸಂಬಂಧಿತ ಸ್ಥಳವನ್ನು ಪ್ರತ್ಯಕ್ಷವಾಗಿ ಕಂಡಿದ್ದು, ಕೃಷ್ಣನ ಸಂದೇಶವನ್ನು ತಿಳಿದ ನಂತರ ಆತ್ಮದ ಬಗ್ಗೆ ಸಂಪೂರ್ಣ ನಂಬಿಕೆ ಹುಟ್ಟಿತು.

ರಾಜಕಾರಣಿಗಳು ರಾಷ್ಟ್ರಕರಾಗುವುದು ಯಾವಾಗ?

ಮೇಘ
ಪ್ರಥಮ ಬಿ.ಕಾಂ.

ಭಾರತ ರತ್ನ ಡಾ. ಬಿ. ಆರ್. ಅಂಬೇಡ್ಕರ್ ರೂಪಿಸಿಕೊಟ್ಟ ಭಾರತದ ಸಂವಿಧಾನದಂತೆ ಶಾಸಕ ಅಥವಾ ಸಂಸದ ಸ್ಥಾನಕ್ಕೆ ಚುನಾವಣೆಗೆ ಸ್ಪರ್ಧಿಸಲು ಬೇಕಾದ ಅರ್ಹತೆ ಸ್ಪಷ್ಟವಿದೆ. ಭಾರತೀಯ ಪ್ರಜೆಯಾಗಿದ್ದು ದೇಶದ ಯಾವುದೇ ಪ್ರಾಂತ್ಯದಲ್ಲಿ ಅವರ ಹೆಸರು ಮತದಾರರ ಪಟ್ಟಿಯಲ್ಲಿದ್ದು 25 ವರ್ಷ ವಯಸ್ಸಾಗಿರಬೇಕು. ಅಭ್ಯರ್ಥಿಯ ವಿದ್ಯಾರ್ಹತೆ ಕುರಿತು ಯಾವುದೇ ಪ್ರಸ್ತಾಪವಿಲ್ಲ. ಅಂದರೆ ಜನತಾಂತ್ರಿಕತೆಯನ್ನು ಸಮರ್ಪಕವಾಗಿ ಮುನ್ನಡೆಸಿಯಾರೆಂಬ ವಿಶ್ವಾಸವನ್ನು ನಮ್ಮ ಸಂವಿಧಾನ ಹೊಂದಿದೆ. ಆ ನಂಬಿಕೆಗೆ ಊನ ಬಾರದಂತೆ ಭಾರತದ ಪ್ರತೀ ಪ್ರಜೆಯೂ ನಡೆದುಕೊಳ್ಳಬೇಕು. ಚುನಾವಣೆ ಮುಗಿದು ಒಂದು ಜನಪ್ರಿಯ ಸರಕಾರ ಅಸ್ತಿತ್ವಕ್ಕೆ ಬಂದ ಮೇಲೆ ಅದು ಪಕ್ಷಬೇಧವಿಲ್ಲದೆ ಎಲ್ಲರ ಸರಕಾರವೇ ಹೌದು. ಪ್ರತಿಪಕ್ಷವೂ ಸರಕಾರದ ಭಾಗವೇ. ಆಡಳಿತ ಪಕ್ಷ ಮತ್ತು ಪರ್ಯಾಯ ಪಕ್ಷ ಎತ್ತಿನ ಬಂಡಿಯ ಎರಡು ಚಕ್ರಗಳಿದ್ದಂತೆ. ಎರಡೂ ಸಮಾನ ಜವಾಬ್ದಾರಿಯಿಂದ ಜನರ ಆಶೋತ್ತರಗಳನ್ನು ಸಫಲವಾಗಿಸಲು ಸರ್ವಪ್ರಯತ್ನ ನಡೆಸಬೇಕು. ಹಾಗಾಗುತ್ತಿದೆಯೇ ಎಂದು ಪ್ರಶ್ನಿಸಿದರೆ ಉತ್ತರ ನಿರಾಶಾದಾಯಕ. ಆಡಳಿತ ಪಕ್ಷ ಅಧಿಕಾರ ಸೂತ್ರ ಹಿಡಿಯುವುದೇ ತಡ ಟೀಕೆಗಳ ಪ್ರಹಾರವೇ ಹೊರತು ಹೀಗೆ ಮಾಡೋಣ, ಈ ಕಾರ್ಯಕ್ರಮ ಸರಿಹೋಗಬಹುದು ನೋಡಿ, ಇಂಥ ಉತ್ತಮ ಯೋಜನೆ ಅಳವಡಿಸಿ ಎನ್ನುವ ಸಲಹೆ, ಸೂಚನೆಗಳು ಆಡಳಿತೇತರ ಪಕ್ಷಗಳ ನಾಯಕರಿಂದ ಬರುವುದು ಅಪರೂಪವೇ. ಮತಗಟ್ಟೆಗಳಿಗೆ ಹೋಗದಿರುವವರ ಪೈಕಿ ವಿದ್ಯಾವಂತರೇ ಹೆಚ್ಚು. ಶೇಕಡಾ 60 ರಷ್ಟು ಮತಗಳು ಚಲಾವಣೆಯೇ ಆಗುತ್ತಿಲ್ಲ. ಇನ್ನು ಅದರ ಅರ್ಧದಷ್ಟು ಮತಗಳನ್ನು ಮಾತ್ರ ಗೆಲುವು ಸಾಧಿಸಿದ ಸರ್ಕಾರ ಪಡೆದಿರುತ್ತದೆ. ಪರಿಣಾಮವಾಗಿ ಉಳಿದ ಪಕ್ಷಗಳ ಸದಸ್ಯರು ಸರ್ಕಾರದ ಮೇಲೆ ಸಣ್ಣಪುಟ್ಟ ವಿಷಯಗಳನ್ನೂ ನೆಪವಾಗಿಸಿಕೊಂಡು ದೂಷಣೆಗೆ ಮುಗಿಬೀಳುತ್ತಿರುತ್ತಾರೆ. ನಾಗರಿಕರ ಪಾಡು, ಕುಂದುಕೊರತೆಗಳು, ಬೆಲೆ ಏರಿಕೆ, ಆರೋಗ್ಯ, ಕೃಷಿ, ಕೈಗಾರಿಕೆ, ವೈದ್ಯಕೀಯ ಸೇವೆ, ವಿದ್ಯಾಭ್ಯಾಸಕ್ಕೆ ಅಗತ್ಯ ಸೌಲಭ್ಯ ಈ ಕುರಿತ ವಿಚಾರಗಳು ಚರ್ಚೆಗೆ ಬರುವುದಿಲ್ಲ.

ಜಾರ್ಜ್ ಬರ್ನಾಡ್ ಶಾ ಪ್ರಜಾಪ್ರಭುತ್ವವನ್ನು ದೊಡ್ಡ ಬಲೂನಿಗೆ ಹೋಲಿಸುತ್ತಾರೆ. "ಅನಿಲ ಅಥವಾ ಬಿಸಿಗಾಳಿ ತುಂಬಿದ ಅದನ್ನು ನೀವು ಅಂದರೆ ಪ್ರಜೆಗಳು ಐದು ವರ್ಷಗಳ ಕಾಲ ಆಗಸದಲ್ಲಿ ಥಳಿಥಳಿಸುವುದನ್ನು ನೋಡುತ್ತಿರುತ್ತೀರಿ. ಉಳಿದವರ ಕೈ ನಿಮ್ಮ ಕಿಸೆಯಲ್ಲಿದ್ದರೂ ಅದರ ಪರಿವೆಯೇ ನಿಮಗಾಗದು!" ಜನರಿಂದ, ಜನರಿಗಾಗಿ, ಜನರದೇ" ಎನ್ನುವುದೇನೋ ಪ್ರಜಾಪ್ರಭುತ್ವದ ವ್ಯಾಖ್ಯೆ. ಆದರೆ ರಾಜಕೀಯವೇ ಉದ್ಯಮವಾಗಿರುವಾಗ ಎಲ್ಲಿಯ ಪ್ರಜೆ? ಎಲ್ಲಿಯ ಪ್ರಭುತ್ವ? ಮಾಧ್ಯಮಗಳು ರಾಜಕಾರಣಿಗಳ ಭವಿಷ್ಯ ಏನು, ಎತ್ತ ಎಂಬ ಕುತೂಹಲವನ್ನು ಬಿಂಬಿಸುತ್ತವೆಯೇ ಹೊರತು ಪ್ರಜೆಗಳ ಭವಿಷ್ಯವೇನು ಎಂದು ಆತಂಕಗೊಳ್ಳುವುದಿಲ್ಲ. ನಮಗೆ ಸ್ವಿಸ್ ಜನತಾಂತ್ರಿಕ ವ್ಯವಸ್ಥೆ ಮಾದರಿಯಾಗಬೇಕಿದೆ. ಆಗಿಂದಾಗಲೇ ಅಲ್ಲಿ ಪ್ರಜಾಭಿಪ್ರಾಯ ಸಂಗ್ರಹಿಸಲಾಗುತ್ತದೆ. ಎರಡೂವರೆ ವರ್ಷದ ಅವಧಿಯಲ್ಲಿ ಆಯ್ಕೆಯಾದ ಸರ್ಕಾರದ ಕಾರ್ಯವೈಖರಿ ಗಮನಿಸಲಾಗುತ್ತದೆ. ಆಡಳಿತ ತೃಪ್ತಿಯೆನಿಸಿದರೆ ಮಾತ್ರ ಉಳಿದ ಎರಡೂವರೆ ವರ್ಷ ಸರ್ಕಾರ ಆಡಳಿತದಲ್ಲಿ ಮುಂದುವರಿಯಲು ಅಡ್ಡಿಯಿಲ್ಲ. ಆದರೆ ಆಡಳಿತ ಅಸಮರ್ಪಕವೆನ್ನಿಸಿದರೆ ಮತ್ತೆ ಚುನಾವಣೆ ನಡೆಸುವ ವ್ಯವಸ್ಥೆ ಅಲ್ಲಿದೆ. ಮಹತ್ವದ ಶಾಸನಗಳನ್ನು ರೂಪಿಸಲು ಪ್ರಜೆಗಳ ಅಭಿಪ್ರಾಯಕ್ಕೆ ಹೆಚ್ಚು ಮನ್ನಣೆ ನೀಡಲಾಗುತ್ತದೆ. ಸ್ವಿಡ್ಜರ್‌ಲ್ಯಾಂಡಿನಲ್ಲಿರುವುದು ನೇರ ಪ್ರಜಾಪ್ರಭುತ್ವ ವ್ಯವಸ್ಥೆಯೆನ್ನಬಹುದು. ಇದರಿಂದ ಎರಡು ಬಗೆಯ ಲಾಭವಿದೆ. ಒಂದು ಚುನಾಯಿತ, ಸರ್ಕಾರಕ್ಕೆ ಜನಾವಲಂಬನ ಪ್ರಜ್ಞೆಯಿರುತ್ತದೆ, ಎರಡು, ಸರ್ಕಾರ ಎಸಗಿರಬಹುದಾದ ಆಂದೋಲನಗಳಿಗೆ ಎಡೆಯಿಲ್ಲದೆ ಜನರಿಗೆ ನೆಮ್ಮದಿ ಪ್ರಾಪ್ತವಾಗುವುದರಲ್ಲಿ ಸಂಶಯವಿರದು. ನಾವು ಆಯ್ಕೆ ಮಾಡುವ ಪ್ರತಿನಿಧಿಗಳು ನಮಗೆ ಅಭಯ ನೀಡಬೇಕು. ದುಷ್ಟ ಶಿಕ್ಷಣ, ಶಿಷ್ಟರಕ್ಷಣೆ ಎಂಬ ನಮ್ಮ ಪರಂಪರಾಗತ

ಪರಿಕಲ್ಪನೆಗೆ ಅವರು ಬದ್ಧರಾಗಿರಬೇಕು. ವಿಪರ್ಯಾಸವೆಂದರೆ ಅವರೇ ಸದಾ ಭಯದ ನೆರಳಿನಲ್ಲಿ ಓಡಾಡುತ್ತಾರೆ. ಅವರ ಅಂಗರಕ್ಷಕರಿಗೆ ಸಂಬಳ, ಭತ್ಯೆ ಪಾವತಿಯಾಗುವುದು ಪ್ರಜೆಗಳ ತೆರಿಗೆ ಹಣದಿಂದಲೇ. ಬ್ರಿಟನ್ನಿನ ತತ್ವಜ್ಞಾನಿ ಹಾಗೂ ರಾಜನೀತಿಜ್ಞ ಜೆ.ಎಸ್.ಮಿಲ್ "ಪ್ರಜಾಪ್ರಭುತ್ವ ಪ್ರಜೆಯಲ್ಲಿ ದೇಶದ ಬಗ್ಗೆ ಪ್ರೇಮ, ಆಸಕ್ತಿ ಮತ್ತು ಹೊಣೆಗಾರಿಕೆಯ ಪ್ರಜ್ಞೆ ಮೂಡಿಸುವುದು " ಎಂದಿದ್ದಾರೆ. ನಮ್ಮಲ್ಲಿ ಪ್ರಜಾಪ್ರಭುತ್ವ ಸೊರಗಿದೆ. ಬಹುತೇಕ ಮನೆತನದ ಆಡಳಿತ ವಿಜೃಂಭಿಸಿದೆ. ಲಾಲ್ ಬಹದೂರ್ ಶಾಸ್ತ್ರಿ ಪ್ರಧಾನಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿದ ಹೊಸದರಲ್ಲಿ ಅವರ ಹಿರಿಯ ಮಗನಿಗೆ ಉನ್ನತ ಹುದ್ದೆ ನೀಡಲು ಖಾಸಗಿ ಸಂಸ್ಥೆಯೊಂದು ಮುಂದಾಯಿತು. ಶಾಸ್ತ್ರೀಜಿಯವರಿಗೆ ಸುದ್ದಿ ತಿಳಿಯಿತು. ನಾನು ಪ್ರಧಾನಿಯಾದ ಮಾತ್ರಕ್ಕೆ ನಿನಗೆ ದಿಢೀರನೆ ಈ ಹುದ್ದೆಗೆ ಅರ್ಹತೆ ಬರುವುದಾದರೂ ಹೇಗೆ? ಖಂಡಿತ ಇದನ್ನು ಒಪ್ಪಿಕೊಳ್ಳಬೇಡ". ಎಂದು ಮಗನಿಗೆ ಕಟ್ಟುನಿಟ್ಟಾಗಿ ಹೇಳಿದರು. ಅಂಥ ಮನೋಧರ್ಮ ನಮಗೆ ಮಾದರಿ ಆಗಬೇಕಿದೆ. ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವದ ರಾಷ್ಟ್ರ ಎನ್ನುವ ಹಿರಿಮೆ ಭಾರತದ್ದು. ಪ್ರತೀ ಪ್ರಜೆಯೂ ಒಬ್ಬ ರಾಜಕಾರಣಿಯೇ. ಜನರೇ ಪ್ರಜಾಪ್ರಭುತ್ವದ ಶಕ್ತಿಯ ಮೂಲ. ಜನತಂತ್ರದ ಯಶಸ್ಸು ಜನರ ವಿವೇಕ, ಪ್ರಜ್ಞೆ ಮತ್ತು ಜಾಗೃತಿಯನ್ನೇ ಅವಲಂಬಿಸಿದೆ. ಪ್ರಜಾಪ್ರಭುತ್ವ ಒಬ್ಬ ವ್ಯಕ್ತಿಯ ಯೋಗ್ಯತೆ ಪರಿಗಣಿಸುತ್ತದೆ. ಒಬ್ಬರು ಅಥವಾ ಕೆಲವೇ ಕೆಲವರು ಇತರರನ್ನು ದಬ್ಬಾಳಿಕೆಯಿಂದ ಆಳವುದನ್ನು ನಿರಾಕರಿಸುತ್ತದೆ. "ರಾಜಕೀಯ ದಡ್ಡರ ಕೊನೆಯ ಆಯ್ಕೆ" ಎಂಬ ಉಕ್ತಿಯನ್ನು ಸುಳ್ಳಾಗಿಸಬೇಕಿದೆ. ಈ ನಿಟ್ಟಿನಲ್ಲಿ ಪ್ರಜೆಗಳ ಸರಿಯಾದ ನಾಯಕನನ್ನು ಆಯ್ಕೆ ಮಾಡಿ ಪ್ರಜಾಪ್ರಭುತ್ವವನ್ನು ಉಳಿಸುವಲ್ಲಿ ಕಾರ್ಯನಿರ್ವಹಿಸಬೇಕು.

ಶ್ರೀ ಅಮ್ಮೆಂಬಳ ಸುಬ್ಬರಾವ್ ಪೈ

(1852–1909) ಸಂಸ್ಥಾಪಕರು: ಕೆನರಾ ಬ್ಯಾಂಕ್

ಮನೋಜ್ ಎಂ. ಪ್ರಭು
ತೃತೀಯ ಬಿ.ಕಾಂ.

ಕೆನರಾಬ್ಯಾಂಕ್‌ನ ಸಾವಿರಾರು ಉದ್ಯೋಗಿಗಳ ಪರಿವಾರ. ಅಂತೆಯೇ ಕೆನರಾಬ್ಯಾಂಕ್ ಮತ್ತು ಕೆನರಾ ಶಿಕ್ಷಣ ಸಂಸ್ಥೆಗಳಿಂದ ಸಹಾಯ ಪಡೆದಿರುವ ಕೋಟ್ಯಾಂತರ ಪರಿವಾರಗಳಿಗೆ ಪ್ರಾಥಃ ಸ್ಮರಣೀಯರಾದ ಶ್ರೀಯುತ ಅಮ್ಮೆಂಬಳ ಸುಬ್ಬರಾವ್ ಪೈ, 1852ರ ನವೆಂಬರ್ 19ರಂದು ಮುಲ್ಕಿಯ ಸುಶಿಕ್ಷಿತ, ಸುಸಂಸ್ಕೃತ ಶ್ರೀ ಉಪೇಂದ್ರ ಪೈ ದಂಪತಿಗಳ ಪರಿವಾರದಲ್ಲಿ ಜನಿಸಿದರು. ಇವರು ಬದುಕಿದ್ದು ಕೇವಲ 57 ವರ್ಷ ಮಾತ್ರ. ಆದರೆ ಇವರು ಮಾಡಿದ ಸಾಧನೆ ಮಾತ್ರ 570 ವರ್ಷಗಳಿಗೂ ಮಿಗಿಲಾದದ್ದು ಎಂದರೆ ಅತಿಶಯೋಕ್ತಿಯಾಗಲಾರದು. ಇವರು ಶತಮಾನದ ಮಹಾ ಸಾಧಕರು.

ದಿ। ಅಮ್ಮೆಂಬಳ ಸುಬ್ಬರಾವ್ ಪೈಯವರು ಓರ್ವ ದಾರ್ಶನಿಕರಾಗಿದ್ದರು. ಅಲ್ಲದೇ ಓರ್ವ ಶ್ರೇಷ್ಠ ಶಿಕ್ಷಣತಜ್ಞ ಓರ್ವ ಸಮಾಜ ಸೇವಕ, ಓರ್ವ ಕೊಡುಗೈ ದಾನಿ ಮತ್ತು ಮುಖ್ಯವಾಗಿ ಮಹಾನ್ ಮಾನವತಾವಾದಿಯಾಗಿದ್ದರು. ಬ್ಯಾಂಕ್ ಸಹಿತ ಚಿನ್ನದ ಪದಕದೊಂದಿಗೆ ಖ್ಯಾತ ವಕೀಲರಾಗಿದ್ದರಿಂದ ಇವರು ಹಣದ ಹೊಳೆಯನ್ನೇ ಹರಿಸಬಹುದಿತ್ತು. ಆದರೆ ಸತ್ಯ ಮತ್ತು ತತ್ವನಿಷ್ಠೆ ಇದ್ದ ಪೈಗಳು ಹಣಕ್ಕಾಗಿ ಎಂದೂ ಆಸೆ ಪಡಲಿಲ್ಲ. ತನ್ನಲ್ಲಿರುವ ಸಂಪತ್ತನ್ನು ಸಮಾಜಕ್ಕಾಗಿ ವಿನಿಯೋಗಿಸಿದರು. ಬಡವರ ಮೊಕದ್ದಮೆಗಳನ್ನು ಉಚಿತವಾಗಿ ಮಾಡುತ್ತಿದ್ದರು. ನ್ಯಾಯಯುತವಾಗಿದ್ದರೆ ಮಾತ್ರ ಇತರರ ಮೊಕದ್ದಮೆಗಳನ್ನು ಸ್ವೀಕರಿಸುತ್ತಿದ್ದರು. ಆದರೆ ಕೇವಲ ಇಷ್ಟೇ ಮಾಡುವುದರಿಂದ ಸಮಾಜಕ್ಕೆ ಸರಿಯಾದ ನ್ಯಾಯ ಕೊಡುವುದು ಅಸಾಧ್ಯ ಎಂದು ಅವರಿಗೆ ಅರಿವಾಯಿತು. ಇದರಿಂದಾಗಿ ಅವರಿಗೆ ಒಂದು ಬ್ಯಾಂಕಿನ ಪರಿಕಲ್ಪನೆ ಬಂತು. ಆ ಕಾಲದಲ್ಲಿ ಅದು ಸುಲಭದ ವಿಚಾರವಾಗಿರಲಿಲ್ಲ. ಆದರೆ ಛಲ ಬಿಡದ ತ್ರಿವಿಕ್ರಮನಂತೆ ಕಾರ್ಯಪ್ರವೃತ್ತರಾದ ಪೈಗಳು ತನ್ನಂತೆಯೇ ಮನೋಭಾವನೆಯುಳ್ಳ ತನ್ನ ಅನೇಕ ಗಣ್ಯ ಸ್ನೇಹಿತರನ್ನು ಸಂಪರ್ಕಿಸಿ, ವಿಚಾರ ವಿಮರ್ಶೆ ನಡೆಸಿದರು. ಇದರ ಫಲವಾಗಿ 1906ರಲ್ಲಿ ಕೆನರಾ ಹಿಂದು ಪರ್ಮನೆಂಟ್ ಫಂಡ್ ಲಿಮಿಟೆಡ್‌ನ ಸ್ಥಾಪನೆಯಾಯಿತು. ಇದೇ ಮುಂದೆ

ಕೆನರಾಬ್ಯಾಂಕ್ ಎಂದಾಯಿತು.

ಕೆನರಾಬ್ಯಾಂಕ್ ಸ್ಥಾಪನೆ ಮಾಡುವಾಗ ಅದರ ಭದ್ರ ಬುನಾದಿಗಾಗಿ ಏಳು ಸಂಸ್ಥಾಪನಾ ತತ್ವಗಳನ್ನು ಅಳವಡಿಸಲಾಯಿತು. ಈ ತತ್ವಗಳ ಅನುಷ್ಠಾನವೇ ಕೆನರಾ ಬ್ಯಾಂಕನ್ನು ಉತ್ತುಂಗದ ಶಿಖರಕ್ಕೊಯ್ದವು.

1) ಸಮಾಜದಲ್ಲಿನ ಮೂಢನಂಬಿಕೆ ಮತ್ತು ಅಜ್ಞಾನವನ್ನು ಹೋಗಲಾಡಿಸುವುದು
2) ಶಿಕ್ಷಣದ ಸಾರ್ವತ್ರಿಕ ಪ್ರಸಾರ.
3) ಜನರಲ್ಲಿ ಉಳಿತಾಯದ ಮನೋಭಾವನೆಯನ್ನು ಬೆಳೆಸುವುದು.
4) ಹಣಕಾಸಿನ ಜೊತೆಗೆ ಸಾಮಾಜಿಕ ಕಾಳಜಿ ವಹಿಸುವುದು.
5) ಅಗತ್ಯವಿರುವವರಿಗೆ ಸಹಾಯ ಮಾಡುವುದು
6) ಸೇವಾ ಮನೋಭಾವನೆಯಿಂದ ಕೆಲಸ ಮಾಡುವುದು – ಕಾಯಕವೇ ಕೈಲಾಸ
7) ಎಲ್ಲರೂ ತನ್ನಂತೆಯೇ ಎಂದು ಭಾವಿಸಿ, ಸಮಾಜದಲ್ಲಿರುವ ಇತರ ವ್ಯಕ್ತಿಗಳ ಬಗ್ಗೆ ಅನುಕಂಪ, ಸಹಾನುಭೂತಿ ಹೊಂದಿರುವುದು.

ಬಹುಷಃ ಈ ಅದ್ಭುತ ತತ್ವಗಳ ಕಾರಣ ಕೆನರಾಬ್ಯಾಂಕ್ ಪ್ರಾರಂಭದ ದಿನಗಳಿಂದಲೂ ಇಂದಿನವರೆಗೆ ಒಂದು ಶ್ರೇಷ್ಟ ಮತ್ತು ಜನಪರ ಹಾಗೂ ಜನಸ್ನೇಹಿ ಬ್ಯಾಂಕ್ ಎನಿಸಿದೆ. ಈ ನೂರಾರು ವರ್ಷಗಳಲ್ಲಿ ಇಲ್ಲಿ ಹುಟ್ಟಿದ ನೂರಾರು ಬ್ಯಾಂಕ್ ಮತ್ತು ವಿತ್ತೀಯ ಸಂಸ್ಥೆಗಳು ತಮ್ಮ ಲಾಭಕೋರ ಮನೋಭಾವನೆಯಿಂದ ತರಗೆಲೆಗಳಂತೆ ಉದುರಿದರೂ, ಕೆನರಾಬ್ಯಾಂಕ್ ಮಾತ್ರ ಒಂದು ಹೆಬ್ಬಂಡೆಯಂತೆ ಸಾಮಾಜಿಕವಾಗಿ ಮತ್ತು ಲಾಭದಾಯಕವಾಗಿ ಬೆಳೆಯುತ್ತ ಈ ದಿನಗಳಲ್ಲಿ ಲಕ್ಷಾಂತರ ಕೋಟಿ ರೂಪಾಯಿ ವ್ಯವಹಾರ ಮತ್ತು ಸಹಸ್ರಾರು ಶಾಖೆಗಳ ಮೂಲಕ ದೇಶದ ಒಂದು ದೊಡ್ಡ ಬ್ಯಾಂಕ್ ಎನಿಸಿ ಅಂತರ್‌ರಾಷ್ಟ್ರೀಯ ಮಟ್ಟದ ಬ್ಯಾಂಕ್ ಆಗಿ ಎತ್ತರಕ್ಕೆ ಬೆಳೆದುನಿಂತಿದೆ. ಇದರಲ್ಲಿ ಅವಿರತ ಸೇವಾ ಮನೋಭಾವದಿಂದ ಶ್ರಮಿಸುವ ಸಿಬ್ಬಂದಿಗಳ ಪರಿಶ್ರಮ ಮತ್ತು ಬ್ಯಾಂಕ್‌ನ ಬೆನ್ನೆಲುಬಾದ ಅಪಾರ ಗ್ರಾಹಕ ಬಂಧುಗಳ ಸಹಕಾರ ಮತ್ತು ಪ್ರೀತಿ ಹಾಸುಹೊಕ್ಕಾಗಿ ಸೇರಿವೆ.

ಶಿಕ್ಷಣ ಕ್ಷೇತ್ರದಲ್ಲಿ ಶ್ರೀ ಪೈ ಅವರು ಒಂದು ಕ್ರಾಂತಿಕಾರಕ ಹೆಜ್ಜೆ ಇಟ್ಟಿದ್ದರು. ಹೆಣ್ಣು ಮಕ್ಕಳು ಕೇವಲ ನಾಲ್ಕುಗೋಡೆಯೊಳಗೆ ಇರಲು ಲಾಯಕ್ಕು, ಅವರು ಮನೆಬಿಟ್ಟು ಹೊರಗೆ ಬಂದು ವ್ಯವಹರಿಸುವುದೇ ಒಂದು ಅಪರಾಧ ಎಂಬ ಭಾವನೆಯಿದ್ದ ಆ ಕಾಲದಲ್ಲಿ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕಾಗಿ 1894ರಲ್ಲಿ ಕೆನರಾ ಹೆಣ್ಣುಮಕ್ಕಳ ಶಾಲೆಯನ್ನು ಪ್ರಾರಂಭಿಸಿದರು. ಇದಕ್ಕಾಗಿ ಸಮಾಜದ ಸಂಪ್ರದಾಯಸ್ಥರಿಂದ ಬಹಳ ವಿರೋಧವನ್ನೂ ಎದುರಿಸಬೇಕಾಯಿತು. ಆದರೆ ಇವರು ತನ್ನ ದೃಢ ನಿಲುವು ಮತ್ತು ಉನ್ನತ ವಿಚಾರಗಳಿಂದಾಗಿ ಎಲ್ಲರನ್ನೂ ಒಪ್ಪಿಸಿದರು. ಒಂದು ಹೆಣ್ಣಿಗೆ ವಿದ್ಯಾಭ್ಯಾಸ ಕೊಟ್ಟರೆ ಅದು ಇಡೀ ಕುಟುಂಬಕ್ಕೆ ವಿದ್ಯೆ ನೀಡಿದಂತಾಗುತ್ತದೆ ಎಂಬುದು ಅವರ ಬಲವಾದ ನಂಬಿಕೆಯಾಗಿತ್ತು. ಇದು ಸಾರ್ವಕಾಲಿಕ ಸತ್ಯ ವಿಚಾರವೂ ಹೌದು. ಏಕೆಂದರೆ ಸರ್ವಜ್ಞ ಕವಿ ಹೇಳಿದಂತೆ ಮನೆಯೇ ಮೊದಲ ಪಾಠಶಾಲೆ ಜನನಿ ತಾನೆ ಮೊದಲ ಗುರುವು. ಈಗ ಈ ಎಲ್ಲ ಕೆನರಾ ವಿದ್ಯಾಸಂಸ್ಥೆಗಳು ಬೆಳೆದು ಬಾನೆತ್ತರಕ್ಕೆ ನಿಂತಿದ್ದು ಶ್ರೀ ಪೈಗಳ ಸರ್ವಶಿಕ್ಷಣ ಅಭಿಯಾನದ ಕನಸನ್ನು ನನಸು ಮಾಡುತ್ತಲಿವೆ.

ಇಷ್ಟೆಲ್ಲ ಸಾಧನೆ ಮಾಡಿದ ಪೈಗಳಿಗೆ ತನ್ನ ಜೀವನದಲ್ಲಿ ಸಮಸ್ಯೆಗಳಿಗೆ ಕೊರತೆ ಇರಲಿಲ್ಲ. ಅವರಿಗೆ ಅವರ ಹೆಂಡತಿಗೆ ವಿಪರೀತ ಆರೋಗ್ಯ ಸಮಸ್ಯೆಗಳಿದ್ದವು. ಕೌಟುಂಬಿಕ ಸಮಸ್ಯೆಗಳಿದ್ದವು. ಬಹುಷಃ ತನ್ನ ಆರೋಗ್ಯವನ್ನು ಕಡೆಗಣಿಸಿ, ಕೇವಲ ಸಮಾಜದ ಬಗ್ಗೆ ಮಾತ್ರ ಚಿಂತಿಸಿದ ಫಲವೋ ಎಂಬಂತೆ ಅವರು ತನ್ನ 57ನೇ ವರ್ಷದಲ್ಲಿಯೇ ಅನಾರೋಗ್ಯಕ್ಕೆ ಬಲಿಯಾದರು. 25–07–1909ರಂದು ದೈವಾಧೀನರಾದರು. ಪರೋಪಕಾರಾರ್ಥಂ ಇದಂ ಶರೀರಂ ಎಂಬ ವಾಕ್ಯವನ್ನು ಸಾಧಿಸಿ ತೋರಿಸಿದ ಮಹಾನುಭಾವ ಈ ಪೈಯವರು.

ಇಂತಹ ಧೀಮಂತ ಚೇತನದ ತತ್ವಾದರ್ಶಗಳನ್ನು ಸ್ವಲ್ಪವಾಟ್ಟಿಗಾದರೂ ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಅದೇ ನಾವು ಅವರಿಗೆ ಕೊಡುವ ಶ್ರದ್ಧಾಂಜಲಿ. ಅಪರೂಪಕ್ಕೊಮ್ಮೆ ಸಮಾಜದಲ್ಲಿ ಹುಟ್ಟಿ ಸಮಾಜದ ಸರ್ವತೋಮುಖ ಏಳಿಗೆ ಬಯಸುವ ಶ್ರೀ ಅಮ್ಮೆಂಬಳ ಸುಬ್ಬರಾವ್ ಪೈಯಂತಹ ದೇವಮಾನವರು ಅಜರಾಮರರು. ಇವರು ಮತ್ತೆ ಮತ್ತೆ ಹುಟ್ಟಿ ಬರಲಿ, ಸಮಾಜವನ್ನು ಉದ್ಧರಿಸಲಿ ಎಂಬುದೇ ಎಲ್ಲರ ಹಾರೈಕೆ.

ದಿ ಲಾಸ್ಟ್ ಲೆಕ್ಚರ್

(ಪುಸ್ತಕ ವಿಮರ್ಶೆ ಸ್ಪರ್ಧೆಯ ಬಹುಮಾನಿತ ಬರಹ)

ಸೃಜನಾ ಯು.
ದ್ವಿತೀಯ ಬಿ.ಎಸ್ಸಿ.

ನಾನು ಹೈಸ್ಕೂಲ್‌ನಲ್ಲಿ ಓದುತ್ತಿದ್ದಾಗ ಕನ್ನಡ ಸರ್ ನನಗೊಂದು ಪುಸ್ತಕ ಓದಲು ಕೊಟ್ಟರು. ತುಂಬಾ ಸೊಗಸಾದ ಪುಸ್ತಕ. ನನ್ನ ಅಕ್ಕನ ಬಳಿಯಲ್ಲಿ ನಾನು ಹೇಳಿದೆ ಆ ಪುಸ್ತಕ ಮನೆಯಲ್ಲಿ ಒಂದು ಇದ್ದರೆ ತುಂಬಾ ಚೆನ್ನಾಗಿರುತ್ತದೆ ಎಂದು ಅದನ್ನು ಕೇಳಿದ ಅಕ್ಕ ನನ್ನ ಹುಟ್ಟುಹಬ್ಬಕ್ಕೆ 'ದಿ ಲಾಸ್ಟ್ ಲೆಕ್ಚರ್' ಎಂಬ ನನ್ನ ಮೆಚ್ಚಿನ ಪುಸ್ತಕವನ್ನು ಉಡುಗೊರೆಯಾಗಿ ಕೊಟ್ಟಳು. ಹೌದು! ಇದೊಂದು ಅದ್ಭುತವಾದ ಪುಸ್ತಕ. ಸಾವಿನ ಸಾಂಗತ್ಯದಲ್ಲಿ ಬದುಕಿನ ಸಾರ್ಥಕತೆಯನ್ನು ಕಂಡ ಕಂಪ್ಯೂಟರ್ ವಿಜ್ಞಾನಿಯೊಬ್ಬನ ರೋಚಕ ಕಥೆ. ಪ್ರೊ. ರ್ಯಾಂಡಿಪಾಶ್‌ರವರ ಅಂತಿಮ ಉಪನ್ಯಾಸದ ಭಾವಾನುವಾದವೇ ಈ ಕೃತಿ.

ರ್ಯಾಂಡಿಪಾಶ್‌ರವರ ಅಂತಿಮ ಉಪನ್ಯಾಸದಲ್ಲಿ ಭಾಗವಹಿಸಿದ ವಾಲ್‌ಸ್ಟ್ರೀಟ್‌ನ ವರದಿಗಾರ ಜೆಫ್ರಿಜಸ್ಲೋ ಅವರು ಈ ಪುಸ್ತಕವನ್ನು ಬರೆದು ಪ್ರಪಂಚದ ಕೋಟ್ಯಾಂತರ ಜನರ ಕನಸುಗಳಿಗೆ ನೀರೆರೆದು ಹಸಿರನ್ನು ಮೂಡಿಸುವ ಕೆಲಸವನ್ನು ಮಾಡಿದ್ದಾರೆ. ಬಹುಶಃ ಇವರು ಈ ಕೃತಿಯನ್ನು ಬರೆಯದೇ ಹೋಗಿದ್ದರೆ ಇಂತಹ ಅದ್ಭುತವಾದ ಕೃತಿ ನಮಗೆ ದೊರೆಯುತ್ತಿರಲಿಲ್ಲ. ಕನ್ನಡಕ್ಕೆ ಎಸ್. ಉಮೇಶ್ ಇವರು ಸರಳವಾಗಿ ಅನುವಾದಿಸಿದ್ದಾರೆ.

ನಾವು ನೀವೆಲ್ಲಾ ಕನಸನ್ನು ಕಾಣುತ್ತೇವೆ ಆದರೆ ಅದನ್ನು ನನಸಾಗಿಸುವುದು ಹೇಗೆಂದು ನಮಗೆ ಅಷ್ಟೊಂದು ತಿಳಿದಿರುವುದಿಲ್ಲ. ಆದರೆ ಪ್ರೊ. ರ್ಯಾಂಡಿಪಾಶ್‌ರವರು ಕಂಡ ಎಲ್ಲ ಕನಸನ್ನು ನನಸಾಗಿಸಿದ್ದಾರೆ. ಈ ಪುಸ್ತಕದಲ್ಲಿ ಅವರು ಕನಸನ್ನು ನನಸಾಗಿಸುವುದು ಹೇಗೆಂದು ತಿಳಿಸಿದ್ದಾರೆ. ರ್ಯಾಂಡಿಪಾಶ್‌ರವರಿಗೆ ಅರಮನೆಯಂತಹ ಮನೆಯಿತ್ತು. ಬ್ಯಾಂಕ್‌ಬ್ಯಾಲೆನ್ಸ್ ಇತ್ತು ಆದರೆ 37 ವರ್ಷಗಳನ್ನು ಅಧ್ಯಯನದಲ್ಲೇ ಕಳೆದ ಅವರಿಗೆ ಪ್ಯಾಂಕ್ರಿಯಾಟಿಕ್ ಕ್ಯಾನ್ಸರ್ ಎಂಬ ಮಹಾಹೆಮ್ಮಾರಿ ಆವರಿಸಿಕೊಂಡಿತ್ತು. ನಾವಾಗಿದ್ದರೆ ಈ ಹೆಸರು ಕೇಳಿದ ತಕ್ಷಣ ಬದುಕು ಮುಗಿದೇ ಹೋಯಿತು ಎಂದು ದುಃಖಿಸುತ್ತಿದ್ದೇವೋ ಏನೋ ಆದರೆ ಅವರು ಹಾಗೆ ಮಾಡಲಿಲ್ಲ. "ಕ್ಯಾನ್ಸರ್‌ಗೆ ನಾನು ಧನ್ಯವಾದ ತಿಳಿಸುತ್ತೇನೆ ಏಕೆಂದರೆ ಅದು ನನಗೆ ಇನ್ನೂ 6 ತಿಂಗಳ ಸಮಯವಕಾಶ ನೀಡಿದೆ. ಈ ಸಮಯದಲ್ಲಿ ನಾನು ನನ್ನ ಸಂಸಾರಕ್ಕೆ ಏನು ಮಾಡಬೇಕು ಅದನ್ನೆಲ್ಲಾ ಮಾಡಿಮುಗಿಸುವೆ, ಜೀವನದಲ್ಲಿ ಯಾರೊಬ್ಬನಿಗೂ ಯಾರದ್ದೋ ಅವಶ್ಯಕತೆ ಇರುವುದಿಲ್ಲ, ಬದುಕನ್ನು ಬಂದ ಹಾಗೆ ಸ್ವೀಕರಿಸಬೇಕು" ಎಂದು ತಿಳಿಸುತ್ತಾರೆ. ಅವರಿಗೆ ಈ ಕ್ಯಾನ್ಸರ್ ಇದೇ ಎಂದು ತಿಳಿದಾಗ ಕಾರ್ನಿಗಿ ಮೆಲನ್‌ನಲ್ಲಿ ಉಪನ್ಯಾಸಕ್ಕೆ ಕರೆಯುತ್ತಾರೆ, ಅಲ್ಲಿ ಎಲ್ಲರು ಇವರು ಸಾವಿನ ಬಗ್ಗೆ ಮಾತನಾಡುತ್ತಾರೆ ಎಂದು ಎನಿಸಿದ್ದರು. ಆದರೆ ಇವರು ಬದುಕನ್ನು ಹೇಗೆ ಸಾರ್ಥಕಗೊಳಿಸುವುದು, ಕನಸನ್ನು ಸಾಕಾರಗೊಳಿಸುವುದು ಹೇಗೆ ಎಂಬ ವಿಚಾರದ ಕುರಿತು ಅದ್ಭುತವಾದ ಉಪನ್ಯಾಸ ನೀಡುತ್ತಾರೆ. ಸಾವು ಹಾಗೇ ಬರುತ್ತದೆ, ಹೀಗೆ ಬರುತ್ತದೆ, ಎಂದು ಸಾವಿನ ಬಗ್ಗೆ ಮಾತನಾಡುವುದು ಸುಲಭ. ಆದರೆ ದೈನಂದಿನ ಬದುಕಿನ ದಿನಚರಿಯ ಕಡೆಯ ಪುಟವನ್ನು ಬರೆಯುತ್ತಿರುವ ರ್ಯಾಂಡಿಪಾಶ್, ಬದುಕು ತುಂಬಾ ಸುಂದರ ಎಂದು ಹೇಳುವ ಮಾತು. ಎಂತಹವರಿಗೂ ರೋಮಾಂಚನವುಂಟುಮಾಡುತ್ತದೆ. ಸಾವಿನ ಸತ್ಯವನ್ನು ಸರಳವಾಗಿ ಒಪ್ಪಿಕೊಂಡು, ನಗುಮುಖದಿಂದಲೇ ಬದುಕಿಗೆ ವಿದಾಯ ಹೇಳುವ ರ್ಯಾಂಡಿಪಾಶ್ ನಿಜಕ್ಕೂ ಗ್ರೇಟ್. ವಿದ್ಯಾರ್ಥಿಗಳ ಹಲವು ಪ್ರಶ್ನೆಗಳಿಗೆ ಈ ಪುಸ್ತಕದಲ್ಲಿ ಉತ್ತರವಿದೆ. 53 ಅಧ್ಯಾಯಗಳ ಈ ಪುಸ್ತಕದ 34 ಲಕ್ಷ ಪ್ರತಿ ಬಿಸಿದೋಸೆಯಂತೆ ಮಾರಾಟವಾಗಿವೆ. ಇವರ ಅಂತಿಮ ಉಪನ್ಯಾಸವನ್ನು ಕೋಟ್ಯಾಂತರ ಮಂದಿ ಯೂಟ್ಯೂಬ್‌ನಲ್ಲಿ ವೀಕ್ಷಿಸಿದ್ದಾರೆ. ಇವರ ಪುಸ್ತಕ ನನ್ನನ್ನು ಗಾಢವಾಗಿ ಆಕರ್ಷಿಸಿದೆ. ಇದನ್ನು ಓದುತ್ತ ನನಗೆ ಕೆಲವೊಮ್ಮೆ ದುಃಖ ಒತ್ತರಿಸಿಕೊಂಡು ಬರುತ್ತದೆ, ಸಂತೋಷದ ಬುಗ್ಗೆ ಮುಖದಲ್ಲಿ ಮೂಡುತ್ತದೆ, ಕಣ್ಣಿನಿಂದ ಕಂಬನಿ ಕಪಾಲಕ್ಕೆ ಬೀಳುತ್ತದೆ.

ಒಟ್ಟಿನಲ್ಲಿ ಈ ಪುಸ್ತಕ ಮನೆಯಲ್ಲಿ ಇದ್ದರೆ ಒಂದು ಗ್ರಂಥಾಲಯವಿದ್ದಂತೆ. ಈ ಪುಸ್ತಕದಲ್ಲಿ ಬರುವ "ಸಂತೋಷವೋ, ದುಃಖವೋ ನೀವೆ ನಿರ್ಧರಿಸಿ" ಎಂಬ ವಿಚಾರ ನನಗೆ ತುಂಬಾ ಇಷ್ಟವಾದದ್ದು.

ಅಂತಿಮವಾಗಿ ಅವರು ಅಂತಿಮ ಉಪನ್ಯಾಸದಲ್ಲಿ, "ಪ್ರತಿಯೊಬ್ಬರು ಕನಸನ್ನು ಕಾಣಿ, ನನಸಾಗಿಸಲು ಶ್ರಮವಹಿಸಿ, ಕತ್ತಲಿನ ಕೋಣೆಯಿಂದ ಹೊರಬಂದು ಬೆಳಕನ್ನು ಕಾಣಿ" ಎಂದು ಹೇಳಿದ್ದಾರೆ. ಅಲ್ಲದೇ ಅವರು ಕೂಡ ತಮ್ಮ ಬಾಲ್ಯದ ಎಲ್ಲ ಕನಸನ್ನು ನನಸಾಗಿದ್ದಾರೆ. ಗಗನಯಾತ್ರಿ, ಹೀಗೆ ಎಲ್ಲ ಹುದ್ದೆಯನ್ನು ಅಲಂಕರಿಸಿ ದೊಡ್ಡ ಸಾಧನೆಯನ್ನು ಮಾಡಿದ್ದಾರೆ. ಒಟ್ಟಿನಲ್ಲಿ ಈ ಪುಸ್ತಕ ಮುಂದಿನ ಪೀಳಿಗೆಗೆ ಒಂದು ದಾರಿದೀಪ ಎಂಬುದರಲ್ಲಿ ಅನುಮಾನವಿಲ್ಲ. ಕನ್ನಡಕ್ಕೆ ಸುಂದರವಾಗಿ ಸರಳವಾಗಿ ಅನುವಾದಿಸಿದ ಇನ್ಫೋಸಿಸ್‌ನ ತಾಂತ್ರಿಕ ಶಿಕ್ಷಕ ಎಸ್. ಉಮೇಶ್‌ರವರಿಗೂ ವಂದನೆ, ಅಭಿನಂದನೆಗಳು.

ಗಮನವು ಗುರಿಯೆಡೆಗೆ

ಸಾನಿಧ್ಯ
ಪ್ರಥಮ ಬಿ.ಕಾಂ.

ಈ ಪ್ರಪಂಚದಲ್ಲಿ ಕೋಟ್ಯಾಂತರ ಜೀವಿಗಳಿವೆ. ಅವುಗಳ ಪೈಕಿ ವಿವೇಕ, ಬುದ್ಧಿವಂತಿಕೆ, ಮನೋಭಾವಗಳಿಂದ ಮನುಷ್ಯನು ಅತೀ ಶ್ರೇಷ್ಠ ಅನಿಸಿಕೊಳ್ಳುತ್ತಾನೆ. ಅಂತಹ ಮನುಷ್ಯನು ನಿಜವಾಗಿಯೂ ತನ್ನ ಜೀವನದಲ್ಲಿ ಸಫಲನಾಗಲು ಅವನ ಸಂಪೂರ್ಣ ಗಮನವು ಅವನ ಜೀವನದಲ್ಲಿ ಅವನು ತಲುಪ ಬೇಕೆಂದುಕೊಂಡಿರುವ ಗುರಿಯ ಮೇಲೆ ಇರಬೇಕು, ಹಾಗೂ ಅವನು ತನ್ನ ಜೀವನದ ಉದ್ದೇಶವನ್ನು ಅರಿತಿರಬೇಕು. ತನ್ನ ಜೀವನದ ಗುರಿಯನ್ನು ಅರಿತುಕೊಳ್ಳುವುದು ಹಾಗೂ ಅದನ್ನು ತಲುಪಲು ಮಾಡುವ ಪ್ರಯತ್ನ ಎಷ್ಟು ಮುಖ್ಯ ಎಂಬುವುದನ್ನು ಒಂದು ಸಣ್ಣ ಕಥೆಯ ಮೂಲಕ ಹೇಳಬಹುದು.

ಒಮ್ಮೆ ಯಮಧರ್ಮರಾಯನ ಅಂತಃಪುರಕ್ಕೆ ಮೂರು ಅಪರಾಧಿಗಳನ್ನು ಕರೆತರಲಾಯಿತು. ಅವರಲ್ಲಿ ಒಬ್ಬ ಶ್ರೀಮಂತ, ಇನ್ನೊಬ್ಬ ವ್ಯಾಪಾರಿ ಮತ್ತು ಮತ್ತೊಬ್ಬ ಕಳ್ಳ. ಮೂವರನ್ನು ಪರೀಕ್ಷಿಸುವ ಸಲುವಾಗಿ ಯಮನು ಅವರನ್ನು ಪುನಃ ಭೂಲೋಕಕ್ಕೆ ಕಳುಹಿಸುವುದಾಗಿಯೂ ಹಾಗೂ ಅವರ ಅಭಿಲಾಷೆಗಳ ಬಗ್ಗೆ ಕೇಳಿದನು. ಆಗ ಶ್ರೀಮಂತ ಹೇಳಿದ, ನನ್ನ ಮನೆಯು ಚಿನ್ನ ವಜ್ರದಿಂದ ತುಂಬಲಿ ಎಂದು. ವ್ಯಾಪಾರಿ ಹೇಳಿದ ನನ್ನ ಅಂಗಡಿ ಗೋದಾಮು ಎಲ್ಲಾ ರೀತಿಯ ವಸ್ತುಗಳು ಹಾಗೂ ಧಾನ್ಯದಿಂದ ತುಂಬಲಿ ಎಂದು. ಆದರೆ ಕಳ್ಳನು ಬಹಳ ಸರಳವಾಗಿ ನನಗೆ ಏನು ಬೇಡ. ಇವರಿಬ್ಬರ ವಿಳಾಸ ಕೊಟ್ಟುಬಿಡಿ ಎಂದು. ಹೇಳುತ್ತ ನನಗೆ ದಾರಿ ತೋರಿದರೆ ನನ್ನ ಗುರಿಯನ್ನು ಹಾಗು ಅಭಿಲಾಷೆಯನ್ನು ನಾನೆ ಪೂರೈಸಿಕೊಳ್ಳುವೆ ಎಂದನು. ಅವನ ಉತ್ತರವನ್ನು ಕೇಳಿ ಯಮನು ಮುಗುಳ್ನಕ್ಕ.

ಈ ಮೇಲಿನ ಕಥೆಯು ಸಣ್ಣದಾಗಿದ್ದರೂ. ಅದರಿಂದ ತಿಳಿದುಕೊಳ್ಳಬೇಕಾದ ವಿಷಯ ಬಹಳ ಇದೆ. "ಬದುಕಿನಲ್ಲಿ ನಾನು ಹೇಗೆ ಇದ್ದರು ನನಗೆ ದಾರಿ ತೋರಿಸಿ, ನನ್ನ ಗುರಿಯನ್ನು ನಾನೇ ತಲುಪುವೆ ಎಂಬ ನಂಬಿಕೆ ಇರಬೇಕು ಹಾಗೂ ನಮ್ಮ ಸಂಪೂರ್ಣ ಗಮನವು ನಮ್ಮ ಗುರಿಯತ್ತ ಇರಬೇಕು.

ಒಬ್ಬ ರೈತನೇ ಇರಲಿ, ಕಾರ್ಮಿಕನೇ ಇರಲಿ, ಬಡವನೇ ಇರಲಿ, ಶ್ರೀಮಂತನೇ ಇರಲಿ, ಯಾರಿಗೆ ತನ್ನ ಗುರಿಯ ಬಗ್ಗೆ ಸ್ಪಷ್ಟವಾದ ಕಲ್ಪನೆಯಿದೆಯೇ ಅವನು ಯಾರಿಗೂ ಅಂಜಬೇಕಾಗಿಲ್ಲ. ಈ ಜಗತ್ತಿನಲ್ಲಿ ನಾವೆಲ್ಲರೂ ನಮ್ಮ ಗುರಿಯ ಬಗ್ಗೆ ಸ್ಥಿತಪ್ರಜ್ಞರಾಗಿ ಮುಂದೆ ಸಾಗುವ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು.

ಬರಗಾಲ

ರಶ್ಮಿತಾ
ಪ್ರಥಮ ಬಿ.ಕಾಂ.

ಬರಗಾಲವೆಂದರೆ ಮಳೆಯಿಲ್ಲದೇ, ನೀರಿನ ಸೆಲೆಗಳೆಲ್ಲ ಬಿತ್ತಿ, ಜೀವ ಜಂತುಗಳಿಗೆ ನೀರಿನ ಅಭಾವ ತಲೆದೋರುವ ಸ್ಥಿತಿ. ಪ್ರಕೃತಿ ವಿಕೋಪಗಳಲ್ಲಿ ಬರಗಾಲವೂ ಒಂದು ಅತಿವೃಷ್ಟಿ, ಅನಾವೃಷ್ಟಿ, ಬರಗಾಲ, ನೆರೆಹಾವಳಿ, ಭೂಕಂಪ, ಭೀಕರ ಚಂಡಮಾರುತ, ಭೂಕುಸಿತ ಇವೆಲ್ಲವೂ ಪ್ರಕೃತಿ ವಿಕೋಪಗಳಾಗಿವೆ. ಒಮ್ಮೆ ಬರಗಾಲ ಬಂತೆಂದರೆ ಜಲಕ್ಷಾಮ ಉಂಟಾಗಿ ಅದರ ಪರಿಣಾಮ ಬಹಳ ವರ್ಷಗಳವರೆಗೆ ದೂರಗಾಮಿಯಾಗಿರುತ್ತದೆ. ಬೆಳೆಗಳಾಗುವುದಿಲ್ಲ, ಕುಡಿಯುವ ನೀರಿಗೂ ತತ್ವಾರ, ಜನರು ಗುಳೆ ಹೋಗುತ್ತಾರೆ. ಎಲ್ಲಿಯೂ ಹಸಿರೇ ಇಲ್ಲದೇ ಭೂಮಿ ಬೆಂಗಾಡಾಗುತ್ತದೆ.

ಬಿರುಬಿಸಿಲು, ಭೂಮಿ ಬಿರಿದು ಬಿರುಕು ಬಿಟ್ಟಿದೆ, ಗಿಡ ಮರಗಳೆಲ್ಲ ಒಣಗಿ ಹಸಿರೇ ಬಿತ್ತಿ ಹೋಗಿದೆ. ನೀರಿನ ಸೆಲೆಗಳೆಲ್ಲ ಬತ್ತಿಹೋಗಿ ಕುಡಿಯಲು ಸಹ ಒಂದು ಹನಿ ನೀರೂ ಕಾಣುತ್ತಿಲ್ಲ. ಕಣ್ಣು ಹಾಯಿಸಿದಷ್ಟೂ ದೂರ ಪ್ರಖರ ಬಿಸಿಲು, ಪ್ರಳಯ ನೃತ್ಯ, ಅಲ್ಲಲ್ಲಿ ಪ್ರಾಣಿ, ಪಕ್ಷಿ, ಮನುಷ್ಯರು ಸತ್ತುಬಿದ್ದು ಯುದ್ಧಭೂಮಿಯಂತೆ ಭಾಸವಾಗುವ ಸ್ಮಶಾನಸದೃಶ ಬೀಕರತೆ, ಆ ಹೆಣಗಳನ್ನೇ ಕುಕ್ಕಿ ತಿನ್ನುವ ಹದ್ದು, ನರಿ ನಾಯಿಗಳು, ಎತ್ತಲೋ ದೂರ ಗುಂಪುಗುಂಪಾಗಿ ಸಾಗುತ್ತಿರುವ ಜನಗಳ ಅಗಮ್ಯ ಗಮನ. ಹುಟ್ಟೂರನ್ನು ಬಿಟ್ಟು ತುತ್ತಿನ ಚೀಲಕ್ಕೆ ಒಂದು ತುತ್ತು ತುಂಬಿಕೊಳ್ಳಲು, ಜೀವ ಹಿಡಿದುಕೊಳ್ಳಲು ಪ್ರಯತ್ನಿಸುವ ಮನುಷ್ಯ ಪ್ರಯತ್ನ ಇಡೀ ಊರಿಗೆ. ಊರೆ, ಹಳ್ಳಿಯೇ ಸೂರ್ಯನ ಉರಿಗಣ್ಣಿನಿಂದ ಉರಿದುಹೋದಂತೆ ಖಾಲಿ ಖಾಲಿ – ಇದು ಬರಗಾಲ ಪೀಡಿತ ಪ್ರದೇಶದ ಒಂದು ಸಣ್ಣ ಚಿತ್ರಣ.

ಪ್ರಕೃತಿ ವಿಕೋಪಗಳಲ್ಲಿ ಬರಗಾಲ ಭೀಕರವಾದುದು. ಮಳೆಯಾದರೆ ಇಳೆ ಸಸ್ಯಶ್ಯಾಮಲೆಯಾಗಿ ಕಂಗೊಳಿಸುತ್ತಾಳೆ. ಸಮೃದ್ಧಿಯಾಗಿ ಬೆಳೆ ಬೆಳೆಯುತ್ತದೆ. ಆಗ ಜನರು, ಪ್ರಾಣಿ, ಪಕ್ಷಿಗಳೆಲ್ಲರೂ ಸಂತಸದಿಂದ ಜೀವಿಸುತ್ತಾರೆ. ಆದರೆ ಮಳೆಯೇ ಸುರಿಯದಿದ್ದರೆ ಅದರ ಭೀಕರತೆ ವರ್ಣಿಸಲಸದಳ. ಬಡವರು ತಿನ್ನಲೂ ಇಲ್ಲದೆ ನಿರ್ಗತಿಕರಾದರೆ ಶ್ರೀಮಂತರು, ಉಳ್ಳವರ ಅಟ್ಟಹಾಸ ಮುಗಿಲು ಮುಟ್ಟುತ್ತದೆ. ಬರಗಾಲ ಉಂಟಾಗುವುದು. ಕಾರಣಗಳೆನು ಎಂದು ಚಿಂತಿಸಿದರೆ ಅದು ಮನುಷ್ಯನ ಊಹೆಗೂ ನಿಲುಕದ ಸಂಗತಿ. ಪ್ರಕೃತಿ ವಿಕೋಪಗಳು ಯಾವುದೇ ಸಂಭವಿಸಿದರೂ ಅದು ಮನುಷ್ಯ ಚಿಂತನೆಗೆ ನಿಲುಕದ ವಿಷಯಗಳೇ ಆಗಿರುತ್ತದೆ.

ಮನುಷ್ಯ ಪ್ರಕೃತಿಯನ್ನು ಬೇಕಾಬಿಟ್ಟಿಯಾಗಿ ದುರ್ಬಳಕೆ ಮಾಡಿಕೊಳ್ಳುತ್ತಿರುವುದೇ, ಪ್ರಕೃತಿ ವಿಕೋಪಗಳಿಗೆ ಕಾರಣ ಎಂದು ಹೇಳಬಹುದಾದರೂ ಅದೇ ಕಾರಣವಾಗಿರಲಾರದು ಎಂದು ಅನಿಸುತ್ತದೆ. ಬರಗಾಲದ ಭೀಕರತೆ ಇಂದು ನಿನ್ನೆಯದಲ್ಲ. ಪುರಾಣ, ಇತಿಹಾಸ ಕಾಲದಿಂದಲೂ ಕ್ಷಾಮ ಡಾಮರಾದಿಗಳ ವಿಷಯವನ್ನು ಕೇಳಿದ್ದೇವೆ. ಎಲ್ಲ ಶತಮಾನಗಳ ಬರಗಾಲದ ಬವಣೆಯ ವಿಷಯ ಕಂಡುಬರುತ್ತದೆ. ಅಂದೆಲ್ಲ ಪ್ರಕೃತಿ ಇಷ್ಟೊಂದು ದೂಷಣೆ ಒಳಗಾಗಿರಲಿಲ್ಲ ಅಲ್ಲವೆ?

ಸೃಷ್ಟಿಯೇ ವಿಚಿತ್ರ. ಅದು ಮನುಷ್ಯನ ಊಹೆಗೂ ನಿಲುಕದಷ್ಟು ನಿಗೂಢತೆಯನ್ನು ಒಳಗೊಂಡಿದೆ. ಅದು ಮನುಷ್ಯನ ಊಹೆಗೆ ನಿಲುಕುವುದೂ ಇಲ್ಲ, ಸಿಲುಕುವುದೂ ಇಲ್ಲ. ಪ್ರಕೃತಿ ವಿಕೋಪಗಳು ಎಲ್ಲ ಕಾಲದಲ್ಲೂ ಇವೆ. ಅವು ಯಾವಾಗ ಹೇಗೆ ಬಂದೆರಗುತ್ತದೆಯೋ ಹೇಳಲಾಗದು. ಅವನ್ನು ಭರಿಸುವ ಶಕ್ತಿಯನ್ನು ಯುಕ್ತಿಯನ್ನು ನಾವು ರೂಢಿಸಿಕೊಳ್ಳಬೇಕು.

ಕುಪ್ಪಳ್ಳಿ – ಕವಿಮನೆ

ಬೃಂದಾ ಕೆ. ಎನ್.
ದ್ವಿತೀಯ ಬಿ.ಕಾಂ.

ಹಲವು ಸಾಹಿತಿಗಳ ಬೀಡು ಕರ್ನಾಟಕ. ಈ ಪುಣ್ಯ ನಾಡಿನಲ್ಲಿ ಹಲವಾರು ಪ್ರಸಿದ್ಧ ಕವಿಗಳು, ಕವಿಯಿತ್ರಿಯರು ಜನ್ಮ ತಾಳಿದ್ದಾರೆ. ಇಂತಹ ಸುಪ್ರಸಿದ್ಧ ಕವಿಗಳಲ್ಲಿ ಒಬ್ಬರಾದ ರಾಷ್ಟ್ರಕವಿ ಕುವೆಂಪುರವರ ಜನ್ಮಸ್ಥಳವಾದ ಕುಪ್ಪಳ್ಳಿಯ ಬಗ್ಗೆ ಒಂದಿಷ್ಟು ಪರಿಚಯಿಸಲು ಇಚ್ಚಿಸುತ್ತೇನೆ. ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನಲ್ಲಿರುವ ಒಂದು ಹಳ್ಳಿ ಕುಪ್ಪಳ್ಳಿ. ಇಲ್ಲಿ ಇರುವ ಕುವೆಂಪು ಅವರ ಮನೆಯನ್ನು ಸ್ಮಾರಕವನ್ನಾಗಿ ಮಾಡಲಾಗಿದೆ. ಹಲವು ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ತಾಣವಾಗಿದ್ದು ಒಂದು ಪ್ರವಾಸಿ ಸ್ಥಳವಾಗಿಯೂ ರೂಪುಗೊಂಡಿದೆ. 150ವರ್ಷಗಳಷ್ಟು ಹಳೆಯದಾದ ಕುವೆಂಪು ಅವರು ಬೆಳೆದ ಮನೆಯನ್ನು 2001ರಲ್ಲಿ ಪುನರ್‌ನಿರ್ಮಿಸಲಾಯಿತು. ಮಲೆನಾಡಿನ ವಾಸ್ತುಶಿಲ್ಪಕ್ಕೆ ಉದಾಹರಣೆಯಾಗಿರುವ ಮನೆಗೆ ಎಳ್ಳಷ್ಟು ಕುಂದುಬರದೆ ಕಣ್ಮನ ಸೆಳೆಯುತ್ತಿದೆ. ಮನೆಯ ಎದುರಿನ ಹೂದೋಟ ಹುಲ್ಲುಹಾಸು ಮೊದಲಿಗೆ ನಮ್ಮನ್ನು ಸ್ವಾಗತಿಸುತ್ತದೆ. ಮುಖ್ಯದ್ವಾರದ ಮೂಲಕ ಮನೆಯನ್ನು ಪ್ರವೇಶಿಸುತ್ತಿದ್ದಂತೆ ಮೂರು ದಿಕ್ಕಿಗೂ ಚೌಕಿಗಳುಳ್ಳ ಮೂರು ಅಂತಸ್ತಿನ ಒಳಾಂಗಣದ ದರ್ಶನವಾಗುತ್ತದೆ. ಮನೆಯಲ್ಲಿ ಕವಿ ಮದುವೆಯಾದ ಮಂಟಪ, ಹಳೆಯ ಬಾಗಿಲು ಮುಂತಾದವುಗಳನ್ನು ಕಾಣಬಹುದು. ಮನೆಯ ಮೇಲ್ಛಾವಣಿಗೆ ವಿಶಿಷ್ಟ ವಾಸ್ತು ವಿನ್ಯಾಸದ ಪಕ್ಕಾಸುಗಳನ್ನು ಬಳಸಲಾಗಿದೆ. ಒಳಗಿನ ಗೋಡೆಯಲ್ಲಿ ಕುವೆಂಪುರವರ ಕುಟುಂಬದ ಸದಸ್ಯರ ಮತ್ತು ಅವರ ಹತ್ತಿರದ ಬಂಧುಗಳ ಛಾಯಾಚಿತ್ರಗಳನ್ನು ಇಡಲಾಗಿದೆ. ನೇರ ಒಳಗೆ ಹೋದಾಗ ಅಡುಗೆಮನೆಯ ಎಡಭಾಗದಲ್ಲಿ ಪಾತ್ರೆಗಳು, ಕಡಗೋಲು ಮುಂತಾದ ಹಳೆಯ ಕಾಲದ ವಸ್ತುಗಳನ್ನು ಕಾಣಬಹುದು. ಇಲ್ಲಿಂದ ಉಪ್ಪರಿಗೆಗೆ ಮರದ ಏಣಿ ಏರಿ ಹೋದರೆ ಅಲ್ಲಿ ಗಾಜಿನ ಪೆಟ್ಟಿಗೆಗಳಲ್ಲಿ ಕವಿ ಬಳಸುತ್ತಿದ್ದ ಪೆನ್ನು, ಬಟ್ಟೆ, ಕನ್ನಡಕ, ಊರುಗೋಲು, ಚಪ್ಪಲಿ ಮುಂತಾದವುಗಳನ್ನು ಕಾಣಬಹುದು. ಸುತ್ತ ಗೋಡೆಗಳಲ್ಲಿ ಕವಿಗೆ ಸಂದಿರುವ ಜ್ಞಾನಪೀಠ ಪ್ರಶಸ್ತಿ, ಪದ್ಮವಿಭೂಷಣ ಪ್ರಶಸ್ತಿ, ಪಂಪ ಪ್ರಶಸ್ತಿ ಮುಂತಾದವುಗಳನ್ನು ಕಾಣಬಹುದು. ಇಡೀ ಮನೆಯನ್ನು ನಾವು ಸುತ್ತುವಾಗ ಕಲ್ಲಿನಲ್ಲಿ ಕೆತ್ತಿ ಗೋಡೆಗಳಿಗೆ ಹಾಕಿರುವ ಸಂದೇಶಗಳನ್ನು ಸಾರುವ ಕವಿಯ ಸೂಕ್ತಿಗಳನ್ನು ಕಾಣಬಹುದು. ಕವಿಮನೆಯ ಹೊರಗೆ ಉದ್ಯಾನದ ಒಂದು ಬದಿಯಲ್ಲಿ ಮಲೆನಾಡಿಗರ ಕೃಷಿಗೆ ಸಂಬಂಧಿಸಿದ ನೇಗಿಲು, ಗಾಡಿ, ಪಣತ ಮುಂತಾದ ವಸ್ತುಗಳ ಸಂಗ್ರಹಾಲಯವಿದೆ. ಕವಿ ಮನೆಯ ಹಿಂದಿರುವ ಮೆಟ್ಟಿನಲ್ಲಿ ಮುಂದೆ ಸಾಗಿ ಗುಡ್ಡವನ್ನು ತಲುಪುತ್ತಿದ್ದಂತೆ ಕವಿ ಸಮಾಧಿ ಕಾಣಸಿಗುತ್ತದೆ. ಇಲ್ಲಿ ನಿಂತು ವೀಕ್ಷಿಸಿದರೆ ಗುಡ್ಡಗಳ ಸಾಲು ಸಾಲು, ಹಸಿರು ಮರಗಳು, ವಿಸ್ತಾರವಾದ ಆಕಾಶದಂತಹ ರಮಣೀಯ ದೃಶ್ಯ ಕಾಣುತ್ತದೆ. ಕವಿ ಇಲ್ಲಿಯೇ ಕುಳಿತು ಕಥೆ, ಕಾದಂಬರಿಗಳನ್ನು ರಚಿಸಿದ ಸ್ಫೂರ್ತಿ ತಾಣವಿದು. ಇದಕ್ಕೆ ಅವರೇ ಕೊಟ್ಟ ಹೆಸರು ಕವಿಶೈಲ. ಇಂತಹ ಮಲೆನಾಡಿನ ಹಸುರಿನ ಮಧ್ಯೆ ಕುಳಿತು ರಚಿಸಿ ಸಾಹಿತ್ಯ ಕ್ಷೇತ್ರಕ್ಕೆ ಶ್ರೀರಾಮಾಯಣದರ್ಶನಂನಂತಹ ಮಹಾಕಾವ್ಯ, ಕಾನೂರು ಹೆಗ್ಗಡತಿಯಂತಹ ಕಾದಂಬರಿಗಳನ್ನು ಕೊಟ್ಟ ಕೀರ್ತಿ ಕುವೆಂಪುರವರಿಗೆ ಸಲ್ಲುತ್ತದೆ.

....ಓ ಕವಿಶೈಲ, ನಿನ್ನ
ಸಂಪದವನೆನಿತು ಬಣ್ಣಿಸಲಳವು ಕವನದಲಿ?
ಬೆಳಗಿನಲಿ ಬೈಗಿನಲಿ ಮಾಗಿಯಲಿ ಚೈತ್ರದಲಿ
ಮಳೆಯಲ್ಲಿ ಮಂಜಿನಲಿ ಹಗಲಿನಲಿ ರಾತ್ರಿಯಲಿ
ದೃಶ್ಯವೈವಿಧ್ಯಮಂ ರಚಿಸಿ ನೀಂ ಭುವನದಲಿ
ಸ್ವರ್ಗವಾಗಿಹೆ ನನಗೆ !

–

ಕುವೆಂಪು

ಮರೆವು

ದೀಪ್ತಿ ಯು.
ದ್ವಿತೀಯ ಬಿ.ಕಾಂ.

ಮಾನವ ಬ್ರಹ್ಮಾಂಡದ ಅದ್ವಿತೀಯ ಬುದ್ಧಿವಂತ ಪ್ರಾಣಿ. ಇವನಿಗಿರುವ ಆಲೋಚನಾ ಶಕ್ತಿಗೆ ಸರಿಸಮಾನವಾದ ಮತ್ತೊಂದು ಜೀವಿ ವಿಶ್ವದಲ್ಲಿನ್ನೂ ಜನ್ಮತಾಳಿಲ್ಲ. ಪ್ರಕೃತಿ ದಯಪಾಲಿಸಿರುವ ಮೆದುಳಿನ ಅಲ್ಪಭಾಗದಲ್ಲಿಯೇ ಅಗಾಧವಾದ ನೆನಪುಗಳನ್ನು ತುಂಬಿಕೊಂಡು ಅವುಗಳಲ್ಲಿಯೇ ಕಳೆದುಹೋಗುತ್ತಿರುವ ಮನುಷ್ಯನಿಗೆ ಮರೆವು ಇರದಿದ್ದರೆ ಭೂಮಿಯ ಮೇಲೆ ಚಿತ್ರ ವಿಚಿತ್ರ ವರ್ತನೆಗಳ ಮಾನವ ಲೋಕವೇ ಸೃಷ್ಟಿಯಾಗಬಹುದಿತ್ತೇನೋ.

ಈ ಅನಾಹುತವನ್ನು ತಪ್ಪಿಸಲು ಅದೃಷ್ಟವಶಾತ್ ಮರೆವು ನಮಗೆ ನೆರವಾಗುತ್ತದೆ. ಮರೆವು ಮಾನವ ಜಗತ್ತಿನ ವಿಸ್ಮಯಗಳಲ್ಲಿ ಒಂದು. ಬೇಕೆಂದಾಗ ಬಾರದ ಬೇಡವೆಂದಾಗ ಬಿಡದೆ ನಮ್ಮನ್ನು ಸದಾ ಕಾಡುವ ಅತ್ಯಾಪ್ತ ಶತ್ರು. ಅಲ್ಲದೇ ಹೇಳದೇ ಕೇಳದೇ ಧುತ್ತನೆ ಬಂದು ನಾವು ಮರೆಯಲಾಗದ ವಿಷ ಘಳಿಗೆಗಳನ್ನು ನಾವರಿಯದಂತೆ ನಮ್ಮ ಸ್ಮೃತಿಪಟಲದಿಂದ ಅಳಿಸಿ ಹೋಗಿಬಿಡುವ ಪ್ರಾಣಮಿತ್ರನಂತೆ ಬರುವ ವರವೇ ಮರೆವು.

ಮರೆವು ಎನ್ನುವುದು ಎಲ್ಲಾ ಮನುಷ್ಯರ ಬಾಯಿಯಲ್ಲಿ ಬರುವ ಸರ್ವೇಸಾಮಾನ್ಯ ಶಬ್ದ. ದಿನನಿತ್ಯ ಜೀವನದಲ್ಲಿ ನಾವು ಅನೇಕ ವಿಷಯಗಳನ್ನು ಮರೆಯುತ್ತೇವೆ. ಮರೆವು ಕೆಲವರಿಗೆ ವರವಾಗಬಹುದು. ಇನ್ನೂ ಕೆಲವರಿಗೆ ಶಾಪವೂ ಆಗಬಹುದು. ಪ್ರತಿಯೊಂದು ವಿಷಯವನ್ನು, ಪ್ರತಿಯೊಂದು ಅಗತ್ಯ ಸಂಗತಿಗಳನ್ನು ಮರೆಯುವವನನ್ನು ಮರೆಗುಳಿ ಎಂದು ಕರೆಯುತ್ತೇವೆ.

ವಿದ್ಯಾರ್ಥಿಗಳು ಪರೀಕ್ಷೆಗಾಗಿ ಕಷ್ಟಪಟ್ಟು ಓದಿರುತ್ತಾರೆ. ಆದರೆ ಪರೀಕ್ಷೆಯಲ್ಲಿ ಉತ್ತರ ಬರೆಯುವ ಸಮಯ ಬಂದಾಗ ಹೆಚ್ಚಿನ ವಿಷಯಗಳನ್ನು ಮತ್ತು ಉತ್ತರವನ್ನು ಮರೆತುಬಿಡುತ್ತಾರೆ. ಇದು ವಿದ್ಯಾರ್ಥಿಗಳಿಗೆ ಶಾಪವಾಗಿ ಪರಿಣಮಿಸುತ್ತದೆ. ನಾನು ಓದಿದ ಒಂದು ಪುಸ್ತಕದಲ್ಲಿ ಒಬ್ಬರು ಶುದ್ದಸಸ್ಯಾಹಾರಿ ಬಯೋಲಜಿ ಪ್ರೊಫೆಸರ್ ವಿದ್ಯಾರ್ಥಿಗಳಿಗೆ ಕಪ್ಪೆಯ ವಿವಿಧ ದೇಹದ ಭಾಗಗಳ ಬಗ್ಗೆ ಪಾಠ ಮಾಡಲು ಲ್ಯಾಬ್‌ನಲ್ಲಿ ಇರಿಸಿದ್ದ ಕಪ್ಪೆಯ ಭಾಗಗಳನ್ನು ಒಂದು ಪೊಟ್ಟಣದಲ್ಲಿ ಕಟ್ಟಿ ಬ್ಯಾಗ್‌ನ ಬಲಭಾಗದ ಜಿಪ್‌ನಲ್ಲಿಯೂ ಹಾಗೆಯೇ ಇನ್ನೊಂದು ಪೊಟ್ಟಣದಲ್ಲಿ ಬ್ರೆಡ್‌ನ್ನು ಪ್ಯಾಕ್ ಮಾಡಿ ತಿಂಡಿಗೆಂದು ತಂದಿದ್ದರು. ತಿಂಡಿಯ ಪೊಟ್ಟಣವನ್ನು ಎಡಭಾಗದ ಜಿಪ್‌ನಲ್ಲಿ ಹಾಕಿ ತಂದಿದ್ದರು. ತಿಂಡಿ ತಿನ್ನುವ ಸಮಯದಲ್ಲಿ ತುಂಬ ಕೆಲಸದ ಒತ್ತಡ ಹಾಗೂ ಎಲ್ಲಾ ವಿಷಯಗಳನ್ನು ಬೇಗ ಮುಗಿಸಬೇಕು ಎಂಬ ತರಾತುರಿಯಲ್ಲಿ ಬೇರೆ ವಿಷಯಗಳನ್ನು ಮರೆತು ಬಲಭಾಗದಲ್ಲಿ ಇಟ್ಟಿದ್ದ ಪೊಟ್ಟಣದಲ್ಲಿರುವುದನ್ನು ತಿನ್ನುತ್ತಾರೆ. ಸುಮಾರು ಅರ್ಧ ಊಟ ಮುಗಿದ ಮೇಲೆಯೇ ಅವರಿಗೆ ತಿಳಿಯುವುದು, ಅವರು ಮರೆತು ಬಲಭಾಗದ ಪೊಟ್ಟಣದಲ್ಲಿರುವುದನ್ನು ತಿಂದಿದ್ದಾರೆ ಎಂದು. ಇದು ಮರೆವಿನಿಂದ ಆದ ಒಂದು ರಾದ್ಧಾಂತ. ಹೀಗೆ ಮರೆವು ಹಲವಾರು ಜನರನ್ನು ಫಜೀತಿಗೆ ಸಿಲುಕಿಸಿದ ಉದಾಹರಣೆಗಳಿವೆ.

ಮರೆವಿನ ಬಗ್ಗೆ ಹೇಳುವಾಗ ನಾವು ಮಹಾಭಾರತದಲ್ಲಿ ಬರುವ ಕಥೆಯೊಂದನ್ನು ಜ್ಞಾಪಿಸಿಕೊಳ್ಳಬಹುದು. ಕರ್ಣಅರ್ಜುನರ ಯುದ್ಧದ ಸಂದರ್ಭದಲ್ಲಿ ಪರಶುರಾಮನು ನೀಡಿದ ಶಾಪದ ಪರಿಣಾಮವಾಗಿ ಕರ್ಣನು ಕಲಿತ ವಿದ್ಯೆಯನ್ನೆಲ್ಲಾ ಮರೆತು ಬಿಡುತ್ತಾನೆ. ಕರ್ಣನ ಮರೆವು ಅವನನ್ನು ಸಾವಿನೆಡೆಗೆ ನೂಕುತ್ತದೆ.

ಮರೆವು ಕೆಲವೊಮ್ಮೆ ಜನರಿಗೆ ವರವಾಗಿ ಪರಿಣಮಿಸುತ್ತದೆ. ಯಾರಾದರೂ ಒಬ್ಬರು ಪ್ರೀತಿ ಪಾತ್ರರು ನಮ್ಮನ್ನು ಅಗಲಿದಾಗ ಅವರ ನೆನಪುಗಳನ್ನು ಸಮಯ ಹಾದುಹೋಗುವಂತೆ ನಾವು ಮರೆತುಬಿಡುತ್ತೇವೆ. ಮರೆವು ಎಂಬುವುದು ಇಲ್ಲವಾದಲ್ಲಿ ನಾವು ಬದುಕಿದ್ದು ಅವರ ನೆನಪಿನಲ್ಲಿಯೇ ಕೊರಗಿ ನರಳುವ ಸಾಧ್ಯತೆ ಇದೆ. ಇದೆಲ್ಲದರ ಪರಿಣಾಮವಾಗಿ, ಮರೆವನ್ನು ನಾವು ವರವಾಗಿಯೂ ಪರಿಗಣಿಸಬಹುದೂ, ಹಾಗೆಯೇ ಮರೆವು ಶಾಪವೂ ಹೌದು!

ಮಂಡಿಬಿಸಿ ಮಾಡ್ಕಬೇಡಿ ಮಂಡಿ ಇಪ್ಪೋರೆಲ್ಲರು

(ಬಹುಮಾನಿತ ಆಶುಕಥೆ)

ನಾಗರತ್ನ
ದ್ವಿತಿಯ ಬಿ.ಎಸ್ಸಿ.

ಅದೊಂದು ಪುಟ್ಟ ಸಂಸಾರ. ಅದರ ಆಧಾರಸ್ತಂಭ ವಿಶ್ವನಾಥರಾಯರು. ಆ ಮನೆಯ ಹೋಮ್‌ಮಿನಿಸ್ಟರ್ ವಸುಂಧರಾ. ಇವರಿಬ್ಬರು ದಂಪತಿಗಳಿಗೆ ಆರತಿಗೊಂದು ಕೀರ್ತಿಗೊಂದು ಎಂಬಂತೆ ಇಬ್ಬರು ಮುದ್ದಾದ ಮಕ್ಕಳು ಭಾರ್ಗವ, ಭವ್ಯ. ಇವರೊಂದಿಗೆ ಭಾರ್ಗವನ ದೊಡ್ಡಪ್ಪನ ಮಗ ಭರತ ಕೂಡ ಭಾರ್ಗವನಿಗೆ ಅಣ್ಣನಿಗಾಗಿ ಅವರೊಂದಿಗೆ ವಾಸಿಸುತ್ತಿದ್ದ.

ಆನೆ ನಡೆದಿದ್ದೇ ದಾರಿ. ಎಂಬಂತೆ ಆ ಮನೆಯಲ್ಲಿ ಭಾರ್ಗವನದ್ದೇ ದರ್ಬಾರು. ಆತ ನಡೆದದ್ದೇ ದಾರಿ. ಹೇಳಿದ್ದೇ ವಾಕು. ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಬಾಲ್ಯದಲ್ಲಿ ಭಾರ್ಗವನು ಆಡದೇ ಇದ್ದ ಆಟಗಳಿಲ್ಲ. ಲಗೋರಿ, ಗೋಲಿ, ಕಬ್ಬಡ್ಡಿ, ಕ್ರಿಕೆಟ್ ಎಲ್ಲದರಲ್ಲೂ ಭಾರ್ಗವನದ್ದೇ ಮೇಲುಗೈ. ಈತ ಕೋಪದಲ್ಲಿ ಸಾಕ್ಷಾತ್ ಜಮದಗ್ನಿ. ವಿದ್ಯೆಯಲ್ಲಿ ಸರಸ್ವತೀ ಪುತ್ರ. ಅಣ್ಣ–ತಂಗಿಯರೊಂದಿಗೆ ಜಗಳವಾಡಲು ನಿಂತರಂತೂ ಕೇಳುವುದೇ ಬೇಡ. ಅವರ ಜನ್ಮಜಾಲಾಡಿಬಿಡುತ್ತಿದ್ದ.

ಹೀಗಿರುವಾಗ ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸಲು ಭಾರ್ಗವನು ತನ್ನ ಹುಟ್ಟೂರಾದ ಬೆಳಗಾವಿಯನ್ನು ಬಿಟ್ಟು ಕುಂದಾಪುರ ನಗರಕ್ಕೆ ಬಂದ. ಹೊಸ ಕಾಲೇಜು, ಹೊಸ ವಾತಾವರಣ, ಹೊಯ್ಕ್ ಬರ್ಕ್ ಎಂದು ಬಾಯಿತುಂಬಾ ಮಾತಾಡುವ ಜನರು, ಹೊಸ ಜೀವನಶೈಲಿ, ಥೈಯಾತಕ ತಕ ಥೈಯಾತಕ ಕಾಲೇಜಿಗೆ ಬಂದನಯ್ಯ ಹಳ್ಳಿಮುಖ ಎಂದು ಚುಡಾಯಿಸುವ ಕಾಲೇಜಿನ ಸೀನಿಯರ್‌ಗಳನ್ನು ಕಂಡು ಕಂಗಾಲಾಗಿದ್ದ ಭಾರ್ಗವ. ಈ ಎಲ್ಲ ಹೆದರಿಕೆಯ ಮಧ್ಯದಲ್ಲೂ ಎಲೆಮರೆಯ ಕಾಯಿಯಂತೆ ಕಾಲೇಜು ಗೇಟಿನ ಸಮೀಪದಲ್ಲಿ ಹೂವು ಮಾರುತ್ತಿದ್ ಒಬ್ಬ ಎಂಟರ ಪ್ರಾಯದ ಬಾಲಕಿಯನ್ನು ಕಂಡ ಭಾರ್ಗವ.

ಆಕೆಯು ನಗುವು ಎಂತಹವರ ಮನಸ್ಸನ್ನು ಕರಗಿಸಬಲ್ಲದ್ದಾಗಿತ್ತು. ಆಕೆ ಮಾರುತ್ತಿದ್ದ ಮಲ್ಲಿಗೆ ಹೂವಿನ ಘಮವು ಜನರನ್ನು ತನ್ನತ್ತ ಸೆಳೆಯುತ್ತಿತ್ತು. ಆ ಪುಟ್ಟ ಜೀವದ ಉದ್ದನೆಯ ಜಡೆಯ ಮೆರುಗು ಹೆಚ್ಚಿಸುವಂತೆ ಗುಲಾಬಿ ಹೂವೊಂದು ಆಕೆಯ ಮುಡಿಯಲ್ಲಿ ರಾರಾಜಿಸುತ್ತಿತ್ತು. ಆ ಮುಗ್ಧ ಮುಖದ ಸೌಂದರ್ಯಕ್ಕೆ ಮನಸೋತ ಭಾರ್ಗವ ಆಕೆ ಯಾರೆಂದು ತಿಳಿಯಲು ಕುತೂಹಲದಿಂದ ಆಕೆಯಲ್ಲಿ ನೀನ್ಯಾರೆಂದು ಪ್ರಶ್ನಿಸಿದ.

ಆದರೆ ಆಕೆಯಿಂದ ಯಾವ ಉತ್ತರವೂ ಬರಲಿಲ್ಲ. ಬದಲಿಗೆ ಆಕೆ ಮಲ್ಲಿಗೆ ಹೂವನ್ನು ಭಾರ್ಗವನ ಕೈಯಲ್ಲಿಟ್ಟು ಕೈಸನ್ನೆಯಲ್ಲಿ 10 ಎಂದು ತೋರಿಸಿದಳು. ಭಾರ್ಗವನಾದರೂ 10 ರೂಪಾಯಿಯನ್ನು ಅವಳಿಗೆ ಕೊಟ್ಟು ಮುಂದೆ ಹೋಗಲು ಸಿದ್ಧನಾದ. ಆಗ ಅವಳು ಭಾರ್ಗವನಿಗೆ ಒಂದು ಬೋರ್ಡ್‌ನ್ನು ಎತ್ತಿ ತೋರಿಸಿದಳು. ಅದರಲ್ಲಿ ನಾನು ಮೇದಿನಿ, ನಾನು ಹುಟ್ಟು ಮೂಕಿ, ಆದರೆ ನನಗೆ ವಿದ್ಯೆ ಕಲಿಯುವ ಆಸೆಯಿದೆ. ಆದ್ದರಿಂದ ನನ್ನ ಹೂವನ್ನು ಖರೀದಿಸಿ ನನಗೆ ಸಹಾಯ ಮಾಡಿ ಎಂದು ಬರೆದಿತ್ತು. ಅಲ್ಲದೇ ಮಂಡಿ ಬಿಸಿ ಮಾಡ್ಕಬೇಡಿ ಮಂಡಿ ಇಪ್ಪೋರೆಲ್ಲರೂ ಎಂಬ ಕುಂದಗನ್ನಡದ ವಾಕ್ಯವೊಂದಿತ್ತು. ಅದನ್ನು ಓದಿ ಮುನ್ನಡೆದ ಭಾರ್ಗವ.

ಹೀಗೆ ದಿನಾಲೂ ಭಾರ್ಗವನು ಆಕೆಯ ಹೂವನ್ನು ಕೊಳ್ಳುತ್ತಿದ್ದ. ಆಕೆಯು ಖುಷಿಯಿಂದ ಈತನೊದಿಗೆ ಸಂವಾದ ಮಾಡಲು ಪ್ರಯತ್ನಿಸುತ್ತಿದ್ದಳು. ಕೊನೆಗೆ ಮಂಡಿ ಬಿಸಿ ಮಾಡ್ಕಬೇಡಿ ಮಂಡಿ ಇಪ್ಪೋರೆಲ್ಲರೂ ಎಂಬ ಬೋರ್ಡ್‌ನ್ನು ತೋರಿಸುತ್ತಿದ್ದಳು. ಆದರೆ ಭಾರ್ಗವನಿಗೆ ಆ ಕಾಲೇಜು, ಹಾಸ್ಟೆಲ್ ಜೀವನ ಜೈಲು ಅನ್ನಿಸತೊಡಗಿತು. ಒಂಟಿ ಒಂಟಿಯಾಗಿರುವುದು ಬೋರೋ ಬೋರು ಎಂಬಂತೆ

ಆತನಿಗೆ ಒಂಟಿತನ ಕಾಡಲು ಶುರುವಾಯಿತು. ಆದ್ದರಿಂದ ತಾನು ಓದುವುದಕ್ಕಿಂತ ಸಮುದ್ರದ ಬದಿ ಪುಟ್ಟಗುಡಿಸಲಿನಲ್ಲಿ ಅನಾಥೆಯಾಗಿ ಹೂಮಾರಿಕೊಂಡು ಜೀವನ ಸಾಗಿಸುತ್ತಿದ್ದ ಮೇದಿನಿ ಭವಿಷ್ಯವನ್ನು ಉತ್ತಮವಾಗಿ ರೂಪಿಸೋಣ ಎಂದು ನಿರ್ಧಾರಮಾಡಿದ ಭಾರ್ಗವ. ಅದರಂತೆ ಮೇದಿನಿಯ ಮನೆಗೆ ಹೋಗಿ ಆಕೆಯನ್ನು ಶಾಲೆಗೆ ಸೇರಿಸಿ ತಾನೂ ಹೊಟ್ಟೆಪಾಡಿಗಾಗಿ ಒಂದು ಕೆಲಸವನ್ನು ಹುಡುಕಿಕೊಂಡು ಇಬ್ಬರೂ ಖುಷಿಯಿಂದ ಒಬ್ಬರಿಗೊಬ್ಬರು ಧೈರ್ಯವಾಗಿ ಸ್ಫೂರ್ತಿಯಾಗಿ ಜೀವನ ನಡೆಸುತ್ತಿದ್ದರೂ ಒಟ್ಟಿನಲ್ಲಿ ಹೇಳುವುದಾದರೆ ಅವರಿಬ್ಬರೂ ಒಂದೇ ಜೀವ ಎರಡು ದೇಹಗಳಂತೆ ಇದ್ದರು.

ಹೀಗಿರುವಾಗ ಒಂದು ದಿನ ಭಾರ್ಗವನ ಮನೆಯಿಂದ ಊರಿಗೆ ಬಾ ಎಂದು ಬರೆದಿದ್ದ ಕಾಗದವು ಆತನಿಗೆ ತಲುಪಿತು. ಅದನ್ನು ಓದಿದ ಅವನಿಗೆ ಅಮ್ಮ ತೋರಿಸುತ್ತಿದ್ದ ಪ್ರೀತಿ, ಅಪ್ಪ ಅವನ ಮೇಲಿಟ್ಟಿದ್ದ ನಂಬಿಕೆ, ತಂಗಿ, ಅಣ್ಣ ಎಲ್ಲರೂ ನೆನಪಾದರು. ಊರಿಗೆ ಹೋಗಲೇ? ಮೇದಿನಿಯನ್ನೇನು ಮಾಡಲಿ? ವಿದ್ಯಾಭ್ಯಾಸದ ಬಗ್ಗೆ ಏನು ಹೇಳಲಿ? ಅಥವಾ ಎಲ್ಲವನ್ನು ಬಿಟ್ಟು ಆಧ್ಯಾತ್ಮದತ್ತ ಒಲವು ತೋರಲೇ? ಓಡಿ ಹೋಗಲೇ? ಸಾಯಲೆ? ಬದುಕಲೆ? ಎಂಬ ಇತ್ಯಾದಿ ಪ್ರಶ್ನೆಗಳು ಭಾರ್ಗವನನ್ನು ಒಂದೊಂದಾಗಿ ಕಾಡುತ್ತಿದ್ದವು. ನಾಳೆ ಏನೋ ಆಗುವುದು ಖಚಿತ ಎಂದು ಹೆದರಿ ಮೌನವಾಗಿ ಸಮುದ್ರದ ಕಡೆಗೆ ಹೋಗಿ ನಿಂತ ಅದೆಷ್ಟೋ ಘಳಿಗೆಗಳಿಂದ ಮೇಲೆದ್ದು ಕೆಳಗಿಳಿಯುವ ಕಡಲಿನಲೆಗಳನ್ನು ತದೇಕಚಿತ್ತವಾಗಿ ನೋಡುತ್ತಿದ್ದಾನೆ ಭಾರ್ಗವ. ಉಕ್ಕಿ ಹರಿಯುವ ತೆರೆಗಳು ಅವನ ಬದುಕಿನ ಪುಟಗಳನ್ನು ತೆರೆಯುವಂತಿವೆ. ಎಲ್ಲರೂ ನೆನಪಾಗುತ್ತಿದ್ದಾರೆ. ಅಪ್ಪ ಅಮ್ಮ ಅಣ್ಣ ತಂಗಿ ಮತ್ತೆ ಅವಳು? ಅವಳು ಮೇದಿನಿ. ಎಲ್ಲರೂ ನನ್ನ ಬದುಕಿನ ಪುಟಗಳಲ್ಲಿ ಅಕ್ಷರಗಳಾಗಿ ಅಚ್ಚೊತ್ತಿದವರು. ನಾಳೆಯಿಂದ ಎಲ್ಲವೂ ಬದಲಾಗಲಿದೆ. ಬಂಧಗಳೆಲ್ಲವೂ ಸಂಬಂಧಗಳಾಚೆಯ ಪೊರೆಯನ್ನು ಕಳಚಿ ಬಯಲಾಗಲಿವೆ. ವರ್ಷಗಳಿಂದ ತುಡಿಯುತ್ತಲೆ ಇದ್ದ ಆಧ್ಯಾತ್ಮಿಕ ಒಲವು ಮೇರೆ ಮೀರಿ ಹರಿಯುತ್ತಲಿದೆ. ಎಲ್ಲರ ಎಲ್ಲ ಪ್ರಶ್ನೆಗಳಿಗೂ ನಾಳೆ ಎಂಬುದು ಉತ್ತರವಾಗಲಿದೆ. ಕಡಲರಾಜ, ಇನ್ನೆಂದು ನಿನ್ನ ನೋಡುವೆನೋ ಅರಿವಿಲ್ಲ. ಇಂದೇ ನನ್ನೆಲ್ಲ ದುಗುಡಗಳು ಕೊನೆಯಾಗಲೆಂದು ಹಾರೈಸು. ನಾನು ನಿನ್ನಂತೇ ಕಡಲಾಗುವಂತೆ ಹರಸು ಎನ್ನುತ್ತಲೇ ಕೈ ಮುಗಿದು ನಿಂತ ಭಾರ್ಗವನೆದುರಿಗೆ ಭೋರ್ಗರೆಯುವ ಕಡಲು ಬಾನ ಬಣ್ಣದಿಂದಾಗಿ ಬಂಗಾರದಂತೆ ಹೊಳೆಯುತ್ತಿತ್ತು. ಅದೇ ಸಮಯಕ್ಕೆ ಮೇದಿನಿಯು ಭಾರ್ಗವನ ಬಳಿಗೆ ಬಂದಳು. ಆಗ ಭಾರ್ಗವನಿಗೆ ನೆನಪಾದದ್ದು ಮಂಡಿ ಬಿಸಿ ಮಾಡ್ಕಬೇಡಿ ಮಂಡಿ ಇಷ್ಟೊರೆಲ್ಲರು ಎಂಬ ಕುಂದಗನ್ನಡ ಸೂಕ್ತಿ. ಅದರಂತೆ ಆದದ್ದಾಗಲಿ ಎಂದು ಮೇದಿನಿಯನ್ನು ಕರೆದುಕೊಂಡು ಊರಿಗೆ ಹೊರಟ ಭಾರ್ಗವ, ದೇವರ ದಯೆಯಿಂದ ಮೇದಿನಿಯನ್ನು. ಆ ಮನೆಯವರು ಮನೆಮಗಳಾಗಿ ಒಪ್ಪಿಕೊಂಡರು. ಆಗ ಹೋದ ಜೀವ ಬಂದಂತಾಯ್ತು ಭಾರ್ಗವನಿಗೆ. ಹೀಗೆ ಅವರೆಲ್ಲರೂ ಸುಖವಾಗಿ ಜೀವನ ನಡೆಸಿದರು. ಆದ್ದರಿಂದ ಏನೇ ಆದರೂ ಮಂಡಿ ಬಿಸಿ ಮಾಡಿಕೊಳ್ಳಬಾರದು ಎಂದು ಮೇದಿನಿಯ ಬೋರ್ಡು ನಿಮಗೆ ಪಾಠ ಕಲಿಸುತ್ತದೆ.

किं कुलेनोपदिष्टेन शीलमेवात्र कारणम् ।
भवन्ति नितरां स्फीताः सुक्षेत्रे कण्टकिद्रुमाः ॥

किं कुलेनोपदिष्टेन शीलमेवात्र कारणम् ।
भवंति नितरां स्फीताः सुक्षेत्रे कंटकिद्रुमाः ॥

ಕುಲ ದೊಡ್ಡದೆಂದು ಹೇಳಿಕೊಳ್ಳುವುದರಿಂದ ಏನು ಪ್ರಯೋಜನ? ಸ್ವಭಾವವೇ ಎಲ್ಲಾ ಕಡೆ ಕಾರಣ. ಒಳ್ಳೆಯ ಗದ್ದೆಯಲ್ಲಿಯೂ ಕೂಡಾ ಮುಳ್ಳಿನ ಮರಗಳು ಚೆನ್ನಾಗಿ ಹುಟ್ಟಿಕೊಳ್ಳಬಲ್ಲವು.

ಸೈನಿಕರಿಗೊಂದು ಸಲಾಂ

ಚಲನ ಹೆಚ್. ಎ.
ಪ್ರಥಮ ಬಿ.ಎಸ್ಸಿ.

ಯಾರನ್ನೂ ಕೇಳಿದರು ನೀವು ಯಾರನ್ನೂ ಪ್ರೀತಿಸುತ್ತೀರಿ? ಯಾರಿಗಾಗಿ ಕಾಳಜಿ ವಹಿಸುತ್ತೀರಿ ಎಂದರೆ ಅವರ ಉತ್ತರ ಒಂದೇ, ತನ್ನ ಕುಟುಂಬ ಅರ್ಥಾತ್ ತನ್ನ ತಂದೆ, ತಾಯಿ, ಸಹೋದರ, ಸಹೋದರಿ, ಅಜ್ಜಿ, ತಾತ, ಹೆಂಡತಿ, ಮಕ್ಕಳು, ದೊಡ್ಡಪ್ಪ, ಚಿಕ್ಕಪ್ಪ– ಚಿಕ್ಕಮ್ಮ ಇವರಿಗಾಗಿ ಎನ್ನುತ್ತಾರೆ. ಒಮ್ಮೆಯು ತಮ್ಮ ಬಂಧು, ಬಾಂಧವ್ಯ, ಮನೆ, ಊರು ಬಿಟ್ಟು ದೇಶಕ್ಕಾಗಿ ದೇಶದ ಜನರ ರಕ್ಷಣೆಗಾಗಿ ಗಡಿಯಲ್ಲಿ ನಿಂತ ಧೀರ ಯೋಧರ ಬಗ್ಗೆ ಪ್ರೀತಿಯಾಗಲಿ, ಕಾಳಜಿಯಾಗಲಿ ನಾವು ತೋರಲಾರೆವು. ಕಾರಣ ಯೋಧರನ್ನು ಸರ್ಕಾರ ನೋಡಿಕೊಳ್ಳುತ್ತದೆ. ಎಲ್ಲಾ ತರದ ಸೌಕರ್ಯವನ್ನು ನೀಡುತ್ತದೆ. ನಮಗೇಕೆ ಎನ್ನುವ ಧೋರಣೆಯನ್ನು ಬೆಳೆಸಿಕೊಂಡಿದ್ದೇವೆ. ನಿಜ. ಯೋಧರನ್ನು ಸರ್ಕಾರ ನೋಡಿಕೊಳ್ಳುತ್ತದೆ. ಆದರೆ ತಮ್ಮ ಪ್ರಾಣವನ್ನು ಒತ್ತೆ ಇಟ್ಟು ನಮ್ಮೆಲ್ಲರ ರಕ್ಷಣೆ ಮಾಡುವ ಅಂತಹ ಮಹಾಪುರುಷರಿಗೆ ನಮ್ಮಿಂದೇನು ದೊರೆಯುತ್ತದೆ. ನಮ್ಮಿಂದ ಏನೂ ದೊರೆಯದಿದ್ದರೂ ತೊಂದರೆಯಿಲ್ಲ. ಕೇವಲ ಒಂದಿಷ್ಟು ನಮ್ಮಿಂದ ಅನುಕಂಪ, ಪ್ರೀತಿ, ಅಂತಹ ಯೋಧರ ಕುಟುಂಬದ ಸೌಖ್ಯಕ್ಕಾಗಿ ಮತ್ತು ದೇವರಲ್ಲಿ ಒಂದು ಸಣ್ಣ ಪ್ರಾರ್ಥನೆ ಸಾಕಲ್ಲವೇ? ಎಲ್ಲಾ ವ್ಯಕ್ತಿಗಳು ಅವರು ಒಂದೇ ತರಹ ಇರುವುದಿಲ್ಲ. ಕೆಲವರು ಯೋಧರಲ್ಲಿ ಅಪಾರ ಗೌರವ, ಪ್ರೀತಿ, ಅನುಕಂಪವನ್ನು ಹೊಂದಿರುತ್ತಾರೆ. ಆದರೆ ಬಹುಪಾಲು ಜನರು ಯೋಧರಲ್ಲಿ ಅಂತಹ ಭಾವನೆಗಳನ್ನು ತಾಳಲಾರರು. ನಮ್ಮ ಯುವ ಪೀಳಿಗೆಗಂತೂ ಸಿನಿಮಾ ನಟರೋ, ಕ್ರಿಕೆಟ್ ಆಟಗಾರರೋ ಬಹುಬೇಗ ಹೀರೋಗಳಾಗುತ್ತಾರೆ. ಅವರ ಅಭಿಮಾನಿಗಳಾಗುತ್ತಾರೆ. ಅವರ ಫೋಟೋಗಳೇ ದೇವರ ಫೋಟೋಗಳಾಗುತ್ತವೆ. ಅಭಿಮಾನಿಗಳ ಸಂಘ ಹುಟ್ಟಿಕೊಳ್ಳುತ್ತದೆ. ಆದರೆ ನಮ್ಮ ದೇಶಕ್ಕಾಗಿ ಪ್ರಾಣತೆತ್ತು ದುಡಿಯುವ, ಪ್ರಾಣ ಕಳೆದುಕೊಂಡವರು ನಮಗೆ ಗಣ್ಯರೆನಿಸುವುದಿಲ್ಲ. ನೆನಪಾಗುವುದಿಲ್ಲ.

ತಮ್ಮ ಪ್ರಾಣದ ಹಂಗು ತೊರೆದು ಸದಾ ದೇಶಕ್ಕಾಗಿ ದುಡಿಯುವ ನಮ್ಮ ಸೈನಿಕರಿಗೆ ಅಭಿಮಾನ ತೋರುವುದಿಲ್ಲ. ಪ್ರಾಣತೆತ್ತರೂ ಅವರು ನಮ್ಮ ಹೀರೋಗಳಾಗುವುದಿಲ್ಲ. ನಾವು ಈ ಕುರಿತು ಯೋಚಿಸಬೇಕಿದೆ. ಅಂತಹ ಸೈನಿಕರ ದಿನವನ್ನು ನಾವು ಅದ್ಧೂರಿಯಾಗಿ ರಾಷ್ಟ್ರ ಹಬ್ಬದಂತೆ ಆಚರಿಸುವುದಿಲ್ಲ. ನಮ್ಮ ರಾಷ್ಟ್ರಕ್ಕಾಗಿ ನಮ್ಮ ಮನೋಧೋರಣೆ ಬದಲಾಗಬೇಕಿದೆ. ನಮ್ಮ ಸೈನಿಕರ ದೇಶ ಪ್ರೇಮ ನಮ್ಮ ಅಭಿಮಾನದ ಪ್ರೀತಿಯ ಕಿಚ್ಚನ್ನು ಹೊತ್ತಿಸಿ ದೇಶವನ್ನು ಬೆಳೆಸಬೇಕಿದೆ. ನಾವೂ ದೇಶಪ್ರೇಮ ತೋರಬೇಕಿದೆ. ನಮ್ಮನ್ನು ಸಾಕಿ ಸಲಹುವ, ನಮ್ಮ ಪಾಲನೆ, ಪೋಷಣೆಯನ್ನು ಮಾಡುವ ನಮ್ಮ ಪೋಷಕರನ್ನು ನಾವು ಹೇಗೆ ಗೌರವಿಸಿ ಪ್ರೀತಿಸುತ್ತೇವೋ ಅಂತೆಯೇ ನಮ್ಮನ್ನು ಹಾಗೂ ನಮ್ಮ ಪೋಷಕರಿಂದ ಹಿಡಿದು ದೇಶದ ಪ್ರತಿಯೊಬ್ಬ ಪ್ರಜೆಯನ್ನು ವೈರಿಗಳಿಂದ ರಕ್ಷಿಸುವ ಅಂತಹ ಧೀಮಂತ ಯೋಧರನ್ನು ನಾವು ಗೌರವಿಸಿ, ಪ್ರೀತಿಸಬೇಕು. ಇದು ನಾವು ಇವರಿಗೆ ನೀಡುವ ಗೌರವ ಕೃತಜ್ಞತೆ, ನಿಸ್ವಾರ್ಥ ಸೇವೆಯ ದೇಶಕಾಯುವ ಧೀರ ಸೈನಿಕರಿಗೊಂದು ನಮ್ಮ ಸಲಾಂ.

अल्पानामपि वस्तूनां संहतिः कार्यसाधिका ।
तृणैरारभ्यते रज्जुस्तया नागोऽपि बध्यते ॥

ಅಲ್ಪಾನಾಮಪಿ ವಸ್ತೂನಾಂ ಸಂಹತಿಃ ಕಾರ್ಯಸಾಧಿಕಾ ।
ತೃಣೈರಾರಭ್ಯತೇ ರಜ್ಜುಸ್ತಯಾ ನಾಗೋಽಪಿ ಬಧ್ಯತೇ ॥

ನಿಃಸಾರವಾಗಿದ್ದರೂ ಆ ವಸ್ತುಗಳ ಸಮೂಹ ಕಾರ್ಯವನ್ನು ಉಂಟುಮಾಡುತ್ತದೆ. ಹುಲ್ಲುಗಳಿಂದ ಉಂಟಾದ ಹಗ್ಗ ಆನೆಯನ್ನೂ ಕೂಡಾ ಕಟ್ಟಿ ಹಾಕುತ್ತದೆ.

ಮತ್ತೆ ಬರುವೆಯಾ ಓ ಕಾಲವೆ...

ಆಶಿಕಾ ಕೆ. ಎಸ್.
ದ್ವಿತೀಯ ಬಿ.ಕಾಂ.

ಅಂದು ಜೋರಾಗಿ ಮಳೆ ಸುರಿಯುತ್ತಿತ್ತು. ಒಂದು ಪುಟ್ಟ ಹುಡುಗಿ ತನ್ನ ಮನೆಯಿಂದ ಓಡಿಬಂದು ಆಟವಾಡುತ್ತಿದ್ದಳು. ಅಲ್ಲಿ–ಇಲ್ಲಿ ಇದ್ದ ಚಿಕ್ಕ–ಚಿಕ್ಕ ನೀರಿನ ಹೊಂಡಗಳಲ್ಲಿ ಜಿಗಿದು–ಜಿಗಿದು ಕೆಸರು ನೀರಿನಲ್ಲಿ ಆಡುತ್ತಿದ್ದಳು. ತಾನು ಮಾಡಿದ ಬಣ್ಣ–ಬಣ್ಣದ ಕಾಗದದ ದೋಣಿಗಳನ್ನು ನೀರಿನಲ್ಲಿ ತೇಲಿಬಿಡುತ್ತಿದ್ದಳು. ಅದನ್ನು ನೋಡಿ ನಾನು ಚಿಕ್ಕವಳಿದ್ದಾಗ ಹಾಗೆ ಮಳೆಯಲ್ಲಿ ಆಡಿ ಅಮ್ಮನ ಹತ್ತಿರ ಬೈಯಿಸಿಕೊಂಡ ಆ ಸೊಗಸಾದ ದಿನಗಳು ನೆನಪಾದವು. ನನ್ನ ಗೆಳತಿಯರೊಡನೆ ಅಡಿಗೆ–ಆಟ ಆಡಿದ್ದು, ಮಣ್ಣಿನಲ್ಲಿ ಚಿಕ್ಕ–ಚಿಕ್ಕ ಗಣಪತಿಯ ಮೂರ್ತಿ ಮಾಡಿದ್ದು, ಸ್ನೇಹಿತರ ಜೊತೆ ಸೇರಿ ಕಣ್ಣಾಮುಚ್ಚಾಲೆ, ಕುಂಟೆಬಿಲ್ಲೆ ಆಟಗಳನ್ನು ಆಡಿದ್ದು, ಅವರೊಡನೆ ತಿಂಡಿ–ತಿನಿಸುಗಳು, ಬಣ್ಣದ ಕಡ್ಡಿ ಹೀಗೆ ಮುಂತಾದ ವಸ್ತುಗಳನ್ನು ಹಂಚಿಕೊಂಡ ಆ ಸಿಹಿ ಕ್ಷಣಗಳು ನೆನಪಾದವು. ಹೀಗೆ ಎಲ್ಲರೊಡನೆ ಸೇರಿ ಮಾಡಿದ ಪುಂಡಾಟ ನೆನಪಾಯಿತು. ಈಗ ಅನ್ನಿಸುತ್ತೆ, ನಾನು ಯಾವತ್ತೂ ಚಿಕ್ಕವಳಾಗಿಯೆ ಇರಬೇಕಿತ್ತು ಎಂದು. ಆಗ ಮಾಡಿದ ಆ ಮೋಜು–ಮಸ್ತಿ ಮತ್ತೆ ಮಾಡಲು ಆಗುವುದಿಲ್ಲ ಎಂದು ಬೇಸರವಾಗುತ್ತದೆ. ಹೀಗೆ ಕೀಟಲೆ ಮಾಡಿ ಎಷ್ಟೋ ಬೈಯಿಸಿಕೊಳ್ಳುತ್ತಿದ್ದರೂ ಎನೂ ಅನ್ನಿಸುತ್ತಿರಲಿಲ್ಲ. ಆದರೆ ಈಗ ಯಾರಾದರೂ ಬೈದರೆ ನೆತ್ತಿಗೇರುವಷ್ಟು ಕೋಪ ಬರುತ್ತದೆ.

ಆಗ ನಾನು ನನ್ನ ತಮ್ಮನ ಜೊತೆ ಸೇರಿ ಮಾಡಿದ ಕೀಟಲೆಗಳು ಹಲವಾರು. ನಾವು ದೊಡ್ಡವರಾಗುತ್ತಾ, ಆ ಕೀಟಲೆ ಸ್ವಭಾವವನ್ನು ಬಿಟ್ಟು ಸ್ವಲ್ಪ ಗಾಂಭೀರ್ಯತೆಯಿಂದ ಇರಲು ಪ್ರಯತ್ನಿಸುತ್ತೇವೆ. ಹಾಗೇನಾದರೂ ಈಗ ಕೀಟಲೆ ಮಾಡಿದರೆ, ಅಪ್ಪ–ಅಮ್ಮ ಬೈಯಲು ಶುರುಮಾಡುತ್ತಾರೆ. ಈಗ ನೀನು ದೊಡ್ಡವಳು, ಶಿಸ್ತು ಮತ್ತು ಗಾಂಭೀರ್ಯತೆಯಿಂದ ಇರುವುದನ್ನು ಕಲಿ ಎಂದು ಬೈಯ್ಯುತ್ತಾರೆ. ಈ ಮಾತಿನ ಪ್ರಭಾವವೋ ಎನ್ನುವಂತೆ ನಮ್ಮಲ್ಲಿರುವ ಮುಗ್ಧತೆ ಕಡಿಮೆಯಾಗುತ್ತಾ ಹೋಗುತ್ತದೆ. ನಾವು ದೊಡ್ಡವರಂತೆ ಯೋಚಿಸಲು ಹಾಗೂ ವರ್ತಿಸಲು ಪ್ರಯತ್ನಿಸುತ್ತೇವೆ. ಚಿಕ್ಕವಳಿದ್ದಾಗ ಯಾರಾದರೂ ಬೈದರೆ, ನಾನು ಯಾವಾಗ ದೊಡ್ಡವಳಾಗುತ್ತೇನೋ ಎಂದೆನಿಸುತ್ತಿತ್ತು. ಅದರ ಈಗ ನಾನು ಯಾವತ್ತೂ ಚಿಕ್ಕವಳಾಗಿಯೇ ಇರಬೇಕು ಎಂದೆನಿಸುತ್ತೆ. ಯಾರಾದರೂ ಒಂದು ಮಗುವ ಎತ್ತಿ ಮುದ್ದಾಡಿದರೆ ನಾನು ಮಗುವಿನ ಹಾಗೆ ಮುದ್ದುಮುದ್ದಾಗಿ ಇದ್ದಿದ್ದರೆ ನನ್ನನ್ನು ಮುದ್ದಾಡಿ ಹೊಗಳುತ್ತಿದ್ದರು ಅನ್ನಿಸುತ್ತೆ. ಎಲ್ಲೋ ಒಂದು ಕಡೆ ನನ್ನಲ್ಲಿ ಇನ್ನೂ ಚಿಕ್ಕವಳಾಗಿಯೇ ಇರಬೇಕೆನ್ನುವ ಆಸೆಯಿದೆ. ನೀರಿನಲ್ಲಿ ಕುಣಿದು ಕುಪ್ಪಳಿಸಬೇಕು, ಅಪ್ಪ–ಅಮ್ಮನ ಮಡಿಲಲ್ಲಿ ಮಲಗಬೇಕು, ಅಜ್ಜಿ ಹೇಳುವ ಕಥೆ ಕೇಳಬೇಕು, ಅಕ್ಕ–ಅಣ್ಣಂದಿರೊಂದಿಗೆ ಸ್ನೇಹಿತರೊಡನೆ ದಿನವಿಡೀ ಆಡಬೇಕು. ಹೀಗೆ ಎಣಿಸಲಾಗದಷ್ಟು ಆಸೆಗಳು. ಆದರೆ ಜೀವನ ನಾವು ಹೇಳಿದ ಹಾಗೆ ಅಲ್ಲ. ಅದು ಮುಂದುವರೆದಂತೆ ನಾವು ಅದರ ಜೊತೆ ಮುಂದುವರೆಯಬೇಕು. ಆದರೆ ಚಿಕ್ಕವರಿದ್ದಾಗ ಇದ್ದ ಮುಗ್ಧತೆ, ಕೀಟಲೆತನ ಎಂದಿಗೂ ಬಿಡಬಾರದು. ಈ ಒಂದು ಮುಗ್ದತೆಯೇ ನಮ್ಮ ಜೀವನದಲ್ಲಿ ಉತ್ಸಾಹವನ್ನು ತುಂಬುತ್ತದೆ. ಆಸಕ್ತಿ ಹುಟ್ಟಿಸುತ್ತದೆ ಹಾಗೂ ಪ್ರಾಮಾಣಿಕವಾಗಿ ಇರಲು ಸಹಾಯ ಮಾಡುತ್ತದೆ.

यस्य नास्ति स्वयं प्रज्ञा शास्त्रं तस्य करोति किम् ।
लोचनाभ्यां विहीनस्य दर्पणः किं करिष्यति ॥

ಯಸ್ಯ ನಾಸ್ತಿ ಸ್ವಯಂ ಪ್ರಜ್ಞಾ ಶಾಸ್ತ್ರಂ ತಸ್ಯ ಕರೋತಿ ಕಿಮ್ ।
ಲೋಚನಾಭ್ಯಾಂ ವಿಹೀನಸ್ಯ ದರ್ಪಣಃ ಕಿಂ ಕರಿಷ್ಯತಿ ॥

ಯಾವಾತನಿಗೆ ಸ್ವಯಂ ಬುದ್ಧಿಯಿಲ್ಲವೋ ಆತನಿಗೆ
ಶಾಸ್ತ್ರದಿಂದ ಏನು ತಾನೇ ಪ್ರಯೋಜನ? ಕಣ್ಣಿಲ್ಲದ
ಕುರುಡನಿಗೆ ಕನ್ನಡಿಯಿಂದೇನು ಉಪಯೋಗವಿದೆ?

ಅವರ್ಣನೀಯ ಕಲೆ ಯಕ್ಷಗಾನ

ಅರ್ಪಿತಾ ಬಂಗೇರ
ಪ್ರಥಮ ಬಿ.ಬಿ.ಎ.

ಕರಾವಳಿಯ ವಿಶೇಷ ಶೈಲಿಯ ಗಂಡುಕಲೆಯೇ ಯಕ್ಷಗಾನ. ತನ್ನದೇ ಶೈಲಿ, ರೂಪ, ವಿಭಿನ್ನತೆಗಳಿಂದಲೇ ಮನಸೂರೆಗೊಳಿಸುವ ಏಕೈಕ ಅದ್ಭುತ ಕಲೆ.

ಗಂಧರ್ವ ಗಾನ ಎಂಬ ಈಗ ನಶಿಸಿ ಹೋಗಿರುವ ಗಾನ ಶೈಲಿಯಿಂದ ಗಾನ ಮತ್ತು ಸ್ವತಂತ್ರ ಜಾನಪದ ಪದ್ಧತಿಗಳಿಂದ ನೃತ್ಯ ರೂಪುಗೊಂಡಿತೆಂದು ಶಿವರಾಮ ಕಾರಂತರು ಯಕ್ಷಗಾನ ಬಯಲಾಟ ಎಂಬ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. 1500 ರಿಂದಲೂ ಯಕ್ಷಗಾನ ಎನ್ನುವ ಮನೋಹರ ಕಲೆ ರೂಢಿಯಲ್ಲಿತ್ತು ಎನ್ನುವಂತದ್ದು ಬಲ್ಲವರು ಅಥವಾ ವಿದ್ವಾಂಸರು ಒಪ್ಪುವ ವಿಚಾರ.

ಯಕ್ಷಲೋಕದಲ್ಲಿ ಹಲವು ರೀತಿಯ ಪ್ರಭೇದಗಳಿದ್ದು ಅವುಗಳಲ್ಲಿ ಬಯಲಾಟವು ಅತ್ಯಂತ ಜನಪ್ರಿಯವಾದದ್ದು. ವೇಷಭೂಷಣಗಳೊಂದಿಗೆ ರಂಗಭೂಮಿಯಲ್ಲಿ ಆಡುವ ಯಕ್ಷಗಾನ ಕುಣಿತ ಎಂಬ ಹೆಸರು ಇದಕ್ಕಿದೆ. ಮೊದಮೊದಲು ಹಬ್ಬ ಹರಿದಿನಗಳಲ್ಲಿ ಊರಿನ ಬಯಲಿನಲ್ಲಿ ರಾತ್ರಿಯಿಡೀ ಈ ಬಯಲಾಟ ನಡೆಯುತ್ತಿದ್ದ ಕಾರಣ ಬಯಲಾಟ ಎನ್ನುವ ಹೆಸರು ರೂಢಿಯಲ್ಲಿತ್ತು. ಜನರು ಇದನ್ನು ಸರಳವಾಗಿ ಆಟ ಎಂದು ಹೇಳುತ್ತಾರೆ. ಆದರೆ ಈಗ ರಾತ್ರಿಯಿಡೀ ನಡೆಯುವ ಯಕ್ಷಗಾನ ಎರಡು–ಮೂರು ಗಂಟೆಗಳ ಕಾಲ ನಡೆಯುತ್ತದೆ. ಅಂದರೆ ಕಾಲಮಿತಿ ಯಕ್ಷಗಾನ.

ಕರಾವಳಿಯ ಯಕ್ಷಗಾನಗಳಲ್ಲಿ ಎರಡು ಭಾಗಗಳಿವೆ. ಬಡಗುತಿಟ್ಟು ಮತ್ತು ತೆಂಕುತಿಟ್ಟು ಹಾಗೂ ಬಡಾಬಡುಗು, ಉತ್ತರಕನ್ನಡ, ಶಿವಮೊಗ್ಗ ಜಿಲ್ಲೆಗಳಲ್ಲಿ ಬಡಾಬಡಗು ಅಥವಾ ಉತ್ತರತಿಟ್ಟು ಶೈಲಿಯ ಯಕ್ಷಗಾನ ಬಯಲಾಟ ಕಂಡು ಬಂದರೆ, ಉಡುಪಿ ಜಿಲ್ಲೆಯಲ್ಲಿ ಬಡಗುತಿಟ್ಟು, ದಕ್ಷಿಣ ಕನ್ನಡ ಹಾಗೂ ಕಾಸರಗೋಡು ಜಿಲ್ಲೆಗಳಲ್ಲಿ ತೆಂಕುತಿಟ್ಟಿನ ಯಕ್ಷ ಶೈಲಿಯನ್ನು ಗಮನಿಸಬಹುದು.

ವೇಷಭೂಷಣಗಳ ವಿನ್ಯಾಸ, ನೃತ್ಯದ ಶೈಲಿ, ಭಾಗವತಿಕೆ ಮತ್ತು ಹಿಮ್ಮೇಳಗಳಲ್ಲಿ ಕಾಣುವ ಕೆಲವು ವ್ಯತ್ಯಾಸಗಳ ಆಧಾರದ ಮೇಲೆ ಈ ವಿಂಗಡಣೆಯನ್ನು ಅಥವಾ ವಿಭಾಗಗಳನ್ನು ಮಾಡಲಾಗಿದೆಯೇ ಹೊರತು ಯಕ್ಷಗಾನದ ಮೂಲ ತತ್ವ ಆಶಯಗಳು ಉಭಯ ಶೈಲಿಯಲ್ಲಿಯೂ ಒಂದೇ ಆಗಿರುತ್ತದೆ. ಯಕ್ಷಗಾನದ ಇನ್ನೊಂದು ವಿಭಾಗವೆಂದರೆ ತಾಳಮದ್ದಲೆ. ಬಯಲಾಟಗಳಿಗಿಂತ ತಾಳಮದ್ದಲೆ ವಿಭಿನ್ನವಾದಂತದ್ದು. ಇಲ್ಲಿ ವೇಷಭೂಷಣ, ನೃತ್ಯ ಮತ್ತು ಭಾವ, ಅಭಿನಯಗಳನ್ನು ಕಾಣುವುದು ಸಾಧ್ಯವಿಲ್ಲ. ಹಿಮ್ಮೇಳ ಮತ್ತು ಮಾತುಗಾರಿಕೆ ಮಾತ್ರ ಇರುತ್ತದೆ. ಭಾಗವತರು ಹಾಡುಗಾರಿಕೆಯ ಮೂಲಕ ಕಥಾ ಆಹ್ವಾನವನ್ನು ಹೇಳುತ್ತಾ ಹೋಗುತ್ತಾರೆ. ಅರ್ಥ ದಾರಿಗಳು ಭಾಗವತಿಕೆಯಲ್ಲಿ ಹೇಳಲ್ಪಟ್ಟ ಕಥೆಯ ಭಾಗವನ್ನು ಮಾತುಗಾರಿಕೆಯ ಮೂಲಕ ಅಥವಾ ತಮ್ಮ ವಾಕ್ ಚತುರತೆಯ ಮೂಲಕ ಚರ್ಚಿಸುತ್ತಾರೆ. ಬಯಲಾಟಕ್ಕೂ ಅಥವಾ ಆಟಕ್ಕೂ ಮತ್ತು ತಾಳಮದ್ದಲೆಗೂ ಪ್ರಮುಖ ವ್ಯತ್ಯಾಸವಿರುವುದೇ ಈ ಮಾತುಗಾರಿಕೆಯಲ್ಲಿ. ಯಕ್ಷಗಾನದಲ್ಲಿ ಯಾವುದಾದರೊಂದು ಕಥಾನಕವನ್ನು ಆಯ್ಕೆ ಮಾಡಿಕೊಂಡು ಅದನ್ನು ಜನರಿಗೆ ಹಾಡು, ಅಭಿನಯ, ನೃತ್ಯಗಳೊಂದಿಗೆ ತೋರಿಸಲಾಗುತ್ತದೆ. ಹೀಗೆ ಆಯ್ದುಕೊಂಡು ಕಥಾನಕವನ್ನು ಪ್ರಸಂಗ ಎನ್ನುವರು. ಪ್ರಸಂಗದಲ್ಲಿ ಬರುವ ಕಥೆಯನ್ನು ಅಭಿನಯಿಸುವವರೇ ಪಾತ್ರಧಾರಿಗಳು. ಸ್ತ್ರೀ ಪಾತ್ರ, ಖಳನಟ, ಹಾಸ್ಯ, ನಾಯಕನ ಪಾತ್ರ ಹೀಗೆ ಪ್ರಸಂಗಗಳಿಗನುಸಾರವಾಗಿ ಪಾತ್ರಗಳ ಆಯ್ಕೆ ಇರುತ್ತದೆ. ಹಾಗೇ ಆಯಾಯ ಪಾತ್ರಗಳಿಗೆ ಆಯಾಯ ವೇಷಭೂಷಣಗಳನ್ನು ನಾವು ಯಕ್ಷಗಾನದಲ್ಲಿ ನೋಡಬಹುದು. ಹಾಗೆಯೇ ಯಕ್ಷಗಾನದಲ್ಲಿ ಪ್ರಮುಖವಾಗಿ ಗೋಚರಿಸುವಂತದ್ದು ಹಿಮ್ಮೇಳ. ಹಿಮ್ಮೇಳವೆಂದರೆ ಭಾಗವತರು, ಚಂಡೆ, ಮದ್ದಲೆ, ತಾಳ, ಜಾಗಟೆ ಮುಂತಾದ ಸಂಗೀತ ಉಪಕರಣಗಳನ್ನು ಇಲ್ಲಿನ ನೃತ್ಯ, ಭಾಗವತಿಕೆ ಮತ್ತು ಮಾತುಗಾರಿಕೆಯ ವೇಳೆ ಸಂದರ್ಭೋಚಿತವಾಗಿ ಬಳಸಲಾಗುತ್ತದೆ. ಒಂದು ಯಕ್ಷಗಾನ ಪರಿಣಾಮಕಾರಿಯಾಗಿ ವಿಶೇಷವಾಗಿ ಮೂಡಿ ಬರಬೇಕಾದರೆ ಭಾಗವತರ ತಾಳದ ಸುದ್ದಿಗೆ ಹೆಜ್ಜೆ ಹಾಕುವ ಪಾತ್ರಧಾರಿಗಳೆಷ್ಟು ಮುಖ್ಯವೋ...ಹಿಮ್ಮೇಳವೂ ಅಷ್ಟೇ ಮುಖ್ಯ.

ಯಕ್ಷಗಾನದಲ್ಲಿ ಹೆಚ್ಚಾಗಿ ಪೌರಾಣಿಕ ಆಖ್ಯಾನವನ್ನು ಆಯ್ಕೆ ಮಾಡಿಕೊಳ್ಳು ವಾಡಿಕೆಯಾದರೂ...ಪ್ರಸಂಗವು ಪೌರಾಣಿಕವೇ ಆಗಬೇಕು ಎನ್ನುವ ನಿಯಮವೇನಿಲ್ಲ. ಇದು ಐತಿಹಾಸಿಕ, ಸಾಮಾಜಿಕವೂ ಆಗಿರಬಹುದು. ನೃತ್ಯ, ಅಭಿನಯ, ಮಾತುಗಾರಿಕೆಯ ಮೂಲಕ ಕಥೆಯನ್ನು ಪ್ರೇಕ್ಷಕರಿಗೆ ತಲುಪಿಸುವ ಜವಾಬ್ದಾರಿ ಪಾತ್ರಧಾರಿಯ ಕರ್ತವ್ಯವಾಗಿರುತ್ತದೆ. ಅಷ್ಟೆ ಹೊರತು ಪೌರಾಣಿಕ ಕಥೆಯೇ ಆಗಬೇಕೆನ್ನುವುದು ಕಟ್ಟಾಜ್ಞೆ ಅಥವಾ ನಿಯಮವಲ್ಲ. ಆದರೆ, ಇತ್ತೀಚಿನ ಕೆಲವು ಸಾಮಾಜಿಕ ಪ್ರಸಂಗಗಳು ಯಕ್ಷಗಾನದ ಮೂಲಕ್ಕೆ ಧಕ್ಕೆ ತರುತ್ತಿವೆ ಎನ್ನುವ ಬೇಸರ ಒಂದೆಡೆಯಲ್ಲಾದರೆ, ಬದಲಾಗುತ್ತಿರುವ ಕಾಲಘಟ್ಟದಲ್ಲಿ ಯಕ್ಷಗಾನದತ್ತ ಜನರನ್ನು ಆಕರ್ಷಿಸಲು ಸಾಮಾಜಿಕ ಪ್ರಸಂಗಗಳು ಬೇಕೆನ್ನುವುದು ಇನ್ನೊಂದೆಡೆ ವಾದ. ಹಾಗೆಯೇ ಯಕ್ಷಗಾನದಲ್ಲಿ ಕಥೆಯನ್ನು ಹೆಣೆಯುವ ದೃಷ್ಟಿಯಲ್ಲಿ ಸಿನಿಮಾ ಕಥೆಗಳನ್ನು ಬಳಸಿಕೊಳ್ಳುವುದು. ಆಗಾಗ ಹಾಸ್ಯದ ವೇಷದಲ್ಲಿ ಆಂಗ್ಲಭಾಷಾ ಪದಗಳನ್ನು ಬಳಸಿಕೊಳ್ಳುವುದು ಇದೆ. ಪ್ರಸಂಗಕರ್ತನೇ ಈ ರೀತಿಯಲ್ಲಿ ಕಥೆಯನ್ನು ಬರೆಯುತ್ತಾರೋ ಅಥವಾ ಪಾತ್ರಧಾರಿ ಕಥೆಯನ್ನು ಕೊಂಡೊಯ್ಯುವ ಬಗೆ ಅಂತದ್ದೋ ಎನ್ನುವ ವಿಚಾರ ವೀಕ್ಷಕರಿಗೆ ತಿಳಿಯುವುದಿಲ್ಲ. ಆದ್ದರಿಂದ ಇಂತಹ ವಿಚಾರಗಳನ್ನು ಬಳಸಿಕೊಳ್ಳದೇ ಇರುವುದು ಉತ್ತಮ ಎನ್ನುವ ಅನಿಸಿಕೆ ನನ್ನದು.

ಮುಂಬರುವ ದಿನಗಳಲ್ಲಿ ಸದ್ವಿಚಾರ, ಸಾಮಾಜಿಕ ಹಿತ ಚಿಂತನೆಗಳನ್ನೊಳಗೊಂಡ ಕಥೆಗಳು ಪ್ರಸಂಗಕರ್ತರಲ್ಲಿ ಮೂಡಿ ಬಂದು ಪೌರಾಣಿಕ ಪ್ರಸಂಗಗಳೊಡನೆ ಸಾಮಾಜಿಕ ಪ್ರಸಂಗಗಳು ಮೆರೆದು ಯಕ್ಷಗಾನ ಎನ್ನುವ ಅವರ್ಣನೀಯ ಕಲೆ ಮತ್ತಷ್ಟು ಜನಪ್ರಿಯವಾಗಲಿ ಎನ್ನುವ ಆಸೆ ನನ್ನದು.

ಆತ್ಮವಿಶ್ವಾಸವಿದ್ದರೆ ಎಲ್ಲವೂ ಸಾಧ್ಯ

ವರ್ಷಿತಾ ಸುವರ್ಣ
ಪ್ರಥಮ ಬಿ.ಬಿ.ಎ.

ಒಂದು ಕಾಲದಲ್ಲಿ ಒಂದು ಸುಂದರವಾದ ಊರಿತ್ತು. ಆ ಊರಿನಲ್ಲಿ ಹಲವಾರು ಅಂಗಡಿಗಳಿದ್ದವು. ಒಬ್ಬ ಬಡಕುಟುಂಬದಿಂದ ಬಂದ ರಾಜು ಒಂದು ಸಣ್ಣ ಪಾನಿಪುರಿ ಅಂಗಡಿಯನ್ನು ಹಾಕಿದ್ದ. ಎಲ್ಲ ಬೇರೆ ಅಂಗಡಿಯವರು ಅವನನ್ನು ಅವಮಾನ ಮಾಡುತ್ತಿದ್ದರು. ಅವಮಾನವನ್ನು ಕೇಳಿ ಕೇಳಿ ಬೇಸರವಾದ ರಾಜು ಒಂದು ಮೂಲೆಯಲ್ಲಿ ಕುಳಿತುಕೊಂಡು ಯೋಚಿಸುತ್ತಾನೆ. ಆಗ ಆ ಊರಿನ ಮುಖಂಡ ಬಂದು ಅಡುಗೆ ಸ್ಪರ್ಧೆಯನ್ನು ಆಯೋಜಿಸುತ್ತನೆ. ರಾಜು ಕೂಡ ಈ ಸ್ಪರ್ಧೆಯಲ್ಲಿ ಭಾಗವಹಿಸಬೇಕು ಎಂದು ಯೋಚಿಸಿ ಎಲ್ಲ ಸಿದ್ಧತೆಯನ್ನು ಮಾಡಿಕೊಂಡು ಸ್ಪರ್ಧೆಗೆ ಸಿದ್ಧನಾಗುತ್ತಾನೆ. ಮರುದಿನ ಬೇಗ ಬೇಗ ಕೆಲಸ ಮಾಡಿ ಸ್ಪರ್ಧೆಗೆ ಹೋಗುತ್ತಾನೆ. ಅಲ್ಲಿ ಎಲ್ಲ ಸ್ಪರ್ಧಿಗಳು ಅವನನ್ನು ನೋಡಿ ನಗುತ್ತಾರೆ. ಅದಕ್ಕೆ ರಾಜು ಅವರು ಹೇಳಿದ ಸರಿ ನಾನು ಒಬ್ಬ ಬಡವ ನನಗಿಂತ ಬೇರೆಯವರು ಚೆನ್ನಾಗಿ ಅಡುಗೆ ಮಾಡಬಹುದು ಎಂದು ತನ್ನ ಆತ್ಮವಿಶ್ವಾಸವನ್ನು ಕಳೆದುಕೊಂಡು ಹಿಂದಕ್ಕೆ ಹೋಗಬೇಕೆನ್ನುವಷ್ಟರಲ್ಲಿ ರಾಜುವಿನ ಒಬ್ಬ ಸ್ನೇಹಿತ ಅವನನ್ನು ತಡೆದು ನಿನ್ನಿಂದ ಆಗುತ್ತದೆ, ಆತ್ಮವಿಶ್ವಾಸದಿಂದ ನಿನಗೇನು ಗೊತ್ತು ಅದನ್ನು ಮಾಡು ಎಂದು ಹೇಳಿ ಅವನಲ್ಲಿ ಧೈರ್ಯ ತುಂಬುತ್ತಾನೆ. ಸ್ಪರ್ಧೆ ಶುರುವಾಯಿತು. ರಾಜು ಕೂಡ ಆತ್ಮವಿಶ್ವಾಸದಿಂದ ಮುನ್ನುಗ್ಗಿದ ಎಲ್ಲರು ತಾವು ತಯಾರಿಸಿದ ಅಡುಗೆಯನ್ನು ತೀರ್ಪುಗಾರರ ಮುಂದೆ ಇಟ್ಟರು. ರಾಜುವಿಗೆ ತಾನು ಗೆಲ್ಲುವುದಿಲ್ಲವೇನೋ ಎಂದು ನಿರಾಸೆ ಮೂಡಿತು. ಎಲ್ಲಾ ಸ್ಪರ್ಧಿಗಳು ರಾಜು ಗೆಲ್ಲುವುದಿಲ್ಲವೆಂದು ತಿಳಿದು ಬಹಳ ಅಹಂಕಾರದಿಂದ ವರ್ತಿಸಿದ್ದರು. ಕೊನೆಗೆ ಫಲಿತಾಂಶ ಬಂದಿತು. ರಾಜು ಸ್ಪರ್ಧೆಯನ್ನು ಗೆದ್ದನು. ಅವನ ಸ್ನೇಹಿತನಾದ ಮನು ಅವನಿಗೆ ಶುಭಾಶಯ ತಿಳಿಸಿದನು. ಮುಖಂಡನು ರಾಜುವಿಗೆ ಬಹುಮಾನವಾಗಿ ಒಂದು ದೊಡ್ಡ ಅಂಗಡಿಯನ್ನು ಹಾಕಿಕೊಟ್ಟನು. ರಾಜು ಶ್ರೀಮಂತನಾಗಿ ತನ್ನ ಜೀವನವನ್ನು ಸುಖದಿಂದ ಕಳೆದನು. ಈ ಕಥೆಯಿಂದ ತಿಳಿಯುತ್ತದೆ. ಆತ್ಮವಿಶ್ವಾಸದಿಂದ ಮತ್ತು ಧೈರ್ಯದಿಂದ ಮುನ್ನುಗ್ಗಿದರೆ ಎಲ್ಲವನ್ನು ಗೆಲ್ಲಲು ಸಾಧ್ಯ.

ಜನ್ಮದಾತೆಯ ಮಹಿಮೆ

ನೈದಿಲೆ ಕೆ.
ಪ್ರಥಮ ಬಿ.ಕಾಂ.

ಹಳ್ಳಿಯಲ್ಲಿ ಹುಟ್ಟಿ ಬೆಳೆದ ಮಕ್ಕಳು ದೊಡ್ಡವರಾಗುತ್ತಲೇ ಉಚ್ಚ ಶಿಕ್ಷಣಕ್ಕಾಗಿ, ಉನ್ನತ ಉದ್ಯೋಗಕ್ಕಾಗಿ ತಾವು ಬೆಳೆದ ಊರನ್ನು ಬಿಟ್ಟು ದೂರದ ನಗರಗಳಿಗೆ ತೆರಳುತ್ತಾರೆ. ಆದರೆ ಅವರ ಮನಸ್ಸು ಮತ್ತೆ ಮತ್ತೆ ಊರನ್ನೇ ನೆನೆಯುತ್ತಿರುತ್ತದೆ. ಏಕೆ ಹೀಗೆ ಹೌದು, ಹೆತ್ತ ತಾಯಿಯನ್ನು, ಹೊತ್ತ ತಾಯ್ನಾಡನ್ನು ಎಂದೂ ಮರೆಯಲು ಸಾಧ್ಯವಿಲ್ಲ.

ಇದಕ್ಕೆ ಮುಖ್ಯ ಕಾರಣ ಊರಲ್ಲಿರುವ ಜನನಿ. ಜನನಿ ಎಂಬ ಮೂರಕ್ಷರದ ಪದದಲ್ಲಿ ಎಷ್ಟು ಮಧುರತೆ ಇದೆ. ಒಂಭತ್ತು ತಿಂಗಳು ಹೊತ್ತು, ಹೆತ್ತು, ಲಾಲಿಸಿ–ಪಾಲಿಸಿದ ತಾಯಿಯನ್ನು ಮರೆಯಲು ಸಾಧ್ಯವೇ? ಎದ್ದು ನಡೆದಾಡಲು, ಮುದ್ದಾಗಿ ಮಾತನಾಡಲು ಕಲಿಸಿದ ತಾಯಿಯನ್ನು ಮರೆಯಲು ಸಾಧ್ಯವೇ? ಒಬ್ಬ ವ್ಯಕ್ತಿಯು ಉತ್ತಮ ಮನುಷ್ಯನಾಗಿ ರೂಪುಗೊಳ್ಳಲು ತಾಯಿಯ ಪಾತ್ರ ಅದೆಷ್ಟು ಮುಖ್ಯ. ವ್ಯಕ್ತಿಯ ಬದುಕಿನಲ್ಲಿ ಜನನಿಯ ಸ್ಥಾನ ಅದೆಷ್ಟು ಶ್ರೇಷ್ಠ ! ತಾಯಿಯಿಲ್ಲದ ಮಗು ಬೆಳೆದು ದೊಡ್ಡವನಾದಾಗ ಅವನ ಶಾರೀರಿಕ, ಮಾನಸಿಕ ಮತ್ತು ಬೌದ್ಧಿಕ ಬೆಳವಣಿಗೆಯಲ್ಲಿ ಎಷ್ಟೊಂದು ಕೊರತೆಗಳು ! ತಾಯಿ ನೆರಳಿನಿಂದ ದೂರವಾಗಿ ಬೆಳೆದ ಮಗುವಿಗೆ ಕೀಳರಿಮೆಯು ದೊಡ್ಡ ಕೊರತೆಯಾಗಿ ಕಾಡುವುದು.

ಶ್ರೀ ರಾಮನ ವ್ಯಕ್ತಿತ್ವ ರೂಪುಗೊಂಡಿದ್ದು ತಾಯಿ ಕೌಸಲ್ಯೆಯಿಂದ. ಕೃಷ್ಣ ಚತುರ ನಾಯಕನಾಗಿ ಬೆಳೆದದ್ದು ತಾಯಿ ಯಶೋಧೆಯ ಪಾಲನೆಯಿಂದ. ಶಿವಾಜಿವೀರ ನೇತಾರನಾಗಿ ಕಾಣಿಸಿಕೊಂಡಿದ್ದು ಮಾತೆ ಜೀಜಾಬಾಯಿಯ ಕೈಚಳಕದಿಂದಾಗಿ. ಮೋಹನದಾಸ ಕರಮಚಂದ್‌ನು ಭಾರತದ ಉದ್ಧಾರಕ ಮಹಾತ್ಮಾಗಾಂಧಿಯಾಗಿ ರೂಪುಗೊಂಡಿದ್ದು, ಜನನಿಯಾದ ಪುತಲೀಬಾಯಿಯ ಲಾಲನೆ ಪಾಲನೆಯಿಂದಾಗಿ. ವರ್ಧಮಾನ ವಿಶ್ವಕ್ಕೆಲ್ಲ ಬೆಳಕು ನೀಡಿದ ತೀರ್ಥಂಕರ ಮಹಾವೀರನಾಗಿ ರೂಪುಗೊಂಡಿದ್ದು ಮಹಾಮಾತೆ ತ್ರಿಶಲಾದೇವಿಯ ಪುಣ್ಯದ ಫಲದಿಂದಾಗಿ.

ಮಗುವಿನ ಮಾತು, ನಡವಳಿಕೆಗಳೆಲ್ಲವೂ ತಾಯಿ ನೆರಳಿನಲ್ಲಿ ರೂಪುಗೊಳ್ಳುತ್ತದೆ. ತಾಯಿ ಮಾತನಾಡಿದ ರೀತಿಯಲ್ಲೇ ಮಗು ಕೂಡ ಮಾತನಾಡುತ್ತದೆ. ಆದ್ದರಿಂದ ಈ ಭಾಷೆಯನ್ನು ತಾಯಿನುಡಿ ಇಲ್ಲವೇ ಮಾತೃಭಾಷೆ ಎನ್ನುತ್ತಾರೆ. ತಾಯಿಯಂತೆ ಮಗು ನೂಲಿನಂತೆ ಸೀರೆ ಎಂಬ ಮಾತು ಇದೆ. ತಾಯಿ ಸತ್ಯವಂತಳಾದರೆ ಮಗು ಸತ್ಯವಾದಿಯಾಗುತ್ತಾನೆ. ತಾಯಿ ಧಾರ್ಮಿಕ ಪ್ರಜ್ಞೆಯ ಸ್ತ್ರೀಯಾಗಿದ್ದರೆ ಮಗುವು ಹಾಗೇ ಆಗುತ್ತದೆ. ಮಾನವ ಜನ್ಮ ಜನ್ಮಾಂತರದ ಸೇವೆಯಿಂದಲೂ ತೀರಿಸಲಾರದ ಋಣ ಎಂದರೆ ತಾಯಿ ಋಣ ಒಂದೇ.

ಅದೇ ರೀತಿ ಇನ್ನೊಂದು ಋಣ ತಾನು ಹುಟ್ಟಿ ಬೆಳೆದ ದೇಶದ್ದು. ಹೊತ್ತ ತಾಯ್ನಾಡಿನ ಆಕರ್ಷಣೆಯೂ ಕಡಿಮೆಯೇನಲ್ಲ. ಮಾನವನು ಹುಟ್ಟಿ, ಬೆಳೆದು, ಓದಿ, ಬರೆದು, ಕಲಿತು ದೊಡ್ಡವನಾದ ಬಳಿಕ, ಎಷ್ಟೇ ದೊಡ್ಡ ಮನುಷ್ಯನಾಗಲಿ ದೇಶವನ್ನು ಮರೆಯಲಾರ. ಹುಟ್ಟೂರಿನ ಸೆಳೆತ ಅಷ್ಟು ಬಲವಾದದ್ದು. ತಾನು ಹುಟ್ಟಿ ಬೆಳೆದ ಊರು, ತಾನು ಬೆಳೆದ ಪರಿಸರ, ಕಲಿತ ಶಾಲೆ, ಆಡಿದ ಮಿತ್ರರು, ತಾನು ವ್ಯವಹರಿಸಿದ ಊರ ಜನರು ಇವೆಲ್ಲವನ್ನೂ ಮನುಷ್ಯ ಎಂದೂ ಮರೆಯಲಾರ. ಇದೇ ಹುಟ್ಟೂರಿನ ಸೆಳೆತ!

ಆದ್ದರಿಂದಲೇ ಜನನಿ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸೀ ಎಂಬ ಮಾತು ಪ್ರಚಲಿತವಾಯಿತು. ಮಾತೆಯೂ ಮಾತೃಭೂಮಿಯೂ ಸ್ವರ್ಗಕ್ಕಿಂತಲೂ ದೊಡ್ಡದು. ಈ ಮಾತು ನಿಜಕ್ಕೂ ನಮ್ಮ ಮನಗಳಲ್ಲಿ ರೋಮಾಂಚನವುಂಟು ಮಾಡುತ್ತದಲ್ಲವೇ??

ಬದುಕಿಗೊಂದು ಅರ್ಥವಿರಬೇಕಲ್ಲವೆ?

ವಿನೀತಾ ಬಿ.ಎಂ.
ದ್ವಿತೀಯ ಬಿ.ಕಾಂ.

ಜೀವನ ಎಂಬುದು ಬಂಡಿಯಿದ್ದ ಹಾಗೆ. ಅದರ ಸಾರಥಿ ನಾವಾಗಿರುತ್ತೇವೆ. ನಾವು ಹೇಗೆ ಅದನ್ನು ನಡೆಸುತ್ತೇವೋ ಅದು ಹಾಗೆ ಹೋಗುತ್ತದೆ. ನಾವು ಒಳ್ಳೆ ಹಾದಿಯಲ್ಲಿ ಹೋಗಬೇಕೋ ಅಥವಾ ಕೆಟ್ಟ ಹಾದಿಯಲ್ಲಿ ಹೋಗಬೇಕೋ ಅದು ನಮಗೆ ಬಿಟ್ಟಿದ್ದು. ನಾವು ಒಳ್ಳೆಯ ಹಾದಿಯಲ್ಲಿ ಹೋಗಬೇಕು ಆಗ ನಮ್ಮ ಜೀವನವು ಒಳ್ಳೆ ರೀತಿಯಲ್ಲಿ ಸಾಗುತ್ತದೆ.

ಈ ಜಗತ್ತಿನಲ್ಲಿ ಜೀವನ ನಡೆಸುವುದು ಎಷ್ಟು ಕಷ್ಟ ಇದೆ ಎಂದರೆ, ಜನರು ಕುಳಿತರೂ ತಪ್ಪು, ನಡೆದರು ತಪ್ಪು ಎನ್ನುತ್ತಾರೆ. ಹಾಗಂತ ನಾವು ನಮಗೆ ಇಷ್ಟ ಬಂದ ಹಾಗೆ ಜೀವನ ನಡೆಸುವುದು ಸರಿಯಲ್ಲ. ಜನರ ಮಧ್ಯ ಜೀವಿಸುವ ನಾವು ಸ್ವಲ್ಪವಾದರೂ ತಗ್ಗಿ ನಡೆಯಬೇಕು. ಎಲ್ಲವೂ ನಮ್ಮ ಇಷ್ಟದಂತೆ ಆಗುವುದಿಲ್ಲ. ಕೆಲವನ್ನು ತ್ಯಜಿಸಿ ನಡೆಯಬೇಕು. ದೇವರು ಕೊಟ್ಟಿರುವ ಈ ಜೀವನವನ್ನು ಸ್ವಲ್ಪವಾದರೂ ದುಡಿಸಬೇಕು. ನಾವು ಹುಟ್ಟಿ ಜೀವನ ನಡೆಸುವಾಗ ಯಾರಿಂದನಾದರೂ ಸ್ವಲ್ಪವಾದರೂ ಒಳ್ಳೆಯ ಮಾತುಗಳನ್ನಾಡಿಸಿಕೊಳ್ಳಬೇಕು. ಜನರಿಂದ ತೆಗಳಿಸಿಕೊಳ್ಳುವುದು ಎಷ್ಟು ಸುಲಭವೋ, ಹಾಗೇ ಹೊಗಳಿಸಿಕೊಳ್ಳುವುದು ಅಷ್ಟೇ ಕಷ್ಟ.

ಜಗತ್ತು ಬಹಳ ವಿಶಾಲವಾಗಿದೆ. ಹಾಗಂತ ಜೀವಿಸುವುದು ಸುಲಭವಲ್ಲ. ಜೀವನ ನಡೆಸಲು ಬರೀ ಹಣವೊಂದಿದ್ದರೆ ಸಾಲದು, ಸ್ವಲ್ಪವಾದರೂ ವಿನಯ, ವಿಧೇಯತೆ ಹಾಗೂ ಒಳ್ಳೆಯ ಅಥವಾ ವಿಶಾಲ ಹೃದಯವಿರಬೇಕು. ಆದರೆ ಈ ಜಗತ್ತು ಬರೀ ತಾನು ತನ್ನದು ಎಂದು ಜೀವಿಸುತ್ತಿದೆ. ಎಲ್ಲವೂ ತನಗೆ ಬೇಕು ಎಲ್ಲವೂ ತನ್ನದೇ ಎನ್ನುವಂತಿದೆ. ನಮ್ಮ ಕೊನೆಗಾಲದಲ್ಲಿ ನಾವು ಒಂದು ಪೈಸೆಯ ಯಾವುದೇ ವಸ್ತುವನ್ನು ತೆಗೆದುಕೊಂಡು ಹೋಗುವುದಿಲ್ಲ. ಅದು ತಿಳಿದೂ ಮನುಷ್ಯ ಅದೆಷ್ಟು ಆಸೆಬುರುಕನೆಂದರೇ, ದೇವರೇ ಹೇಳಲು ಅಸಾಧ್ಯ. ಮನುಷ್ಯನು ಶಾಶ್ವತನಲ್ಲ, ಅವನು ತಾತ್ಕಾಲಿಕ ಎಂದು ತಿಳಿದೇ ಹೀಗೆ, ಇನ್ನೂ ಶಾಶ್ವತವಾದರೆ ಹೇಗೋ ಏನೋ?

ಈ ಜಗತ್ತಿನಲ್ಲಿ ಜನರು ಹೇಗೆಂದರೆ ನೋಡಲು, ಮಾತನಾಡಲು ತುಂಬಾ ಒಳ್ಳೆಯವರು, ಆದರೆ ಅವನ ಮನದಲ್ಲಿರುವ ಹುಳುಕು ಯಾರಿಗೂ ತಿಳಿಯುವುದಿಲ್ಲ. ಅದಕ್ಕೆ ನಾವು ಯಾರ ಮೇಲು ಅವಲಂಬಿತರಾಗಿರಬಾರದು.

ನಮ್ಮ ಕಷ್ಟಕಾಲದಲ್ಲಿ ನಮ್ಮ ಜೊತೆಯಿರುವುದು ನಮ್ಮ ಮನಸ್ಥೈರ್ಯ ಮಾತ್ರ. ಯಾರು ನಮ್ಮೊಡನೆ ಬರುವುದಿಲ್ಲ. ಮುಖವನ್ನು ನೋಡಿ ಯಾರನ್ನು ಅವರು ಹೇಗೆ ಎಂದು ಹೇಳುವುದು ಅಸಾಧ್ಯ.

ನಮ್ಮ ಜೀವನದಲ್ಲಿ ಎಷ್ಟು ಕಷ್ಟಗಳು ಬರುತ್ತವೆ. ನಾವು ಯಾವುದಕ್ಕೂ ಅಂಜದೇ ಅದನ್ನು ಎದುರಿಸಬೇಕು. ಜೀವನದಲ್ಲಿ ಸುಖ ಮತ್ತು ದುಃಖ ಎರಡು ಸರಿಸಮಾನವಾಗಿರುತ್ತದೆ ಎಂದು ಹೇಳುತ್ತಾರೆ. ಸುಖ ಬಂದಾಗ ಯಾರು ದೇವರನ್ನು ನೆನಪಿಸುವುದಿಲ್ಲ. ಅದೇ ಕಷ್ಟ ಬಂದಾಗ ಗೊತ್ತಿರದ ದೇವರಿಗೆಲ್ಲ ಹರಕೆ, ಪೂಜೆಗಳು ಮಾಡುತ್ತೇವೆ. ಅದರ ಬದಲು ನಾವೇ ಅದನ್ನು ಎದುರಿಸಬೇಕು. ದೇವರಲ್ಲಿ ಹೋಗಿ ನಮಗೆ ಕಷ್ಟ ಕೊಡಬೇಡಪ್ಪ ಎಂದು ಬೇಡಿಕೊಳ್ಳುವುದು ತಪ್ಪು, ಏಕೆಂದರೆ ಸುಖವಿದ್ದಲ್ಲಿ ಕಷ್ಟವಿರಲೇಬೇಕು. ಹಾಗಾಗಿ ಅದರ ಬದಲು ಕಷ್ಟಗಳನ್ನು ಎದುರಿಸುವ ಶಕ್ತಿಕೊಡು ಎಂದು ಪ್ರಾರ್ಥಿಸಬೇಕು.

ನಾವು ಎಂದಿಗೂ ಬೇರೆಯವರನ್ನು ನೋಡಿ ನಾವು ಹಾಗೆ ಇರಬೇಕಿತ್ತು, ಹೀಗೆ ಇರಬೇಕಿತ್ತು ಎನ್ನುವುದಕ್ಕಿಂತ ಇದ್ದುದರಲ್ಲೇ ಖುಷಿ ಪಟ್ಟು, ನಮಗೆ ಇಷ್ಟಾದರೂ ಇದೆ

ಎಂದು ಅದರಲ್ಲಿಯೇ ತೃಪ್ತಿ ಪಡಬೇಕು. ಜಗತ್ತಿನಲ್ಲಿ ಎಲ್ಲರೂ ಒಂದೊಂದು ತರ ಅಂದರೆ ಒಬ್ಬರ ಸ್ವಭಾವ, ಭಾವಗಳು ಇನ್ನೊಬ್ಬರಿಗಿಂತ ಭಿನ್ನವಾಗಿರುತ್ತವೆ. ಇಂಥಾ ಜನರ ಮಧ್ಯೆ ನಾವು ಹೇಗಿರಬೇಕು ಎಂದು ನಾವೇ ಅರಿತುಕೊಳ್ಳಬೇಕು. ನಾವು ಯಾವಾಗಲೂ ಜಗತ್ತಿನ ಬಗ್ಗೆ ಸ್ವಲ್ಪವಾದರೂ ಅರಿತು ಮತ್ತು ಯೋಚಿಸಿ ಹೆಜ್ಜೆಯಿಡಬೇಕು.

ಜೀವನದ ಬಗ್ಗೆ ತಿಳಿದುಕೊಳ್ಳಲು ಬಹಳವಿದೆ. ಅದು ಎಷ್ಟು ತಿಳಿದರೂ ಮುಗಿಯದು. ಕಾಲ ಬದಲಾದ ಹಾಗೆ ಜನರು ಮತ್ತು ಜಗತ್ತು ಬದಲಾಗುತ್ತದೆ. ಈ ಜಗತ್ತಿಗೆ ಬಂದ ನಾವು ಒಂದು ಚೊಕ್ಕವಾದ ಸುಂದರ ಜೀವನ್ನು ನಡೆಸಬೇಕೆನ್ನುವುದು ನನ್ನ ಒಂದು ಆಸೆ. ಕೊನೆಯಲ್ಲಿ ಏನೆಂದರೆ ತಂದೆ–ತಾಯಿ ಇಬ್ಬರು ದೇವರಿದ್ದಂತೆ. ಅವರ ಆಶೀರ್ವಾದದಿಂದ ಎಲ್ಲವೂ ಒಳ್ಳೆಯದೇ ಆಗುತ್ತದೆ. ತಂದೆ–ತಾಯಿ ಮತ್ತು ಹಿರಿಯರನ್ನು ಗೌರವದಿಂದ ನೋಡಿ ಹಾಗೇ ಇಡೀ ಜಗತ್ತನ್ನು ಗೌರವಿಸಿ.

ಜೀವನವೆಂಬ ತೋಟದಲ್ಲಿ ದ್ವೇಷ, ಅಸೂಯೆ ಎಂಬ ಮುಳ್ಳುಗಳನ್ನು ಕಿತ್ತುಹಾಕುತ್ತ ಪ್ರೀತಿ, ಮಮತೆ, ವಿಶ್ವಾಸವೆಂಬ ಹೂವನ್ನು ಅರಳಿಸುವುದರ ಜೊತೆಗೆ ಸಾರ್ಥಕತೆಯನ್ನು ಕಂಡುಕೊಳ್ಳೋಣ.

ಗುಬ್ಬಿಯ ನಿನಾದ

ಸುರಕ್ಷಾ
ಪ್ರಥಮ ಬಿ.ಕಾಂ.

ಮೊನ್ನೆ ಮೊನ್ನೆ ಇಂಗ್ಲಿಷ್ ಉಪನ್ಯಾಸಕರು ತರಗತಿಯಲ್ಲಿ ವ್ಯಾಕರಣ ಭಾಗ ಪಾಠ ಮಾಡುವಾಗ ಉದಾಹರಣೆಗೆ ಹೇಳಿದ ವಾಕ್ಯ ಈಗಲೂ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದಂತಿದೆ. ಹಾಗಾದರೆ ಅದೇನಿರಬಹುದು ಎನ್ನುವ ಕುತೂಹಲ ನಿಮಗಿದ್ದರೆ ಅದು ಹೀಗಿದೆ ನೋಡಿ.

"ನಮ್ಮೀ 4 ಜಿ ಯುಗದಲ್ಲಿ ಮೊಬೈಲ್ ಟವರ್ ನಿರ್ಮಾಣ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದು ಗೊತ್ತೇ ಇದೆ. ಆದರೆ, ಇದು ಗುಬ್ಬಚ್ಚಿಯ ಪ್ರಾಣಕ್ಕೆ ಸಂಚಕಾರ ತಂದೊಡ್ಡಿರುವುದು ಆಘಾತಕಾರಿ ಅಂಶ. ಇದರಿಂದ ಗುಬ್ಬಚ್ಚಿಗಳ ಸಂತತಿ ಅಳಿವಿನಂಚಿನತ್ತ ಸಾಗುತ್ತಿದೆ."

ಸಾಮಾನ್ಯವಾಗಿ ನಮ್ಮ ಸುತ್ತಮುತ್ತಲಲ್ಲಿ ಅತಿ ಚಿಕ್ಕ ಪಕ್ಷಿ ಎಂಬ ಖ್ಯಾತಿಗೆ ಪಾತ್ರವಾಗಿರುವ ಗುಬ್ಬಿಗಳು ಬಹಳ ಮೃದುಸ್ವಭಾವದವು. ಈಗಲೂ ಪ್ರತಿನಿತ್ಯ ನಮ್ಮ ಮನೆಯ ಅಂಗಳದ ದಾಸವಾಳದ ಗಿಡದಲ್ಲಿ ಬಂದು ಕೂರುತ್ತವೆ. ಬೇಸಿಗೆ ಬಂದಾಗಲಂತೂ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ.

ಸದ್ಯ, ನಾನೀಗ ಗುಬ್ಬಿಗಳಿಗೆ ಕಾಳು, ನೀರನ್ನು ಇಟ್ಟು ಆರೈಕೆ ಮಾಡುವ ಕಾಯಕದಲ್ಲಿ ಬಿಝಿಯಾಗಿದ್ದೇನೆ. ಹಾಗೆಂದು ನಮ್ಮ ಮನೆಗೆ ಕಾಲಿಟ್ಟ ಮೊದಲ ಅತಿಥಿ ಕಾಗಕ್ಕನನ್ನ (ಕಾಗೆ) ಮರೆತಿಲ್ಲ. ಕೆಲವೊಮ್ಮೆ ಕಾಗೆ ಮತ್ತು ಗುಬ್ಬಿಗಳಲ್ಲಿ ಆಹಾರಕ್ಕಾಗಿ ಪೈಪೋಟಿ ಏರ್ಪಟ್ಟು ಕಾಗೆಗಳ ಪಾಲಿಗೆ ವಿಜಯದ ಹಾರ ಹೊರೆಯುವುದಿದೆ. ಹೀಗಾಗಿ ಈ ಎರಡೂ ಮುದ್ದಿನ ಅತಿಥಿಗಳನ್ನು ಸಂಭಾಳಿಸುವುದು ನನ್ನ ಪಾಲಿನ ಕೆಲಸವಾಗಿಬಿಟ್ಟಿದೆ. ಅದೇನೆ ಇರಲಿ, ರಜೆಯಲ್ಲಿ ಈ ಮುಗ್ಧಜೀವಿಗಳೊಂದಿಗೆ ಕಾಲಕಳೆಯುವುದು ಯಾವ ಅಜ್ಜಿಮನೆಗೂ ಕಡಿಮೆಯಿಲ್ಲ. ಬಿಡಿ. ಆದ್ದರಿಂದ ಈ ರಜೆ ನನ್ನ ಪಾಲಿಗೆ ಎಂದೆಂದಿಗೂ ಸ್ಮರಣೀಯ. ಇಷ್ಟಲ್ಲದೆ ನಾನು ನನ್ನ ಪ್ರೀತಿಯ ಕಾಗಕ್ಕ ಮತ್ತು ಗುಬ್ಬಕ್ಕನೊಂದಿಗೆ ಕಳೆದ ಸುಮಧುರ ಕ್ಷಣ ಭದ್ರವಾಗಿ ನನ್ನಲ್ಲಿ ಬೇರೂರಿದೆ.

ಕೊನೆಯದಾಗಿ, ಮಾನವರಾದ ನಾವು ನಮ್ಮ ರಕ್ಷಣೆಗೋಸ್ಕರ ಹಲವು ಬಗೆಯ ಹಕ್ಕುಗಳನ್ನು ಸೃಷ್ಟಿಸಿಕೊಂಡಿದ್ದೇವೆ. ಹೀಗಿರುವಾಗ, ನಮ್ಮ ಪರಿಸರದಲ್ಲೇ ಇರುವ ಮುಗ್ಧಜೀವಿಗಳು ನಮಗೇಕೆ ಕಾಣುತ್ತಿಲ್ಲ?

ಜನಸಂಖ್ಯಾ ಸ್ಫೋಟ

ಬಾಂಧವ್ಯ ಶೆಣೈ
ಪ್ರಥಮ ಬಿ.ಕಾಂ.

ನಾಲ್ಕಾರು ಮಂದಿ ಮನುಷ್ಯರು ಕುಳಿತು ಪ್ರಯಾಣಿಸುವ ಎತ್ತಿನಗಾಡಿಯ ಮೇಲೆ ಹೊರಲಾರದಷ್ಟು ಭಾರೀ ಹೊರೆ ಹೊರಿಸಿದರೆ, ಎತ್ತುಗಳು ತತ್ತರಿಸಿ ಹೋಗುತ್ತದೆ. ಹಾಗೆಯೇ ಮಿತಿ ಮೀರಿದ ಜನಸಂಖ್ಯೆ ಭಾರಕ್ಕೆ ಭಾರತವೂ ತತ್ತರಿಸುವ ಸ್ಥಿತಿಗೆ ಮುಟ್ಟಿದೆ.

ಇಲ್ಲಿ ಏನು ಬೆಳೆಯದಿದ್ದರೂ, ಜನಸಂಖ್ಯೆ ಮಾತ್ರ ಕಾಡು ಹುಲ್ಲಿನಂತೆ ಬೆಳೆಯುತ್ತಲೇ ಇದೆ. ಜಗತ್ತಿನಲ್ಲಿ ಅತಿ ಹೆಚ್ಚಿನ ಜನಸಂಖ್ಯೆಯ ರಾಷ್ಟ್ರಗಳು ಕೇವಲ ಕೆಲವು. ಅವುಗಳಲ್ಲಿ ಭಾರತ ಈಗ ಎರಡನೇ ಸ್ಥಾನದಲ್ಲಿದೆ. ಚೀನ ಮೊದಲ ಸ್ಥಾನದಲ್ಲಿದೆ. ಈ ದೇಶದಲ್ಲಿರುವ ಸೌಕರ್ಯ, ಸೌಲಭ್ಯಗಳು ಹೆಚ್ಚೆಂದರೆ 55ರಿಂದ 60 ಕೋಟಿ ಜನರಿಗೆ ಮಾತ್ರ ಸಾಕಾಗಬಹುದು. ಅದನ್ನೇ ಈಗ 130 ಕೋಟಿಗೆ ಹಂಚುವ ಸ್ಥಿತಿಗೆ ಬಂದಿದೆ. ಈ ಸಂಖ್ಯೆ ಬೆಳೆಯುತ್ತಲೇ ಇದೆ.

ಜನಸಂಖ್ಯೆ ಮಿತಿಮೀರಿದೆ ಅದು ಅಪಾಯದ ಸೂಚನೆ ಇದ್ದಂತೆ. ದೇಶದ ಪ್ರಗತಿಗಂತೂ ಅದು ಶಾಪವೇ ಸರಿ. ಏಕೆಂದರೆ ಎಲ್ಲರಿಗೂ ಅನ್ನ, ವಸತಿ, ಶಿಕ್ಷಣ, ಉದ್ಯೋಗ ಅಲ್ಲದೆ ಅಗತ್ಯವಾದ ಸೌಲಭ್ಯಗಳನ್ನು ಒದಗಿಸುವುದು ಸುಲಭದ ಮಾತಲ್ಲ.

ಇಂದು ಪರಿಸರ ಕೆಡುತ್ತಿದೆ. ನಾನಾ ಬಗೆಯ ರೋಗರುಜಿನಗಳು ಹುಟ್ಟಿಕೊಳ್ಳುತ್ತಿದೆ. ನಾಡಿನಲ್ಲಿ ವಸತಿ ವ್ಯವಸ್ಥೆಗೆ ಸ್ಥಳ ಸಾಲದೆ, ಬೆಳೆ ಬೆಳೆಯುವ ರೈತರ ಜಮೀನಿನಲ್ಲಿ ನಿವೇಶನಗಳಾಗುತ್ತಿವೆ. ಹಸಿರು ಸಿರಿಯ ಕಾಡುಗಳನ್ನು ನೆಲಸಮ ಮಾಡಿ ಅಲ್ಲಿ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸುತ್ತಿದ್ದಾರೆ. ನೀರು, ವಿದ್ಯುಚ್ಛಕ್ತಿ, ಆಹಾರ ಪದಾರ್ಥಗಳು ಹಾಗೂ ಇನ್ನಿತರ ದಿನಬಳಕೆ ವಸ್ತುಗಳ ಅಭಾವ ಹೆಚ್ಚುತ್ತಲೇ ಇದೆ. ಎಲ್ಲಾ ಪದಾರ್ಥಗಳ ಬೆಲೆಗಳು ಮುಗಿಲು ಮುಟ್ಟುತ್ತಿವೆ. ಜೀವನವೆಚ್ಚ ವರವಾನದ ಮಿತಿಯನ್ನು ದಾಟುತ್ತಿರುವುದರಿಂದ ಸಾಮಾನ್ಯ ಜನ ಚಿಂತೆಗೀಡಾಗಿದ್ದಾರೆ. ಇಂತಹ ಸಮಸ್ಯೆಗಳನ್ನು ನಿಭಾಯಿಸಲು ಸರಕಾರ ಬೇರೆ ಬೇರೆ ದೇಶಗಳಿಂದ ಸಾವಿರಾರು ಕೋಟಿಯಷ್ಟು ಸಾಲ ಪಡೆಯುತ್ತಿದೆ. ಅನೇಕ ಅಗತ್ಯ ವಸ್ತುಗಳನ್ನು ಎರಡರಷ್ಟು ಹಣಕೊಟ್ಟ ಆಮದು ಮಾಡಿಕೊಳ್ಳುತ್ತಿದೆ. ಇದಕ್ಕೆಲ್ಲಾ ಜನಸಂಖ್ಯಾ ಹೆಚ್ಚಳವೇ ಕಾರಣ.

ಜನಸಂಖ್ಯೆಯನ್ನು ನಿಯಂತ್ರಿಸಲು ಕೆಲವು ಸಲಹೆಗಳು :

1. ಎರಡಕ್ಕಿಂತಲೂ ಹೆಚ್ಚು ಮಕ್ಕಳನ್ನು ಪಡೆಯುವುದು ಅಪರಾಧ ಎಂದು ಸಾರಬೇಕು.
2. ಲಿಂಗ ತಾರತಮ್ಯ ತೋರುವುದು ಅಪರಾಧ ಎಂದು ಸಾರಬೇಕು.
3. ಕುಟುಂಬ ಯೋಜನೆಯ ಪ್ರಚಾರ ಸಮೂಹ ಮಾಧ್ಯಮಗಳ ಮೂಲಕ ಇನ್ನಷ್ಟು ವ್ಯಾಪಕವಾಗಿ ನಡೆಯಬೇಕು.
4. ಬಾಲ್ಯ ವಿವಾಹ ಪದ್ಧತಿಯನ್ನು ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸಬೇಕು.

न लभन्ते विनोद्योगं जन्तवः सम्पदां पदम् ।
सुराः क्षीरोदविक्षोभमनुभूयामृतं पपुः ॥

ನ ಲಭಂತೇ ವಿನೋದ್ಯೋಗಂ ಜಂತವಃ ಸಂಪದಾಂ ಪದಮ್ ।
ಸುರಾಃ ಕ್ಷೀರೋದವಿಕ್ಷೋಭಮನುಭೂಯಾಮೃತಂ ಪಪುಃ ॥

ಪ್ರಾಣಿಗಳು ಪ್ರವೃತ್ತಿಯಿಲ್ಲದೆನೆ ಎಂದಿಗೂ ಸಂಪತ್ತನ್ನು ಹೊಂದುವುದಿಲ್ಲ. ದೇವತಗಳೂ ಕೂಡಾ ಕ್ಷೀರಸಾಗರವನ್ನು ಮಥನಮಾಡಿಯೇ ಅಮೃತವನ್ನು ಕುಡಿದಿದ್ದಾರೆ.

ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ

ಅರ್ಪಿತಾ ಬಂಗೇರ
ಪ್ರಥಮ ಬಿ.ಬಿ.ಎ.

"ಹಬ್ಬಕ್ಕೆ ಬಟ್ಟೆ ಬೇಕು ಅಮ್ಮ" ಎಂದು. ಮಕ್ಕಳು ಉದ್ಗಾರ ತೆಗೆದಾಗ ಯಾವುದೋ ಕೆಲಸದಲ್ಲಿ ಮಗ್ನಳಾಗಿದ್ದ ಆಕೆ ಮಕ್ಕಳ ಕಡೆಗೆ ತಿರುಗಿ "ದೂರದ ಊರಿನ ದೊಡ್ಡ–ದೊಡ್ಡ ಬಟ್ಟೆ ಅಂಗಡಿಗೆ ಹೋಗಲು ಆಗೋಲ್ಲ, ಇಲ್ಲೇ ಹತ್ತಿರದ ಅಂಗಡಿಗೆ ಹೋಗೋಣ" ಎಂದಳು. ಅದಕ್ಕೆ ಮಕ್ಕಳು "ಸರಿ" ಎನ್ನುತ್ತಾ ಹೊರ ನಡೆದರು.

ಮಾರನೆಯ ದಿನ ಬಟ್ಟೆ ಅಂಗಡಿಯೊಂದರಲ್ಲಿ ಬಟ್ಟೆಯ ರಾಶಿ ಮುಂದೆ ಕೂತಿದ್ದ ಆಕೆಯ ಬಳಿ ಮಗಳು ತನಗೆ ಶೌಚ ಬರುವುದಾಗಿ ತಿಳಿಸಿದಳು. ಮನೆಗೆ ಹೋಗುವುದು ಇನ್ನು ತಡವಿದೆ ಎಂದು ಅರಿತ ಆಕೆ. ಇಲ್ಲೆ ಸಾರ್ವಜನಿಕ ಶೌಚಾಲಯಕ್ಕೆ ಹೋಗು ಎಂದಳು. ಸಾರ್ವಜನಿಕ ಶೌಚಾಲಯ ಎಂದೊಡನೆ ಮಕ್ಕಳು ಮುಖ ಮುಖ ನೋಡ ತೊಡಗಿದರು. ಏಕೆಂದರೆ ಸಾಮಾನ್ಯವಾಗಿ ಸಾರ್ವಜನಿಕ ಶೌಚಾಲಯಗಳು ಸ್ವಚ್ಛವಾಗಿರುವುದಿಲ್ಲ.

ಮಗಳು, ಜೊತೆಗೆ ತಾಯಿಯೂ ಬರಬೇಕೆಂದು ಪೀಡಿಸತೊಡಗಿದಳು. ಆಗ ತಾಯಿ ಶೌಚಾಲಯಕ್ಕೆ ಕರೆದುಕೊಂಡು ಹೋದಳು. ಅಲ್ಲಿ ಮಕ್ಕಳ ಪ್ರತಿಕ್ರಿಯೆ ಬೇರೆಯೇ ಇತ್ತು. ಮಕ್ಕಳು ಅಮ್ಮಾ ತುಂಬಾ ಸ್ವಚ್ಛ ಆಗಿದೆ ಎಂದು ಒಳ ನಡೆದರು. ಆ ಶೌಚಾಲಯಕ್ಕೆ ತಾಗಿಕೊಂಡೇ ಒಂದು ಅತೀ ಚಿಕ್ಕದಾದ ಕೋಣೆ ಇತ್ತು. ಆ ಕೋಣೆಯಿಂದ ಹೊರಬಂದ ವ್ಯಕ್ತಿ ಆಕೆಯ ಬಳಿ ಶೌಚಾಲಯವನ್ನು ಉಪಯೋಗಿಸಿದ್ದಕ್ಕೆ ದುಡ್ಡು ಕೊಡಿ ತಾಯಿ ಎಂದ. ಆಕೆ ಐವತ್ತು ರೂಪಾಯಿಯ ನೋಟನ್ನು ಕೊಟ್ಟಳು. ಚಿಲ್ಲರೆ ಇಲ್ಲವಾ? ಎನ್ನುತ್ತಾ ಆ ವ್ಯಕ್ತಿ ಕೋಣೆಯ ಒಳಗೆ ಹೋದ. ಆ ಕೋಣೆ ಅತಿ ಚಿಕ್ಕದಾಗಿಯೂ ಹಾಗೂ ಗಂಡಸರ ಮತ್ತು ಹೆಂಗಸರ ಶೌಚಾಲಯಗಳ ನಡುವೆ ಇತ್ತು. ಕೋಣೆಯ ಒಳಗೆ ವಿಘ್ನೇಶ್ವರನ ಭಾವಚಿತ್ರ ಆ ಭಾವಚಿತ್ರದ ಎದುರು ಒಂದು ಸಣ್ಣ ದೀಪ ಒಂದು ಪೆಟ್ಟಿಗೆ, ಒಂದು ಕನ್ನಡಿ ಹಾಗೂ ಒಂದು ಮೂಲೆಯಲ್ಲಿ ಒರಗಿಸಿ ನಿಲ್ಲಿಸಿದ ಚಾಪೆ ಹೊರತು ಬೇರೆ ಏನೂ ಇರಲಿಲ್ಲ. ಹೀಗೆ ಆ ಕೋಣೆಯನೇ ನೋಡುತ್ತಿದ್ದ ಆಕೆಯ ಬಳಿ ವ್ಯಕ್ತಿ ಬಂದು ಉಳಿದ ಚಿಲ್ಲರೆಯನ್ನು ಆಕೆಯ ಕೈಯಲ್ಲಿಟ್ಟು ಹೇಳಿದ, "ಇದೇ ನನ್ನ ಮನೆ ಈ ಎರಡು ಶೌಚಾಲಯಗಳ ನಡುವೆಯೇ ನನ್ನ ಜೀವನ. ಇದನ್ನು ಸ್ವಚ್ಛಮಾಡಿ. ಬಂದ ಹಣದಿಂದ ಜೀವನ ನಡೆಸುತ್ತೇನೆ ತಾಯಿ" ಎಂದ. ಇದನ್ನು ಕೇಳಿದ ಆಕೆ ಮನಸ್ಸಿನಲ್ಲಿಯೇ ಯೋಚಿಸಿದಳು. ಈ ಶೌಚಾಲಯವು ಇಷ್ಟು ಸ್ವಚ್ಛ ಆಗಿ ಇರಲು ಈತನ ಬಡತನ ಹಾಗೂ ಅಸಹಾಯಕತೆಯೇ ಕಾರಣ. ಪ್ರಾಮಾಣಿಕತೆ ಈತನ ವ್ಯಕ್ತಿತ್ವವನ್ನು ಬಹಳಷ್ಟು ಎತ್ತರಕ್ಕೆ ಏರಿಸುತ್ತದೆ ಎಂದು ಮನಸ್ಸಿನಲ್ಲಿಯೇ ಹೆಮ್ಮೆ ಪಟ್ಟಳು. ಇಂತಹ ಒಬ್ಬ ಪ್ರಾಮಾಣಿಕನು ನೂರು ಜನ ಅಸ್ವಚ್ಛ, ಅನಾಗರಿಕರಿಗೆ ಸಮ. ಇಂತಹ ಮನಸ್ಸು ಎಲ್ಲಾ ಭಾರತೀಯರಲ್ಲೂ ಇದ್ದರೆ ನಮ್ಮ ದೇಶ ಸ್ವಚ್ಛಭಾರತ ಆಗುವುದರಲ್ಲಿ ಸಂದೇಹವೇ ಇಲ್ಲ.

आत्मनो मुखदोषेण बध्यन्ते शुकसारिकाः ।
बकास्तत्र न बध्यन्ते मौनं सर्वार्थसाधनम् ॥

ಆತ್ಮನೋ ಮುಖದೋಷೇಣ ಬಧ್ಯಂತೇ ಶುಕಸಾರಿಕಾಃ ।
ಬಕಾಸ್ತತ್ರ ನ ಬಧ್ಯಂತೇ ಮೌನಂ ಸರ್ವಾರ್ಥಸಾಧನಮ್ ॥

ಚೆನ್ನಾಗೆ ಮಾತನಾಡುವುದೆಂಬ ತಮ್ಮ ಮುಖದ ದೋಷದಿಂದಲೇ ಗಿಳಿ ಮತ್ತು ಸಾರಿಕಾ ಪಕ್ಷಿಗಳು ಬಂಧನಕ್ಕೊಳಕ್ಕಾಗುತ್ತವೆ. ಬಕಪಕ್ಷಿಗಳನ್ನು ಯಾರು ಬಂಧಿಸುವುದಿಲ್ಲ. ಮೌನವೆನ್ನುವುದು ಎಲ್ಲಾ ಕಡೆ ಕಾರ್ಯವನ್ನು ಸಾಧಿಸಿಕೊಡತಕ್ಕದ್ದು.

ನಮ್ಮೂರು ಸಾಲಿಗ್ರಾಮ

ನಿಶಾಂತ್ ವೈ
ದ್ವಿತೀಯ ಬಿ.ಕಾಂ.

ಸಾಲಿಗ್ರಾಮ ಗುರುನರಸಿಂಹ ದೇವಸ್ಥಾನ, ರಾಜ್ಯದ ಪ್ರಸಿದ್ಧ ನರಸಿಂಹ ಕ್ಷೇತ್ರಗಳಲ್ಲಿ ಒಂದು. ಕೂಟ ಬಂಧುಗಳಿಗೆ ಗುರು ಸ್ವರೂಪವಾಗಿ, ಕುಲದೇವರಾಗಿ, ಭಕ್ತರ ಇಷ್ಟಾರ್ಥ ಸಿದ್ಧಿಯ ಕ್ಷೇತ್ರವಾಗಿ ಸುಮಾರು 900–1000 ವರ್ಷಗಳಿಂದ ತನ್ನದೇ ಆದ ಇತಿಹಾಸವನ್ನು ಹೊಂದಿದೆ. ಇದು ಕೂಟ ಬ್ರಾಹ್ಮಣರ ಆಡಳಿತವನ್ನು ಹೊಂದಿದ ಏಕೈಕ ದೇವಸ್ಥಾನ. ಈ ಕ್ಷೇತ್ರದಲ್ಲಿದ್ದ ಅಶ್ವತ್ಥವೃಕ್ಷದಲ್ಲಿ ಅವಿರ್ಭವಿಸಿದ ಶಂಖಚಕ್ರಧಾರಿ ನರಸಿಂಹನನ್ನು ನಾರದ ಮುನಿಗಳು ಪ್ರತಿಷ್ಠಾಪಿಸಿದರು ಎನ್ನುವುದು ಪ್ರತೀತಿ. ಭಟ್ಟಾಚಾರ್ಯರೆಂಬ ಮಹಾಪುರುಷರು ಇಲ್ಲಿ ಪೌಂಡ್ರ, ಅತಿರಾತ ಮೊದಲಾದ ಮಹಾಯಾಗಳನ್ನು ನಡೆಸಿ ಅಶ್ವತ್ಥಮರದ ಪೊಟರೆಯಲ್ಲಿದ್ದ ನಾರದ ಮುನಿಗಳಿಂದ ಪ್ರತಿಷ್ಠಾಪಿತವಾದ ನರಸಿಂಹ ದೇವರ ವಿಗ್ರಹವನ್ನು ಪುನಃ ಪ್ರತಿಷ್ಠೆ ಮಾಡಿ ಸುತ್ತಮುತ್ತಲಿನ ಹದಿನಾಲ್ಕು ಗ್ರಾಮದಲ್ಲಿ ನೆಲೆಸಿದ ಬ್ರಾಹ್ಮಣರು ಈ ದೇವರನ್ನು ಗುರುವಾಗಿಟ್ಟುಕೊಂಡು ಪೂಜಿಸುವಂತೆ ಆದೇಶಿಸಿದರು. ನರಸಿಂಹ ವಿಗ್ರಹವು ಸಾಲಿಗ್ರಾಮ ಶಿಲಾಮಯವಾಗಿದ್ದರಿಂದ ಈ ಪ್ರದೇಶಕ್ಕೆ ಸಾಲಿಗ್ರಾಮ ಎಂಬ ಹೆಸರು ಬಂತು.

ನರಸಿಂಹನ ಉಗ್ರತೆಗೆ ಎದುರಿರುವ ಹೊಲದಲ್ಲಿ ಬೆಳೆದ ಪೈರುಗಳು ಬೂದಿಯಾದ್ದರಿಂದ ಊರ ಹಿರಿಯರಿಗೆ ಸಿಕ್ಕ ಪರಿಹಾರವೆಂದರೆ ಆಂಜನೇಯನ ವಿಗ್ರಹವನ್ನು ನರಸಿಂಹನ ವಿಗ್ರಹದ ಎದುರಿಗೆ ಪ್ರತಿಷ್ಠಾಪಿಸುವ ಸಲಹೆ. ಉರಿಯನ್ನು ತಡೆಯಲು ಆಂಜನೇಯನ ವಿಗ್ರಹಕ್ಕೆ ಪ್ರತಿನಿತ್ಯವೂ ಬೆಣ್ಣೆ ಮ್ತು ಚಂದನದ ಲೇಪನ. ಗುರುನರಸಿಂಹ ದೇವಸ್ಥಾನದ ಸಮೀಪದಲ್ಲಿ ಸುಂದರವಾದ ಉದ್ಯಾನವನ, ಆ ವನವು ಔಷಧೀಯ ಗಿಡಮೂಲಿಕೆಯನ್ನು ಹೊಂದಿದೆ. ಅದರ ಮಧ್ಯದಲ್ಲಿ ನವಗ್ರಹಗಳ ಮುರ್ತಿಯನ್ನು ಪ್ರತಿಷ್ಠೆ ಮಾಡಲಾಗಿದೆ. ಈ ದೇವಸ್ಥಾನದ ಪಕ್ಕದಲ್ಲಿಯೇ ಸುಂದರವಾದ ಶಂಖತೀರ್ಥಕೆರೆ ಇದೆ. ಈ ಕೆರೆಯ ಎದುರಿನಲ್ಲಿ ಪ್ರಾಣಿ–ಪಕ್ಷಿಗಳ ಸಂಗ್ರಹಾಲಯವೂ ಇದೆ. ಸುಮಾರು 50–100 ವರ್ಷಗಳ ಹಿಂದೆ ಈ ದೇವಸ್ಥಾನ ಅಷ್ಟೇನು ಅಭಿವೃದ್ಧಿ ಹೊಂದಿರಲಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಭಕ್ತಾದಿಗಳು, ಕೂಟ ಬಂಧುಗಳು, ಆಡಳಿತ ಮಂಡಳಿ ಸಹಕಾರದಿಂದ ದೇಗುಲವು ಅಭೂತಪೂರ್ವವಾದ ಅಭಿವೃದ್ಧಿಯ ಮೂಲಕ ರಾಜ್ಯದ ಮುಂದುವರೆದ ದೇಗುಲಗಳಲ್ಲಿ ಒಂದಾಗಿ ಗುರುತಿಸಿಕೊಂಡಿದೆ. ದೇಶದಲ್ಲಿ ಪ್ರಪ್ರಥಮ ಬಾರಿಗೆ ಈ ದೇಗುಲದಲ್ಲಿ ನಗದು ರಹಿತ ವ್ಯವಹಾರವು ಚಾಲನೆಗೊಂಡಿದೆ.

ಪ್ರತಿವರ್ಷ ಮಕರ ಸಂಕ್ರಾಂತಿಯ ಎರಡನೇ ದಿನ ಇಲ್ಲಿ ಬ್ರಹ್ಮರಥೋತ್ಸವ ನಡೆಯುತ್ತದೆ. ಈ ಸಂದರ್ಭದಲ್ಲಿ 5 ದಿನಗಳ ಕಾಲ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತದೆ. ಇನ್ನು ಧಾರ್ಮಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ತಿಂಗಳಿಗೊಂದು ವಿಶೇಷ ಧಾರ್ಮಿಕ ಕಾರ್ಯಕ್ರಮ, ಸಾಮೂಹಿಕ ಅಕ್ಷರಾಭ್ಯಾಸ, ಋಕ್‌ಸಂಹಿತಾ ಪಾರಾಯಣ ಮತ್ತು ಋಕ್‌ಸಂಹಿತಾಯಾಗ, ಕಾರ್ತಿಕ ಮಾಸದಲ್ಲಿ ವಿಶ್ವರೂಪ ದರ್ಶನ, ಹಿರಿಯ ಮತ್ತು ಕಿರಿಯ ವಿಪ್ರರಿಗೆ ವೇದಾಧ್ಯಯನ ತರಗತಿಗಳು, ಉಚಿತ ಭರತನಾಟ್ಯ ತರಗತಿಗಳು ನಡೆಯುತ್ತವೆ. ಮೂಲ ಅಶ್ವತ್ಥ ವೃಕ್ಷಕ್ಕೆ ಉಪನಯನ ಮತ್ತು ವಿವಾಹ ಮಹೋತ್ಸವ ನಡೆದಿದೆ. ಈ ದೇವಸ್ಥಾನವು ತನ್ನದೇ ಆದ ಯಕ್ಷಗಾನ ಮೇಳವನ್ನು ಹೊಂದಿದೆ. ಗಾನಕೋಗಿಲೆಯಂದೇ ಪ್ರಸಿದ್ಧರಾದ ಕಾಳಿಂಗ ನಾವಡರೂ ಇಲ್ಲಿನ ಎಲ್ಲರಿಗೂ ಚಿರಪರಿಚಿತರು. ಇವರು ಈ ಮೇಳದಲ್ಲಿ ಇದ್ದದ್ದೂ ಹಿರಿಮೆಯಾದರೆ, ಅಲ್ಲಿದ್ದಿರುವ ಶಿರಿಯಾರ ಮಂಜು ನಾಯ್ಕ, ಅರಾಟೆ ಮಂಜು, ಜಲವಳ್ಳಿ ವೆಂಕಟೇಶ್ ರಾವ್, ಚಿಟ್ಟಾಣಿ ರಾಮಚಂದ್ರ ಹೆಗ್ಡೆ ಹೀಗೆ ಮುಂತಾದ ಕಲಾವಿದರು ಈ ಮೇಳವನ್ನು ಪ್ರಸಿದ್ಧಿಯಾಗಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸಿದ್ದಾರೆ.

'ಜ್ಞಾನಪೀಠ ಪ್ರಶಸ್ತಿ' ವಿಜೇತರಾದ ಡಾ. ಶಿವರಾಮ ಕಾರಂತರನ್ನು ನೆನಪಿಸುವ 'ಕಾರಂತ ಕಲಾಭವನ

ಸಾಲಿಗ್ರಾಮದಲ್ಲಿದೆ. ಇಲ್ಲಿ ಉಚಿತವಾಗಿ ಯಕ್ಷಗಾನವನ್ನು ಹೇಳಿಕೊಡುತ್ತಾರೆ. ಯಕ್ಷಗಾನ ಕಲಾಕೇಂದ್ರವು ಹತ್ತಿರದ ಹಳೇಕೋಟೆ ಮೈದಾನದಲ್ಲಿದೆ. ವಿಶ್ವಪ್ರಸಿದ್ಧಿಯನ್ನು ಪಡೆದಿರುವ ವಿವೇಕಾನಂದರ ಸ್ಮರಣೆಯನ್ನು ಮಾಡುವ ಡಿವೈನ್ ಪಾರ್ಕ್

ಇಲ್ಲಿದೆ. ಇಲ್ಲಿ ಅಂಸಖ್ಯಾತ ಯಾತ್ರಾರ್ಥಿಗಳು ಭೇಟಿ ಕೊಡುತ್ತಾರೆ.

ಕಲೆಗಳಿಗೆ ಮಹತ್ವಕೊಡುವ ಈ ಕ್ಷೇತ್ರದಲ್ಲಿ, ಶ್ರಾವಣ ಮಾಸದ ಪ್ರತಿ ಶನಿವಾರವೂ ವಿಶೇಷವಾಗಿರುತ್ತದೆ. ಆ ದಿನ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತದೆ. ಪ್ರತಿವರ್ಷದ ವಿಠಲ ಪಿಂಡಿಯಂದು ಶ್ರೀಗುರುನರಸಿಂಹನ ಉತ್ಸವದ ಮೂರ್ತಿಯು ಚೇಂಪಿಯಲ್ಲಿರುವ ಶ್ರೀಗೋಪಾಲಕೃಷ್ಣನ ಸನ್ನಿಧಾನಕ್ಕೆ ಪಲ್ಲಕ್ಕಿಯ ಮೂಲಕ ಅದ್ಧೂರಿಯಾಗಿ ತರಲಾಗುತ್ತಿದೆ.

ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನ ಕೂಟ ಮಹಾಜಗತ್ತಿನ ಈ ಸಾಲಿಗ್ರಾಮ ಕ್ಷೇತ್ರವು ಶ್ರೀಗುರುನರಸಿಂಹನ ಹಾಗೂ ಆಂಜನೇಯನ ಸಾನಿಧ್ಯವನ್ನು ಹೊಂದಿದ್ದು, ಸಾಮಾಜಿಕವಾಗಿಯೂ, ಸಾಂಸ್ಕೃತಿಕವಾಗಿಯೂ, ಧಾರ್ಮಿಕವಾಗಿಯೂ ಭವ್ಯತೆಯನ್ನು ಮೆರೆಯುತ್ತಿದೆ. ಈ ಭವ್ಯತೆಯನ್ನು ಉಳಿಸುವಲ್ಲಿ ಸಾಂಸ್ಕೃತಿಕ ಕಲೆಗಳನ್ನು ಅದರ ಮೂಲ ಆಶಯಕ್ಕೆ ಧಕ್ಕೆಯಾಗದಂತೆ ಬಳಸಿ, ಉಳಿಸುವಲ್ಲಿ ಯುವಜನತೆಯ ಪಾತ್ರವು ಬಹುಮುಖ್ಯವಾಗಿದೆ.

ಕಪ್ಪು ಕಾಜಾಣ

ಸುರಕ್ಷಾ
ಪ್ರಥಮ ಬಿ.ಕಾಂ.

ಬಯಲಲ್ಲಿ ಬೋಳು ಗಿಡಗಳ ಮೇಲೆ ಗದ್ದೆಯಲ್ಲಿ ನೆಟ್ಟ ಬೇಲಿ ಗೂಟಗಳು, ಗದ್ದೆ ಅಂಚಿನಲ್ಲಿ ಒಣಗಿದ ರೆಂಬೆಕೊಂಬೆ, ತಂತಿಗಳ ಮೇಲೆ ಕೂತು ತೆರೆದ ಕತ್ತರಿಯಂತೆ ಕಾಣುವ ಬಾಲವನ್ನು ಹಿಂದಕ್ಕೂ, ಮುಂದಕ್ಕೂ ಆಡಿಸುವ ಹೊಳೆವ ಕಪ್ಪಾದ ಹಕ್ಕಿಯೇ ಕಪ್ಪು ಕಾಜಾಣ. ಆದರೆ ಕಾಗೆ, ಕೋಗಿಲೆಗಳಿಗಿಂತ ಚಿಕ್ಕದಾಗಿ ನೀಲಿ ಹೊಳಪಿರುವಂತೆ ಕಾಣಿಸುತ್ತದೆ.

ಈ ಹಕ್ಕಿಗಳು ಕುಳಿತಲ್ಲಿಂದಲೇ ಮಿಡತೆ, ಹಾತೆಗಳ ಮೇಲೊಂದು ಕಣ್ಣಿಟ್ಟು ಅವು ಹಾರುವಲ್ಲಿಯೇ ಹಾರಿ ಹೋಗಿ ಹಿಡಿಯುತ್ತವೆ. ತಪ್ಪಿಸಿಕೊಂಡರೆ ಗಾಳಿಯಲ್ಲೇ ಪಲ್ಟಿ ಹೊಡೆದು ಹಾರಿ ಮತ್ತೆ ಹಿಡಿದು ಬಂದು ತಮ್ಮ ಜಾಗಕ್ಕೆ ಮರಳುತ್ತವೆ. ಇವುಗಳ ಈ ಹಾರಾಟದ ಕಸರತ್ತು ನೋಡುವುದೇ ಕಣ್ಣಿಗೆ ಆನಂದ. ಕೀಟ, ಮಿಡತೆ, ಹಾತೆಗಳನ್ನು ತಿನ್ನುವುದರಿಂದ ಇವು ರೈತಸ್ನೇಹಿ ಪಕ್ಷಿಗಳಾಗಿವೆ.

ಹಿಂದಿ, ಮರಾಠಿ ಭಾಷೆಯಲ್ಲಿ ಇವಕ್ಕೆ ಕೋತ್ವಾಲನೆಂದು ಬಿರುದು. ಈ ಹೆಸರಿಗೆ ಅನ್ವಯಿಸುವಂತೆ ಕಾಟ ಕೊಡುವ ಹಕ್ಕಿಗಳು ಹತ್ತಿರ ಸುಳಿಯದಂತೆ ನೋಡಿಕೊಳ್ಳುತ್ತವೆ. ಖ್ಯಾತ ಹಕ್ಕಿ ತಜ್ಞರ ಸಲೀಂ ಆಲಿಯವರು ಹೇಳುವಂತೆ ಇವು ಪೋಲಿಸ್ ಕೆಲಸ ಮಾಡುತ್ತವೆ. ಜೊತೆಗೆ ಆಗಾಗ ಸಹ ಭಕ್ಷಕರಲ್ಲಿ ಗೂಂಡಾಗಿರಿ ಮಾಡುವುದೂ ಇದೆ. ಆದರೆ ಗಾತ್ರದಲ್ಲಿ ತನಗಿಂತ ಹಲವು ಪಟ್ಟು ದೊಡ್ಡದಾದ ಕಾಗೆ, ಹದ್ದುಗಳು ಅಟ್ಟಾಡಿಸಿ ಓಡಿಸುವುದರಿಂದ ಇವು ಗೂಡು ಕಟ್ಟಿಕೊಳ್ಳುವ ಜಾಗದ ಹತ್ತಿರದಲ್ಲಿಯೇ ಚಿಕ್ಕಪುಟ್ಟ ಹಕ್ಕಿಗಳು ತಮ್ಮ ಗೂಡನ್ನು ಕಟ್ಟಿಕೊಳ್ಳುತ್ತವೆ. ಬೇರೆ ಹಕ್ಕಿಗಳ ಕೂಗಿನ ಅನುಕರಣೆಯಲ್ಲಿ ನಿಷ್ಣಾತ ಹಕ್ಕಿಗಳು ಇವು. ಈ ಹಕ್ಕಿಗಳು ಬೇಸಿಗೆಯಲ್ಲಿ ನೀರಿನಲ್ಲಿ ಮೀಯುವ ಬಗೆಯೂ ಬಹಳ ವಿಶೇಷವೇ ನೀರಿನ ಕೊಳವಿದ್ದಲ್ಲಿ ಹತ್ತಿರದ ಕೊಂಬೆಗಳ ಮೇಲೆ ಕೂತು ಎಂದಿಗಿಂತ ಭಿನ್ನ ರೀತಿಯಲ್ಲಿ ಕೂಗುತ್ತಾ ತಾವು ಸ್ನಾನಕ್ಕಿಳಿಯುವುದನ್ನು ಇತರೆ ಬಂಧುಗಳಿಗೆ ತಿಳಿಯಪಡಿಸುತ್ತವೆ. ನಂತರ ರೆಕ್ಕೆ ಬಿಚ್ಚಿ ಅರ್ಧ ವೃತ್ತಾಕಾರದಲ್ಲಿ ಹಾರುತ್ತಾ ನೀರ ಬಳಿ ಸಾರಿ ನೀರಿನ ಮೇಲ್ಮೈ ಮೇಲೆ ರೆಕ್ಕೆ ಬಡಿದು, ನೀರು ಹಾರಿಸುತ್ತಾ ಒದ್ದೆಯಾಗುತ್ತಾ ಮೇಲೆ ಬಂದು ಸ್ವಸ್ಥಾನಕ್ಕೆ ಮರುಳುತ್ತವೆ. ಹೀಗೆ ಐದರಿಂದ ಆರು ಬಾರಿ ಮಾಡಿದ ಮೇಲೆ ಎತ್ತರದ ಮರದ ಗೆಲ್ಲುಗಳ ಮೇಲೆ ಕುಳಿತು ರೆಕ್ಕೆ ಪುಕ್ಕಗಳನ್ನು ಅರಳಿಸುತ್ತಾ, ಕೊಡವುತ್ತಾ, ಮೈಯನ್ನು ಒಣಗಿಸಿಕೊಳ್ಳುತ್ತವೆ. ಇವುಗಳ ಇರುವನ್ನು ಇವುಗಳ ವಿಶಿಷ್ಟ ಕೂಗಿನಿಂದಲೇ ತಿಳಿದುಕೊಳ್ಳಬಹುದು.

ಬ್ಲ್ಯಾಕ್ ಡ್ರೊಂಗೊ ಎಂದು ಇದನ್ನು ಕರೆಯುತ್ತಾರೆ. ಇವುಗಳು ಭಾರತ, ಬಾಂಗ್ಲಾದೇಶ, ಪಾಕಿಸ್ಥಾನದಲ್ಲಿ ಹೆಚ್ಚಾಗಿ ಕಂಡು ಬರುತ್ತವೆ. ಇವುಗಳ ಸಂತಾನೋತ್ಪತ್ತಿ ಕಾಲ ಅಂದಾಜು ಏಪ್ರಿಲ್‌ನಿಂದ ಆಗಸ್ಟ್ ತಿಂಗಳು. ನಾರು, ಬೇರು, ಚಿಕ್ಕಕಡ್ಡಿಗಳನ್ನು ಜೇಡರ ಬಲೆಯಿಂದ ಜೋಡಿಸಿ ಕೊಂಬೆಗಳ ತುತ್ತತುದಿಯಲ್ಲಿ ಗೂಡುಕಟ್ಟುತ್ತವೆ. 'ಪಕ್ಷಿ ಪ್ರಪಂಚ ವಿಸ್ಮಯಕಾರಿ' ಎಂಬ ಬಲ್ಲವರ ಮಾತು ಸುಳ್ಳಲ್ಲ.

(ಸಂಗ್ರಹ)

ಪ್ರವಾಸ ಹೋಗ್ತೀರಾ

ರಂಜಿತ್
ಪ್ರಥಮ ಬಿ.ಎಸ್ಸಿ.

ಒಮ್ಮೆ ನನ್ನ ಸ್ನೇಹಿತನೊಬ್ಬ ಹಾವೇರಿಯ ಶಿಗ್ಗಾಂವ್ ಎಂಬಲ್ಲಿ ಉತ್ಸವ್ ರಾಕ್ ಗಾರ್ಡನ್ ಎಂಬ ಉದ್ಯಾನವನವಿದೆ, ಅಲ್ಲಿ ಮನುಷ್ಯರೂಪದ ಸಿಮೆಂಟಲ್ಲಿ ತಯಾರಿಸಿದ ಬೊಂಬೆಗಳು, ಹಳ್ಳಿಗರ ಹಳ್ಳಿಯ ಚಿತ್ರಣವನ್ನು ಬಿತ್ತರಿಸಿದ್ದಾರೆ ಎಂದ. ಹೆಸರಲ್ಲೇನೋ ಕುತೂಹಲ ಕೇಳಿ ಉತ್ಸುಕನಾದೆ. ನನ್ನ ಹತ್ತು ಜನರ ಸ್ನೇಹಿತರ ಗುಂಪೊಂದು ಇತ್ತು. ಸದಾ ಪ್ರವಾಸಕ್ಕಾಗಿ ಹಂಬಲಿಸುತ್ತಿದ್ದ ಮನಸ್ಥಿತಿಯವರು. ಒಂದು ದಿನದ ಪ್ರವಾಸದ ಸ್ಥಳವಾದ್ದರಿಂದ ಸ್ನೇಹಿತರೊಂದಿಗೆ ಚರ್ಚಿಸಿ ಹೊರಡಲು ನಿರ್ಧರಿಸಿದೆನು. ಆದರೆ ಎರಡು–ಮೂರು ಸಲ ಮಾಡಿದ ಯೋಜನೆಗಳು ಫಲಕೊಡಲಿಲ್ಲ. ಆದರೆ ಒಂದು ಆದಿತ್ಯವಾದ ಎಲ್ಲರೂ ಗಟ್ಟಿ ಮನಸ್ಸಿನಿಂದ ಹೊರಡಲು ನಿರ್ಧರಿಸಿದೆವು.

ಬೆಳಿಗ್ಗೆ ಸರಿ ಸುಮಾರು 4.00 ಗಂಟೆಗೆ ಗೊತ್ತು ಮಾಡಿದ್ದ ಗಾಡಿ ಹತ್ತಿದೆವು. ನಮ್ಮೂರಿನಿಂದ ಸುಮಾರು 220ಕಿ.ಮೀ. ದೂರದ ಪ್ರಯಾಣ. ಯಾರಿಂದಲೂ ಉತ್ಸಾಹ ನಿರೀಕ್ಷಿಸಲು ಕಷ್ಟವಾಗಿತ್ತು. ಸುಮಾರು 5 ಗಂಟೆಯ ಪ್ರಯಾಣ. ಬೆಳಿಗ್ಗೆ ಎಂಟು ಘಂಟೆಯ ಹೊತ್ತಿಗೆ ಹಾವೇರಿಯನ್ನು ತಲುಪಿಯಾಗಿತ್ತು. ಎತ್ತ ನೋಡಿದರೂ ವಿಶಾಲವಾದ ಜೋಳದ ಗದ್ದೆ. ಅಲ್ಲಲ್ಲಿ ಕಟಾವು ಮಾಡಿ ಮಾರಾಟಕ್ಕೆಂದು ರಾಶಿ ಮಾಡಿದ ಜೋಳದ ತೆನೆ. ಬೆಳ್ಳಂಬೆಳಿಗ್ಗೆಯೇ ತಮ್ಮ ಗದ್ದೆಯಲ್ಲಿ ಕೆಲಸದಲ್ಲಿ ಮಗ್ನರಾಗಿರುವ ಜನ. ತಮ್ಮ ಜೀವನೋಪಾಯವೇ ಆ ಜಮೀನಾಗಿದ್ದರೆ ಕೆಲಸ ಮಾಡದೆ ಏನು ಮಾಡಿಯಾರು?

ಕೊನೆಗೂ ಹಲವು ದಿನಗಳಿಂದ ಕಾದು ಆಸೆಯಿಂದ ಕಟ್ಟಿದ್ದ ಆಶಾಗೋಪುರ ವಿಶಾಲವಾದ ಭೂಪ್ರದೇಶವನ್ನು ಆವರಿಸಿ ತಲೆಎತ್ತಿ ನಿಂತಿತ್ತು. ಹೊರಗಿನಿಂದ ನೋಡಲು ಮಾಯಾ ಪ್ರಪಂಚದಂತೆ ಕಾಣಿಸುತ್ತಿತ್ತು. 600 ರೂಪಾಯಿಗಳ ಟಿಕೆಟ್ ಪಡೆದುಕೊಂಡು ಒಳಹೊಕ್ಕ ನಮಗೆ ಯಲ್ಲಪ್ಪ ಎನ್ನುವ ಮಾರ್ಗದರ್ಶಕ ಜೊತೆಯಾದ.

ಎಂಟು ದಾಖಲೆಗಳನ್ನು ತನ್ನ ಸೌಂದರ್ಯದ ಕಿರೀಟಕ್ಕೆ ಗರಿಯಾಗಿಸಿಕೊಂಡಿದ್ದ ರಾಕ್ ಗಾರ್ಡನ್ ನೋಡಲು ರಮಣೀಯವಾಗಿತ್ತು. ಯಲ್ಲಪ್ಪ ಅವರನ್ನ ಹಿಂಬಾಲಿಸುತ್ತಾ ಉಪಹಾರ ಗೃಹದೆಡೆಗೆ ಸಾಗಿದೆವು. ಹೊಟ್ಟೆ ತುಂಬುವಷ್ಟು ತಿಂಡಿ ಇದ್ದಿತ್ತು. ಆದರೂ ಗಾರ್ಡನ್ ನೋಡುವ ಕೌತುಕದಲ್ಲಿ ತಿಂಡಿ ಗಂಟಲಲ್ಲಿ ಇಳಿಯಲಿಲ್ಲ. ಉಪಹಾರ ಗೃಹದಿಂದ ಹೊರನಡೆದ ನಮಗೆ ವಿಸ್ಮಯವೋ ಎಂಬಂತೆ ಎದುರಾಗಿದ್ದು ಮನುಷ್ಯರಂತೆ ಮುಖವನ್ನು ಹೋಲುವ ಬೊಂಬೆಗಳು. ಯೋಗಾಸನ, ಪ್ರಾಣಾಯಾಮ ಹೀಗೆ ಮುಂತಾದ ಭಂಗಿಯಲ್ಲಿ ನಿರ್ಮಿಸಲ್ಪಟ್ಟ ಬೊಂಬೆಗಳು ಕಣ್ಣಿಗೆ ಮಹದಾನಂದವನ್ನು ನೀಡಿತ್ತು.

ರಾಕ್‌ಗಾರ್ಡನ್ ಹೆಸರಾಗಿದ್ದು ಹಳ್ಳಿಯ ನೈಜ ಜೀವನವನ್ನು ಬಿಂಬಿಸುವ ಸಿಮೆಂಟಿನಿಂದ ಮಾಡಿದ ಬೊಂಬೆಗಳಿಗೆ. ಅವುಗಳನ್ನು ನೋಡಲು ಹೊರಟೆವು. ಈಗಿನ ಹಳ್ಳಿಗಳಲ್ಲಿ ಆಧುನಿಕತೆಯ ಗಾಳಿ ಬೀಸಿದ್ದರಿಂದ ನಿಜ ಹಳ್ಳಿಯ ಜೀವನ ಅನುಭವಿಸಲು ಸಾಧ್ಯವಿಲ್ಲ. ಆದರೆ ಅಲ್ಲಿ ಇದ್ದ ಹಳ್ಳಿಯ ಜೀವನವನ್ನು ತೋರಿಸುವ ಬೊಂಬೆಗಳು ಕಣ್ಣಿಗೆ ಕಟ್ಟುವಂತಿತ್ತು. ರಾಗಿ ಬೀಸುತ್ತಿರುವ, ಮೆಣಸು ಕುಟ್ಟುತ್ತಿರುವ, ಹಾಲು ಕರೆಯುವ, ದನಕರುಗಳನ್ನು ಕಟ್ಟುತ್ತಿರುವ ಜನರು ಒಂದೆಡೆಯಾದರೆ ಪಾಠ ಕೇಳುತ್ತಿರುವ ಮಕ್ಕಳು, ನೀರು ಸೇದುತ್ತಿರುವ ಹೆಂಗಸರು, ಪೇಪರ್ ಓದುತ್ತಿರುವ ಪೂಜೆಯಲ್ಲಿ ತೊಡಗಿರುವ ಜನರು ಇನ್ನೊಂದೆಡೆ ಹೀಗೆ ಹತ್ತುಹಲವು ವೈವಿಧ್ಯಮಯ ಭಂಗಿಯಲ್ಲಿ ಬೊಂಬೆಗಳು ನಿರ್ಮಿಸಲ್ಪಟ್ಟಿದ್ದವು. ಅದರಲ್ಲೂ ನಿಜ ದನದ ಕೊಟ್ಟಿಗೆ ಎದುರು ನಿಲ್ಲಿಸಿದರೂ ಸೋಲೊಪ್ಪಿಕೊಳ್ಳದ ನೈಜ ರೂಪದ ದನದ ಕೊಟ್ಟಿಗೆ ಮನ ಮುಟ್ಟುವಂತಿತ್ತು.

ಸಿಕ್ಕಷ್ಟು ಕ್ಯಾಮೆರಾದಲ್ಲಿ ಸೆರೆಹಿಡಿಯುತ್ತಾ ಮುಂದೆ ಸಾಗಿದರೆ ಛಾಯಾಚಿತ್ರದ ಪ್ರಪಂಚವೇ ಇತ್ತು. ಎಲ್ಲೂ

ಕಾಣಸಿಗದ ಬುದ್ಧನು ಧ್ಯಾನ ಮಾಡುತ್ತಿರುವಾಗ ಹಿಂಬದಿಯಿಂದ ಬಿಡಿಸಿದ ಚಿತ್ರ ಅಚ್ಚರಿ ಮೂಡಿಸಿತ್ತು. ಮುತ್ತುಗಳನ್ನು ಪೋಣಿಸಿ ಸರ ಮಾಡುವ ಈ ಕಾಲದಲ್ಲಿ ಮುತ್ತಿದ ಪ್ರತಿಮೆಯನ್ನೇ ನಿರ್ಮಿಸಿದ್ದರು. ಅದರ ಜೊತೆಗೆ ಮದುವೆ ಛತ್ರದ ಚಿತ್ರಣ. ಈಗಿನ ಕಾಲದ ಆಡಂಭರದ ಮದುವೆಗೆ ಹೋಲಿಸಿದರೆ ಆಗಿನ ಕಾಲದ ಮದುವೆ ನೂರ್ವಾಲು ಲೇಸು. ಗಾಂಧಿಯ ಕನಸಾದ ಸ್ವಚ್ಛಭಾರತದ ಪ್ರಭಾವ ಅಲ್ಲಿಹೆಚ್ಚಾಗಿ ಪ್ರಭಾವ ಬೀರಿರಬೇಕು. ಬೀದಿಯಲ್ಲಿ ಬಿದ್ದಿರಬೇಕಾಗಿದ್ದ ಕಸವನ್ನು ತಂದು ಅಲ್ಲಿ ವೀಕ್ಷಣಾರ್ಹ ಮೂರ್ತಿಗಳನ್ನಾಗಿಸಿದ್ದಾರೆ.

ನಾವು ನಿಂತರೂ ಸಮಯ ನಿಲ್ಲದು. ಅದಾಗಲೇ ಮಧ್ಯಾಹ್ನವಾಗಿತ್ತು. ಮಾರ್ಗದರ್ಶಕ ನಮ್ಮನ್ನು ಮತ್ತೊಮ್ಮೆ ಉಪಹಾರ ಗೃಹಕ್ಕೆ ಕರೆದೊಯ್ದ. ಅಂದು ತಿಂದದ್ದು ಎಂದೂ ತಿಂದಿರದ ಊಟ. ಅನ್ನ ಸಾರು ಪಲ್ಯ ತಿನ್ನುತ್ತಿದ್ದ ನಮಗೆ ಅದೆಲ್ಲ ಹಬ್ಬದ ಊಟದಂತಿತ್ತು. ಹಲವು ಬಗೆಯ ಪಲ್ಯದಿಂದಲೇ ಹೊಟ್ಟೆ ತುಂಬಿತ್ತು. ಉತ್ತರ ಕರ್ನಾಟಕದ ಜನರ ಊಟದ ವಿಧಾನವೇ ಚೆಂದ. ನಾವು ಹಬ್ಬದಲ್ಲಿ ಉಣ್ಣುದನ್ನು ಅವರು ದಿನನಿತ್ಯ ಊಟ ಮಾಡುತ್ತಾರೆ ಎಂಬಂತಿತ್ತು ಅಲ್ಲಿಯ ಊಟ.

ಊಟ ಮಾಡಿ ಹೊರನಡೆದವರನ್ನು ಟಾಂಗಾ ಸ್ವಾಗತಿಸುತ್ತಿತ್ತು. ತಡಮಾಡದೇ ಎಲ್ಲರೂ ಎರಡು ಟಾಂಗಾ ಏರಿ ಕುಳಿತು ಒಂದು ಸುತ್ತು ಸುತ್ತಿ ಬಂದೆವು. ವಾಪಸು ಬಂದವರನ್ನು ಇನ್ನೊಂದು ಪ್ರಪಂಚಕ್ಕೊಯ್ಯಲು ಟ್ರ್ಯಾಕ್ಟರ್ ಕಾದಿತ್ತು. ಒಂದೇ ಲೋಕದಲ್ಲಿ ಎರಡು ವಿಸ್ಮಯವನ್ನು ಕಾಣುವ ಭಾಗ್ಯ ನಮ್ಮ ಪಾಲಿಗೆ ಬಂದಿತ್ತು. ಟ್ರ್ಯಾಕ್ಟರ್ ಏರಿ ಕುಳಿತ ನಮ್ಮನ್ನು ಅವರು ಕರೆದೊಯ್ದದ್ದು ಆಧುನಿಕ ಪ್ರದೇಶಕ್ಕೆ. ಗ್ರಾಮೀಣ ಪ್ರದೇಶವನ್ನೆ ಮರೆಸುವಂತೆ ಮೋಜುಮಸ್ತಿ. ಅಲ್ಲಿ ಆಡುತ್ತಾ ಕುಣಿಯುತ್ತಾ, ನೀರಲ್ಲಿ ಈಜುತ್ತಾ, ಹುಚ್ಚರಂತೆ ಹಾಡುತ್ತಾ ಅಲ್ಲಿಂದ ವಾಪಾಸಾಗುವಾಗ ಗಂಟೆ ಐದಾಗಿತ್ತು.

ಇನ್ನೂ ತಡಮಾಡಿದರೆ ಮನೆ ತಲುಪುವುದು ತಡವಾಗಬಹುದು ಎಂದು ಭಾರದ ಮನಸ್ಸಿನಿಂದ ಅದ್ಭುತ ಪ್ರಪಂಚವನ್ನು ಬಿಟ್ಟು ಹೊರನಡೆದೆವು. ಪ್ರತಿಯೊಂದು ಅಚ್ಚರಿಯಲ್ಲೂ ನಮ್ಮೊಂದಿಗಿದ್ದ ಯಲ್ಲಪ್ಪ ಅವರಿಗೆ ಧನ್ಯವಾದಗಳನ್ನು ತಿಳಿಸಿ ಗಾಡಿ ಹತ್ತಿದೆವು. ಮನೆಗೆ ಬಂದರೂ ನನ್ನ ಮನ ಅಲ್ಲೇ ಸುತ್ತುವಂತಿತ್ತು. ಅಂತಹ ಅದ್ಭುತವನ್ನು ಸೃಷ್ಟಿಸಿದ ಡಾ. ಸೋಲೆಮಕ್ಕನವರ ಅವರನ್ನು ನೆನೆಯುತ್ತ ನಿದ್ದೆಗೆ ಜಾರಿದೆ.

ಇಂದು ಆಧುನಿಕತೆಯ ಗಾಳಿ ಎಲ್ಲೆಡೆಯೂ ಹಬ್ಬಿದೆ. ಹಳ್ಳಿಗಳಲ್ಲಂತೂ ಆಧುನಿಕತೆ ಪ್ರಭಾವ ಹೆಚ್ಚಾದಂತಿದೆ. ಆದರೆ ನಿಜವಾದ ಹಳ್ಳಿಯ ಜೀವನವನ್ನು ಅನುಭವಿಸುವ ಭಾಗ್ಯ ಯಾರಿಗುಂಟು? ಯಾರಿಗಿಲ್ಲ? ಅಂತಹ ಭಾಗ್ಯ ನಮಗಂದು ದೊರಕಿತ್ತು.

पिबन्ति मधु पद्मेषु भृङ्गाः केसरधूसराः ।
हंसाः शैवालमश्नन्ति धिग्दैवमसमञ्जसम् ॥

ಪಿಬಂತಿ ಮಧು ಪದ್ಮೇಷು ಭೃಂಗಾಃ ಕೇಸರಧೂಸರಾಃ ।
ಹಂಸಾಃ ಶೈವಾಲಮಿಚ್ಛಂತಿ ಧಿಗ್ ದೈವಮಸಮಂಜಸಮ್ ॥

ತಾವರೆಗಳಲ್ಲಿ ದುಂಬಿಗಳಾದರೋ ಪರಾಗದಿಂದ
ಮೆತ್ತಿಕೊಳ್ಳಲ್ಪಟ್ಟವುಗಳಾಗಿ ಮಕರಂದವನ್ನು ಹೀರುತ್ತವೆ.
ಹಂಸಗಳು ಮಾತ್ರ ಪಾಚಿಯನ್ನು ತಿನ್ನುತ್ತವೆ.
ಈ ವಕ್ರವಾಗಿರುವ ಭಾಗ್ಯಕ್ಕೆ ಧಿಕ್ಕಾರವಿರಲಿ.

Bees suck only honey though their body is smeared by the pollen of lotus, but the swans in the vicinity of lotus eat only fungi. Reproach to their deviant fortunes.

ರಾಷ್ಟ್ರೀಯ ಸೇವಾಯೋಜನೆಯ ಏಳುದಿನಗಳ ಶಿಬಿರ

ಸ್ವಾತಿಕಾ ಎಸ್. ಶೆಟ್ಟಿ
ದ್ವಿತೀಯ ಬಿ.ಕಾಂ.

ಪದವಿ ಕಾಲೇಜನ್ನು ಆರಿಸುವುದರ ಮೊದಲೇ ಎನ್.ಎಸ್.ಎಸ್.ಗೆ ಸೇರಲೇ ಬೇಕೆಂಬ ಆಸೆ ನನ್ನದಾಗಿತ್ತು. ಎನ್.ಎಸ್.ಎಸ್.ನಲ್ಲಿ ನಾವು ಕಲಿಯಬೇಕಾದ ಶಿಸ್ತು ಹಾಗೂ ಸಮಯಪ್ರಜ್ಞೆಯ ಕುರಿತು ಅಕ್ಕನ ಅನುಭವದ ಮಾತುಗಳು ನನ್ನ ಕುತೂಹಲವನ್ನು ಇನ್ನಷ್ಟು ಹೆಚ್ಚಿಸಿತು. ಪದವಿಯ ಮೊದಲ ವರ್ಷ ಎನ್.ಎಸ್.ಎಸ್.ಗೆ ಸೇರಲು ಪರದಾಡಿ ಕೊನೆಗೂ ಎನ್.ಎಸ್.ಎಸ್.ನ ಸ್ವಯಂ ಸೇವಕಿಯಾಗಿಯೇ ಬಿಟ್ಟೆ. ಮೊದಲ ವರ್ಷ ಶಿಬಿರಕ್ಕೆ ಹೋಗದಿದ್ದರೂ ದ್ವಿತೀಯ ವರ್ಷ ಶಿಬಿರಕ್ಕೆ ಹೊರಟೆ. ಮೊದ ಮೊದಲು ಎನ್.ಎಸ್.ಎಸ್.ನ ಎಲ್ಲಾ ಕಾರ್ಯಕ್ರಮಕ್ಕೂ ನನ್ನ ಸಹಪಾಠಿಗಳೊಂದಿಗೇ ಕೂರುತ್ತಿದ್ದ ನಾನು ಎಂದಿನಂತೆ ಅಂದೂ ಕೂಡ ಅವರೊಂದಿಗೇ ಇದ್ದೆ. ಬೇರೆ ತರಗತಿಯ ಹುಡುಗಿಯರೊಂದಿಗೆ ಮಾತಾಡುತ್ತಿದ್ದೆ. ಆದರೆ ಅವರೊಂದಿಗೆ ಹೆಚ್ಚು ಪರಿಚಯವಿರಲಿಲ್ಲ. ಶಿಬಿರಕ್ಕೆ ಬಸ್ಸಿನಲ್ಲಿ ಹೊರಟ ನಮಗೆ ಏನೋ ಭಯ, ಎಲ್ಲೋ ಒಂದು ಖುಷಿ. ಶಿಬಿರದ ಸ್ಥಳಕ್ಕೆ ಹೋದ ನಂತರ ನನ್ನ ಸಹಪಾಠಿಗಳು ಮತ್ತು ನಾನು ಬೇರೆ ಬೇರೆ ಕೊಠಡಿಗೆ ಹೋದೆವು. ಅಲ್ಲಿ ನನಗೆ ಹಲವಾರು ಹೊಸ ತರಗತಿಯ ಸ್ನೇಹಿತರು ಸಿಕ್ಕರು. ಮಧ್ಯಾಹ್ನದ ಊಟದ ನಂತರ ಉದ್ಘಾಟನಾ ಕಾರ್ಯಕ್ರಮವನ್ನು ಮುಗಿಸಿ ಸಂಜೆ ಆಕಾಶ ವೀಕ್ಷಣೆಯನ್ನು ಮಾಡಿ. ರಾತ್ರಿ ಅವಲೋಕನಾ ಸಭೆ. ಇದರ ಕುರಿತು ನಮಗಾರಿಗೂ ತಿಳಿದೇ ಇರಲಿಲ್ಲ. ಎಲ್ಲರೂ ಹೋಗಿ ಶಿಸ್ತಿನಲ್ಲಿ ಅವಲೋಕನಾ ಸಭೆಯಲ್ಲಿ ಕುಳಿತಾಗ ಎನ್.ಎಸ್.ಎಸ್.ನ ಇಬ್ಬರು ಯೋಜನಾಧಿಕಾರಿಗಳು ಹಾಗೆಯೇ ಸಹ ಯೋಜನಾಧಿಕಾರಿಗಳು ಬಂದು ಕುಳಿತಾಗ ಏನೋ ಒಂದು ಹೇಳಿ ಊಟಕ್ಕೆ ಕಳುಹಿಸುತ್ತಾರೆ ಎಂಬ ಭಾವನೆ ಇತ್ತು. ಆದರೆ ಅಲ್ಲಿ ನಡೆದದ್ದೇ ಬೇರೆ. ಅಂದು ಬಂದದಷ್ಟೇ ಆದರೂ ನಮಗೇ ತಿಳಿಯದಂತೆ ನಡೆದ ಸಣ್ಣ ಸಣ್ಣ ತಪ್ಪುಗಳನ್ನು ಹೇಳಿ ಮುಂದೆ ಇಂತಹ ತಪ್ಪುಗಳಾಗಬಾರದೆಂದು ಹೇಳಿದ ಅವರ ಮಾತು ಬಹಳ ಮನಸ್ಸಿಗೆ ತಟ್ಟಿತು. ನಮ್ಮನ್ನು ಐದು ಪಂಗಡವನ್ನಾಗಿ ಮಾಡಿ ಅದಕ್ಕೆ ನಾಯಕ ನಾಯಕಿಯರನ್ನು ನೇಮಕ ಮಾಡಿದರು. ಎರಡನೆಯ ದಿನ ನಮಗೆ ಸಾಂಸ್ಕೃತಿಕ ಕಾರ್ಯಕ್ರಮದ ಜವಾಬ್ದಾರಿ. ನಾನು ಕೇಳಿದಂತೆ ಹೆಚ್ಚು ಕೆಲಸ ಇರುವುದೇ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ. ದಿನಕ್ಕೆ ಮೂರು ಕಾರ್ಯಕ್ರಮ ಇದ್ದುದರಿಂದ, ನಿರೂಪಣೆ, ಸ್ವಾಗತ, ಧನ್ಯವಾದ ಭಾಷಣ ಹಾಗೆಯೇ ವೇದಿಕೆಯನ್ನು ಸಿಂಗರಿಸುವುದು. ಮೊದಲದಿನ ರಾತ್ರಿ ನಿದ್ರೆಯೂ ಬರಲಿಲ್ಲ. ಏಕೆಂದರೆ ನಾಳೆಯ ಜವಾಬ್ದಾರಿಯಲ್ಲಿ ಏನು ತಪ್ಪು ನಡೆಯುವುದೋ ಎಂಬಂತೆ ಭಾವಿಸುತ್ತಿತ್ತು. ಎರಡನೇ ದಿನದಿಂದ ಬೆಳಿಗ್ಗೆ 6 ಗಂಟೆಗೆ ಸರಿಯಾಗಿ ಎಲ್ಲರೂ ಯೋಗ ಮಾಡುವ ಸ್ಥಳಕ್ಕೆ ಹೋದೆವು. ಎನ್.ಎಸ್.ಎಸ್.ನಲ್ಲಿ ನಮಗೆ ಭರ್ಜರಿ ಭೋಜನ. ಕೆಲಸಮಾಡಿ ಹಸಿವಿನಿಂದ ಅದು ರುಚಿ ಎನಿಸಿತೋ ತಿಳಿಯಲಿಲ್ಲ. ಆದರೆ ಶಿಬಿರದಲ್ಲಿ ನಮ್ಮ ಹೊಟ್ಟೆಗೆ ಎಂದಿಗೂ ಕಡಿಮೆ ಊಟವನ್ನು ಕೊಡಲಿಲ್ಲ. ಶ್ರಮದಾನವನ್ನು ಮಾಡಿ ಊಟದ ನಂತರ ಶೈಕ್ಷಣಿಕ ಕಾರ್ಯಕ್ರಮ, ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮ, ಎನ್.ಎಸ್.ಎಸ್.ನಲ್ಲಿ ಎಲ್ಲರೂ ತಮ್ಮ ಜೀವನದಲ್ಲಿ ನಾಯಕತ್ವದ ಗುಣವನ್ನು ಕಲಿಯುತ್ತಾರೆ. ಸಭಾ ಕಂಪನವನ್ನು ಬಿಡುತ್ತಾರೆ.

ಶಿಬಿರದ ಕೊನೆಯ ದಿನವಾದ ಏಳನೇ ದಿನದಂದು ಇನ್ನೂ ಒಂದುವಾರ ಶಿಬಿರ ಇದ್ದರೆ ಎಷ್ಟು ಚೆನ್ನಾಗಿತ್ತು ಅನಿಸತೊಡಗಿತು. ಎಲ್ಲರೂ ಸ್ವಂತ ಅಣ್ಣತಂಗಿಯರಂತೆ ಸಹಬಾಳ್ವೆಯಿಂದ ಬಾಳುವುದನ್ನು ಕಲಿತೆವು.

ಬದುಕಿನ ಸವಿನೆನಪಿನ ಬುತ್ತಿಯಲ್ಲಿ ಎನ್.ಎಸ್.ಎಸ್. ಶಿಬಿರ ಎಂದೂ ಮರೆಯದ ನೆನಪಿನ ವಸ್ತುವಾಗಿ ಮನದಂಗಳಲ್ಲಿ ಅಚ್ಚಾಗಿದೆ.

ಶ್ರಮಯೇವ ಜಯತೇ

ಪ್ರಕೃತಿಯೊಂದಿಗೆ ನಮ್ಮ ಹೆಜ್ಜೆ

ಅಂಕಿತ ಹೆಗಡೆ
ದ್ವಿತೀಯ ಬಿ.ಕಾಂ.

(ಉತ್ಥಾನ ಪತ್ರಿಕೆ ನಡೆಸಿದ ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಅಂತಿಮ ಸುತ್ತಿಗೆ ಆಯ್ಕೆಯಾದ ಪ್ರಬಂಧ)

ಜೋಗದ ಸಿರಿ ಬೆಳಕಿನಲ್ಲಿ ತುಂಗೆಯ ತೆನೆ ಬಳುಕಿನಲ್ಲಿ
ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ
ನಿತ್ಯ ಹರಿದ್ವರ್ಣ ವನದ ತೇಗ, ಗಂಧ, ತರುಗಳಲ್ಲಿ
ನಿತ್ಯೋತ್ಸವ ತಾಯೆ ನಿತ್ಯೋತ್ಸವ ॥

ನಿಸಾರ್ ಅಹ್ಮದ್‌ರವರ ಈ ಸಾಲುಗಳೇ ಎಷ್ಟು ಸುಂದರ ಅಲ್ಲವೇ? ಇಂತಹ ಅದ್ಭುತ ಪ್ರಕೃತಿ ಸಂಪತ್ತು ನಮ್ಮದಾಗಿತ್ತು.

ಬಂಧುಗಳೇ ಎಂತಹ ವಿಪರ್ಯಾಸ ನೋಡಿ, ಎಷ್ಟು ವಿಸಾಲವಾದ ಪ್ರಕೃತಿಯ ಮಡಿಲಿನಿಂದ ಬೆಳೆದು ಬಂದ ನಾವು ಎಂತಹ ವಿಕಾರವಾದ ಜೀವನದೆಡೆಗೆ ದಾಪುಗಾಲು ಇಡುತ್ತಿದ್ದೇವೆ. ಅಭಿವೃದ್ಧಿಯ ಕನಸಿನಲ್ಲಿ ಪ್ರಕೃತಿಯ ಸೊಬಗು ಸೊರಗುವಂತೆ ಮಾಡುತ್ತಿದ್ದೇವೆ. ಅಲ್ಲವೇ?

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ॥

ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಅರ್ಜುನನಿಗೆ ಹೇಳುತ್ತಾನೆ. ಹೇ ಅರ್ಜುನ ಯಾವ ಯಾವ ಕಾಲದಲ್ಲಿ ಧರ್ಮದ ಹಾನಿ ಮತ್ತು ಅಧರ್ಮದ ವೃದ್ಧಿಯಾಗುವುದೋ ಆವಾಗಲೆಲ್ಲ ನಾನು ನನ್ನ ಸಾಕಾರ ರೂಪದಿಂದ ಜನರ ಮುಂದೆ ಪ್ರತ್ಯಕ್ಷನಾಗುತ್ತೇನೆ ಎಂದು.

ಬಹುಶಃ ಭಗವಂತ ನಮ್ಮೆದುರು ಮತ್ತೆ ಪ್ರತ್ಯಕ್ಷನಾಗುವ ಅವಧಿ ಬಹಳ ಹತ್ತಿರವಿದೆಯೇನೋ ಎನ್ನುವುದರ ಮಟ್ಟಿಗೆ ಭೂತಾಯಿಯ ಮೇಲೆ ಪ್ರಕೃತಿಯ ಮೇಲೆ ದಬ್ಬಾಳಿಕೆ ನಡೆಯುತ್ತಿದೆ. ಸ್ಪರ್ಧಾತ್ಮಕ ಜಗತ್ತಿನೊಂದಿಗೆ ನಮ್ಮ ಇರುವಿಕೆಯನ್ನು ಸಾದರಪಡಿಸಿಕೊಳ್ಳಲು ಖಂಡಿತ ಅಭಿವೃದ್ಧಿಯ ಕೆಲಸ ಅವಶ್ಯಕ, ಆದರೆ ಅಭಿವೃದ್ಧಿ ಎಂಬ ಪದವನ್ನು ವ್ಯಾಖ್ಯಾನಿಸುವಲ್ಲಿ ಇಂದಿನ ಸಮಾಜ ಸಂಪೂರ್ಣ ಎಡವಿದೆ ಎಂಬುವುದರಲ್ಲಿ ಎರಡು ಮಾತಿಲ್ಲ. ಆಧುನಿಕ ಜಗತ್ತಿನಲ್ಲಿ ಮನುಷ್ಯ ತಾನು ತನ್ನದು ಎಂಬ ಭ್ರಮೆಯಲ್ಲಿ ತೇಲುತ್ತಿದ್ದಾನೆ. ಭೂಮಿಯಲ್ಲಿ ಎಷ್ಟು ವಿಶಾಲವಾದ ಪ್ರಕೃತಿ ಇದೆ. ತಾನೊಬ್ಬ ಮರ ಕಡಿದರೆ ಯಾರಿಗೇನು ತೊಂದರೆ ಎಂದು ಎಲ್ಲರೂ ಯೋಚಿಸುವಾಗ ಪ್ರಕೃತಿಯ ಉಳಿಗಾಲ ಹೇಗೆ ಸಾಧ್ಯ ಅಲ್ಲವೇ? ಪ್ರಕೃತಿಯ ಇರುವಿಕೆಯಿಂದಲೇ ಅಲ್ಲವೇ ಮನುಕುಲದ ಅಭಿವೃದ್ಧಿ ಆಗಿದ್ದು !

ಪ್ರಕೃತಿಯೊಂದಿಗೆ ಬೆರೆತು ನಡೆಯುವುದು ಮನುಜನ ಕರ್ತವ್ಯ ಅಲ್ಲವೇ?

ಇಂತಹ ಪ್ರಕೃತಿಯ ವಿನಾಶಕ್ಕೆ ಕಾರಣವಾದಂತಹ ಮಾಲಿನ್ಯಗಳಲ್ಲಿ, ಪ್ರಮುಖವಾಗಿದ್ದ ವಾಯುಮಲಿನ್ಯ ಹಾಗೂ ಶಬ್ದಮಾಲಿನ್ಯದ ಜೊತೆಗಾರನಾಗಿ, ನಿಸರ್ಗದ ಅಳಿವಿಗಾಗಿ ಕಟ್ಟಿಕೊಂಡಂತಹ ಸಂಘದ ಮುಖ್ಯ ಕಾರ್ಯಕರ್ತನಾಗಿ ಕೆಲಸ ನಿರ್ವಹಿಸುವುದೇ ಜಲಮಾಲಿನ್ಯ. ಇಂದಿನ ದಿನಗಳಲ್ಲಿ ಎಲ್ಲರ ಬಾಯಲ್ಲಿ, ಸ್ಪರ್ಧೆಗಳಲ್ಲಿ, ಚರ್ಚೆಗಳಲ್ಲಿ ಹರಿದಾಡುತ್ತಿರುವ ಪ್ರಮುಖ ವಿಷಯವಾದ ಜಲಸಂರಕ್ಷಣೆ ಏಕೆ? ಮತ್ತು ಹೇಗೆ? ಎನ್ನುವುದರ ಕುರಿತು ಚಿಕ್ಕದಾಗಿ ಚೊಕ್ಕದಾಗಿ ವಿಮರ್ಶಿಸೋಣ.....

ಸಕಲ ಜೀವರಾಶಿಗಳಿಗೂ ಜೀವಾಮೃತ ನೀರು, ನೀರಿನಿಂದಲೇ ಬದುಕಲು ಸಾಧ್ಯ, ನೀರಿಲ್ಲದಿದ್ದರೆ ಬದುಕಲು ಸಾಧ್ಯವೇ ಇಲ್ಲ. ಭಗೀರಥನ ತಪಸ್ಸಿನ ಫಲವಾಗಿ ಭೂಲೋಕಕ್ಕೆ ಬಂದ ಗಂಗಾಮಾತೆಯನ್ನು ನಾವು ಭಕ್ತಿಯಿಂದ ಪೂಜಿಸುತ್ತೇವೆ. ಸಕಲ ಪಾಪಗಳು ಪರಿಹಾರ ಆಗುವುದೆಂದು ಗಂಗಾಜಲವನ್ನು ಅಮೃತವೆಂದು ಕುಡಿಯುತ್ತೇವೆ. ಗಂಗೆಯಲ್ಲಿ ಸ್ನಾನ ಮಾಡಿ ಪಾವನರಾಗುತ್ತೇವೆ. ಧನ್ಯತೆಯನ್ನು ಹೊಂದುತ್ತೇವೆ. ಇಂತಹ ಗಂಗಾಮಾತೆ ಅರ್ಥಾತ್ ನೀರು, ಜಲಸಂಕುಲಕ್ಕೆ ಸಸ್ಯರಾಶಿಗೆ ಮಾರಕವಾದರೆ, ಈ ನೀರೆ ಮಲಿನವಾಗಿ ಮನುಷ್ಯನ, ಜೀವ ಸಂಕುಲದ ರೋಗ ರುಜಿನಕ್ಕೆ ಕಾರಣವಾದರೆ, ಬಳಸುತ್ತಿರುವ ನೀರು ಬತ್ತಿಯೇ ಹೋದರೆ...ಪರಿಣಾಮ?!!!

ಒಲೆ ಹೊತ್ತಿ ಉರಿದರೆ ನಿಲಬಹುದಲ್ಲದೆ,
ಧರೆ ಹೊತ್ತಿ ಉರಿದರೆ ನಿಲಬಹುದೇ?
ಕೂಡಲ ಸಂಗಮದೇವ

ಭೂಮಿ ಮಾನವನ ವಾಸಸ್ಥಾನ. ಭೂಮಿಯಲ್ಲಿನ ನೆಲ, ಗಾಳಿ, ಜಲ, ಬೆಳಕು, ಮಣ್ಣು, ಸಸ್ಯ, ಬಾಹ್ಯಸ್ಥಿತಿಗಳನ್ನು ಪರಿಸರ ಎನ್ನುತ್ತೇವೆ. ಪರಿಸರ ನಾಶದ ಪರಿಣಾಮ ಮಳೆಗಾಲದಲ್ಲಿ ವ್ಯತ್ಯಾಸ, ಜಲಮಾಲಿನ್ಯ ಆಗುತ್ತಿದೆ. ಇದರ ಪರಿಣಾಮ ಕೆರೆ, ಬಾವಿ, ನದಿ, ಸಮುದ್ರದ ನೀರು ಹಾಳಾಗುತ್ತಿದೆ, ಬತ್ತುತ್ತಿದೆ.

ಇಡೀ ವಿಶ್ವದಲ್ಲಿ ಮಾರ್ಚ್ 22 ರಂದು ಜಲಸಂರಕ್ಷಣೆದಿನವನ್ನು ಆಚರಿಸಲಾಗುತ್ತಿದೆ. ಇಂದಿನ ದಿನಗಳಲ್ಲಿ ಜಲಸಂರಕ್ಷಣೆಯನ್ನು ಮಾಡಲೇಬೇಕಾದ ಸ್ಥಿತಿ ಬಂದೊದಗಿದೆ. ಎಲ್ಲೆಡೆ ಜಲಕ್ಷಾಮ ಉಂಟಾಗಿದೆ. ಜಲಸಂರಕ್ಷಣೆಯನ್ನು ಮಾಡಬೇಕಾದರೆ ಜಲಮಾಲಿನ್ಯವನ್ನು ಸಂಪೂರ್ಣವಾಗಿ ತಡೆಗಟ್ಟಬೇಕಾಗುತ್ತದೆ. ಈಗ ನಾವು ಜಲಮಾಲಿನ್ಯಕ್ಕೆ ಕಾರಣಗಳು, ಪರಿಣಾಮಗಳ ಬಗ್ಗೆ ಅವಲೋಕಿಸೋಣ.

ಜಲಮಾಲಿನ್ಯವು ನೀರಿನ ಮೂಲಗಳಾದ ಕೆರೆ, ಬಾವಿ, ಸರೋವರ, ನದಿ, ಸಮುದ್ರಗಳು ಅಂತರ್ಜಾಲ ಕಶ್ಮಲೀಕರಣವನ್ನು ಒಳಗೊಂಡಿವೆ. ಎಲ್ಲ ಜಲಮಾಲಿನ್ಯದ ಪರಿಣಾಮಗಳೂ ನೀರಿನ ಮೂಲಗಳನ್ನು ಅವಲಂಬಿಸಿರುವ ಲೋಹರೂಪದ ನಾಣ್ಯಗಳು ಮತ್ತು ಜನರಿಗೆ ಹಾಗೂ ಬಯೋಡಿನೊಲಸಿಸ್ ಪರಿಣಾಮ ಬೀರುತ್ತದೆ. ಸೂಕ್ತಜಲ ಚಿಕಿತ್ಸೆ ಇಲ್ಲದೇ ಮಲಿನಕಾರಿ ಮತ್ತು ಹಾನಿಕಾರಕಗಳನ್ನು ನೀರಿನ ಮೂಲಗಳಿಗೆ ವಿಸರ್ಜಿಸಿದಾಗ ಮಾಲಿನ್ಯ ಉಂಟಾಗುತ್ತದೆ. ಬಹಳಷ್ಟು ರಾಸಾಯನಿಕ ಪದಾರ್ಥಗಳು ವಿಷಯುಕ್ತವಾಗಿವೆ. ರೋಗಕಾರಕ ವೈರಸ್‌ಗಳು ನೀರಿನಿಂದ ಉಂಟಾಗುವ ಖಾಯಿಲೆಗಳನ್ನು ಮಾನವ ಮತ್ತು ಪ್ರಾಣಿಗಳಲ್ಲಿ ಉತ್ಪತ್ತಿಸುತ್ತವೆ. ನೀರಿನ ನೈಸರ್ಗಿಕತೆಯನ್ನು ಬದಲಾಯಿಸುವುದರಿಂದ ನೀರು ಆಮ್ಲತೆ ಮತ್ತು ಸಾರವನ್ನು ಕಳೆದುಕೊಳ್ಳುತ್ತದೆ. ಸಾರ ಕಳೆದುಕೊಂಡ ಮೇಲ್ಮೈ ನೀರಿನ ರಾಸಾಯನಿಕಗಳಿಂದ ನೀರು ಪೋಷಕಾಂಶಗಳನ್ನು ಕಳೆದುಕೊಳ್ಳುತ್ತದೆ. ಜಲಮಾಲಿನ್ಯವು ಇಂದಿನ ಮನುಕುಲದ ಜೀವನಾವಸ್ಥೆಯಲ್ಲಿ ಹೆಚ್ಚಿನ ಬೆಳವಣಿಗೆಯನ್ನು ಪಡೆದುಕೊಂಡಿದೆ. ಪ್ರಸ್ತುತ ದಿನಗಳಲ್ಲಿ ಉಂಟಾಗುವ ಜಲಮಾಲಿನ್ಯದ ವಿಧಾನಗಳು ಈ ರೀತಿ ಇದೆ.

* ಚರಂಡಿಗಳ ಶುದ್ಧೀಕರಣ ಘಟಕಗಳಿಂದ ಹೊರಟ ಕಶ್ಮಲಗಳು, ಕಾರ್ಖಾನೆಗಳ ಹೊಲಸು, ನೀರಿನ ಮೂಲವನ್ನು ಸೇರುತ್ತಿವೆ.
* ಕೃಷಿ ಭೂಮಿ ಅಥವಾ ಅರಣ್ಯ ಪ್ರದೇಶಗಳಿಂದ ಹರಿಯುವ ಕಶ್ಮಲ, ನೀರಿನ ಕಾಲುವೆಗಳನ್ನು ಸೇರುತ್ತಿದೆ.
* ವಾಹನಗಳ ಇಂಧನಗಳ ಸುಡುವಿಕೆಯು ಉಪಉತ್ಪನ್ನಗಳು ನೀರನ್ನು ಸೇರಿ ಕಲುಷಿತಗೊಳಿಸುತ್ತವೆ.
* ಪರಿಸರದಲ್ಲಿ ಮನುಷ್ಯನು ಬಿಸಾಡಿದ ಕಸಕಡ್ಡಿಗಳು, ಬಿದ್ದ ಮಳೆಯಿಂದಾಗಿ ಚರಂಡಿಗಳನ್ನು ಸೇರಿಕೊಳ್ಳುತ್ತವೆ.

ಇನ್ನು ಅನೇಕ ರೀತಿಯ ವಿಧಾನಗಳಿಂದ ಇಂದು ಜಲಮಾಲಿನ್ಯ ಉಂಟಾಗುತ್ತಿದೆ. ಜಲಮಾಲಿನ್ಯವನ್ನು ತಡೆಗಟ್ಟದಿದ್ದರೆ, ಜಲಸಂರಕ್ಷಣೆಯಾದರೂ ಹೇಗೆ ಸಾಧ್ಯ?

ಇಂದಿನ ದಿನಗಳಲ್ಲಿ ಆಗುತ್ತಿರುವ ಪ್ರಕೃತಿ ನಾಶದಿಂದಾಗಿ ಮಣ್ಣು ಫಲವತ್ತತೆಯನ್ನು ಕಳೆದುಕೊಂಡಿದೆ. ಎಲ್ಲಿ ನೋಡಿದರಲ್ಲಿ ಮರ ಗಿಡಗಳು ನಾಶವಾಗಿ, ಎತ್ತರದ ಕಟ್ಟಡಗಳು ತಲೆ ಎತ್ತುತ್ತಿವೆ. ಅಭಿವೃದ್ಧಿಯ ಹೆಸರಿನಡಿಯಲ್ಲಿ ಕಾಂಕ್ರೀಟ್ (ಸಿಮೆಂಟ್) ಡಾಂಬರ್ ರೆಸ್ತೆಗಳು ಎಲ್ಲ ಪ್ರದೇಶಗಳನ್ನು ಆವರಿಸಿಕೊಂಡಿದೆ. ಇವೆಲ್ಲದರಿಂದ ಮಣ್ಣು ಹೇಗೆ ಉಳಿಯಲು ಸಾಧ್ಯ? ಫಲವತ್ತಾದ ಮಣ್ಣು ಇಲ್ಲವಾದರೆ ಅಂತರ್ಜಲ ಹೇಗೆ ಸಾಧ್ಯ? ಹೇಗೆ ಮುಂದುವರೆದರೆ ಮುಂದಿನ ಪೀಳಿಗೆಯವರಿಗೆ ಜೀವ ಉಳಿಸಿಕೊಳ್ಳಲಿಕ್ಕೆ ಆದರೂ ನೀರು ಎಲ್ಲಿಂದ?!! ಅಬ್ಬಾ !! ಯೋಚನೆಗೂ ಕಷ್ಟಸಾಧ್ಯವಾಗಿದೆ.

ಪ್ರಸ್ತುತ ದಿನಗಳಲ್ಲಿ ಜಗತ್ತಿನಲ್ಲಿ ಮರಣ ಮತ್ತು ಖಾಯಿಲೆಗಳಿಗೆ ಬಹುಮುಖ್ಯ ಕಾರಣ ಜಲಮಾಲಿನ್ಯ ಎಂದು ಗ್ರಹಿಸಲಾಗಿದೆ. ಇತ್ತೀಚಿನ ಅಮೆರಿಕಾ ಸಂಯುಕ್ತ ಸಂಸ್ಥಾನದ ಜಲಗುಣಮಟ್ಟದ ರಾಷ್ಟ್ರೀಯ ವರದಿಯಂತೆ, ಶೇಕಡಾ 45 ರಷ್ಟು ಮೈಲುಗಳ ಕಾಲುವೆ, ಶೇಕಡಾ 47 ರಷ್ಟು ಎಕರೆಯ ಸರೋವರ, ಶೇಕಡಾ 32 ಚದುರ ಮೈಲಿಗಳಷ್ಟು ಕೊಲ್ಲಿ ಮತ್ತು ಸಮುದ್ರಕೊಲ್ಲಿಗಳು ಮಾಲಿನ್ಯವಾಗಿದೆ ಎಂದು ಪರಿಗಣಿಸಲಾಗಿದೆ. ಇಂದು ಎಲ್ಲೆಡೆ ಬಿಸಿಲಿನ ಝಳ ಏರುತ್ತಿದೆ.

ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದೆ, ಎಲ್ಲ ಜೀವ ಸಮೂಹಗಳು ಪರಿತಪಿಸುವಂತಾಗಿದೆ. "ಭಾರತೀಯ ಕುಟುಂಬ ಅಭಿವೃದ್ಧಿ ಸಮೀಕ್ಷೆ" ಪ್ರಕಾರ ಗ್ರಾಮಾಂತರ ಪ್ರದೇಶದ ಪ್ರತಿ ನಾಲ್ಕು ಕುಟುಂಬಗಳ ಪ್ರತಿ ಬಂದು ಕುಟುಂಬ ನೀರನ್ನು ಹುಡುಕಿಕೊಂಡು ಅರ್ಧಗಂಟೆ ಸಾಗಬೇಕಿದೆ. ಗಡ್ಡಕ್ಕೆ ಬೆಂಕಿಹೊತ್ತಿಕೊಂಡಾಗ ಬಾವಿ ತೋಡು ಎನ್ನುವಂತೆ ಬಿರು ಬೇಸಿಗೆಯಲ್ಲಿ ಮಾತ್ರ ನೀರಿನ ಸಂರಕ್ಷಣೆ, ಅಂತರ್ಜಲ ಮರುಪೂರಣ, ಮಳೆ ಕೊಯ್ಲುವಿನಂಥ ಯೋಜನೆಗಳ ಬಗ್ಗೆ ಮಾತಾಡಿ, ಮಳೆ ಬಂದ ಕೂಡಲೇ ಅದನ್ನು ಮರೆಯುವ ಪ್ರವೃತ್ತಿ ಎಲ್ಲರಲ್ಲೂ ಮನೆಮಾಡಿದೆ.

ಕುಡಿಯಿರಿ ಶುದ್ಧಜಲ ಕೊಲ್ಲದಿರಿ ಅಂತರ್ಜಲ ಎನ್ನುವಂತೆ ನಾವು ಇಂದು ಅಂತರ್ಜಲಮಟ್ಟವನ್ನು ಅಭಿವೃದ್ಧಿ ಪಡಿಸಬೇಕಿದೆ.

ಕೇಂದ್ರೀಯ ಅಂತರ್ಜಲ ಮಂಡಳಿಯ ಪ್ರಕಾರ ಶೇ. 64 ರಷ್ಟು ಬೋರ್‌ವೆಲ್‌ಗಳಲ್ಲಿ ನೀರಿನ ಸೆಲೆ ಬತ್ತಿ ಹೋಗಿದೆ. ಆದ್ದರಿಂದಲೇ ದೇಶದಲ್ಲಿ ಕೋಟ್ಯಾಂತರ ಜನರು ಶುದ್ಧ ಕುಡಿಯುವ ನೀರಿನಿಂದ ವಂಚಿತರಾಗಿದ್ದಾರೆ. ಯುನೆಸ್ಕೋ ವರದಿಯ ಪ್ರಕಾರ 2050ರ ವೇಳೆಗೆ ನಮ್ಮ ದೇಶದಲ್ಲಿ ನೀರಿನ ಕೊರತೆ ವಿಪರೀತವಾಗುತ್ತದೆ. ನಮ್ಮ ಬೆಂಗಳೂರಿನಲ್ಲೂ ಎಷ್ಟೋ ಕಡೆ ನೀರಿನ ಸಮಸ್ಯೆ ಇದೆ. ಒಂದು ದಿನಕ್ಕೆ ಪ್ರತಿಯೊಬ್ಬರಿಗೂ 135 ಲೀಟರ್ ನೀರು ಬೇಕು. ಆದರೆ 2031 ಅಷ್ಟರಲ್ಲಿ ಕೇವಲ 88 ಲೀಟರ್‌ಗಳು ಮಾತ್ರ ಸಿಗುತ್ತದೆ. ನಮ್ಮಲ್ಲಿ ಮಳೆ ಚೆನ್ನಾಗಿ ಬಂದರೂ ಮಳೆ ನೀರು ಸಂಗ್ರಹಣೆ ಸರಿಯಗಿ ಮಾಡದ ಕಾರಣ ಬಹಳ ನೀರು ವ್ಯರ್ಥವಾಗುತ್ತಿದೆ.

ಮುಂದಿನ ಪೀಳಿಗೆಯ ಹಿತದೃಷ್ಟಿಯಿಂದ ಜಲಸಂರಕ್ಷಣೆಯ ಯೋಜನೆಗಳನ್ನು ಸರಕಾರ ಕೈಗೆತ್ತಿಕೊಳ್ಳಲೇಬೇಕಾಗಿದೆ. ಎಲ್ಲ ಕಡೆಗಳಲ್ಲಿ ಇಂಗುಗುಂಡಿಗಳನ್ನು ನಿರ್ಮಾಣ ಮಾಡಲು ಮುಂದಾಗಬೇಕು. ಚಾವಣಿಗಳ ನೀರಿನ ಸಂಗ್ರಹ ಕಡ್ಡಾಯ ಎಂಬ ಕಾನೂನಿದ್ದರೂ ಅದನ್ನು ಯಾರೂ ಪಾಲಿಸುತ್ತಿಲ್ಲ. ಇದನ್ನು ರಾಜ್ಯವ್ಯಾಪಿಯಾಗಿ ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು. ಇತ್ತೀಚೆಗೆ ದಕ್ಷಿಣಾ ಅಮೇರಿಕಾದ ಕೇಪ್‌ಟಾನ್ ನೀರಿನ ವಿಷಯದಲ್ಲಿ ಹೆಸರು ಮಾಡಿದೆ. ಅಲ್ಲಿ ನೀರಿನ ಕೊರತೆ ವಿಪರೀತ ಇದ್ದು ಅತಿ ಶೀಘ್ರದಲ್ಲಿ ಡೇ ಜಿರೋ ಜಾರಿಗೆ ಬರಲಿದೆ. ಅವತ್ತಿನ ದಿನ ಸರಕಾರದವರು ಎಲ್ಲ ಕಡೆ ನೀರ್ ಬಂದ್ ಮಾಡುತ್ತಾರೆ. ಚಂಡಿಗಢದ ಸರ್ಕಾರ ನೀರನ್ನು ವ್ಯರ್ಥ ಮಾಡಿದವರಿಗೆ 2000 ರೂಪಾಯಿಗಳವರೆಗೆ ದಂಡವನ್ನು ವಿಧಿಸುತ್ತಿದೆ. ನಮ್ಮ ದೇಶದ ಪವಿತ್ರತೆಯ ಪ್ರತೀಕವಾದ ಗಂಗಾಮಾತೆಯ ಶುದ್ಧೀಕರಣವನ್ನು ಇಂದಿನ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರಮೋದಿಯವರು ಕೈಗೊಂಡಿದ್ದಾರೆ. ಜಲಸಂರಕ್ಷಣೆಯ ಕಾರ್ಯ ಕೇವಲ ಸರಕಾರಕ್ಕೆ ಮಾತ್ರ ಸೀಮಿತವಾಗಿರದೆ ಪ್ರತಿಯೊಬ್ಬರ ಕಾರ್ಯವಾಗಬೇಕಿದೆ.

ಪರಿಸರ ತಜ್ಞ ಅಡಿಕೆ ಪತ್ರಿಕೆಯ ಸಂಪಾದಕರಾಗಿರುವ ಶ್ರೀ ಪಡ್ರೆ ಇವರು ವಿವರಿಸಿದಂತೆ ಮಳೆಕೊಯ್ಲು ಯೋಜನೆಯನ್ನು ಪ್ರತಿಮನೆಯಲ್ಲಿ ಅಳವಡಿಸಿಕೊಳ್ಳಬೇಕಿದೆ. ನೀರಿನ ಮಿತ ಬಳಕೆ ಕಾರ್ಯ ನಡೆಯಬೇಕು. ಜಲಸಂರಕ್ಷಣೆಯ ಮಹತ್ವದ ಬಗ್ಗೆ ಎಲ್ಲರಿಗೂ ಜಾಗೃತಿ ಮೂಡಿಸುವ ಕಾರ್ಯವಾಗಬೇಕು. ಮುಂದಿನ ಜನಾಂಗ ಪಶುಪಕ್ಷಿ ಉಳಿವಿಗಾಗಿ, ಜಲಸಂರಕ್ಷಣೆಗಾಗಿ ಪ್ರತಿಯೊಬ್ಬರು ನಮ್ಮದೇ ಆದ ಕೊಡುಗೆಯನ್ನು ಸಲ್ಲಿಸೋಣ, ಸುಂದರ ಸಮೃದ್ಧ ಬದುಕು ಕಟ್ಟಿಕೊಳ್ಳೋಣ.

ಜಗತ್ತಿನ ಕಟ್ಟಕಡೆಯ ವೃಕ್ಷ ಕ್ಷಯಿಸಿದಾಗ
ಜಗತ್ತಿನ ಕಟ್ಟಕಡೆಯ ನದಿಗೆ ವಿಷಪ್ರಾಶನವಾದಾಗ
ಜಗತ್ತಿನ ಕಟ್ಟಕಡೆಯ ನೀರಿನ ಸೆಲೆ ಬತ್ತಿದಾಗ
ಜಗತ್ತಿನ ಕಟ್ಟಕಡೆಯ ಮೀನು ಬಲೆಗೆ ಬಿದ್ದಾಗಲೇ

ಮಾನವನಿಗೆ ಅರಿವಾಗುವುದು ಇನ್ಮುಂದೆ ಹಣವನ್ನು ತಿಂದು ಜೀವಿಸಲು ಸಾಧ್ಯವಿಲ್ಲ ಎಂದು. ಪ್ರಕೃತಿಯನ್ನು ಅರಿಯೋಣ. ಬೆರೆಯೋಣ, ಬೆಳೆಸೋಣ, ನಮ್ಮ ಉಸಿರನ್ನು ಹಸಿರಿನ ಉಸಿರಾಗಿಸೋಣ, ಇರಲಿ ನಮ್ಮೆಲ್ಲರ ಚಿತ್ತ ಜಲಸಂರಕ್ಷಣೆಯತ್ತ ಎಂದು ಹೇಳುತ್ತಾ ನನ್ನ ಮಾತಿಗೆ ಪೂರ್ಣವಿರಾಮವನ್ನು ನೀಡುತ್ತಿದ್ದೇನೆ.

॥ ಸರ್ವೇ ಜನಾಃ ಸುಖಿನೋ ಭವಂತು ॥

ಜೀವನ

ಅಂಜಲಿ ಸಿ ಎಸ್.
ದ್ವಿತೀಯ ಬಿ.ಕಾಂ.

ಜೀವನ ಎನ್ನುವುದು ಸೈಕಲ್‌ನಂತೆ ಅದನ್ನು ನಾವು ಎಷ್ಟು ಸವೆಸುತ್ತೀವೋ ಅಷ್ಟು ಚೆನ್ನಾಗಿರುತ್ತದೆ. ಬದುಕು ಎನ್ನುವುದು ಎಲ್ಲರಿಗೂ ಸಿಗುವುದಿಲ್ಲ. ಇರುವ ಬದುಕನ್ನು ಒಪ್ಪಿಕೊಂಡು ಚೆನ್ನಾಗಿ ಬಾಳಬೇಕು. ನಾವು ನಮ್ಮ ಜೀವನವನ್ನು ಯಾರಿಗೂ ಅಳತೆ ಮಾಡಿ ನೋಡಬಾರದು ಹಾಗೂ ಹೋಲಿಸಬಾರದು. ನಮ್ಮ ಜೀವನ ನಮ್ಮದೇ. ಅವರ ಜೀವನ ಅವರದೇ. ನಾವು ಹೇಗೇ ಇರಲಿ ಎಷ್ಟು ದೊಡ್ಡ ಮಟ್ಟದಲ್ಲಿರಲಿ, ಚಿಕ್ಕಮಟ್ಟದಲ್ಲಿರಲಿ ನಾವು ಅದರಲ್ಲಿ ಸಂತಸ ಹುಡುಕಿ ಆದಷ್ಟೂ ಒಳ್ಳೆಯ ರೀತಿಯಿಂದ ಬದುಕಿ ಏನಾದರು ಸಾಧಿಸಬೇಕು.

ಹೇಡಿಗಳ ಹಾಗೆ ಅರ್ಧದಲ್ಲಿ ಜೀವನವನ್ನು ಬಿಟ್ಟು ಓಡಿಹೋಗಬಾರದು. ಕಷ್ಟ ಬಂದಾಗ ಕುಗ್ಗದೇ ಸುಖ ಬಂದಾಗ ಹಿಗ್ಗದೇ ಒಂದೇ ರೀತಿಯಲ್ಲಿ ತೆಗೆದುಕೊಂಡು ಚೆನ್ನಾಗಿ ಬಾಳಿ ಏನಾದರೂ ಸಾಧಿಸಬೇಕು. ನಾವು ನಮ್ಮ ಜೀವನವನ್ನು ಯಾವುದೋ ಯಾರದೋ ವಿಷಯಕ್ಕಾಗಿ ಯೋಚಿಸಬಾರದು ಹಾಗೂ ಹಾಳುಮಾಡಿಕೊಳ್ಳಬಾರದು. ನಾವು ಒಬ್ಬರ ಬಗ್ಗೆ ಯೋಚಿಸಿ ಜೀವನವನ್ನು ಹಾಗೊಂದು ವೇಳೆ ಹಾಳುಮಾಡಿಕೊಳ್ಳುವುದಾದರೆ ಆ ನಮ್ಮ ಯೋಚನೆಯ ವ್ಯಕ್ತಿಯು ನಮ್ಮ ಯೋಚನೆಗೆ ಯೋಗ್ಯತೆ ಉಳ್ಳವರಾಗಿರಬೇಕು. ನಾವು ನಮ್ಮ ತಂದೆ ತಾಯಿ ಮತ್ತು ನಮಗಾಗಿ ಬದುಕಬೇಕು ಬೇರೆಯವರಿಗೋಸ್ಕರ ಬದುಕಬಾರದು.

ಬೇರೆಯವರು ನಮಗೆ ಕೆಟ್ಟದ್ದೋ ಮಾಡಿರಲಿ ಒಳ್ಳೆಯದೇ ಮಾಡಿರಲಿ. ನಾವು ಮಾತ್ರ ಅವರಿಗೆ ಒಳ್ಳೆಯದನ್ನೇ ಬಯಸಬೇಕು. ಇಂದಿನ ಯುವಕರು ಜೀವನವನ್ನು ಹಾಳುಮಾಡಿಕೊಂಡು ಹೇಡಿಗಳ ಹಾಗೇ ಓಡಿಹೋಗುತ್ತಿದ್ದಾರೆ. ಜೀವನದಲ್ಲಿ ಬರುವ ಕಷ್ಟಗಳನ್ನು ಎದುರಿಸಲಾಗದೇ ಬದುಕುವ ದಾರಿ ಬಿಟ್ಟು ಸಾವಿನ ದಾರಿಗೆ ಎಡೆಮಾಡಿಕೊಳ್ಳುತ್ತಿದ್ದಾರೆ. ಒಂದು ಕ್ಷುಲ್ಲಕ ಕಾರಣದಿಂದಾಗಿ ಬಂಗಾರದ ಜೀವನವನ್ನು ಬಿಟ್ಟು ಪರ ಲೋಕಕ್ಕೆ ತೆರಳುತ್ತಿದ್ದಾರೆ.

ಉದಾಹರಣೆಗೆ ಒಂದು ಕತೆಯನ್ನು ತಿಳಿಸಲು ಇಚ್ಚಿಸುತ್ತೇನೆ. ಒಂದು ಊರಿನಲ್ಲಿ ತಕ್ಷಕ್ ಎಂಬ ಹುಡುಗನಿದ್ದ. ಆತನಿಗೆ ತಂದೆ ಇರುವುದಿಲ್ಲ. ತಾಯಿಯೊಬ್ಬಳೆ ಬಡತನದಿಂದ ತುಂಬಾ ಕಷ್ಟಪಟ್ಟು ಬೆಳೆಸಿರುತ್ತಾಳೆ. ತಾನು ಒಂದು ಹೊತ್ತು ಊಟ ಬಿಟ್ಟರೂ ತನ್ನ ಮಗನಿಗೆ ಯಾವ ವಿಷಯದಲ್ಲೂ ಏನೂ ಕಡಿಮೆ ಆಗದಂತೆ ನೋಡಿಕೊಂಡಿರುತ್ತಳೆ. ಮಗನೂ ಹಾಗೇ ಒಳ್ಳೆಯ ಹುಡುಗ. ತಾಯಿಯ ಎಲ್ಲಾ ಕಷ್ಟದಲ್ಲೂ ಭಾಗಿಯಾಗಿರುತ್ತಾನೆ. ಓದಿನಲ್ಲಿ ಪ್ರತಿಯೊಂದು ವಿಷಯದಲ್ಲೂ ಮುಂದಿರುತ್ತಾನೆ. ತಾಯಿ ಮಗನಿಗಾಗಿ ಹಗಲು ರಾತ್ರಿ ದುಡಿಯುತ್ತಿರುತ್ತಾಳೆ. ಅವಳಿಗೆ ಮಗನೇ ಪ್ರಾಣ. ಅವಳಿಗೆ ಮಗನನ್ನು ಡಾಕ್ಟರ್ ಮಾಡಬೇಕೆಂಬ ಆಸೆ ಇತ್ತು. ಆತನು ಚೆನ್ನಾಗಿ ಓದಿ ಮೆಡಿಕಲ್ ಸೀಟನ್ನು ಪಡೆದುಕೊಳ್ಳುತ್ತಾನೆ. ಡಾಕ್ಟರ್ ಓದಲು ತುಂಬಾ ಹಣ ಬೇಕಾಗಿರುತ್ತದೆ. ತಕ್ಷಕ್ ಅಮ್ಮಾ ನಾನು ಇಲ್ಲೇ ಓದುವೆ. ನಿನಗೇಕೆ ಕಷ್ಟ ಈ ಡಾಕ್ಟರ್ ಹುದ್ದೆ ನಮ್ಮಂತ ಬಡವರಿಗಲ್ಲಾ ಎನ್ನುತ್ತಾನೆ. ತಾಯಿ ತನಗೆ ಎಷ್ಟೇ ಕಷ್ಟ ಆದರೂ ಪರವಾಗಿಲ್ಲ ನಿನ್ನನ್ನು ಓದಿಸಿಯೇ ಓದಿಸುತ್ತೇನೆ ಎಂದು ಹೇಳಿ ಹಣವನ್ನು ಒದಗಿಸುತ್ತಾಳೆ. ಆತನು ಅಲ್ಲಿ ಹಾಸ್ಟೆಲ್‌ನಲ್ಲಿ ಉಳಿದುಕೊಂಡಿರುತ್ತಾನೆ.

ಆತನ ಬಳಿ ಬೇಸಿಕ್ ಸೆಟ್ ಇರುತ್ತದೆ. ಅದರಲ್ಲಿ ತನ್ನ ತಾಯಿಗೇ ಕರೆಯನ್ನು ಮಾಡುತ್ತಿರುತ್ತಾನೆ. ಕಾಲೇಜ್‌ಗೆ ಸೇರಿದ ಮೊದಲ ವರ್ಷದಲ್ಲೇ ಆತನು ಎಲ್ಲಾ ವಿಷಯದಲ್ಲೂ ಪ್ರಥಮ ಹಾಗೂ ಅಚ್ಚುಮೆಚ್ಚಿನ ಹುಡುಗನಾಗಿರುತ್ತಾನೆ. ತಾಯಿಗೆ ಈ ವಿಷಯ ತಿಳಿದು ಸಂತಸವಾಗುತ್ತದೆ.

ಆತನ ಸ್ನೇಹಿತ ಸಹವಾಸದಿಂದ ಸೈಬರ್‌ಗೆ ಹೋಗಿ ಫೇಸ್‌ಬುಕ್ ಹೀಗೆ ಮುಂತಾದ ಸಾಮಾಜಿಕ ಜಾಲತಾಣಗಳಲ್ಲಿ ಆಕರ್ಷಿತಗೊಳ್ಳುತ್ತಾನೆ. ನಂತರ ಕ್ಲಾಸ್‌ಗೆ ಬಂಕ್ ಹಾಕಿ ಕೆಟ್ಟ ಚಟಗಳಿಗೆ ಗುರಿಯಾಗುತ್ತಾನೆ.ಈ ನಡುವೆ ತಾಯಿಗೆ ಕರೆ ಮಾಡುವುದನ್ನೇ ಕಡೆಗಣಿಸುತ್ತಾನೆ. ತಾಯಿ ಕೇಳಿದರೆ ಅಮ್ಮಾ ನನಗೆ ಮನೆಗೆಲಸಗಳು ಹೆಚ್ಚು ನಿನ್ನ ಬಳಿ ಮಾತನಾಡುವಷ್ಟು

ಸಮಯವಿಲ್ಲ ಎಂದು ಕಠೋರವಾಗಿ ಹೇಳುತ್ತಾನೆ. ಮಗನೊಂದಿಗೆ ಮಾತನಾಡದೇ ಇರುವುದು ಕಷ್ಟವಾದರೂ ಅವನ ಉಜ್ವಲ ಭವಿಷ್ಯಕ್ಕಾಗಿ ಅದನ್ನು ಸಹಿಸುತ್ತಾಳೆ. ನಂತರದಲ್ಲಿ ಅವನು ತಾಯಿಯ ಬಳಿ ಸ್ಮಾರ್ಟ್‌ಫೋನ್ ತೆಗೆಸಿಕೊಡು ಎಂದು ಹಠ ಮಾಡುತ್ತಾನೆ ಮತ್ತು ಅಮ್ಮ ಕಳಿಸುವ ಹಣ ಸಾಕಾಗುವುದಿಲ್ಲ ಇನ್ನೂ ಕಳಿಸು ಎನ್ನುತ್ತಾನೆ. ತಾಯಿ ಕಷ್ಟವಾದರೂ ತನ್ನ ಮಗನಿಗಾಗಿ ಇನ್ನಷ್ಟು ದುಡಿದು ಕಳಿಸಿಕೊಡುತ್ತಾಳೆ. ತನ್ನ ಮಗನ ಏಳಿಗೆಗಾಗಿ ತನ್ನ ದೇಹವನ್ನು ಸವೆಸಿ ಬೆವರು ಸುರಿಸಿ, ಹಗಲು ರಾತ್ರಿ ದುಡಿಯುತ್ತಾಳೆ. ಮಗನಿಗೆ ಇನ್ನಷ್ಟು ಖುಷಿಯಾಗುತ್ತದೆ. ತರಗತಿಯಲ್ಲಿ ಉನ್ನತ ಮಟ್ಟದಲ್ಲಿ ಇದ್ದವನು ಕೆಳಮಟ್ಟಕ್ಕೆ ಬರುತ್ತಾರೆ. ಆತನಿಗೆ ಫೇಸ್‌ಬುಕ್‌ನಲ್ಲಿ ಒಂದು ಹುಡುಗಿಯ ಪರಿಚಯವಾಗುತ್ತದೆ. ಸ್ನೇಹವು ಪ್ರೀತಿಗೆ ತಿರುಗಿ ಅವಳ ಹಿಂದೆಯೇ ಸುತ್ತುತ್ತಿರುತ್ತಾನೆ. ಆಕೆ ಮಾತ್ರ ಇವನನ್ನು ಸ್ನೇಹಿತನಾಗೇ ನೋಡುತ್ತಾಳೆ. ಈತನು ತನ್ನ ತಾಯಿ ಕಳುಹಿಸಿದ ಹಣವನ್ನು ಅವಳಿಗೆ ಹಾಕಿ ಪಾರ್ಕ್, ಪಬ್ಬು ಎಂದೆಲ್ಲಾ ತಿರುಗುತ್ತಾನೆ. ತಾಯಿಯನ್ನು ತಿರಸ್ಕರಿಸುತ್ತಾನೆ. ಒಂದು ದಿನ ತನ್ನ ಪ್ರೇಮನಿವೇದನೆಯನ್ನು ಅವಳ ಮುಂದೆ ಹೇಳಲು ಹೋಗುತ್ತಾನೆ. ನನ್ನನ್ನು ಮದುವೆ ಆಗು ಎನ್ನುತ್ತಾನೆ. ಆಕೆ ನಿನ್ನನ್ನು ಆ ದೃಷ್ಟಿಯಲ್ಲಿ ನೋಡಿಯೇ ಇಲ್ಲ ಎಂದು ತಿರಸ್ಕರಿಸುತ್ತಾಳೆ. ಈತನು ಒಂದು ಮಾತನ್ನೂ ಆಡದೇ ಹಾಸ್ಟೆಲ್‌ಗೆ ಬಂದು ಆತ್ಮಹತ್ಯೆಗೆ ಶರಣಾಗುತ್ತಾನೆ. ತಾಯಿಗೆ ಯಾರೋ ಈ ವಿಷಯವನ್ನು ತಲುಪಿಸಿದಾಗ ಆಕೆಯ ಎದೆ ಒಡೆದು ಹೋಗುತ್ತದೆ. ಮಗನ ಜೊತೆ ತಾಯಿಯೂ ಪ್ರಾಣ ಬಿಡುತ್ತಾಳೆ.

ಆತನಿಗೆ ಸಾಯುವ ಮುನ್ನ ಒಮ್ಮೆಯೂ ತನ್ನ ತಾಯಿ ನೆನಪಾಗಲಿಲ್ಲವೇ? ತನ್ನ ಗುರಿ ನೆನಪಾಗಲಿಲ್ಲವೇ? ತನ್ನ ಗುರಿ ತನ್ನ ತಾಯಿಯ ಡಾಕ್ಟರ್ ಆಗುವ ಆಸೆ, ತನ್ನ ತಾಯಿಯ ಕಷ್ಟ ಯಾವುದೂ ಆತನ ಕಣ್ಣ ಮುಂದೆ ಬರಲಿಲ್ಲವೇ? ಸ್ನೇಹಿತರೇ ಜೀವನ ಎಂದರೆ ಇಷ್ಟೇನಾ? ಇಂದಿನ ಯುವಕರ ಪರಿಸ್ಥಿತಿ ಇದು ಎಲ್ಲದಕ್ಕೂ ಸಾವೂ ಒಂದೇ ಪರಿಹಾರವಲ್ಲ ನಮ್ಮ ಜೀವನದ ಬಳಿ ಆಟ ಆಡಿದವರಿಗೆ ನಾವು ಅವರ ಮುಂದೆ ಬೆಳೆದು ಸಾಧಿಸಿ ತೋರಿಸಬೇಕೇ ಹೊರತು ಹೇಡಿಗಳಾಗಬಾರದು. ನಮ್ಮ ತಂದೆ ತಾಯಿಯರ ಆಸೆಗೆ ಮಸಿ ಬಳಿಯಬಾರದು. ದೇವರು ನಮಗೆ ಎಲ್ಲವನ್ನು ಕೊಟ್ಟಿರುವಾಗ ಅದನ್ನ ಸರಿಯಾದ ರೂಪದಲ್ಲಿ ಬಳಸಿಕೊಳ್ಳಬೇಕು.

ಗುಪ್ತನಿಧಿ

ಬಹುಮಾನಿತ ಚಿತ್ರಕಥೆ

ನಾಗರತ್ನ
ದ್ವಿತೀಯ ಬಿಎಸ್ಸಿ.

ಅದೊಂದು ಕೋಟೆ 'ಅರಸನ ಕೋಟೆ' ಎಂಬುವುದು ಅದರ ಹೆಸರು. ಅದರ ದೊರೆ ಕುಶಾನ ಕುಲದವನಾದ ಕಮಲನಾಥ. ಆತನ ಮಗ 28 ವರ್ಷದ ವಿಶ್ವನಾಥ. ಕಮಲನಾಥನು ಸಾವನ್ನಪ್ಪಿದ ನಂತರ ವಿಶ್ವನಾಥನು ಸಿಂಹಾಸನವನ್ನೇರಿದ್ದಾನೆ.

ಅದೊಂದು ರಾತ್ರಿ ಚಂದ್ರನು ಮೋಡಗಳೊಂದಿಗೆ ಕಣ್ಣಾಮುಚ್ಚಾಲೆಯಾಡುತ್ತಿದ್ದ ಸಮಯ, ತಂಪಾದ ಗಾಳಿಯು ನಾ ಮುಂದು ತಾ ಮುಂದು ಎಂದು ಬೀಸುತ್ತಿತ್ತು. ಆ ನಡುರಾತ್ರಿಯಲ್ಲಿ ಒಬ್ಬ ಅಪರಿಚಿತ ಅಸಾಮಿ ಕೈಯಲ್ಲಿ ಒಂದು ಕೋಲನ್ನು ಹಿಡಿದುಕೊಂಡು ಲ್ಯಾಟಲಿನ ಬೆಳಕಿನಿಂದ ಮೆಲ್ಲನೆ ಹೆಜ್ಜೆ ಹಾಕುತ್ತಾ ಸಾಗುತ್ತಿದ್ದಾನೆ. ಅದೆಷ್ಟೋ ದಿನಗಳಿಂದ ಆತನ ದೇಹವು ನೀರಿನ ಸ್ಪರ್ಶ ಮಾಡಿರಲಿಕ್ಕಿಲ್ಲ. ಆತನ ಬಳಲಿದ ದೇಹ ಹಾಗೂ ಗೂನಾದ ಬೆನ್ನು ಆತನು ಹಲವಾರು ಮಳೆಗಾಲಗಳನ್ನು ಕಂಡಿದ್ದಾನೆ ಎನ್ನುವುದನ್ನು ಸೂಚಿಸುತ್ತದೆ. ಆದರೆ ಅದೇನನ್ನೋ ಸಾಧಿಸಿದ ಖುಷಿ. ಕಿಚ್ಚು ಆತನ ಕಣ್ಣುಗಳಲ್ಲಿ ಕಾಣುತ್ತಿತ್ತು. ಅದೇ ಸಮಯದಲ್ಲಿ

ಹನುಮಂತಪ್ಪ ಆ ಅಪರಿಚಿತ ವ್ಯಕ್ತಿಯಲ್ಲಿ ಹ್ವಾಯ್ ಯಜಮಾನ್ರೇ ಈ ಮೈನಡಗುವ ಚಳಿಯಂಗೆ ಕಂಬಳಿ ಹೊತ್ಕಂಡ್, ಗೂನ್ ಬೆನ್ನ್ ಮಾಡ್ಕಂಡ್ ಆ ಹರ್ಕಟ್ ಚೀಲ ಹೊತ್ಕಂಡ್ ಎತ್ತ್ ಬದಿ ಹೋತ್ರಿ?" ಎಂದು ಕೇಳಿದನು. ಆಗ ಆ ಆಸಾಮಿಯು "ಐದು ಮರ ನಡುವೆ ಕಮಲ ಮಾವುರುಚಿ ಗುಪ್ತನಿಧಿ" ಎಂದು ಹೇಳಿದರು. ಆ ಅಪರಿಚಿತ ವ್ಯಕ್ತಿಯ ಮಾತು ಹನುಮಂತಪ್ಪನಿಗೆ ವಿಚಿತ್ರವಾಗಿ ಕೇಳಿದರೂ ಅದಕ್ಕೆ ತಲೆ ಕೆಡಿಸಿಕೊಳ್ಳದೇ ಮನೆಗೆ ಹೋದನು.

ಮಾರನೇ ದಿನ ಅರಸನಕೋಟೆಯಿಂದ ಕೇಳ್ರಪ್ಪೋ ಕೇಳಿ ತಮ್ಮ ತಮ್ಮ ಮನೆಗಳಲ್ಲಿ ಯಾವುದೇ ರೀತಿಯ ಹಳೆಕಾಲದ ನಕ್ಷೆಯಿದ್ದಲ್ಲಿ ಅದನ್ನು ರಾಜರಿಗೆ ಒಪ್ಪಿಸಬೇಕಾಗಿ ರಾಜಾಜ್ಞೆಯಾಗಿದೆ ಎಂಬ ಡಂಗುರದ ಸುದ್ದಿ ಕೇಳಿಬಂತು. ಅದಕ್ಕೇ ಹನುಮಂತಪ್ಪನು ಡಂಗುರ ಸರುವವನ ಬಳಿಹೋಗಿ ಹ್ವಾಯ್ ನಕ್ಷೆ, ನಕ್ಷೆ ಅಂದ್ಹೇಳಿ ಬೊಬ್ಬಿ ಹೊಡಿತ್ತಿದ್ರಿ ಅಲೇ ಅದ್ ಎಂಥಾ ನಕ್ಷೆ ಮರ್ರೆ, ರಾಜರಿಗೆ ಗೊತ್ತಿಲ್ದೇ ಇಪ್ಪು ನಕ್ಷಿಯಾ? ಇಲ್ ಕಾಣಿ ನನ್ ಹತ್ರ ನಕ್ಷಿ ಇಲ್ಲ ಒಂದ್ ಚಣ್ಣ್ ಹುಂಜ. ಅದ್ ನಕ್ಷಿ ಅಲ್ಲಾ, ಪಕ್ಷಿ ಬೇಕಾರೆ ತೆಕ್ಕಂಡ್ ಹೋಯ್ನಿ ಅಂದ.

ಹೇಗೆ ದಿನಗಳು ಕಳೆದವು ಆದರೆ ಪ್ರತಿದಿನವು ಹನುಮಂತಪ್ಪನು ಕೆಲಸದಿಂದ ಹಿಂತಿರುಗುವಾಗ ಆ ಅಪರಿಚಿತ ವ್ಯಕ್ತಿಯನ್ನು ಎಲ್ಲಿಂದಲೋ ಬರುವುದನ್ನು ಕಾಣುತ್ತಿದ್ದ. ಮತ್ತೆ ಅದೇ ಪ್ರಶ್ನೆಗಳನ್ನು ಕೇಳುತ್ತಿದ್ದ. ಆ ವ್ಯಕ್ತಿಯ ಹಾಡದನ್ನೇ ಹಾಡು ಕಿಸ್ ಬಾಯಿದಾಸ ಎಂಬಂತೆ ಅದೇ ಉತ್ತರ ನೀಡುತ್ತಿದ್ದ.

ಹೀಗೆ ಒಂದು ದಿನ ರಾತ್ರಿ ಆ ಅಪರಿಚಿತ ವ್ಯಕ್ತಿಯು ಊರಿನ ಜನರ ಕೈಗೆ ಸಿಕ್ಕಿಬಿದ್ದ. ಅವರೆಲ್ಲರೂ ಆತನನ್ನು ಕಳ್ಳ, ದರೋಡೆ ಮಾಡಲು ಬಂದಿದ್ದಾರೆಂದು ಭಾವಿಸಿ ಹೊಡೆಯಲು ಮುಂದಾದರು. ಆಗ ಅದನ್ನು ಕಂಡ ಹನುಮಂತಪ್ಪನು ಹ್ವಾಯ್ ಅವ್ನಿಗೆ ಹೊಡಿಬೇಡಿ. ಅವ್ನಿಗೆ ಮಂಡಿ ಸಮಾ ಇಲ್ಲ. ನಂತರ ಊರಿನ ಜನರು ಆತನನ್ನು ಪರೀಕ್ಷೆ ಮಾಡಲು ಹಾಗೂ ಆತನಿಗೆ ಒಂದು ದಾರಿ ತೋರಿಸಲು ರಾಜಸಭೆಗೆ ಕರೆದುಕೊಂಡು ಹೋದರು. ಆತನನ್ನು ಕಂಡು ಇದೇ ರಾಜಸಭೆಯೇ ನಿಬ್ಬೆರಗಾಗಿತ್ತು.

ಸಿಂಹಾಸನವೇರಿದ್ದ ರಾಜನಿಗೆ ಜೀವಭಯಕಾಡಲು ಪ್ರಾರಂಭವಾಗಿತ್ತು. ರಾಜಸಭೆಯಲ್ಲಿಯೂ ಆತ "ಐದು ಮರ ನಡುವೆ ಕಮಲ ಮಾವುರುಚಿ ಗುಪ್ತನಿಧಿ" ಎಂದು ಜೋರಾಗಿ ಕೂಗ್ ಹೇಳಿದನು. ಆತನ ಪೂರ್ವಾಪರಗಳನ್ನು ವಿಮರ್ಶಿಸಿದ ನಂತರ ತಿಳಿದು ಬಂದ ವಿಷಯವೇನೆಂದರೆ ಆ ಅಪರಿಚಿತ ವ್ಯಕ್ತಿ ಕುಶಾನ ಕುಲದ ಕಮಲನಾಥನನ್ನು ಕೊಂದ ವ್ಯಕ್ತಿ ಕಟ್ಟಪ್ಪ. ಕಟ್ಟಪ್ಪನು ದೊಡ್ಡ ದರೋಡೆಕೋರನಾಗಿದ್ದು ಆತನು ಹಣದ ಹಾಗೂ ರಾಜ್ಯದ ಆಸೆಗಾಗಿ ರಾಜ ಕಮಲನಾಥನನ್ನು ಸಾಯಿಸಿದ್ದನು. ನಂತರ ಆ ರಾಜ್ಯದಲ್ಲಿರುವ ಸಂಪತ್ತನ್ನು ಲೂಟಿ ಮಾಡಿ ಒಂದೆಡೆ ಗುಪ್ತವಾಗಿ ಸಂಗ್ರಹಿಸಿದ್ದನು. ಈ ವಿಚಾರವು ರಾಜ ವಿಶ್ವನಾಥನಿಗೆ ತಿಳಿದು ಆ ಗುಪ್ತನಿಧಿಯ ನಕ್ಷೆಯನ್ನು ಹುಡುಕುತ್ತಿದ್ದನು. ಇದೆಲ್ಲವೂ ಪ್ರಜೆಗಳಿಗೆ ತಿಳಿಯಬಾರದೆಂದು ವಿಶ್ವನಾಥನು ಕಟ್ಟಪ್ಪನನ್ನು ರಾಜಸಭೆಯಲ್ಲಿ ಕೊಂದುಬಿಟ್ಟನು.

ಹಲವಾರು ದಿನಗಳಿಂದ ಹನುಮಂತಪ್ಪನಿಗೆ ತಲೆಯೊಳಗೆ ಹುಳಬಿಟ್ಟ ಅನುಭವ. ಆತನ ಮಾತು ಕಿವಿಯೊಳಗೆ ಗುಯ್ ಗುಟ್ಟು ತೊಡಗಿತು. ಆ ಅಪರಿಚಿತ ವ್ಯಕ್ತಿಯ ಬಗ್ಗೆ ತಿಳಿಯುವ ಕುತೂಹಲ ಇವನಿಗೆ ಜಾಸ್ತಿಯಾಗತೊಡಗಿತು. ನಂತರ ಹನುಮಂತಪ್ಪನು ನಿಧಾನವಾಗಿ ಆ ಒಗಟ್ಟನ್ನು ಬಿಡಿಸಲು ಮುಂದಾದಾಗ 5 ಮಾವಿನ ಮರಗಳ ಮಧ್ಯೆ ಕಮಲದ ಗಿಡ ಎಂಬ ಊಹೆ ಬಂತು. ಅದರಂತೆ ಹನುಮಂತಪ್ಪನು ಆ ಅಪರಿಚಿತ ವ್ಯಕ್ತಿಯು ಸಿಗುತ್ತಿದ್ದ ಜಾಗಕ್ಕೆ ಹೋಗಿ ನೋಡಿದಾಗ 5 ಮಾವಿನಮರಗಳ ಮಧ್ಯದಲ್ಲಿದ್ದ ಬ್ರಹ್ಮಕಮಲ ಗಿಡವು ಸಿಕ್ಕಿತು. ಅದರ ಅಡಿಯಲ್ಲಿ ಹುಡುಕಿದಾಗ ರಾಜ ಕಮಲನಾಥನ ಕಾಲದ ಗುಪ್ತನಿಧಿ ದೊರಕಿತು. "ಐದು ಮರ ನಡುವೆ ಕಮಲ ಮಾವುರುಚಿ ಗುಪ್ತನಿಧಿ" ಎಂದರೆ 5 ಮಾವಿನ ಮರದ ಮಧ್ಯೆ ಕಮಲನಾಥನ ನಿಧಿಯ ಮೇಲೆ ಬ್ರಹ್ಮಕಮಲದ ಗಿಡವು ಉತ್ಪತ್ತಿಯಾಗಿದೆ ಎಂಬುದು. ಆ ನಿಧಿ ಸಿಕ್ಕ ಮೇಲೆ ಹನುಮಂತಪ್ಪನ ಮನಸ್ಸು ನಿಧಿಯ ಆಸೆಗೆ ಒಳಗಾಗದೆ ಪ್ರಾಮಾಣಿಕವಾಗಿ ಅದನ್ನು ರಾಜನಿಗೆ ಹಿಂತಿರುಗಿಸಿದನು.

ಜೀವನಾನುಭವ

ಅನುಷಾ ಜಿ.ಎನ್.
ದ್ವಿತೀಯ ಬಿ.ಕಾಂ.

ಜೀವನ ಅಂದ್ರೆ ಹೋರಾಟ ಅಂತಾರೆ. ಜೀವನ ಒಬ್ಬೊಬ್ರಿಗೆ ಒಂದೊಂದು ದೃಷ್ಟಿ ಇರುತ್ತದೆ. ಏಕಲವ್ಯನಿಗೆ ಜೀವನವೇ ಗುರು ಆಗಿತ್ತು. ಯುದಿಷ್ಠಿರನಿಗೆ ಧರ್ಮವೇ ಜೀವನ ಆಗಿತ್ತು. ಧುರ್ಯೋದನನಿಗೆ ಛಲವೇ ಜೀವನ ಆಗಿತ್ತು. ನಮ್ಮ ಜೀವನದಲ್ಲಿ ಅನುಭವವೂ ಮುಖ್ಯ ಆಗಿರುತ್ತದೆ. ಜೀವನದಲ್ಲಿ ಅನುಭವವಿಲ್ಲ ಅಂದ್ರೆ ನಾವು ಏನನ್ನೂ ಸಾಧಿಸಲು ಆಗುವುದಿಲ್ಲ. ನಾವು ಓದಿಕೊಂಡು ರ್‍ಯಾಂಕ್ ತೆಗೆದುಕೊಂಡು ಜೀವನ ನಡೆಸುತ್ತೀವಿ ಅಂದ್ರೆ ಸಾಧ್ಯವೇ ಇಲ್ಲ. ಜೀವನದ ಅನುಭವ ಮುಖ್ಯ. ಅದರಿಂದಲೇ ನಾವು ನಮ್ಮ ಜೀವನ ಹೇಗೆ ಸಾಧಿಸೋದು ಅಂತ ತಿಳಿಯುವುದು. ಹಾಗೇ ನಾನು ನನ್ನ ಜೀವನ ಹಾಗೇ ಅದರ ಬಗ್ಗೆ ಸ್ವಲ್ಪ ಹಂಚಿಕೊಳ್ಳೋಕೆ ಇಷ್ಟ ಪಡ್ತೀನಿ.

ನನ್ನ ಬಾಲ್ಯ ಜೀವನ

ನನ್ನ ಮನೆ ಮಲೆನಾಡಿನ ಕೊಡಚಾದ್ರಿ ಬೆಟ್ಟದ ಹತ್ತಿರ ಇರುವ ಒಂದು ಪುಟ್ಟ ಹಳ್ಳಿ. ಸುತ್ತಲೂ ಹಸಿರು ತುಂಬಿರುವ, ಗುಡ್ಡ, ಬೆಟ್ಟಗಳು, ತೋಟ, ತಂಪಾದ ಗಾಳಿ, ಶುದ್ಧವಾದ ಹೊಳೆ, ನದಿಗಳು ಅಲ್ಲಿಯೇ ನನ್ನ ಪುಟ್ಟ ಮನೆ. ಆ ಹಸಿರು ಪರಿಸರದಲ್ಲೇ ನಾನು ಬೆಳೆದದ್ದು. ನಾನು ಮನೆಯಲ್ಲಿ ಇರುವುದಕ್ಕಿಂತ ಜಾಸ್ತಿ ಸಮಯ ತೋಟ, ಗುಡ್ಡ, ಬೆಟ್ಟದಲ್ಲಿ ತಿರುಗಾಡುತ್ತಿದ್ದೆ. ಮನೆಯಲ್ಲಿ ದನ ಕರುಗಳಿದ್ದವು. ನಾನು ಆ ಪುಟ್ಟ ಕರುಗಳ ಜೊತೆ ಆಡುತ್ತಿದ್ದೆ. ದನಗಳನ್ನು ಮೇಯಲು ಗುಡ್ಡಕ್ಕೆ ಕಳುಹಿಸಿದಾಗ ನಾನು ಅವುಗಳ ಹಿಂದೆ ಅಟ್ಟಿಸಿಕೊಂಡು ಓಡುತ್ತಿದ್ದೆ. ಮನೆಯಲ್ಲಿ ಎಲ್ಲರಿಗೂ ತುಂಬಾ ಕಾಟ ಕೊಡುತ್ತಿದ್ದೆ. ಅದರಲ್ಲೂ ಚಳಿಗಾಲದಲ್ಲಿ ಅಡಿಕೆ ಕೊಯ್ಲು. ನಮಗೆ ಅಡಿಕೆ ಕೊಯ್ಲು ಎಂದರೆ ಖುಷಿ. ಅಲ್ಲಿ ಅಂಗಳದ ತುಂಬೆಲ್ಲಾ ಅಡಿಕೆ ರಾಶಿಗಳು, ಹಾಗೆ ಊರಿನವರು ಅಡಿಕೆ ಸುಲಿಯಲು ಮನೆಗೆ ಬರುತ್ತಿದ್ದರು. ನಾನು ನನ್ನ ತಮ್ಮ ಅಡಿಕೆಯಲ್ಲಿ ಆಟ ಆಡುತ್ತಾ ಇರುತ್ತಿದ್ದೆವು. ಅಡಿಕೆಯನ್ನು ಬೇಯಿಸಲು ಒಲೆಗೆ ಬೆಂಕಿ ಹಾಕಿದರೆ ನಾವು ಅಲ್ಲೇ ಕುಳಿತುಕೊಂಡು ಚಳಿಕಾಯಿಸುತ್ತಿದ್ವಿ. ದಿನ ಸಾಯಂಕಾಲ ಆದ ತಕ್ಷಣ ಅಜ್ಜ ಬಾಯಿಪಾಠ ಹೇಳಿಕೊಡುತ್ತಿದ್ದರು. ದಿನ ಸಾಯಂಕಾಲ ಅಜ್ಜನ ಹತ್ತಿರ ಕೂತುಕೊಂಡು ಬಾಯಿಪಾಠ ಹೇಳುತ್ತಾ ಇದ್ವಿ. ಹಾಗೆ ಸ್ಲೇಟ್ ಮೇಲೆ ಮಗ್ಗಿ, ಅಕ್ಷರ ಬರೆಸಿ ಹೇಳಿಕೊಡುತ್ತಿದ್ದರು. ಅಮ್ಮ ಪ್ರತಿದಿನ ರುಚಿ, ರುಚಿಯಾಗಿ ಬಿಸಿ ಬಿಸಿಯಾಗಿ ಅಡಿಗೆ ಮಾಡುತ್ತಿದ್ದರು. ತಿನ್ನುತ್ತಾ ಆಡುತ್ತಾ ಇರುತ್ತಿದ್ವಿ. ಹಾಗೆಯೇ ಶಾಲೆಗೆ ಸೇರುವ ಸಮಯ ಹತ್ತಿರ ಬಂತು. ಹಾಗೆ ದಿನ ರಾತ್ರಿ ಅಜ್ಜನ ಕಥೆ ಕೇಳಿ ಮಲಗುವ ಅಭ್ಯಾಸ. ದಿನ ಕಥೆ ಹೇಳಿದ್ರೆ ಮಾತ್ರ ಮಲಗುತ್ತಿದ್ದೆ.

ನನ್ನ ಶಾಲಾ ಜೀವನ

ನನ್ನ ಜೀವನದ ಹೊಸ ಅಧ್ಯಾಯ ಅಂತಾನೆ ಹೇಳಬಹುದು. ಆರಾಮಾಗಿ ಮನೆಯಲ್ಲಿ ಓಡಾಡಿಕೊಂಡು ಇದ್ದವಳು ಒಂದು ದಿನ ಶಾಲೆಗೆ ಸೇರಿದೆ. ಮೊದಲನೆ ದಿನ ಹೊಸ ಅನುಭವ. ಮೊದಲನೆ ದಿನ ಅಳ್ತಾ ಶಾಲೆಗೆ ಹೋದೆ. ಅಪ್ಪ ಅಮ್ಮನ ಬಿಟ್ಟು ಒಂದು ದಿನ ಇರಬೇಕು ಅಂದ್ರು ಜೋರಾಗಿ ಅಳು ಬಂತು. ನಾನು ಓದಿದ ಸರ್ಕಾರಿ ಶಾಲೆಯಲ್ಲಿ ಇಬ್ಬರು ಮೇಷ್ಟ್ರು ಇದ್ರು. ಒಬ್ಬರು ತುಂಬಾ ಜೋರು ಆಗಿದ್ರು. ಅವರು ಬೇರೆಯವರಿಗೆ ಹೊಡಿಯೋದು ನೋಡಿ ನಾನು ಅಳುತ್ತಿದ್ದೆ. ಹಾಗೆ ನಮ್ಮನೆ ಹತ್ತಿರ ಆರು ಜನ ಬರುತ್ತಿದ್ರು ಅದೇ ಶಾಲೆಗೆ ಹೋಗುವವರು ಅವರು ಜೊತೆ ಹೋಗೋಕ್ಕೆ ಪ್ರಾರಂಭ ಮಾಡ್ದೆ. ಅವರು ಜೊತೆ ಸೇರಿ ಗುಡ್ಡ, ಬೆಟ್ಟ ಎಲ್ಲಾ ತಿರುಗಿ ಮನೆಗೆ ಬರುವಷ್ಟರಲ್ಲಿ ಸಂಜೆ ಆಗೋದು. ಹಾಗೇ ಮೈಯೆಲ್ಲಾ ಗಾಯ ಮಾಡಿಕೊಂಡು ಬರ್ತಿದ್ದೆ. ಅಮ್ಮ ಚೂರು ಬೈತಿರಲಿಲ್ಲ.

ಖುಷಿ ಖುಷಿಯಾಗೆ ಇರುತ್ತಿದ್ರು, ಶಾಲೆಯಲ್ಲಿ ಮಾಸ್ತರರಿಗೆ ನಾನು ಅಂದ್ರೆ ತುಂಬಾ ಇಷ್ಟ. ಅವರು ನನ್ನನ್ನು ಎಲ್ಲಾ ಸ್ಪರ್ಧೆ, ಪ್ರತಿಭಾ ಕಾರಂಜಿ, ಮಕ್ಕಳ ಮೇಳಕ್ಕೆ ಕರೆದುಕೊಂಡು ಹೋಗ್ತಿದ್ರು. ಒಂದಿನ ಶಾಲೆ ಕಾರ್ಯಕ್ರಮ ಮುಗಿಸಿ ಬರೋ ಹೊತ್ತಿಗೆ ರಾತ್ರಿ 12 ಆಗಿತ್ತು. ನಂಗೆ ಜೋರು ನಿದ್ರೆ ಬಂದಿತ್ತು. ನಮ್ಮನೆ ಹಳ್ಳಿ ಅದ್ರಿಂದ ವಾಹನನು ಅಷ್ಟು ಇರಲಿಲ್ಲ. ಆಗ ಅಪ್ಪ ಭುಜದ ಮೇಲೆ ಕೂರಿಸುಕೊಂಡ್ರು ನಡೆದುಕೊಂಡು ಬಂದಿದ್ರು. ಆ ಶಾಲೆಗೆ ನನಗೆ ಇದ್ದ ಸಂಬಂಧ ಮುಗಿಯುವ ಸಮಯ ಬಂತು. ನಮ್ಮ ಮನೆ ಹತ್ತಿರ ಶಾಲೆ ಇಲ್ಲದೆ ಇರುವುದರಿಂದ ಸಾಗರದ ಚಿಕ್ಕಮ್ಮನ ಮನೆಯಲ್ಲಿ ಇರುವ ಪರಿಸ್ಥಿತಿ ಬಂತು. ಅಲ್ಲಿನ ಅನುಭವವೇ ಬೇರೆ ರೀತಿಯದ್ದು. ಅಲ್ಲಿ ಅಣ್ಣನ ಜೊತೆ ಶಾಲೆಗೆ ಹೋಗುತ್ತಿದ್ದೆ. ಅಣ್ಣನ ಜೊತೆ ಆಟ ಆಡಿಕೊಂಡು, ಜಗಳ ಮಾಡಿಕೊಂಡು ಇದ್ದೆ. ಹಾಗೆ ಅಣ್ಣ ಸೈಕಲ್ ಓಡಿಸೋದು ಹೇಳಿಕೊಟ್ಟ. ಕಲಿಯುವಾಗ ಚರಂಡಿ, ರೋಡು, ಪೊದೆಯೊಳಗೆಲ್ಲಾ ಬಿದ್ದೆ. ಅಣ್ಣನಿಗೆ ಗೊತ್ತಾದ್ರೆ ಬೈತಾನೆ ಎಂದು ಸೈಕಲ್ ಮತ್ತೆ ಸರಿಮಾಡಿ ಇಡ್ತಿದ್ದೆ. ಚಿಕ್ಕಮ್ಮ ತುಂಬಾ ಬೈತಿದ್ರು. ಆದ್ರೂ ತುಂಬಾ ಪ್ರೋತ್ಸಾಹ ಕೊಡುತ್ತಿದ್ರು. ಪ್ರಜ್ಞಾಭಾರತಿ ಶಾಲೆ ನನಗೆ ಹೊಸ ಜೀವನನೇ ಕೊಡ್ತು ಅನ್ನಬಹುದು. ಅಲ್ಲಿನ ಶಿಕ್ಷಕರಿಗೆ ನನ್ನ ಮೇಲೆ ತುಂಬಾ ನಂಬಿಕೆ. ನಾನು ಎಲ್ಲೇ ಹೋದ್ರು ಏನಾದ್ರು ಗೆದ್ದುಕೊಂಡು ಬರ್ತೀನಿ ಅಂತ. ಅಲ್ಲಿ ಪ್ರತಿ ಶನಿವಾರ ಭಗವದ್ಗೀತೆ ಹೇಳಿ ಕೊಡ್ತಿದ್ರು. ರಾಮಾಯಣ, ಮಹಾಭಾರತ ಕಥೆ ಹೇಳುತ್ತಾ ಇದ್ರು. ಹಾಗೇ ಮೂರು ವರ್ಷ ಭಗವದ್ಗೀತೆಯಲ್ಲಿ ಪ್ರಥಮ ಬಹುಮಾನ ಬಂತು. ಹಾಗೆಯೇ ನನಗೆ ಸಂಸ್ಕೃತ ಇಷ್ಟ ಇರಲಿಲ್ಲ. ಆದ್ರೂ ಎರಡುದಿನ ತರಗತಿಯಲ್ಲಿ ಕುಳಿತುಕೋ, ಇಷ್ಟ ಇಲ್ಲ ಅಂದ್ರೆ ಬೇಡ ಅಂದ್ರು. ಎರಡು ದಿನ ಕೂತೆ ಇಷ್ಟ ಆಯ್ತು ತರಗತಿ ಮುಂದುವರೆಸಿದೆ. ಪ್ರಥಮ ಅಂಕ ಪರೀಕ್ಷೆ ಬರಸಿದ್ರು. ಬರದೆ. ಅದರಲ್ಲೂ ಪ್ರಥಮ ಒಳ್ಳೆ ಫಲಿತಾಂಶ ಬಂತು. ಹಾಗೆ ರಾಜ್ಯಮಟ್ಟದ ಕನ್ನಡ ಪ್ರತಿಭಾ ಪರೀಕ್ಷೆ ಬಂತು. ಅಲ್ಲಿನ ಮೇಷ್ಟ್ರು ಅವರೆ ದುಡ್ಡುಕಟ್ಟಿ ಪರೀಕ್ಷೆ ಬರೆಸಿದ್ರು. ಅದರಲ್ಲಿ ರಾಜ್ಯಕ್ಕೆ 2ನೇ ರ್‍ಯಾಂಕ್ ಬಂತು. ಅದನ್ನು ನೋಡಿ ಎಲ್ಲಾ ಶಿಕ್ಷಕರಿಗೂ ಹಾಗೂ ಅಪ್ಪ, ಅಮ್ಮನಿಗೂ ತುಂಬಾ ಖುಷಿಯಾಗಿತ್ತು. ಹಾಗೆ ಪೋಷಕರ ಸಭೆಯಿತ್ತು. ಅಲ್ಲಿ ನನ್ನನ್ನು ಎಲ್ಲರೆದುರು ನಿಲ್ಲಿಸಿ ಇವಳು ಬೇರೆ ಕಡೆಯಿಂದ ಬಂದು ಎಷ್ಟು ಸಾಧನೆ ಮಾಡಿದಾಳೆ ಅಂತ ಹೊಗಳಿದ್ರು. ಅಪ್ಪ ಅಮ್ಮನಿಗೆ ಅವತ್ತು ತುಂಬಾ ಖುಷಿಯಗಿತ್ತು. ಮುಂದೆ ಆ ಶಾಲೆ ಸಂಬಂಧವು ಮುಗಿಯಿತು. ನಾನು ಮತ್ತೆ ನಮ್ಮ ಊರಾದ ಹೊಸನಗರಕ್ಕೆ ಬಂದೆ. ಅಲ್ಲಿ ಹೋಲಿ ರಿಡೀಮರ್ ಪ್ರೌಢಶಾಲೆಗೆ ಸೇರಿದೆ. ಅಲ್ಲಿನು ಹಾಗೆ, ಎಲ್ಲಾ ಶಿಕ್ಷಕರು ತುಂಬಾ ಪ್ರೋತ್ಸಾಹ ಕೊಡುತ್ತಿದ್ರು. ನಿನ್ನಿಂದ ಆಗತ್ತೆ ಮಾಡು ಅಂತ ಹೇಳ್ತಿದ್ರು. ಹಾಗೇ ನಾನು ಕಾಲೇಜು ಅಲ್ಲೆ ಅದೇ ಶಾಲೆಯಲ್ಲೇ ಓದಿದ್ದು. ಎಲ್ಲರೂ ಹೇಳುತ್ತಿದ್ರು. ಕಾಲೇಜಿನಲ್ಲಿ ಯಾರು ನಮ್ಮನ್ನು ಕೇಳಲ್ಲ. ಯಾರು ಪಾಠ ಸರಿಮಾಡಲ್ಲ. ನಾವೇ ಓದಿಕೊಳ್ಳಬೇಕು ಅಂತ ಹೇಳ್ತಿದ್ರು. ಆದ್ರೆ ನನ್ನ ಕಾಲೇಜಿನಲ್ಲಿ ಹಾಗೇ ಆಗಿಲ್ಲ. ತುಂಬಾ ಚೆನ್ನಾಗಿ ಪಾಠ ಮಾಡ್ತಿದ್ರು. ಒಬ್ಬೊರ ಬಗ್ಗೆನು ಕೇರ್ ತಗೊಳುತ್ತಾ ಇದ್ರು. ಎಲ್ಲಾ ಪ್ರಬಂಧ ಸ್ಪರ್ಧೆ ಸೇರುತ್ತಿದ್ದೆ. ಬಹುಮಾನನು ಬಂದಿದೆ. ಹಾಗೆ ಆ ಐದು ವರ್ಷ ಹೋಲಿ ರಿಡೀಮರ್‌ನಲ್ಲಿ ಕಳೆದದ್ದೆ ಗೊತ್ತಾಗಲಿಲ್ಲ. ನಮ್ಮ ಮನೆ ತರನೆ ಆಗೋಗಿತ್ತು. ಎಲ್ಲರೂ ಮನೆಯವರ ತರನೆ ಆಗಿದ್ರು. ಹಾಗೆ ನಾನು ಐದು ವರ್ಷ ಪಿ.ಜಿ.ಯಲ್ಲಿ ಇದ್ದು ಓದಿದ್ದು ಅಲ್ಲಿನೂ ಹಾಗೇ ಯಾರೇ ಕೇಳಿದ್ರು ಸ್ವಂತ ಮಗಳು ಅನ್ನುತಿದ್ರು. ಅಷ್ಟು ಚಂದ ನೋಡಿಕೊಂಡ್ರು. ಅಲ್ಲಿನ ಅಣ್ಣನು ತುಂಬಾ ಪ್ರೋತ್ಸಾಹ ಕೊಡುತ್ತಿದ್ದ. ಏನೇ ಬೇಕು ಅಂದ್ರು ಮಾಡಿಕೊಡುತ್ತಿದ್ದ. ಹಾಗೆ ಪಿ.ಜಿ.ಯಲ್ಲಿ ಕೆಲವರನ್ನು ತುಂಬಾ ನಂಬಿದ್ದೆ. ಅವರು ಬೆನ್ನ ಹಿಂದೆ ತುಂಬಾ ಮೋಸ ಮಾಡಿದ್ರು. ಅದರಿಂದ ಒಂದು ಹೊಸ ಪಾಠ ಕಲಿತುಕೊಂಡೆ. ಯಾರನ್ನೂ ಸಹ

ತುಂಬಾ ನಂಬಬಾರದು ಅಂತ. ನನಗೆ ಕಷ್ಟ ಅನ್ನೋದೆ ಗೊತ್ತಿರಲಿಲ್ಲ. ಯಾವಾಗ ಮನೆಬಿಟ್ಟು ಹೊರಗಡೆ ಬಂದೆ ಆವಾಗ ಗೊತ್ತಾಗಿದ್ದು ಕಷ್ಟ ಏನೆಂದು. ಪಿ.ಯು.ಸಿ. ಮುಗಿದ ಮೇಲೆ ಏನುಮಾಡುದು ಅಂತ ಗೊತ್ತಾಗಿರಲಿಲ್ಲ. ಪಿ.ಯು.ಸಿ. ಸರ್ ಬಂದು ಅಪ್ಪನ ಹತ್ತಿರ ಅವಳನ್ನು ಉಡುಪಿಗೆ ಓದಲು ಕಳುಹಿಸಿ ಅಂದ್ರು. ಅದನ್ನು ಮನೇಲಿ ಕೇಳಿ ಅಪ್ಪನಿಗೆ ಕೆಲವರು ಬೈದ್ರು, ಕೆಲವರು ಹೆಣ್ಣುಮಗಳನ್ನು ಯಾಕೆ ಹೊರಗೆ ಕಳುಹಿಸ್ತೀಯಾ ಅಂದ್ರು, ಕೆಲವರು ಟೀಕೆ ಮಾಡಿದ್ರು. ನನಗೆ ಸಹ ಅದನ್ನೆಲ್ಲ ನೋಡಿ ಹಾಗೆ ಅಪ್ಪನಿಗೂ ಕಷ್ಟ ಅಂದುಕೊಂಡು ಹೋಗದೆ ಬೇಡ ಅಂದುಕೊಂಡಿದ್ದೆ. ಆಗ ಅಪ್ಪ ಅಂದಿದ್ದು ಆಗುವುದೆಲ್ಲ ಒಳ್ಳೆದಕ್ಕೆ. ನಾನು ಎಷ್ಟೇ ಕಷ್ಟ ಆದ್ರೂ ನಿನ್ನ ಅಲ್ಲೇ ಬಿಡ್ತೀನಿ ಅಂತ ಉಡುಪಿಗೆ ಸೇರಿಸಿದರು. ಡಿ.ವಿ.ಜಿ.ಯವರು ಒಂದು ಮಾತನ್ನು ಹೇಳ್ತಾರೆ.

ದಿವಸದಿಂ ದಿವಸಕ್ಕೆ ನಿಮಿಷದಿಂ ನಿಮಿಷಕ್ಕೆ
ಭವಿಷವ ಚಿಂತಿಸದೆ ಬದುಕ ನೂಕುತಿರು
ವಿವರಗಳ ಜೋಡಿಸುವ ಯಜಮಾನ ಬೇರಿಹನು
ಸವೆಸು ನಿನ್ನ ಜನುಮವ ಮಂಕುತಿಮ್ಮ

ಇದರ ಅರ್ಥ ಏನೆಂದರೆ ಪ್ರತಿನಿಮಿಷಕ್ಕೆ ಪ್ರತಿ ದಿನಕ್ಕೆ ಮುಂದಿನ ಭವಿಷ್ಯವನ್ನು ಚಿಂತಿಸದೇ ಬದುಕು, ನಿನ್ನ ಭವಿಷ್ಯ ನಿರ್ಧರಿಸುವ ಒಡೆಯನೋರ್ವ ಇರುವನು, ನೀನು ನನ್ನ ಜೀವನವ ಸವೆಸು ಎಂದರ್ಥ. ಅದೇ ರೀತಿ ಅಪ್ಪ ನೀನು ಮುಂದೆ ಹೋಗು ಚೆನ್ನಾಗಿ ಓದು ಏನಾದರೂ ಸಾಧಿಸು ಯಾವುದಕ್ಕೂ ಕಿವಿಗೊಡಬೇಡ. ದೇವರು ಒಳ್ಳೆಯದನ್ನು ಮಾಡುತ್ತಾನೆ. ಒಳ್ಳೆಯ ದಾರಿ ತೋರಿಸುತ್ತಾನೆ ಎಂದು ನನ್ನನ್ನು ಉಡುಪಿಯ ತ್ರಿಶಾ ಕಾಲೇಜಿಗೆ ಸೇರಿಸಿದರು. ನನಗೆ ಹೊಸ ಅನುಭವ, ಹೊಸ ಊರು, ಹೊಸ ಜನ, ಹೊಸ ಭಾಷೆ, ನಾನು ಇಲ್ಲಿಗೆ ಹೊಂದಿಕೊಳ್ತೀನೋ ಇಲ್ವೋ ಅಂತ ತುಂಬಾ ಭಯ ಪಟ್ಟಿದ್ದೆ. ಆದ್ರೆ ಅಲ್ಲಿ ಹಾಸ್ಟೆಲ್ ಒಬ್ರು ಅಕ್ಕ ಸಿಕ್ಕಿದ್ರು. ಅವರಿಂದ ಕಾಲೇಜಲ್ಲಿ ಎಲ್ಲರೂ ಪರಿಚಯ ಆದ್ರು. ಅಕ್ಕ ತುಂಬಾ ಸಹಾಯ ಮಾಡಿದ್ರು. ಓದುವುದರಲ್ಲಿ ಇರಬಹುದು, ಸ್ಪರ್ಧೆಲಿ ಇರಬಹುದು ತುಂಬಾ ಪ್ರೋತ್ಸಾಹ ಕೊಟ್ರು. ಹಾಸ್ಟೆಲ್ ಹೊಸ ಜೀವನ ತುಂಬಾ ಚೆನ್ನಾಗಿ ಇತ್ತು. ತುಂಬಾ ಮಜಾ ಮಾಡಿದ್ವಿ. ಅಲ್ಲಿಂದ ಬೇರೆ ಕಡೆ ಹೋಗಕ್ಕೆ ಇಷ್ಟ ಇರಲಿಲ್ಲ. ಎಲ್ಲರೂ ಒಂದೇ ತಟ್ಟೇಲಿ ತಿನ್ನುತ್ತ ಇದ್ವಿ. ತುಂಬಾ ಅಂದ್ರೆ ತುಂಬಾ ಎಲ್ಲರನ್ನೂ ಹಚ್ಚಿಕೊಂಡಿದ್ವಿ. ತರಗತಿಯಲ್ಲಿ ತುಂಬಾ ತರಲೆ ಮಾಡ್ತಿದ್ವಿ. ಆದ್ರೆ ಆ ಕಾಲೇಜಿಗೆ ನಮಗೆ ಒಂದೇ ವರ್ಷ ಸಂಬಂಧ ಅನ್ನಿಸುತ್ತೆ. ಆ ಕಾಲೇಜು ಮುಚ್ಚಿದ್ರು. ಮುಂದೆ ಯಾವ ಕಾಲೇಜು ಅಂತ ಯೋಚನೆ ಮಾಡುತ್ತಾ ಇದ್ವಿ. ಅಲ್ಲಿಂದ ಪೂರ್ಣಪ್ರಜ್ಞ ಕಾಲೇಜಿಗೆ ಬಂದೆ. ಬಂದ ಮೊದಲ ದಿನ ತುಂಬಾ ಹೆದರಿದ್ದೆ. ನಾನು ಎರಡನೇ ವರ್ಷ ಅಂದರೆ ಮಧ್ಯಬಂದು ಸೇರಿದ್ದರಿಂದ ನನಗೆ ಸ್ನೇಹಿತರು ಆಗ್ತಾರೋ ಇಲ್ವೋ? ನನ್ನನ್ನು ಮಾತಾಡಿಸುತ್ತಾರೋ ಇಲ್ವೋ? ಅಂತ ಹಾಗೆ ಶಿಕ್ಷಕರಿಗೆ ಅವರು ಮಾಡೋ ಪಾಠಕ್ಕೆ ಹೊಂದಿಕೊಳ್ಳುತ್ತೀನಾ ಇಲ್ಲಾ ಅಂತ ಸಾವಿರಾರು ಯೋಚನೆ ಇತ್ತು. ಆದ್ರೆ ತರಗತಿ ಬಂದ ಮೇಲೆ ಎಲ್ಲರೂ ಚೆನ್ನಾಗಿ ಮಾತಾಡಿಸಿದ್ರು. ಎಲ್ಲರೂ ಸ್ನೇಹಿತರಾದ್ರೂ, ಪಾಠ ಎಲ್ಲರೂ ಚೆನ್ನಾಗಿ ಮಾಡ್ತಿದ್ರು. ಎಲ್ಲರಿಗೂ ನಾನು ಹೊಂದಿಕೊಂಡೆ. ಹಾಗೆ ಎಲ್ಲರೂ ತುಂಬಾ ಪ್ರೋತ್ಸಾಹ ಕೊಡ್ತಿದ್ದಾರೆ. ಎಲ್ಲಾ ವಿಷಯಕ್ಕೂ ತುಂಬಾ ಖುಷಿಯಾಗ್ತಿದೆ. ಹಾಗೇ ನಾನು ಖುಷಿಯಾಗಿದ್ದದ್ದನ್ನೂ ನೋಡಿ ಅಪ್ಪ, ಅಮ್ಮನೂ ತುಂಬಾ ಖುಷಿಯಲ್ಲಿದ್ದಾರೆ. ನನಗೆ ಇಷ್ಟು ವರ್ಷದಿಂದ ಪ್ರೋತ್ಸಾಹ ಕೊಟ್ಟಂಥ ಎಲ್ಲಾ ಶಿಕ್ಷಕರಿಗೂ ಅಪ್ಪ, ಅಮ್ಮನಿಗೆ ಯಾವಾಗಲೂ ನಾನು ಚಿರಋಣಿ.

ನಗೆಬುಗ್ಗೆಗಳು

ರಕ್ಷಾ ಜಿ.ಜಿ.
ಪ್ರಥಮ ಬಿ.ಕಾಂ.

1) ಹೋಯ್ ಈ ಹಳಿಯರ್ ಹತ್ರ ಬೇರೆ ಭಾಷಿ ಮಾತಾಡುವತಿಗೆ ಎಷ್ಟ್ ಜಾಗ್ರತಿಯಿಂದ್ ಇದ್ರೂ ಸಾಕಾತಿಲ್ಲ. ಎಂತಕ್ ಕೇಂಡ್ರೆ ಮೊನ್ನೆ ನಮ್ಮ ಅಜ್ಜಯ್ಯನ್ ಕರ್‌ಕಂಡ್ ಡಾಕ್ಟ್ರ ಹತ್ರ ಹೊಯ್‌ದೆ. ಅಲ್ ಒರ್ಬ್ ಬೊಂಬಯ್ ಅವ್ರ್....ಹೋಯ್ ಬೊಂಬಯರ್ ಅಂದ್ರೆ ಗೊತಾತ್ತಲ್ಲ ಮುಂಬೈಯರ್. ಆಯುರ್ವೇದ ಮದ್ದಿಗೆ ಅಂದೆಳಿ ಬಂದಿರ್. ಅವ್ರ್ ಹೀಂಗೆ ನನ್ ಹತ್ರ, "ಓ ಕೌನ್?" ಅಂದೆಳಿ ಅಜ್ಜನ್ ಬಗ್ಗೆ ಕೇಂಡ್ರ್ ಅಷ್ಟೇ...ನಮ್ಮ ಅಜ್ಜಯ್ಯ ಇದನ್ ಕೇಂಡ್ ಎಂತ ಕೋಣ್‌ವಾ? ಯಾರ್ ನಾನಾ? ನೀನ್ ಕೋಣ, ನಿನ್ ಮನಿಯರ್ ಕೋಣ...ಯಬ್ಬಾ ಬೈದದ್ದೇ ಬೈದದ್... ಅವರಿಗ್ ಎಂತ ಗೊತಿತ್ ಹಿಂದಿಯಂಗ್ ಕೋನ್ ಅಂದ್ರೆ ಅದ್ ಯಾರ್ ಅಂದೆಳಿ ಕೇಂಬುದ್ ಅಂದೆಳಿ...ಒಟ್‌ನಲ್ ಅಜ್ಜಯ್ಯನ್ ಸಮಾಧಾನ ಮಾಡುರ್ ಒಳಗೆ ಅಲ್ಲಿದ್ದರಿಗ್ ನೆಗಿಯಂದ್ರೆ ನನ್ ಕೈಲಿ..ಹೇಳುಕಾತಿಲ್ಲ.

2) ಒಬ್ರು ಮುದುಕಿ ಮೊಬೈಲ್ ಹಿಡ್‌ಕೊಂಡು ಮನೆಯ ಮುಂಭಾಗದಲ್ಲಿ ಕೂತಿರ್. ಅವರಿಗೆ ಮೊಬೈಲ್ ಗೀಳು ಎಷ್ಟು ಹಿಡ್‌ದಿತ್ ಅಂದ್ರೆ ತಾನ್ ಕುಂತದ್ದು, ನಿಂತದ್ದು, ಮನ್‌ಕಂಡದ್ದು ಎಲ್ಲಾ ಸ್ಟೇಟಸ್ ಹಾಕುದೆ...ಅಷ್ಟು ಹೊತ್ತಿಗೆ ಸರಿಯಾಗಿ ಮನೆ ಮುಂಬಾಗಕ್ಕೆ ಯಮಧರ್ಮರಾಯ ಬಂದ! ಅವ ಅಜ್ಜಿಯನ್ನು ಉದ್ದೇಶಿಸಿ "ಓ ಮುದುಕಿ ಇದೀಗ ನಿನ್ನ ಸಂಬಂಧ ಈ ಸಮಾಜದೊಂದಿಗೆ ಕಳೆಯಿತು. ಬಾ ನಮ್ಮ ಲೋಕಕ್ಕೆ ಹೋಗುವ.." ಅಷ್ಟ್ ಹೊತ್ತಿಗೆ ಅಜ್ಜಿ ಎದ್ ನಿಂತ್ "ಎಂತ ನನ್ನನ್ನು ಕರೆದುಕೊಂಡು ಹೋಗ್‌ತೀಯಾ? ಪರವಾಗಿಲ್ಲ ಆದ್ರೆ ಇರು ಒಂದು ನಿಮಿಷ ನಾನ್ ಸತ್ತಿದೆ ಅಂತ ಸ್ಟೇಟಸ್ ಹಾಕಿ ಬರ್ತೆ" ಇದನ್ ಕೇಳಿ ಯಮಧರ್ಮರಾಯನಿಗೇ ಒಂದ್ ಗಳಗಿ ಉಸ್ರ್ ನಿಂತ್ ಹೋಯ್ತ್.

3) ಗುಂಡನಿಗೆ ತುಂಬಾ ಮರೆವು. ಇವತ್ತು ಈ ಗಳಿಗೆ ಒಂದು ವಿಷಯ ಹೇಳಿದ್ರೆ ಇನ್ನೊಂದು ಗಳಿಗೆ ಅದ್ರ ಅರ್ಥವೇ ಬುಡಮೇಲಾಗುವಂತ ಕೆಲಸ ಮಾಡಿಬಿಡುತ್ತಿದ್ದ.

ಒಂದು ದಿನ ಗುಂಡ ಬಹಳ ಖುಷಿಯಿಂದ ಮನೆಗೆ ಬಂದು ಹೆಂಡತಿಯ ಹತ್ತಿರ ಹೇಳಿದ. "ಏನು ನನ್ನನ್ನು ನೀನು ಯಾವಾಗಲೂ ಮರೆಗುಳಿ ಅಂತೀಯಲ್ಲಾ ಇವತ್ತು ನೋಡು ನಾನು ಆಫೀಸ್ ಇಂದ ಬರುವಾಗ ಹೆಲ್‌ಮೆಟ್ ಮರೀದೆ ತಂದಿದೀನಿ". ಗುಂಡನ ಹೆಂಡತಿಗೆ ಎಲ್ಲಿಲ್ಲದ ಸಿಟ್ಟು. ಅವಳು ಸಿಟ್ಟಿನಿಂದ ಹೇಳಿದಳು. ರೀ ನೀವು ಇವತ್ತು ಬೆಳಿಗ್ಗೆ ಕಾರಲ್ಲಿ ಹೋದದ್ದೋ ಅಲ್ಲವೋ? ಮತ್ತೆ ಈಗ ಬರುವಾಗ ಹೆಲ್ಮೆಟ್ ಹಿಡಿದುಕೊಂಡು ಬಂದಿದೀರಾ? ಆಗ ಗುಂಡನಿಗೆ ಅರಿವಾಯಿತು. ಅವ ಮೆಲ್ಲಗೆ ಹೇಳಿದ, "ಏ ಇವಳೇ, ನಾನು ನಿನ್ನೆ ಹೆಲ್ಮೆಟ್ ಬಿಟ್ಟು ಬಂದದ್ದು ಹೌದಲ್ಲ? ಅದಕ್ಕೆ ಮತ್ತೆ ಹೆಲ್ಮೆಟ್ ಹಿಡಿದು ನಡೆದುಕೊಂಡೇ ಬಂದೆ. ನೋಡಿದ್ಯಾ." ಮತ್ತೆ ಗುಂಡನ ಹೆಂಡತಿಗೆ ಕಳವಳ ಅವಳು ಮನಸ್ಸಲ್ಲೇ ಬೈದುಕೊಂಡಳು. ಅಲ್ಲಾ ಇವರು ಕಾರಲ್ಲಿ ಹೋಗಿ ಬರುವಾಗ ಹೆಲ್ಮೆಟ್ ಹಿಡಿದು ನಡೆದುಕೊಂಡು ಬಂದರಾ? ಹಾಗಾದ್ರೆ ಕಾರು?

ಕಾರು ಯಾರಿಗೆ ನೆನಪಿದೆ ಮೊದಲೇ ಹೇಳಿಲ್ಲವಾ ನಾನು, ಗುಂಡ ದೊಡ್ಡ ಮರೆಗುಳಿ ಅಂತ.

4) ಒಂದು ಹುಡುಗಿ ಹುಡುಗನ ಹತ್ರ ಕೇಳಿದ್ಲು ನೀನು ನನಗೆ ಏನು ಬೇಕಾದ್ರು ಕೊಡ್ತೀಯಾ? ಆಗ ಹುಡುಗ ಹೇಳಿದ ಹಾ. ನೀನು ಕೇಳಿದ್ದನ್ನು ನಾನು ಕೊಡ್ತೇನೆ. ಬೇಕಿದ್ರೆ ನನ್ನ ಪ್ರಾಣ ತಗೋ.ಆಗ ಆ ಹುಡುಗಿ ಹೇಳಿದ್ಲು "ನಿನ್ನ ಪ್ರಾಣ ಯಾರಿಗೆ ಬೇಕಾ? ನನ್ನ ಮೊಬೈಲ್ ಈಗಾಗ್ಲೇ ಸತ್ತಿದೆ ಅದಕೊಂದ್ ಕರೆನ್ಸಿ ಹಾಕಿ ಅದಕ್ ಜೀವಕೊಡ್ ಸಾಕ್ !"

5) ಗುಂಡಂಗೆ ಅವನ ಗೆಳೆಯ ಫೋನ್ ಮಾಡಿ ಕೇಳಿದ 'ಏ ಗುಂಡಾ ನಿನ್ನ ಡಿಪಿಯದ್ದು ಯಾರ ಫೋಟೋವಾ? ಒಳ್ಳೆ ಕಳ್ಳನ ಹಾಗೆ ಇದಾನೆ?' ಅದಕ್ಕೆ ಗುಂಡ ಹೇಳಿದ ಏ ಹಾಗೇನಿಲ್ಲ ಮಾರಾಯ, ಅದು ನನ್ನ ಆಧಾರ್‌ಕಾರ್ಡ್ ಫೋಟೋ.'

ಹಬ್ಬಗಳು

ರಕ್ಷಿತಾ ದೇವಾಡಿಗ
ದ್ವಿತೀಯ ಬಿ.ಕಾಂ.

ಹಬ್ಬ ನಮ್ಮ ಬದುಕಿನ ಒಂದು ಭಾಗವೆನಿಸಿದೆ. ಹಬ್ಬಗಳು ಜನಸಾಮಾನ್ಯರಿಗೆ ಶಾಂತಿ ಮತ್ತು ಸಂತೋಷವನ್ನು ತರುತ್ತದೆ. ಭಾರತದಲ್ಲಿ ಹಬ್ಬಗಳು ಹಲವಾರು ಭಾರತೀಯ ಹಬ್ಬಗಳು ವಿಭಿನ್ನವಾಗಿರುತ್ತದೆ. ಅದಕ್ಕೆ ಅದರದೇ ಆದ ಸಾಂಸ್ಕೃತಿಕ, ಐತಿಹಾಸಿಕ ಹಾಗೂ ವೈಜ್ಞಾನಿಕ ಹಿನ್ನಲೆಗಳಿರುತ್ತದೆ.

ಜನವರಿ ತಿಂಗಳಲ್ಲಿ ಆಚರಿಸುವ ಸಂಕ್ರಾಂತಿಯ ಸೊಗಸೇ ಬೇರೆ. ಇದು ದನಗಳ ಹಬ್ಬವೂ ಹೌದು. ವರ್ಷವಿಡೀ ದುಡಿಮೆಯಲ್ಲಿ ತೊಡಗಿದ್ದ ದನ–ಕರುಗಳಿಗೆ ಪೂಜೆ ಮಾಡುತ್ತಾರೆ. ಅಂದು ದನಗಳನ್ನು ಬೆಂಕಿಯಲ್ಲಿ ಜಿಗಿಸುತ್ತಾರೆ. ಏಕೆಂದರೆ ಅವುಗಳ ಮೈಯಲ್ಲಿ ಜಿಗಣೆಯಂಥ ಕ್ರಿಮಿಗಳು ಸೇರಿರುತ್ತವೆ. ಇವುಗಳನ್ನು ತೊಲಗಿಸುವುದಕ್ಕಾಗಿ ಕಿಚ್ಚು ಹಾಯಿಸಲಾಗುತ್ತದೆ. ಬೆಂಕಿಯ ತಾಪ ತಾಗಿದಾಗ ಜಿಗಣೆಗಳು ಬೆಂಕಿಗೆ ಬೀಳುತ್ತವೆ. ಸಂಕ್ರಾಂತಿಯಂದು ಎಳ್ಳು–ಬೆಲ್ಲವನ್ನು ನೀಡಲಾಗುತ್ತದೆ. ಇದೂ ಕೂಡ ಜೀವಕ್ಕೆ ಒಳ್ಳೆಯದು.

ಹಿಂದೂ ಧರ್ಮದ ಪ್ರಕಾರ ಯುಗಾದಿ ಹಬ್ಬವು ವರ್ಷದ ಮೊದಲ ದಿನ. ಯುಗಾದಿ ಹಬ್ಬದಂದು ಬೇವು–ಬೆಲ್ಲವನ್ನು ಪರಸ್ಪರ ನೀಡುತ್ತಾರೆ. ಜೀವನದಲ್ಲಿ ಸಿಹಿ–ಕಹಿ ಎರಡೂ ಅನುಭವವಾಗುತ್ತದೆ. ಯಾವ ಸಂದರ್ಭದಲ್ಲೂ ಸೋಲದೇ ಮುನ್ನಡೆಯಬೇಕೆಂಬುದು ಇದರ ಅರ್ಥ.

ಹೋಳಿ ಹಬ್ಬವು ಬಣ್ಣಗಳ ಹಬ್ಬ. ಒಂದೊಂದು ಬಣ್ಣಕ್ಕೂ ಅರ್ಥವಿದೆ. ಜೀವನವು ವಿವಿಧತೆಯಿಂದ ಕೂಡಿರಬೇಕೆಂದು ಇದರ ಅರ್ಥ. ಹೋಳಿಯ ದಿನದಂದು ಹೋಳಿಕಾ ದಹನ, ಕಾಮದಹನವನ್ನು ಹಮ್ಮಿಕೊಳ್ಳಲಾಗುತ್ತದೆ. ಹೀಗೆ ಪ್ರಾರಂಭವಾಗಿ ಗಣೇಶ ಚತುರ್ಥಿಯನ್ನು ಗಣೇಶನನ್ನು, ಕೃಷ್ಣ ಜನ್ಮಾಷ್ಟಮಿಯಂದು ಕೃಷ್ಣನನ್ನು ವೈಭವದಿಂದ ಪೂಜಿಸಲಾಗುತ್ತದೆ.

ದಸರಾ ಹಬ್ಬವು ನಮ್ಮ ನಾಡಹಬ್ಬ. ಆ ದಿನಗಳನ್ನು ಒಂಬತ್ತು ದಿನಗಳ ಕಾಲ ಒಂಭತ್ತು ದೇವತೆಯರನ್ನು ಪೂಜಿಸಲಾಗುತ್ತದೆ. ಕನ್ನಡ ನಾಡಿನ ಸಂಸ್ಕೃತಿಯ ಪರಿಚಯ ಇಡೀ ವಿಶ್ವಕ್ಕೆ ತೋರಿಸಲಾಗುತ್ತದೆ. ಮನೆಗಳಲ್ಲಿ ಗೊಂಬೆಯನ್ನು ಅಲಂಕರಿಸಿ ಪೂಜಿಸಲಾಗುತ್ತದೆ.

ದೀಪಾವಳಿ ಹಬ್ಬವು ದೀಪಗಳ ಹಬ್ಬವಾಗಿದ್ದು, ಜೀವನದಲ್ಲಿ ಬೆಳಕಿನ ಮಹತ್ವವನ್ನು ತಿಳಿಸುತ್ತದೆ. ಅಂದು ರಾವಣದಹನದ ಸಂದರ್ಭವನ್ನು ನೆನಪಿಸಿಕೊಳ್ಳಲಾಗುತ್ತದೆ. ಈ ಹಬ್ಬದಂದು ಎಣ್ಣೆ ಸ್ನಾನವನ್ನು ಮಾಡಲಾಗುತ್ತದೆ. ಚಳಿಗಾಲದ ಪ್ರಾರಂಭವಾಗುವುದರಿಂದ ಎಣ್ಣೆ ಚರ್ಮವನ್ನು ಕಾಪಾಡಲು ಸಹಾಯಕವಾಗಿದೆ.

ಈ ರೀತಿಯಾಗಿ ಶಿವರಾತ್ರಿ, ಮಹಾಲಯ ಅಮವಾಸ್ಯೆ, ಮೊಹರಂ, ರಂಜಾನ್, ಬಕ್ರೀದ್, ಕ್ರಿಸ್‌ಮಸ್ ಹಬ್ಬಗಳನ್ನು ವೈಭವದಿಂದ ಆಚರಿಸಿ ಸಂಭ್ರಮಿಸಲಾಗುತ್ತದೆ. ಇದಲ್ಲದೆ ಜಾತ್ರೆ, ಸಂತಮೇರಿ, ವಿವಿಧ ಪೂಜೆಗಳನ್ನು ನಡೆಸಲಾಗುತ್ತದೆ. ನಮ್ಮ ಊರಾದ ಉಡುಪಿಯಲ್ಲಿ ಮೊನ್ನೆಯಷ್ಟೇ ಪರ್ಯಾಯವನ್ನು ಅತ್ಯಂತ ವೈಭವವಾಗಿ ಆಚರಿಸಲಾಯಿತು.

तृणादपि लघुस्तूलस्तूलादपि च याचकः ।
वायुना किं न नीतोऽसौ मामयं प्रार्थयेदिति ॥

ತೃಣಾದಪಿ ಲಘುಸ್ತೂಲಸ್ತೂಲಾದಪಿ ಚ ಯಾಚಕಃ ।
ವಾಯುನಾ ಕಿಂ ನ ನೀತೋಽಸೌ ಮಾಮಯಂ
ಪ್ರಾರ್ಥಯೇದಿತಿ ॥

ಈ ಜಗತ್ತಿನಲ್ಲಿ ಹುಲ್ಲಿಗಿಂತಲೂ ಹಗುರವಾದುದು ಹತ್ತಿ.
ಅದಕ್ಕಿಂತಲೂ ಹಗುರವಾದುದು ಬೇಡುವವ.
ಹಾಗಾದರೆ ಗಾಳಿ ಹತ್ತಿಯನ್ನು ಹಾರಿಸಿಕೊಂಡು ಹೋದಂತೆ
ಇವನನ್ನು ಏಕೆ ಹಾರಿಸಿಕೊಂಡು ಹೋಗುವುದಿಲ್ಲ?
– ಅವನು ನನ್ನಲ್ಲಿಯೂ ಬೇಡಿಯಾನು ಎಂಬ
ಹೆದರಿಕೆಯಿಂದ.

ಹೆಚ್ಚುತ್ತಿರುವ ಆತ್ಮಹತ್ಯೆಗಳು

ಸೋನಾಲಿ ಶೆಟ್ಟಿ
ಪ್ರಥಮ ಬಿ.ಎಸ್ಸಿ.

ಈ ಪ್ರಪಂಚದಲ್ಲಿ ಹುಟ್ಟಿದ ಪ್ರತಿಯೊಂದು ಜೀವಿಯೂ ತನ್ನದೇ ಆದ ವಿಶಿಷ್ಟವಾದ ಸಾಮರ್ಥ್ಯವನ್ನು ಹೊಂದಿರುತ್ತದೆ. ಭಾರವಾದ ವಸ್ತುವನ್ನು ಎತ್ತುವ ಸಾಮರ್ಥ್ಯ ಆನೆಯ ಕೈಯಲ್ಲಿದೆ. ಅದು ಅದರ ಸಾಮರ್ಥ್ಯ. ಆದರೆ ಹಿರಿದಾದ ಬೆಟ್ಟವನ್ನು ಕೊರೆಯುವ ಸಾಮರ್ಥ್ಯ ಅದಕ್ಕಿಲ್ಲ. ಆ ಸಾಮರ್ಥ್ಯ ಇರುವುದು ಏನಿದ್ದರೂ ಇಲಿಗೆ ಮಾತ್ರ. ಆದರೆ ಇಲಿಯಿಂದ ಭಾರವಾದ ವಸ್ತುವನ್ನು ಎತ್ತಲಾಗುವುದಿಲ್ಲ. ಹೀಗೆ ಒಂದೊಂದು ಸಾಮರ್ಥ್ಯದಿಂದ ಒಂದೊಂದು ಜೀವ ಪ್ರಾಮುಖ್ಯತೆಯನ್ನು ಪಡೆಯುತ್ತವೆ. ಅಂತೆಯೇ ಮಾನವನು ತನ್ನದೇ ಆದ ವಿಶಿಷ್ಟವಾದ ಬುದ್ಧಿಶಕ್ತಿಯಿಂದ ಉಳಿದೆಲ್ಲಾ ಪ್ರಾಣಿಗಳಿಗಿಂತಲೂ ಶ್ರೇಷ್ಠವಾಗಿ ಕಾಣುತ್ತಾನೆ. ಹೇಗೆಂದರೆ ಆನೆ ಕೊರೆಯಲಾಗದ ಬೆಟ್ಟವನ್ನು ಇಲಿಯ ಎತ್ತಲಾಗದ ಭಾರವನ್ನು ತನ್ನ ವಿಶಿಷ್ಟವಾದ ವಿವೇಚನಾ ಶಕ್ತಿಯಿಂದ ಒಬ್ಬ ಮನುಷ್ಯ ಮಾಡಿ ಮುಗಿಸಬಲ್ಲ. ಮಾನವನು ತನ್ನ ಯೋಚಿಸುವಿಕೆಯ ಶಕ್ತಿಯಿಂದ ಅದ್ಭುತಗಳನ್ನೇ ಸಾಧಿಸಿದರೂ, ಕೆಲವರು ದುರ್ಬಲ ಘಳಿಗೆಯಲ್ಲಿ ಸ್ಥೈರ್ಯ ಕಳೆದುಕೊಂಡು ಆತ್ಮಹತ್ಯೆಗೆ ಶರನಾಗುವುದು ವಿಪರ್ಯಾಸವೇ ಸರಿ. ಯಾವುದೋ ಗಹನವಾದ ತೊಂದರೆಯಲ್ಲಿ ಸಿಕ್ಕಿಕೊಂಡು ಇದಕ್ಕೆ ಪರಿಹಾರವೇ ಇಲ್ಲದಿದ್ದಾಗ ಜೀವನದಲ್ಲಿ ಭರವಸೆ, ನಂಬಿಕೆ, ವಿಶ್ವಾಸವನ್ನು ಕಳೆದುಕೊಂಡು ಬೇರೆ ಯಾವುದೇ ದಾರಿ ಕಾಣದೆ ಆತ್ಮಹತ್ಯೆಗೆ ಶರಣಾಗುತ್ತಾರೆ. ಜೀವನವೆಂಬುದು ಒಂದು ಬೇವು ಬೆಲ್ಲದ ಮಿಶ್ರಣ. ಕಷ್ಟವೂ ಬೇಕು. ಸುಖವೂ ಬೇಕು. ಅಡುಗೆಯಲ್ಲಿ ಉಪ್ಪು, ಖಾರ, ಸರಿ ಪ್ರಮಾಣದಲ್ಲಿ ಎರಕಗೊಂಡಾಗ ಮಾತ್ರ ಅದು ರುಚಿಯಾಗಿರಲು ಸಾಧ್ಯ. ಅಂತೆಯೇ ಜೀವನದಲ್ಲಿ ಸುಖವೂ ಕಷ್ಟವೂ ಸಮ್ಮಿಶ್ರಣಗೊಂಡಾಗ ಮಾತ್ರ ಜೀವನ ಶೋಭಾಯಮಾನವಾಗಲು ಸಾಧ್ಯ. ಕಷ್ಟ ಬಂತೆಂಬ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡರೇ ಅದರಿಂದಾಗುವ ಲಾಭವಾದರೂ ಏನು?

ಆತ್ಮಹತ್ಯೆ ಎಂದರೆ ಸ್ವಪ್ರೇರಣೆಯಿಂದ ಅಥವಾ ಇತರ ಒತ್ತಡಗಳಿಂದ ಬದುಕಲು ಸಾಧ್ಯವೇ ಇಲ್ಲ ಎಂಬ ಮನೋಭಾವನೆಯನ್ನು ತಳೆದು ತನ್ನನ್ನು ತಾನು ನಾಶಮಾಡಿಕೊಳ್ಳುವಂತಹುದು. ಒಂದು ಸೂಜಿ ಚುಚ್ಚಿದರೂ ನಮ್ಮಿಂದ ಸಹಿಸಲಾಗುವುದಿಲ್ಲ. ಹಾಗಿರುವಾಗ ಆತ್ಮಹತ್ಯೆ ಮಾಡಿಕೊಳ್ಳುವವನ ಮನೋಸ್ಥಿತಿ ಹೇಗಿರಬೇಕು? ಒಮ್ಮೆ ಆಲೋಚಿಸಿ. ಇಂದಿನ ಈ ಕಾಲದಲ್ಲಿ ಸಣ್ಣ ಸಣ್ಣ ಮಕ್ಕಳಿಂದ ಹಿಡಿದು ಮುಂಬೋವೃದ್ಧರವರೆಗೂ ಆತ್ಮಹತ್ಯೆಗೆ ಶರಣಾಗುವುದು ವಿಷಾದನೀಯ. ವಯಸ್ಕರು ಕೌಟುಂಬಿಕ ಕಲಹ, ಜೀವನದಲ್ಲಿ ಜಿಗುಪ್ಸೆ, ಅನಾರೋಗ್ಯದಿಂದ ಒಂಟಿತನದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ದೇಶದ ಬೆನ್ನೆಲುಬು ಎಂಬ ಖ್ಯಾತಿಯನ್ನು ಪಡೆದ ರೈತರು ಸಾಲಬಾಧೆ ಸಹಿಸಲಾರದೆ ಆತ್ಮಹತ್ಯೆಗೆ ಶರಣಾದರೆ, ಯುವಕ –ಯುವತಿಯರು ಪ್ರೇಮ ವೈಫಲ್ಯದಿಂದ ಮದುವೆಯಾದ ಕೆಲವು ಮಹಿಳೆಯರು ವರದಕ್ಷಿಣೆ ಕಿರುಕುಳದಿಂದ ಇನ್ನಿತರ ಸಮಸ್ಯೆಗಳಿಂದ ಆತ್ಮಹತ್ಯೆ ಮಾಡುತ್ತಾರೆ.

ಪ್ರತಿವರ್ಷ ನಮ್ಮ ದೇಶ ಭಾರತದಲ್ಲಿ ಒಂದು ಲಕ್ಷಕ್ಕೂ ಅಧಿಕ ಮಂದಿ ಆತ್ಮಹತ್ಯೆಗೆ ಶರಣಾಗುವುದು ವಿಪರ್ಯಾಸವೇ ಸರಿ. ರಾಷ್ಟ್ರೀಯ ಅಪರಾಧ ದಾಖಲೆ ಮಂಡಳಿ ದಾಖಲೆಯಂತೆ ಕಳೆದ ಒಂದು ದಶಕದಲ್ಲಿ ಆತ್ಮಹತ್ಯೆ ಪ್ರಮಾಣ ವಿಪರೀತ ಹೆಚ್ಚಾಗಿದೆ. ಎಂದರೇ ಅರ್ಥವೇನು? ಯಾವುದೇ ಮಾನಸಿಕ ಒತ್ತಡವಾಗಲಿ, ಅದಕ್ಕೆ ಆತ್ಮಹತ್ಯೆಯೊಂದೇ ಪರಿಹಾರವಲ್ಲ ಎಂಬುದನ್ನು ಮೊದಲಾಗಿ ಅರ್ಥೈಸಿಕೊಳ್ಳಬೇಕಾಗಿದೆ. ಎಲ್ಲ ಸಮಸ್ಯೆಗೆ ಒಂದಲ್ಲ ಒಂದು ಪರಿಹಾರ ಇದ್ದೇ ಇರುತ್ತದೆ. ಆದರೆ ಕ್ಷಣಿಕವಾದ ಸಮಸ್ಯೆಗೆ ನಮ್ಮ ಅಮೂಲ್ಯವಾದ ಜೀವನವನ್ನು ಬಲಿ ಕೊಡುವುದು ಸರಿಯಲ್ಲ.

ಪ್ರಸ್ತುತ ನಮ್ಮ ದೇಶದ ಪರಿಸ್ಥಿತಿಯೇ ಬದಲಾಗಿ ಹೋಗಿದೆ. ಈ ಸಮಾಜದ ಕೆಲವು ವ್ಯಕ್ತಿಗಳು ತಮ್ಮ ತಪ್ಪನ್ನು ಮರೆಮಾಚಲು ಅಮಾಯಕ ಜೀವಗಳನ್ನು ಬಲಿ ತೆಗೆದುಕೊಳ್ಳುತ್ತಾರೆ. ಕೊಲೆ ಮೊದಲಾದ ಹೇಯ ಕೃತ್ಯಗಳು ಆತ್ಮಹತ್ಯೆ ಎಂಬ ಮುಖವಾಡವನ್ನು ಒಡ್ಡುತ್ತಿವೆ. ಇಂಥ ಕೃತ್ಯಗಳ ವಿರುದ್ಧ ನಾವು ಧ್ವನಿ ಎತ್ತಬೇಕಾಗಿದೆ.

ಧೈರ್ಯಗುಂದಿದವರಿಗೆ ಧೈರ್ಯ ತುಂಬುವ ಕೆಲಸ ನಮ್ಮಿಂದಾಗಬೇಕು. ಆದ್ದರಿಂದ ಯಾರೂ ಆತ್ಮಹತ್ಯೆಗೆ ಶರಣಾಗದೆ ಶಾಂತ ಸಾರ್ಥಕ ಜೀವನವನ್ನು ನಡೆಸಬೇಕಾಗಿದೆ. ಈ ಬದುಕೆಂಬುದು ಬಹಳ ಅಮೂಲ್ಯವಾದದ್ದು. ಇದನ್ನು ಹಾಳು ಮಾಡಿಕೊಳ್ಳದಿರಿ ಹುಚ್ಚಪ್ಪಗಳಿರಾ ಎಂಬ ನಮ್ಮ ಹಿರಿಯರ ಸಂದೇಶದಂತೆ ಬಾಳಬೇಕಾಗಿದೆ.

ವಿದ್ಯಾರ್ಥಿಗಳಾದ ನಾವು ಇಂತಹವುಗಳಿಂದ ನಮ್ಮ ಜೀವನವನ್ನು ಹಾಳು ಮಾಡಿಕೊಳ್ಳದೆ ಉತ್ತಮ ಪ್ರಜೆಯಾಗಿ ಸದೃಢ ಭಾರತ ನಿರ್ಮಾಣಕ್ಕೆ ಇಂದು ಸಜ್ಜಾಗಬೇಕಾಗಿದೆ.

ರೇಖಾಗಣಿತದ ಅಡಿಪಾಯ

ನಿಧಿಶ್ರೀ
ದ್ವಿತೀಯ ಬಿ.ಎಸ್ಸಿ.

ಗಣಿತಶಾಸ್ತ್ರದಲ್ಲಿ ಅಂಕಗಣಿತ, ಬೀಜಗಣಿತ, ರೇಖಾಗಣಿತ ಹೀಗೆ ಅನೇಕ ವಿಭಾಗಗಳಿವೆ. ಈ ಎಲ್ಲಾ ವಿಭಾಗಗಳಿಗೂ ಬೇರೆ ಬೇರೆ ರೀತಿಯ ಹಿನ್ನೆಲೆಗಳಿವೆ. ನಾವು ಗಣಿತಶಾಸ್ತ್ರದ ವಿಭಾಗಗಳನ್ನು ಅಧ್ಯಯನ ಮಾಡುತ್ತಿದ್ದೇವೆ. ಆದರೆ ನಮಗೆ ಅವುಗಳ ಹಿನ್ನೆಲೆಗಳು ತಿಳಿದಿರುವುದು ತೀರಾ ಅಪರೂಪ. ರೇಖಾಗಣಿತದ ಮೊದಲ ಅನ್ವಯವಾದದ್ದು ಭೂಮಿಯನ್ನು ಅಳತೆ ಮಾಡುವ ಕೆಲಸಕ್ಕಾಗಿ. ಗ್ರೀಕ್ ವಿಜ್ಞಾನದಲ್ಲಿ ಗಣಿತಕ್ಕೆ ಪ್ರಮುಖವಾದ ಸ್ಥಾನವಿದೆ. ಗ್ರೀಕ್‌ನ ಹಳೆಯ ವಿಜ್ಞಾನಿ ಮಿಲೆಟಸನ ಥೆಲ್ (ಕ್ರಿ.ಪೂ. 650–560) ಅವರು ಮೊದಲ ಗಣಿತ ಶಾಸ್ತ್ರಜ್ಞ ಆಗಿದ್ದರು. ಅತ್ಯಂತ ಪ್ರಖ್ಯಾತವಾದ ಗ್ರೀಕ್‌ನ ಪ್ರಮೇಯವನ್ನು ಮೊದಲು ನಿರೂಪಿಸಿದವರು ಪೈಥಾಗರಸ್ (ಕ್ರಿ.ಪೂ. 570–480) ಪೈಥಾಗರ್‌ನ ಪ್ರಮೇಯದ ಪ್ರಕಾರ "ಒಂದು ಲಂಬಕೋನ ತ್ರಿಭುಜದಲ್ಲಿ ಕರ್ಣದ ಮೇಲಿನ ವರ್ಗವು ಉಳಿದೆರಡು ಬಾಹುಗಳ ಮೇಲಿನ ವರ್ಗಗಳ ಮೊತ್ತಕ್ಕೆ ಸಮವಾಗಿರುತ್ತದೆ". ಕೇವಲ ಗಣಿತ ಜ್ಞಾನದಿಂದ ಗ್ರೀಕರು ಮೆಸಪೊಟೋಮಿಯಾ ಮತ್ತು ಈಜಿಪ್ಟ್ ವಿಜ್ಞಾನಿಗಳಿಂದ ಭಿನ್ನವಾಗಿರಲಿಲ್ಲ. ಅವರು ಕಂಡು ಹಿಡಿದ ಪ್ರತಿ ಸ್ವಾಭಾವಿಕ ಸತ್ಯಗಳಿಗೆ ತಾರ್ಕಿಕ ಆಧಾರಗಳನ್ನು ಒದಗಿಸುತ್ತಿದ್ದರು.

ಯುಕ್ಲಿಡ್ ಕೂಡ ಇಂಥಹ ತಾರ್ಕಿಕ ಆಧಾರಗಳನ್ನು ಒದಗಿಸುವಲ್ಲಿ ಸಫಲನಾದ. ಪ್ರಾಚೀನ ವಿಶ್ವದ ಸಾಂಸ್ಕೃತಿಕ ಕೇಂದ್ರವಾದ, ಅಲೆಕ್ಸಾಂಡರ್ ದೊರೆ ಕಟ್ಟಿಸಿದ ಅಲೆಕ್ಸಾಂಡ್ರಿಯಾ ನಗರದಲ್ಲಿ ಯುಕ್ಲಿಡ್ ವಾಸವಾಗಿದ್ದನು. ಆತನ ಬಹುಮುಖ್ಯ ಕೆಲಸ "ಮೂಲವಸ್ತುಗಳು". ಸುಮಾರು 13 ಸಂಪುಟಗಳ ಈ ಸಂಶೋಧನೆಯಲ್ಲಿ ಆತನ ಕಾಲಕ್ಕೆ ಸೀಮಿತವಾದ ಗಣಿತದ ಸೂತ್ರಗಳನ್ನು ವಿವರಿಸಿದ್ದನು. ಆತನ ಈ ಸಂಶೋಧನಾ ಪ್ರಬಂಧ ಎಲ್ಲಾ ಕಾಲಕ್ಕೂ ಉಪಯುಕ್ತವಾದ ಆಕಾರ ಗ್ರಂಥವಾಯಿತು. ರೇಖಾಗಣಿತದ ಮೂಲಭೂತ ಅಂಶಗಳನ್ನು ರೇಖಾಚಿತ್ರಗಳ ಸಮೇತ ವಿವರಿಸಿದ್ದಲ್ಲದೆ ಅಂಕಗಣಿತದ ಪ್ರಾಥಮಿಕ ಪ್ರಮೇಯಗಳನ್ನು ರೂಪಿಸಿದನು. ಈ ಪ್ರಮೇಯದ ಪ್ರಕಾರ "ಯಾವುದೇ ಸಂಖ್ಯೆಯು ಒಂದಕ್ಕಿಂತ ಹೆಚ್ಚಿನದ್ದಾಗಿದ್ದರೆ ಅದು ಅವಿಭಾಜ್ಯ ಸಂಖ್ಯೆ ಆಗಿರಬೇಕು, ಇಲ್ಲವೇ ಬೇರೆ ಅವಿಭಾಜ್ಯ ಸಂಖ್ಯೆಯೊಂದಿಗಿನ ಗುಣಲಬ್ಧವಾಗಿ ಸೂಚಿಸಬಹುದು".

ರೇಖಾಗಣಿತದ ಕೆಲವು ಮೂಲ ಅಂಶಗಳನ್ನು ಯುಕ್ಲಿಡ್ ನಿರೂಪಿಸಿದನು. "ಬಿಂದು ಎನ್ನುವುದು ಯಾವುದೇ ಭಾಗವಿಲ್ಲದ ಒಂದು ಅಂಶ ಅಥವಾ ರೇಖೆ ಎನ್ನುವುದು

ಅಗಲವಿಲ್ಲದ ಉದ್ದ". ಹೀಗೆ ಅನೇಕ ಅಂಶಗಳನ್ನು ಉಲ್ಲೇಖಿಸಿದ್ದಾರೆ. ನಂತರ ಸ್ವಯಂಸಿದ್ಧಗಳು (Postulates) ಮತ್ತು ಆಕ್ಸಿಯಾಮ್‌ಗಳನ್ನು (Axioms) ನಿರೂಪಿಸಿದನು. ಮೂಲ ನಿಯಮಗಳು ಅಥವಾ ವಾಕ್ಯಗಳನ್ನು ಮತ್ತಷ್ಟು ಸರಳ ವಿಷಯಗಳಾಗಿ ವಿಭಾಗಿಸಬಹುದು ಎನ್ನುವುದಕ್ಕೆ ಆಕ್ಸಿಯಾಮ್‌ಗಳೆಂದು ಕರೆಯುತ್ತಾರೆ. ಆತನ ಒಂದು ಸ್ವಯಂಸಿದ್ಧ ಹೀಗಿದೆ. "ಯಾವುದೇ ಎರಡು ಬಿಂದುಗಳ ನಡುವೆ ಒಂದು ಸ್ಥಳಾವಕಾಶ (ಸರಳರೇಖೆ) "ಇನ್ನೊಂದು" ಎಲ್ಲಾ ಲಂಬಕೋನಗಳು ಸಮವಾಗಿರುತ್ತದೆ".

ಪ್ರಾರಂಭದಿಂದಲೂ ಯುಕ್ಲಿಡ್‌ನ ಸಮಾನಾಂತರ ಆಕ್ಸಿಯಾಮ್‌ಗೆ ವಿಶೇಷ ಮಾನ್ಯತೆಯಿತ್ತು. ಈ ಸ್ವಯಂಸಿದ್ಧದ ಪ್ರಕಾರ ಎರಡು ಸರಳ ರೇಖೆಗಳನ್ನು ಅಥವಾ ಸಮತಲಗಳನ್ನು ಎಷ್ಟು ದೂರ ಎಳೆದರೂ ಅವು ಸಮಾನಾಂತರ ದೂರ ಕಾಯ್ದುಕೊಳ್ಳುತ್ತವೆ. ನಂತರ ಬಂದ ವಿಜ್ಞಾನಿಗಳು ಈ ಸಿದ್ಧಾಂತವನ್ನು ವಿರೋಧಿಸಿದರು. 2200 ವರ್ಷಗಳ ನಂತರ ನಿಕೊಲಾಯ್ ಲೊಬೊಚೆವ್ ಸ್ಕಿ ನಾನ್–ಯುಕ್ಲಿಡಿಯನ್ ರೇಖಾಗಣಿತವನ್ನು ಕಂಡು ಹಿಡಿದು ಯುಕ್ಲಿಡ್‌ನ ರೇಖಾಗಣಿತವನ್ನು ವಿರೋಧಿಸಿದನು. ಆತನ ಪ್ರಕಾರ ಕನಿಷ್ಠ ಎರಡು ಸಮಾನಾಂತರಗಳು ಒಂದು ಸಮತಲದ ಮೇಲೆ ಒಂದು ಬಿಂದುವನ್ನು ಸಂಧಿಸಬಹುದು. ನಂತರದ ರೇಖಾಗಣಿತಶಾಸ್ತ್ರವು ಯುಕ್ಲಿಡ್‌ನ ವಿಚಾರಗಳಿಂದ ಭಿನ್ನವಾಗಿ ಬೇರೆ ಆಧಾರದ ಮೇಲೆ ಬೆಳೆಯತೊಡಗಿದವು. ಗಣಿತದಲ್ಲಿ ಇಂದು ಬೇರೆ ಬೇರೆ ವಿಭಾಗಗಳನ್ನು ನಾವು ನೋಡುತ್ತಿದ್ದರೂ ಗಣಿತದ ಆರಂಭವಾಗಿರುವುದು ರೇಖಾಗಣಿತದಿಂದಲೇ. ಅಂಕಗಣಿತ,

ಬೀಜಗಣಿತ, ಟ್ರಿಗ್ನಮೆಟ್ರಿ ಮುಂತಾದ ಎಲ್ಲವನ್ನೂ ಗ್ರೀಕ್‌ರು ರೇಖಾಗಣಿತ ಮೂಲಕ ಬಿಡಿಸುತ್ತಿದ್ದರು. ಹಾಗಾಗಿ ಪ್ಲೇಟೋ ಅಕಾಡೆಮಿಯ ಪ್ರವೇಶದಲ್ಲಿ ಹೀಗೆ ಬರೆಯಲಾಗಿತ್ತು" ರೇಖಾಗಣಿತದೊಂದಿಗೆ ಪರಿಚಯ ಇಲ್ಲದವರಿಗೆ ಇಲ್ಲಿ ಪ್ರವೇಶವಿಲ್ಲ."

ಮುಂದೆ ಅನೇಕ ವಿಜ್ಞಾನಿಗಳು ರೇಖಾಗಣಿತದ ಹೊಸ ವಿಷಯಗಳನ್ನು ಆವಿಷ್ಕರಿಸಿದ್ದರಿಂದ ಇಂದು ನಾವು ರೇಖಾಗಣಿತವನ್ನು ಅಧ್ಯಯನ ಮಾಡುತ್ತಿದ್ದೇವೆ.

महाजनस्य संसर्गः कस्य नोन्नतिकारकः ।
पद्मपत्रस्थितं वारि धत्ते मुक्ताफलश्रियम् ॥

ಮಹಾಜನಸ್ಯ ಸಂಸರ್ಗಃ ಕಸ್ಯ ನೋನ್ನತಿಕಾರಕಃ ।
ಪದ್ಮಪತ್ರಸ್ಥಿತಂ ವಾರಿ ಧತ್ತೇ ಮುಕ್ತಾಫಲಶ್ರಿಯಮ್ ॥

ಮಹಾತ್ಮರ ಸಂಬಂಧ ಯಾರಿಗೆ ತಾನೇ ಉನ್ನತಿಯನ್ನು ಮಾಡುವುದಿಲ್ಲ. ಕಮಲದ ಎಲೆಯಲ್ಲಿರುವ ನೀರು ಮುತ್ತಿನ ಕಾಂತಿಯನ್ನು ಹೊಂದುತ್ತದೆ.

सर्पर्दुर्जनयोर्मध्ये वरं सर्पो न र्दुर्जनः ।
सर्पो दशति कालेन र्दुर्जनस्तु पदे पदे ॥

ಸರ್ಪರ್ದುರ್ಜನಯೋರ್ಮಧ್ಯೇ ವರಂ ಸರ್ಪೋ ನ ದುರ್ಜನಃ ।
ಸರ್ಪೋ ದಶತಿ ಕಾಲೇನ ದುರ್ಜನಸ್ತು ಪದೇ ಪದೇ ॥

ಸರ್ಪ ಮತ್ತು ಕೆಟ್ಟ ಮನುಷ್ಯ ಇವೆರದರಲ್ಲಿ ಸರ್ಪವಾದರೂ ಬೇಕು ದುರ್ಜನನಲ್ಲ. ಸರ್ಪವು ಎಂದಾರರೊಂದು ದಿನ ಕಚ್ಚುತ್ತದೆ ಆದರೆ ದುರ್ಜನ ಮಾತ್ರ ಪದೆ ಪದೆ ಕಚ್ಚುತ್ತಿರುತ್ತಾನೆ.

ಮನೆಯೇ ಮಂತ್ರಾಲಯ

ಅಮೃತಾ
ತೃತೀಯ ಬಿ.ಕಾಂ.

"ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ" ಎಂಬ ಶ್ರೀರಾಮಚಂದ್ರನ ಮಾತಿನಂತೆ ಹೆತ್ತ ತಾಯಿ ಹಾಗೂ ಹೊತ್ತ ನಾಡು ಸ್ವರ್ಗಕ್ಕಿಂತಲೂ ಶ್ರೇಷ್ಠ. ಭಾರತ ಎನ್ನುವುದು ಪವಿತ್ರ ಸಂಸ್ಕೃತಿಯ ನೆಲೆಬೀಡು. ಸಂಪೂರ್ಣ ವಿಶ್ವದಾದ್ಯಂತ ತನ್ನ ಅಪಾರ ಸಂಪತ್ತು ಹಾಗೂ ಅಪೂರ್ವ ಸಂಸ್ಕಾರದ ಮೂಲಕ ಇತರ ರಾಷ್ಟ್ರಗಳ ಕಣ್ಣಿಗೆ ಸದಾ ಅಚ್ಚರಿಯ ಸೊಬಗನ್ನುಂಟು ಮಾಡುವ ನಮ್ಮ ದೇಶ ಎಂತಹ ಕಠಿಣ ಸಂದರ್ಭದಲ್ಲೂ ಧೈರ್ಯಗುಂದದೆ ಬದುಕುವ ಛಲವನ್ನು ಹೊಂದಿದೆ. ಸ್ವಾಮಿ ವಿವೇಕಾನಂದರಂತಹ ಧರ್ಮಮೂರ್ತಿಗಳ, ಭಗತ್‌ಸಿಂಗ್‌ರಂತಹ ವೀರಶೂರರ ಹಾಗೂ ಲಾಲಾಲಜಪತರಾಯರಂತಹ ಶಾಂತಿದೂತರ ಹೆಮ್ಮೆಯ ಮಾತೃಭೂಮಿಯಾದ ಭಾರತ, ಕೊರೊನಾದಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ವಿಶ್ವಗುರುವಾಗಿ ಹೊರಹೊಮ್ಮಿರುವುದು ನಮ್ಮೆಲ್ಲರ ಭಾಗ್ಯವೇ ಸರಿ. ಈ ಮೂಲಕ ವಿದೇಶಗಳ ಸಂಸ್ಕೃತಿಗೆ ಮಾರು ಹೋಗಿರುವ ಹಾಗೂ ವಿದೇಶವೇ ಶ್ರೇಷ್ಠ ಎಂಬ ಭಾವನೆಯಿಂದ ಪರದೇಶದಲ್ಲಿ ನೆಲೆಯಾಗಿರುವ ಭಾರತೀಯರಲ್ಲಿ ತನ್ನ ಮನೆಯಾದ ಭಾರತವೇ ಸದಾ ಉತ್ತಮ ಎಂಬ ಮನಸ್ಥಿತಿ ಮೂಡಿಸಿದೆ.

ಭಾರತ, ಕೇವಲ ಒಂದು ರಾಷ್ಟ್ರವಲ್ಲ. ಬದಲಾಗಿ ಒಂದು ಶಕ್ತಿ. ರಾಮಾಯಣ, ಮಹಾಭಾರತದಂತಹ ಪುರಾಣಗಳ ಆಗರ. ಬದುಕಿನ ಅರ್ಥವನ್ನು ವಿವರಿಸುವ ಭಗವದ್ಗೀತೆ, ಬೈಬಲ್, ಖುರಾನ್‌ನಂತಹ ಗ್ರಂಥಗಳ ಆಧಾರ. ಸರ್ವಧರ್ಮಗಳಿಗೆ ಸಮಾನ ಸ್ಥಾನ ನೀಡುವ ಕರುಣಾಧರಿತ್ರಿ. ಎಲ್ಲಕ್ಕಿಂತ ಮುಖ್ಯವಾಗಿ ವಸುಧೈವ ಕುಟುಂಬಕಂ ಎಂಬ ಅದ್ಭುತ ವಿಚಾರದ ಜನನಿ. ಸಮಸ್ತ ವಿಶ್ವದಲ್ಲಿ ಸರ್ವರೂ ಸುಖ, ಶಾಂತಿಯಿಂದ ಬದುಕಬೇಕು ಎಂಬ ಉಚ್ಚ ಯೋಚನೆ ನಮ್ಮದಾಗಿದೆ. ಆದರೂ ಸ್ವಾರ್ಥ, ಮೋಹದ ಕಡೆಗೆ ಆಕರ್ಷಿತರಾಗಿ ತನ್ನ ಜನ್ಮಭೂಮಿಯ ಮಹತ್ತತೆಯನ್ನು ಅರಿಯದವರು ನಮ್ಮಲ್ಲಿ ಬಹಳ ಮಂದಿಯಿದ್ದಾರೆ. ಉಚಿತವಾಗಿ ಸಿಕ್ಕ ವಸ್ತುವಿನ ಬೆಲೆ ತಿಳಿಯದೆ ದುರುಪಯೋಗ ಮಾಡುವ ಬುದ್ಧಿ ಇಂದು ಸರ್ವೇಸಾಮಾನ್ಯವಾಗಿದೆ. ಅದಕ್ಕಾಗಿ ನಮಗೆ ಯಾವುದೇ ಪರಿಶ್ರಮವಿಲ್ಲದೇ ದೊರೆತ ಸ್ವಾತಂತ್ರ್ಯದ ಬೆಲೆಯೂ ತಿಳಿಯದಿರುವುದು ವಿಷಾದದ ಸಂಗತಿ.

ಸಮಗ್ರ ಭೂಮಿಯೇ ನಮ್ಮ ಮನೆಯಾದಾಗ ಅದರ ಮಹತ್ತ್ವ ತಿಳಿಯದೇ ಮಾನವ ಕೇವಲ ತನ್ನ ಸ್ವಾರ್ಥದ ಬಗ್ಗೆ ಯೋಚಿಸಿದ. ಅವಿಭಕ್ತ ಕುಟುಂಬದಲ್ಲಿದ್ದ ಸಹಕಾರ ಮನೋಭಾವ, ತ್ಯಾಗ, ಪ್ರೀತಿ, ಸ್ನೇಹ, ಪ್ರಕೃತಿ ಆರಾಧನೆ, ಮಾತೃಭೂಮಿಯ ಬಗೆಗಿನ ಗೌರವ, ಹಿರಿಯರ ಸೇವೆ, ಗುರುಭಕ್ತಿ ಹಾಗೂ ಕಿರಿಯರಲ್ಲಿ ಅದರ ಮೊದಲಾದ ಉತ್ಕೃಷ್ಟ ಗುಣಗಳನ್ನು ವಿಭಕ್ತ ಕುಟುಂಬದಲ್ಲಿ ಕಾಣದೇ ಇರಲು ಕಾರಣ ಹಣ. ಸಂಸ್ಕಾರವೆಂಬ ಅಮೂಲ್ಯ ಆಸ್ತಿಯ ಬೆಲೆಯನ್ನು ಕಾಂಚಾಣ ಮರೆಯಾಗುವತೆ ಮಾಡಿರುವುದು ಇಂದಿನ ಮಾನವ ಸಂಕುಲದ ದುರ್ದೆಶೆಯಲ್ಲಿ ಕಾಣಬಹುದಾಗಿದೆ. ಇದೇ ಕಾರಣದಿಂದಾಗಿ ಇಂದು ಮನೆಯು ವ್ಯಾಖ್ಯಾನವೆಂಬುದು ತನ್ನ ಪರಿವಾರಕ್ಕಾಗಿ ಅಂದರೆ, ತಂದೆ ತಾಯಿ ಮಕ್ಕಳಿಗೆ ಸೀಮಿತವಾಗಿದೆ.

ತನ್ನ ಸ್ವಾರ್ಥಕ್ಕಾಗಿ ಹಾಗೂ ಕೇವಲ ತನ್ನ ಪರಿವಾರದ ಸುಖಕ್ಕಾಗಿ ಕಠಿಣ ಪರಿಶ್ರಮ ಮಾಡುತ್ತಾ ಪರಿಸರವನ್ನು ತನ್ನ ಅಡಿಯಾಳಾಗಿ ಪರಿವರ್ತಿಸಲು ಪ್ರಯತ್ನಿಸಿದ ಮಾನವನ ಅಟ್ಟಹಾಸಕ್ಕೆ ಪ್ರಕೃತಿ ಸರಿಯಾದ ಸಮಯದಲ್ಲಿ ಉತ್ತರ ನೀಡುತ್ತದೆ. ಎಲ್ಲಾ ಪ್ರಾಣಿಗಳಲ್ಲಿ ಶ್ರೇಷ್ಠ ಎಂಬ ಬಿರುದು ಪಡೆದು, ತನಗೆ ಅನ್ನ ನೀಡಿದ ಪ್ರಕೃತಿ ಮಾತೆಯ ಉಪಕಾರದ ಬದಲಾಗಿ, ಆಕೆಯನ್ನೇ ಆಶ್ರಯಿಸಿಕೊಂಡಿರುವ ಇತರ ಮೂಕ ಪ್ರಾಣಿಗಳ ಆವಾಸ, ಆಹಾರ ಹಾಗೂ ಸ್ವಾತಂತ್ರ್ಯಕ್ಕೆ ಧಕ್ಕೆಯುಂಟು ಮಾಡಿದ. ಪ್ರಕೃತಿಯ

ಸಂಪನ್ಮೂಲಗಳನ್ನು ಅವಶ್ಯಕತೆಗಿಂತ ಹೆಚ್ಚಾಗಿ ಬಳಸಿ ತನ್ನ ಕೃತಘ್ನತೆಯನ್ನು ವ್ಯಕ್ತಪಡಿಸಿದ ಮನುಷ್ಯನ ಅಮಾನುಷ ಕೃತ್ಯಗಳಿಗೆ ನಿಸರ್ಗವೇ ತಕ್ಕ ಶಾಸ್ತಿಯನ್ನುಂಟುಮಾಡುವುದು. ಅಧರ್ಮ ಹೆಚ್ಚಿದಾಗ ಧರ್ಮ ಸ್ಥಾಪನೆಗಾಗಿ ಬರುವೆ ಎಂಬ ಭಗವಂತ, ಇಂದು ಪರಿಸರದ ಮೇಲಿನ ದೌರ್ಜನ್ಯಗಳಿಗೆ ಉತ್ತರವಾಗಿ ಕೊರೊನಾದಂತಹ ಶಿಕ್ಷೆ ನೀಡಿ ವಿಜ್ಞಾನದ ಆವಿಷ್ಕಾರಗಳಿಗೆ ಸವಾಲು ಹಾಕಿದ್ದಾನೋ ಎಂಬ ಪ್ರಶ್ನೆ ಸರ್ವರಲ್ಲೂ ಮೂಡಿರುವುದು ಆಶ್ಚರ್ಯವೇನಲ್ಲ.

ಯಾವಾಗ ನಾವು ಪ್ರಕೃತಿಯನ್ನು ಗೌರವಿಸಲಾರೆವೋ ಹಾಗೂ ದಬ್ಬಾಳಿಕೆ ನಡೆಸಿ ಆಕೆಯ ತಾಳ್ಮೆಯನ್ನು ಪರೀಕ್ಷಿಸುವೆವೋ ಆಗ ಸುನಾಮಿ, ಭೂಕಂಪದಂತಹ ವಿಕೋಪಗಳಿಂದ ತಪ್ಪಿಗೆ ಶಿಕ್ಷೆ ಪಡೆದು ತಿದ್ದಿಕೊಳ್ಳುವ ಅವಕಾಶ ದೊರೆಯುವುದು. ಯಾವಾಗ ನಾವು ನಮ್ಮ ಸಂಸ್ಕಾರವನ್ನು ಮರೆತು ಸ್ವೇಚ್ಛಾಚಾರದಲ್ಲಿ ತೊಡಗಿಕೊಳ್ಳುತ್ತೇವೋ, ಆಗ ಕೊರೊನದಂತಹ ಅದೃಶ್ಯ ಜೀವಿ ಸಂಪೂರ್ಣ ವಿಶ್ವದ ಮೇಲೆ ಆಳ್ವಿಕೆ ಮಾಡುವುದು.

ಮನೆಯೆಂದರೆ ಕೇವಲ ನಮ್ಮ ಪರಿವಾರವಷ್ಟೇ ಅಲ್ಲದೆ ನಮ್ಮ ಸುತ್ತಲಿನ ಪರಿಸರ, ಪ್ರಕೃತಿಯಲ್ಲಿನ ನಮ್ಮ ಸಹಜೀವಿಗಳು, ಮಾತೃಭೂಮಿಯಾಗಿದೆ. ಮಾನವ ಸಂಘಜೀವಿಯಾಗಿದ್ದು ತಾನು ಬದುಕಲು ಪರರ ಮೇಲೆ ನಿರ್ಭರನಾಗಬೇಕಾದ್ದು ಅವಶ್ಯಕ. ಮನುಷ್ಯನಿಂದ ಪ್ರಕೃತಿಯಲ್ಲ, ಪ್ರಕೃತಿಯಿಂದ ಮನುಷ್ಯ ಎಂಬ ಸತ್ಯದ ಅರಿವು ನಮ್ಮಲ್ಲಿ ಇರಲೇಬೇಕು. ಮಾನವನಿಲ್ಲದೆಯೂ ಸೃಷ್ಟಿ ನಡೆಯಲು ಸಾಧ್ಯವಿದೆ. ಆದರೆ ಪ್ರಕೃತಿ ಹಾಗೂ ಇತರ ಜೀವಿಗಳ ಹೊರತಾಗಿ ಮಾನವ ಬದುಕಲಾರ. ಜೀವನದ ಮೂಲಭೂತ ಪಾಠವಿದು. ಈ ಪಾಠ ಮರೆತಾಗ ಪ್ರಕೃತಿ ವಿಕೋಪ ಸಹಜ. ಪ್ರಕೃತಿ ತನ್ನ ಸಹನೆಯನ್ನು ಮರೆತರೆ ಕೊರೊನಾದಂತಹ ಭಯಾನಕ ಜೀವಿಯಿಂದ ಮಾನವ ಸಂಕುಲದ ಮಾರಣ ಹೋಮ ಖಂಡಿತ.

ಇಂತಹ ಕಠಿಣ ಸಂದರ್ಭದಲ್ಲೂ ಸಮಾಧಾನಕರ ಸಮಾಚಾರವೆಂದರೆ, ಇಂತಹ ವಿಕೋಪಗಳಿಂದ ಬುದ್ಧಿಕಲಿಯುವ ಪ್ರಯತ್ನ ಮಾನವ ಮಾಡುತ್ತಾನೆ. ಕೊರೊನಾ, ಮುಖ್ಯವಾಗಿ ಭಾರತೀಯರಿಗೆ, ತಮ್ಮ ಸಂಸ್ಕಾರ, ಸಂಸ್ಕೃತಿಯ ಮಹತ್ತ್ವವನ್ನು ತಿಳಿಸಿಕೊಟ್ಟಿದೆ. ಪಾಶ್ಚಾತ್ಯ ಸಂಸ್ಕೃತಿಯ ಕಬಂಧಬಾಹುಗಳಲ್ಲಿ ಸಿಲುಕಿದ್ದ ಭಾರತೀಯರಿಗೆ ಇಂದು ಕೈ ಕುಲುಕುವ ಬದಲು ನಮಸ್ಕಾರ ಮಾಡುವುದರ ಉಪಯೋಗ, ಸದಾ ಸ್ವಚ್ಛತೆಗೆ ಆದ್ಯತೆ ಕೊಡುವುದು ಹಾಗೂ ಮಣ್ಣು, ಗಿಡಮೂಲಿಕೆಗಳ ಬಳಕೆ ಹಾಗೂ ಸಸ್ಯಾಹಾರದ ಮೂಲಕವೇ ರೋಗನಿರೋಧಕ ಶಕ್ತಿಯ ಅಭಿವೃದ್ಧಿ ಆಗುವುದು, ಮೊದಲಾದ ಭಾರತೀಯ ಸಂಸ್ಕೃತಿಯ ಗುಣಗಳೇ ಶ್ರೇಷ್ಠ ಎಂಬ ಸತ್ಯದ ಅರಿವಾಗಿದೆ. ತನಗೆಷ್ಟು ಬೇಕೋ ಅಷ್ಟರಲ್ಲೇ ತೃಪ್ತನಾಗುವ ಬುದ್ಧಿ ಬಂದಿದೆ. ಬಹಳ ಮುಖ್ಯವಾಗಿ ಹಣ ಜೀವನೋಪಾಯಕ್ಕೆ ಸಾಧನವೇ ವಿನಹ ಸರ್ವಸ್ವವಲ್ಲ ಎಂಬ ಮಾತಿನ ತಿಳುವಳಿಕೆ ಬಂದಿದೆ. ಸಂಬಂಧಗಳ ಬೆಲೆ ಮಾನವನಿಗೆ ಗೊತ್ತಾಗುತ್ತಾ ಬಂದಿದ್ದು, ಕೇವಲ ಬದುಕಲು ಒಂದು ಅವಕಾಶ ಸಿಕ್ಕಿದರೆ ಮಾಡಿದ ತಪ್ಪನ್ನು ಪುನರಾವರ್ತಿಸದೆ, ಪ್ರಕೃತಿಯ ನಿಯಮಗಳಿಗೆ ಅನುಗುಣವಾಗಿ ಬದುಕುವ ದೃಢ ನಿರ್ಧಾರ ಮಾಡಿದ್ದಾನೆ.

ಭಾರತೀಯರಾಗಿ ಹುಟ್ಟಿರವುದು ನಮಗೆಲ್ಲಾ ಹೆಮ್ಮೆಯ ವಿಚಾರವಾಗಿದೆ. ಭಾರತವನ್ನು ವಿಶ್ವಗುರುವಾಗಿ ಬಹುತೇಕ ರಾಷ್ಟ್ರಗಳು, ಸ್ವೀಕರಿಸಿ ಭಾರತದ ಸಂಸ್ಕೃತಿಯ ಪಾಲನೆ ಮಾಡುತ್ತಿವೆ. ತಮ್ಮ ಮನೆ, ತಮ್ಮ ಜನ್ಮಭೂಮಿಯ ಬಗ್ಗೆ ತುಚ್ಛ ಭಾವನೆಯಿಟ್ಟಿಕೊಂಡಿದ್ದ ಎಷ್ಟೋ ಮಂದಿ ಇಂದು ಭಾರತಾಂಬೆಯ ಮಕ್ಕಳಾಗಿ ಜನಿಸಲು ಅವಕಾಶ ನೀಡಿದ್ದಕ್ಕೆ ಭಗವಂತನಿಗೆ ಕೃತಜ್ಞತೆ ಸಲ್ಲಿಸುತ್ತಿದ್ದಾರೆ. ಈ ಮೂಲಕ ಕೊರೊನಾದಂತಹ ಜಾಗತಿಕ ಖಾಯಿಲೆ ಮನೆಯೇ ಮಂತ್ರಾಲಯ ಎಂಬ ಮಾತಿಗೆ ಸಾಕ್ಷ್ಯ ನೀಡಿದೆ.

ಸಮಯ

ಜಿ. ಸುದರ್ಶನ್
ತೃತೀಯ ಬಿ.ಎ.

ಸಮಯ ಎನ್ನುವುದನ್ನು ನಿಲ್ಲಿಸೋಕೆ ಆಗುವುದಿಲ್ಲ, ಸಮಯ ಒಮ್ಮೆ ಹೋದರೆ ಮತ್ತೇ ಆ ಸಮಯ ಬರುವುದಿಲ್ಲ.

ಈ ಜಗತ್ತಿನಲ್ಲಿ ಒಂದು ವಿಶಿಷ್ಟ ಅಂಶ ಎಂದರೆ ಅದು ಸಮಯ. ಇಂದು ನಾನು ಹೇಳುವುದು ಹೆಚ್ಚುವರಿ ಸಮಯ ಪಡೆಯುವುದು ಹೇಗೆ ಎಂದು.

ಸಮಯ ಎಲ್ಲರಿಗೂ ಒಂದೇ ಅದು 24 ಘಂಟೆಗಳು (ಒಂದು ದಿನಕ್ಕೆ) ಆ ಒಂದು ದಿನದ 24 ಘಂಟೆಯಲ್ಲಿ ಹೆಚ್ಚಿನ ಸಮಯ ಪಡೆಯೋದು ಹೇಗೆ ಎಂದು ತಿಳಿಯೋಣ. ಇಲ್ಲಿ ಮೊದಲಿಗೆ ನಮ್ಮ ಗುರಿ ಏನು ಎನ್ನುವುದು ಪ್ರಾಮುಖ್ಯತೆ ಪಡೆಯುತ್ತದೆ.

ಒಂದು ಗುರಿಯನ್ನು ಇಟ್ಟುಕೊಂಡು ಅದನ್ನು ಪ್ರೀತಿಸಿ, ಈ ಉದಾಸೀನತೆ ಬರುವುದು ಸಹಜ. ಅದು ಯಾರಿಗೂ ಬಾರದೆ ಇರುವುದಿಲ್ಲ.

ಎಲ್ಲರಿಗೂ ತಮ್ಮ ಗುರಿ ಸಾಧನೆಯ ಮೊದಲು ಉದಾಸೀನತೆ ಬಂದು ಹೋಗಿದೆ. ಇಂದಿನ ಯಶಸ್ವಿ ವ್ಯಕ್ತಿಗಳು ಹಿಂದೆ ಒಂದು ದಿನ ಆ ಉದಾಸೀನತೆಯನ್ನು ತ್ಯಜಿಸಿದವರು. ಅದಕ್ಕಾಗಿ ನಮ್ಮ ಗುರಿ ಸಂಕಲ್ಪ ಸದೃಢವಾಗಿದ್ದರೆ ಆ ಉದಾಸೀನತೆ ಬಂದಾಗ ನಮ್ಮ ಗುರಿಯನ್ನು ನೆನಪಿಸಿಕೊಂಡು ಅಂದುಕೊಂಡ ಕೆಲಸ ಮಾಡಬೇಕು.

ನಮ್ಮ ಮನಸ್ಸು, ದೇಹ ಹಲವಾರು ವಿಶಿಷ್ಟತೆಗಳನ್ನು ಹೊಂದಿದೆ. ಅದರಲ್ಲಿ ಜೀವ ಗಡಿಯಾರವೂ ಒಂದು, ಕೇಳಲು ಆಶ್ಚರ್ಯವೆನಿಸಿದರೂ ನಿಜ. ನಿಮ್ಮಲ್ಲಿ ಒಂದು ಗಡಿಯಾರವಿದೆ ಅದೇ ಜೀವ ಗಡಿಯಾರ.

ಕೆಲವೊಮ್ಮೆ ಏನಾದರೂ ಅನಿವಾರ್ಯ ಕಾರ್ಯ ಇದ್ದಾಗ ಅಲಾರಮ್ ಇಲ್ಲದೆ ಸರಿಯಾದ ಟೈಮ್‌ಗೆ ಎದ್ದೇಳುತ್ತೇವೆ. ಅದು ಸಾಧ್ಯವಾದ ಅಂಶವಾಗಿದೆ. ಒಮ್ಮೆ ಪ್ರಯತ್ನಿಸಿ ಬೆಳಿಗ್ಗೆ 5 ಘಂಟೆಗೆ ಏಳಬೇಕೆಂದು ದೃಢವಾದ ನಿರ್ಧಾರ ತೆಗೆದುಕೊಂಡು ಮಲಗಿ ನಿಮಗೆ ಆಶ್ಚರ್ಯ ಎನಿಸಬಹುದು. ಸರಿಯಾಗಿ ಅದೇ ಸಮಯಕ್ಕೆ ನಮಗೆ ಎಚ್ಚರವಾಗುತ್ತದೆ. ಅಥವಾ ಆ ಸಮಯದ ಮೊದಲೇ ಎಚ್ಚರವಾಗುತ್ತದೆ.

ಈ ವೈಶಿಷ್ಟ್ಯತೆ ಹೆಚ್ಚಿನವರಿಗೆ ತಿಂದಿಲ್ಲ. ನಿಮ್ಮಲ್ಲಿ ಏನಾದರು ಗುರಿಗಳಿದ್ದರೆ ಈ ಜೀವ ಗಡಿಯಾರದ ಬಗ್ಗೆ ಯೋಚಿಸಿ ಹಾಗೂ ಸಕ್ರಿಯವಾಗಿ ಬಳಸಿಕೊಳ್ಳಿ.

ಬ್ರಾಹ್ಮಿ ಮುಹೂರ್ತ :

ಬ್ರಾಹ್ಮೀಮುಹೂರ್ತ ಎನ್ನುವುದು ಇಂದಿಗೂ ಒಂದು ಅದ್ಭುತ ಸಮಯ. ಆ ಸಮಯದಲ್ಲಿ ಎದ್ದು ದಿನ ಆರಂಭಿಸಿಕೊಂಡರೆ ಅಂದು ನಿಜವಾಗಿಯೂ ನೀವು ಉತ್ಸಾಹದಿಂದ ಕಳೆಯುವಿರಿ. ಆ ಸಮಯದಲ್ಲಿ ಎದ್ದಾಗ ನಮ್ಮ ಮೆದುಳಿನ ಎನರ್ಜಿ ಲೆವಲ್ಸ್ ಜಾಸ್ತಿ ಇರುತ್ತದೆ. ಈ ಬ್ರಾಹ್ಮಿ ಮುಹೂರ್ತದಲ್ಲಿ ಏಳುವವರ ಸಂಖ್ಯೆ ಕಡಿಮೆ, ಎದ್ದವರು ದೊಡ್ಡ ದೊಡ್ಡ ವ್ಯಕ್ತಿಗಳಾಗಿದ್ದಾರೆ. ಬ್ರಾಹ್ಮಿ ಮುಹೂರ್ತದ ಸಮಯ ಬೆಳಗಿನ ಜಾವ 4ರಿಂದ 5ರ ತನಕ ಈ ಸಮಯದಲ್ಲಿ ಓದಿದರೆ ನಿಜಕ್ಕೂ ನೆನಪಿನ ಶಕ್ತಿ ಸಹಕರಿಸುತ್ತದೆ ಎಂದು ಜ್ಞಾನಿಗಳು ಹೇಳುತ್ತಾರೆ ಹಾಗೂ ನಿಜವೂ ಹೌದು.

ಸಮಯ ಸಂಪಾದನೆ :

ಜೀವನದಲ್ಲಿ ಎಲ್ಲರಿಗೂ ಬೇಕಾದುದು ಸಮಯ. ಇರುವ ಸಮಯವನ್ನೆಲ್ಲ ಬ್ಯುಸಿ ಎಂದು ಹೇಳಿಕೊಂಡು ಹಲವಾರು ಸಮಯವ್ಯರ್ಥ ಕಾರ್ಯಗಳಲ್ಲಿ ಇಂದಿನ ಜನ ತೊಡಗಿರುತ್ತಾರೆ.

ಗೆಳೆಯರೇ ಹಾಗಾದರೆ ಸಮಯ ಹೇಗೆ ಪಡೆಯುವುದು ಎಂದು ತಿಳಿಯೋಣ ಬನ್ನಿ.

ಉದಾಹರಣೆ :

ಪ್ರತಿದಿನ ನೀವು 4.30ಕ್ಕೆ ಬೆಳಿಗ್ಗೆ ಎದ್ದರೆ, ಇತರರು 7.00 ಗಂಟೆಗೆ ಎದ್ದೇಳುವವರು ಎಂದು ಭಾವಿಸೋಣ ಆಗ ನೀವು, ಇತರರು ದಿನ ಆರಂಭಿಸುವ ಮೊದಲೆ ಎದ್ದು

ನಿಮ್ಮ ದಿನವನ್ನು ಆರಂಭಿಸಿ ಪ್ರತಿನಿತ್ಯ 2 ಘಂಟೆ 30 ನಿಮಿಷವನ್ನು ಹೆಚ್ಚುವರಿಯಾಗಿ ನೀವು ಪಡೆಯುವಿರಿ. ಅಂದರೆ ಒಂದು ವಾರಕ್ಕೆ 52 ಘಂಟೆ ಪಡೆಯುವಿರಿ. 52 ಘಂಟೆ ಎಂದರೆ 2 ದಿನ 4 ಘಂಟೆಗೆ ಸಮಾನ. ಇದನ್ನು ಸಮಯ ಸಂಪಾದನೆ ಎನ್ನಬಹುದು.

ಒಮ್ಮೆ ಯಾರಾದರೂ ಸಮಾಜದಲ್ಲಿ ಒಬ್ಬ ಯಶಸ್ವಿ ವ್ಯಕ್ತಿ ದೊರೆತಾಗ ಅವರ ಬಳಿ ಕೇಳಿ ಬೆಳಿಗ್ಗೆ ಎಷ್ಟು ಘಂಟೆಗೆ ಏಳುವಿರಿ ಎಂದು ಹಾಗೂ ಅವರ ದಿನಚರಿಯನ್ನು ತಿಳಿಯಿರಿ ಸಮಯಕ್ಕೆ ಅವರು ವಿಶೇಷ ಪ್ರಾಧಾನ್ಯತೆ ಕೊಡುವುದು ಸುಳ್ಳಲ್ಲ.

ಮತ್ತೊಂದು ಉದಾಹರಣೆ ತೆಗೆದುಕೊಳ್ಳುವುದಾದರೆ ನಮ್ಮ ಅಧ್ಯಾಪಕರುಗಳು ಸಹ ಬೆಳಿಗ್ಗೆ ಬ್ರಾಹ್ಮಿ ಮುಹೂರ್ತದ ಸಮಯದಲ್ಲೇ ಏಳುವರು.

ಸಮಯವನ್ನೇ ಸರಿಯಾಗಿ ಬಳಸಿಕೊಳ್ಳಿ ನೀವು ಸಹ ಯಶಸ್ವಿ ವ್ಯಕ್ತಿಗಳಾಗಿ. ಇದೇ ನನ್ನ ಹಾರೈಕೆ.

ಭಾರ್ಗವ ಆಂಗ್ಲ ಮಾಧ್ಯಮ ಶಾಲೆ

(ಬಹುಮಾನಿತ ಆಶುಕಥೆ)

ಎಮ್. ಎಸ್. ಶ್ರೀಲತಾ ಹೆಬ್ಬಾರ್
ದ್ವಿತೀಯ ಎಂ.ಎಸ್ಸಿ.

ಕನಕದುರ್ಗ ಹೆಸರು ಕೇಳಿದೊಡನೆ ಬೆಚ್ಚಿ ಬಿದ್ದಳು ಮೇದಿನಿ. ತನ್ನವರು ಎಂದು ಆರು ಜನ ಸುತ್ತಲಿದ್ದರೂ ಮೇದಿನಿಗೆ ಸಮಾಧಾನವಿಲ್ಲ. ವಕೀಲೆ ಮೇದಿನಿ ಎಂದು ಹೆಸರುವಾಸಿಯಾಗಿ, ಎಲ್ಲರೆದುರೂ ಘನತೆಯಿಂದ ಬಾಳುತ್ತಿರುವ ಮೇದಿನಿಗೆ ಜೀವನ ಒಂದು ನಾಲ್ಕು ಗಾಲಿಗಳ, ನಿಧಾನಕ್ಕೆ ಓಡುವ ಬಸ್ಸಿನಂತಾಗಿದೆ. ಒಂದೊಂದು ನಿಲ್ದಾಣದಲ್ಲಿ ಒಂದಿಷ್ಟು ಜನ ಬಸ್ಸು ಹತ್ತಿ ಇಳಿಯುವಂತಾಗಿದೆ ಅವಳ ಜೀವನ.

ಮೇದಿನಿ 25 ವರುಷದ ತರುಣಿ. ಹಾಲಿನಲ್ಲಿ ಅದ್ದಿ ಎತ್ತಿದಂತೆ ಪಳಪಳ ಹೊಳೆಯುವ ಅವಳ ಮೈಬಣ್ಣ ಎಂತಹ ಬ್ರಹ್ಮಚಾರಿಯನ್ನು ಆಕರ್ಷಿಸುತ್ತದೆ. ಮೇದಿನಿ, ಸುಮಾ ಅಶೋಕ್‌ರ ಮುದ್ದಿನ ಎರಡನೇ ಮಗಳು. ಮೊದಲನೆಯವಳು ಸುನಂದಿನಿ. ಸುನಂದಿನಿ ಮದುವೆ ಆಗಿ ಆಸ್ಟ್ರೇಲಿಯಾದಲ್ಲಿ ನೆಲೆಸಿದ್ದಾಳೆ. ಹಾಗಾಗಿ ಮೇದಿನಿ ಈಗ ಒಬ್ಬಳೇ ಮಗಳು ಮನೆಯಲ್ಲಿ ಪ್ರೀತಿ, ಮುದ್ದು ಎಲ್ಲವೂ ಅವಳಿಗೆ ಹೆಚ್ಚೇ ತೋರಿಸುತ್ತಿರುವ ಅಪ್ಪ, ಅಮ್ಮನ ನಡುವೆ ಅರಳಿರುವ ಗುಲಾಬಿಯಂತೆ ನಲಿಯುತ್ತಿದ್ದಳು ಹುಡುಗಿ ಮೇದಿನಿ.

ಅಚಾನಕ್ಕಾಗಿ ಮೇದಿನಿಯ ಜೀವನದಲ್ಲಿ ಹೊಸದಾಗಿ ಬಂದು ಧೂಳೆಬ್ಬಿಸಿದವನು ಭಾರ್ಗವ. ಕನಕದುರ್ಗದಲ್ಲಿ ದೊಡ್ಡ ಕುಲವೆಂದರೆ ಭಾರ್ಗವನ ಮನೆತನದವರದ್ದು. ಮನೆತನದ ಕೀರ್ತಿ ಪತಾಕೆಯನ್ನು ಹಾರಿಸಲೆಂದೇ ಹುಟ್ಟಿದವನು ಭಾರ್ಗವ. ಶಿಸ್ತು, ಸಂಯಮ, ನಯ–ವಿನಯ, ಎಲ್ಲಾ ಒಳ್ಳೆಯ ಗುಣಗಳು ಅವನಲ್ಲಿಯೇ ಮೇಳೈಸಿದಂತಿದೆ. ಅವನೂ ದೊಡ್ಡ ಸೈನಿಕ. ಬಾರತದ ಗಡಿ ಭಾಗದಲ್ಲಿದ್ದು ದೇಶವನ್ನು ಕಾಯುತ್ತಿದ್ದ ವೀರ ಯೋಧ. ಹಾಗಾಗಿಯೇ ಅಜ್ಜ, ಅಜ್ಜಿ, ಅಪ್ಪ, ಅಮ್ಮ, ತಂಗಿ ಎಲ್ಲರನ್ನೂ ಬಿಟ್ಟು ದೇಶದ ರಕ್ಷಣೆಗಾಗಿ ಪಣತೊಟ್ಟು ನಿಂತಿರುವನು ಭಾರ್ಗವ. ಕಾಣಲು ಭೀಮನಂತೆ ಬಲಶಾಲಿಯಾಗಿದ್ದರೂ, ಮನಸ್ಸು ತುಂಬಾ ಮೃದು.

ಮೂರು ತಿಂಗಳಿಗೊಮ್ಮೆ ಸಿಕ್ಕುವ ರಜೆಯಲ್ಲಿ ಭಾರ್ಗವ ಕನಕದುರ್ಗಕ್ಕೆ ಬಂದಿದ್ದ. ಎಂದೂ ತಪ್ಪೇ ಮಾಡದ ಈ ಹುಡುಗ ಯಾರದ್ದೋ ತಪ್ಪಿಗೆ ಇವನು ಅಪರಾಧಿಯಂತೆ ನಿಂತಿದ್ದ. ಆದದ್ದಿಷ್ಟೆ. ರಸ್ತೆಯಲ್ಲಿ ನಡೆಯುವಾಗ ಭಾರ್ಗವನ ಎದುರು ಮೇದಿನಿ ಬರುತ್ತಿದ್ದಳು. ಮೇದಿನಿಯು ಗಮನವೆಲ್ಲಿತ್ತೋ ಎದುರಿಗೆ ಬರುತ್ತಿದ್ದ ಹೆಂಗಸೊಬ್ಬರಿಗೆ ಡಿಕ್ಕಿ ಹೊಡೆದಿದ್ದಳು. ಅವರಿಗೆ ಮೇದಿನಿಯ ಬದಲು ಭಾರ್ಗವನೇ ಡಿಕ್ಕಿ ಹೊಡೆದದ್ದೆನಿಸಿ ಅವನಿಗೆ ಬೈಯುತ್ತಲೇ ಇದ್ದರು. ಅವರ ಮಾತಿನ ಪ್ರಹಾರಕ್ಕೆ ಸಿಲುಕಿ ಮೇದಿನಿ ಭಾರ್ಗವ ಇಬ್ಬರೂ ಚಕಾರವೆತ್ತಲಿಲ್ಲ.

ಇಷ್ಟರ ನಡುವೆ ಮೇದಿನಿ ತನ್ನ ಅಣ್ಣ ಇದ್ದಿದ್ದರೆ ಹೀಗೇ ಇರುತ್ತಿದ್ದನೇನೋ ಎಂದು ಭಾರ್ಗವನನ್ನೇ ಕಾಣುತ್ತಿದ್ದಳು. ಆ ಹೆಂಗಸು ಬೈದು ಸುಸ್ತಾಗಿ ಹಾಗೆಯೇ ಮುಂದೆ ಹೋದರು. ಭಾರ್ಗವನೂ ತನ್ನ ಪಾಡಿಗೆ ಮನೆಗೆ ಹೋದ. ಆದರೆ ಅದೇನು ಅವಿನಾಭಾವ ಸಂಬಂಧವೋ ಭಾರ್ಗವನ ಮನೆಯನ್ನು ಹರಾಜಿಗೆ ಇಡುವ ಪರಿಸ್ಥಿತಿ ಬಂದಾಗ ಮೇದಿನಿಯೇ ಮುಂದೆ ನಿಂತು ಸಮಸ್ಯೆ ಬಗೆಹರಿಸಿದ್ದಳು. ಮೇದಿನಿ ತಾನಾಗಿಯೇ ಭಾರ್ಗವನನ್ನು ಅಣ್ಣಾ ಎಂದು ಕರೆದಾಗ ಭಾರ್ಗವ ನೀರಾಗಿ ಹೋಗಿದ್ದ. ಮನೆಯಲ್ಲಿ ಸ್ವಂತ ತಂಗಿಯೇ ಇದ್ದರೂ ಇವಳನ್ನು ನೋಡಿದೊಡನೆ ತಾನಾಕೆ ಹೀಗಾದೆ ಎಂದು ಅವನೇ ಯೋಚಿಸುತ್ತಿದ್ದ.

ಕನಸಿನಲ್ಲಿ ಕಾಣುತ್ತಿದ್ದ ಆ ತಂಗಿ ಇವಳೇ ಮೇದಿನಿ ಎಂದು ಗೊತ್ತಾಗುವ ವೇಳೆಗಾಗಲೇ ರಜೆಯ ಸಮಯ ಮುಗಿಯುತ್ತಾ ಬಂದಿತ್ತು. ಮೇದಿನಿಗೂ ಹಾಗೇ ಕನಸಿನಲ್ಲಿ ಕಂಡ ಸಹೋದರ ಭಾರ್ಗವನೇ ಎಂದು ಮನದಟ್ಟಾಗುವುದರಲ್ಲಿ ಅವಳು ವಕೀಲವೃತ್ತಿಯಲ್ಲಿ ಮುಂದುವರೆಯಲು ಬೆಂಗಳೂರನ್ನು ಸೇರಿಯಾಗಿತ್ತು. ಎಷ್ಟೇ ಪ್ರಯತ್ನಿಸಿದರೂ ಇಬ್ಬರೂ ಒಬ್ಬರನ್ನೊಬ್ಬರು ಕಾಣಲಾಗಲಿಲ್ಲ. ದೂರವಾಣಿ ಸಂಪರ್ಕ ಮಾಡಲೂ ಆಗಲಿಲ್ಲ. ಎಲ್ಲೆಡೆಯಿಂದಲೂ ನಕಾರಾತ್ಮಕ ಉತ್ತರವೇ.

ಪುನಃ ಸೇನೆ ಸೇರಲು ಹೋಗುವಾಗ ಒಮ್ಮೆ ಉಡುಪಿಗೆ ಹೋಗಬೇಕೆನಿಸಿತು ಭಾರ್ಗವನಿಗೆ. ಅದೇಕನಿಸಿತೋ? ಅವನಿಗೂ ತಿಳಿಯದು. ಕಡಲಿನೆಡೆಗೆ ನಡೆದಾಗ ಯಾವುದೋ ನಿರ್ಲಿಪ್ತ ಭಾವ ಅವನಲ್ಲಿ ಅದೆಷ್ಟೋ ಘಳಿಗೆಗಳಿಂದ ಮೇಲೆದ್ದು ಕೆಳಗಿಳಿಯುವ ಕಡಲಿನಲೆಗಳನ್ನು ತದೇಕಚಿತ್ತವಾಗಿ ನೋಡುತ್ತಿದ್ದಾನೆ ಭಾರ್ಗವ. ಉಕ್ಕಿ ಹರಿಯುವ ತೆರೆಗಳು ಅವನ ಬದುಕಿನ ಪುಟಗಳನ್ನು ತೆರೆಯುವಂತಿವೆ. ಎಲ್ಲರೂ ನೆನಪಾಗುತ್ತಿದ್ದಾರೆ. ಅಪ್ಪ, ಅಮ್ಮ, ಅಣ್ಣ, ತಂಗಿ ಮತ್ತೆ ಅವಳು? ಅವಳು ಮೇದಿನಿ...ಎಲ್ಲರೂ ನನ್ನ ಬದುಕಿನ ಪುಟಗಳಲ್ಲಿ ಅಕ್ಷರಗಳಾಗಿ ಅಚ್ಚೊತ್ತಿದ್ದವರು. ನಾಳೆಯಿಂದ ಎಲ್ಲವೂ ಬದಲಾಗಲಿದೆ. ಬಂಧಗಳೆಲ್ಲವೂ ಸಂಬಂಧಗಳಾಚೆಯ ಪೊರೆಯನ್ನು ಕಳಚಿ ಬಯಲಾಗಲಿವೆ. ವರ್ಷಗಳಿಂದ ತುಡಿಯುತ್ತಲೇ ಇದ್ದ ಆಧ್ಯಾತ್ಮಿಕ ಒಲವು ಮೇರೆ ಮೀರಿ ಹರಿಯುತ್ತಲಿದೆ. ಎಲ್ಲರ ಎಲ್ಲ ಪ್ರಶ್ನೆಗಳಿಗೂ ನಾಳೆ ಎಂಬುದು ಉತ್ತರವಾಗಲಿದೆ. ಕಡಲರಾಜ ಇನ್ನೆಂದು ನಿನ್ನ ನೋಡುವೆನೋ ಅರಿವಿಲ್ಲ. ಇಂದೇ ನನ್ನೆಲ್ಲ ದುಗುಡಗಳು ಕೊನೆಯಾಗಲೆಂದು ಹಾರೈಸು. ನಾನೂ ನಿನ್ನಂತೆ ಕಡಲಾಗುವಂತೆ ಹರಸು ಎನ್ನುತ್ತಲೇ ಕೈಗಳನ್ನು ಮುಗಿದು ನಿಂತ ಭಾರ್ಗವನೆದುರಿಗೆ ಭೋರ್ಗರೆಯುವ ಕಡಲು ಬಾನ ಬಣ್ಣದಿಂದಾಗಿ ಬಂಗಾರದಂತೆ ಹೊಳೆಯುತ್ತಿತ್ತು.

ಅವನ ಪ್ರಶ್ನೆಗಳೇ. ಅವಳಿಗೂ ಪ್ರಶ್ನೆಗಳು. ಕನಸಿನಲ್ಲಿ ಕಾಣುವ ದೃಶ್ಯ ಹೇಗೆ ನಿಜವಾಯಿತೆಂದು? ಉತ್ತರವೇ ಸಿಗುತ್ತಿಲ್ಲ. ಕಡಲಿನೆದುರಿಗೆ ನಿಂತು ಭಾರ್ಗವ ಯೋಚಿಸುತ್ತಿದ್ದರೆ, ಮೇದಿನಿ ತನ್ನ ಒತ್ತಡದ ಕೆಲಸದ ನಡುವೆಯೂ ಅದನ್ನೇ ಯೋಚಿಸುತ್ತಿದ್ದಾಳೆ. ಅದೇನು ಕಾಕತಾಳೀಯವೋ ಭಾರ್ಗವನಿದ್ದ ಉಡುಪಿಯಿಂದ ಬೆಂಗಳೂರಿಗೆ ಹೋಗುತ್ತಿದ್ದ ಬಸ್ಸಿಗೂ, ಮೇದಿನಿಯಿದ್ದ ಬೆಂಗಳೂರಿನಿಂದ ಉಡುಪಿಗೆ ಹೊರಟ ಬಸ್ಸಿಗೂ ಅಪಘಾತವಾಗಿ ಇಬ್ಬರೂ ಆಸ್ಪತ್ರೆಯಲ್ಲಿ ಅಕ್ಕಪಕ್ಕವೇ ಮಲಗಿದ್ದರು. ಕುತೂಹಲದ ಪ್ರಶ್ನೆಗಳಿಗೆ ಉತ್ತರ ಹುಡುಕುವ ಮನಸಿದ್ದರೂ ಕಣ್ಣೆದುರೇ ಉತ್ತರವಿದ್ದರೂ ಇಬ್ಬರಿಗೂ ತಮ್ಮ ದೇಹಸ್ಥಿತಿಯಿಂದ ಮಾತನಾಡಲಾಗದೇ ಒದ್ದಾಡಿದ್ದರು.

ಇನ್ನೇನು ಉತ್ತರ ಹುಡುಕಿದೆ ಎಂದು ಮೇದಿನಿ ಯೋಚಿಸುವಾಗಲೇ ಭಾರ್ಗವ ಇಹಲೋಕ ತ್ಯಜಿಸಿದ್ದ. ಕಣ್ಣೆದುರೇ ಅಣ್ಣ ಎಂದು ಕರೆಯಬೇಕೆಂದು ಹಾತೊರೆಯುವ ಸಮಯದಲ್ಲಿ ಅಣ್ಣ ಇಲ್ಲ ಎಂದರೆ ಹೇಗಾಗಬಾರದು. ಮೇದಿನಿಯ ಜೀವ ಬೆಂದು ಹೋಗಿತ್ತು. ಆ ದುಃಖದಿಂದ ಹೊರಬರಲು ಇನ್ನೂ ಪ್ರಯತ್ನಿಸುತ್ತಿದ್ದಾಳೆ. ಕನಕದುರ್ಗದೆಡೆಗೆ ಹೋಗುವುದೇ ಇಲ್ಲ. ಹಗಲು ರಾತ್ರಿಯೆನ್ನದೆ ದುಡಿಯುತ್ತಾಳೆ. ಕರುಳ ಸಂಬಂಧವಲ್ಲದಿದ್ದರೂ, ಜನುಮ, ಜನುಮ ಸಂಬಂಧದ ಅಣ್ಣನ ನೆನಪಿಗಾಗಿ ಬಡ ಮಕ್ಕಳಿಗಾಗಿ ಭಾರ್ಗವ ಆಂಗ್ಲಮಾಧ್ಯಮ ಶಾಲೆಯನ್ನು ಕಟ್ಟಿಸುತ್ತಿದ್ದಾಳೆ. ಅಣ್ಣ–ತಂಗಿ ಎಂದರೆ ಹೀಗಿರಬೇಕೆಂಬುವ ಹಾಗೆ ಮಾದರಿಯಾಗಿದ್ದಾಳೆ ಮೇದಿನಿ.

ಆಧುನಿಕ ತಂತ್ರಜ್ಞಾನದ ಅತಿಯಾದ ಬಳಕೆ ಮತ್ತು ದುಷ್ಪರಿಣಾಮಗಳು....

ಅರುಣ್ ಕಿರಿಮಂಜೇಶ್ವರ
ವಿವೇಕಾನಂದ ಕಾಲೇಜು, ಪುತ್ತೂರು

"ಸರ್ವಂ ತಂತ್ರಜ್ಞಾನ ಮಯಂ" ಎಂಬ ಮಾತು ಪ್ರಸ್ತುತತೆಯನ್ನು ನಿಖರವಾಗಿ ವಿವರಿಸುತ್ತದೆ. ಏಕೆಂದರೆ ಆಡು ಮುಟ್ಟದ ಸೊಪ್ಪಿಲ್ಲ, ತಂತ್ರಜ್ಞಾನ ಬಳಕೆಯಾಗದ ಕ್ಷೇತ್ರವಿಲ್ಲ ಎನ್ನುವಷ್ಟರ ಮಟ್ಟಿಗೆ ತಂತ್ರಜ್ಞಾನ ತನ್ನ ವಿಸ್ತಾದ ವ್ಯಾಪ್ತಿಯನ್ನು ಸಕಲ ಕ್ಷೇತ್ರಗಳಲ್ಲೂ ಹೆಚ್ಚಿಸಿಕೊಂಡಿದೆ. ಆದರೆ ಇಷ್ಟು ದೈತ್ಯವಾಗಿ ಅಭಿವೃದ್ಧಿಗೊಂಡಿರುವ ತಂತ್ರಜ್ಞಾನದ ಬಳಕೆ ಸರಿಯಾಗಿ ಆಗುತ್ತಿದೆಯೇ? ಎನ್ನುವುದನ್ನು ಸೂಕ್ಷ್ಮವಾಗಿ ಗಮನಿಸಿದಾಗ, ತಂತ್ರಜ್ಞಾನದಿಂದಾಗುವ ಉಪಯೋಗಗಳೆಷ್ಟೋ, ಅದರಿಂದಾಗುವ ದುರುಪಯೋಗ ಅದರ ದುಪ್ಪಟ್ಟೆಂದರೆ ತಪ್ಪಾಗಲಾರದು.

"HUMANITY IS ACQUIRING ALL THE RIGHT TECHNOLOGY, FOR ALL THE WRONG REASONS" ಎಂದ ಪ್ರಾಜ್ಞರ ನುಡಿ ಪ್ರಸ್ತುತದ ವಿದ್ಯಮಾನಗಳಿಗೆ ಹಿಡಿದ ಕೈಗನ್ನಡಿಯಂತಿದೆ. ಇಪ್ಪತ್ತೊಂದನೆಯ ಶತಮಾನವನ್ನು ತಂತ್ರಜ್ಞಾನದ ಪ್ರಾಧಾನ್ಯದ ಕಾಲ ಎಂಬ ಹೆಗ್ಗಳಿಕೆಯಿಂದ ಕೊಂಡಾಡಿದರೂ, ತಂತ್ರಜ್ಞಾನದ ಅತಿಯಾದ ಬಳಕೆಯಿಂದ ಆಗುತ್ತಿರುವ ಅವಾಂತರಗಳೇನು ಕಡಿಮೆಯಿಲ್ಲ. ಅತಿಯಾದರೆ ಅಮೃತವೂ ವಿಷವಂತೆ ಎಂಬ ನಾಣ್ನುಡಿಯೂ ತಂತ್ರಜ್ಞಾನದ ಅತೀವ ಬಳಕೆ ತಂದೊಡ್ಡಬಲ್ಲ ನಕಾರಾತ್ಮಕ ಬದಲಾವಣೆಗಳ ಕುರಿತು ತಿಳಿಸಿಕೊಡುತ್ತದೆ. ಈ ಪ್ರಬಂಧದಲ್ಲಿ ತಂತ್ರಜ್ಞಾನದಿಂದಾಗುತ್ತಿರುವ ದುಪ್ಪರಿಣಾಮಗಳ ಬಗ್ಗೆ ತಿಳಿಸಿಕೊಡುವ ಪ್ರಯತ್ನವಿದೆ.

ತಂತ್ರಜ್ಞಾನ ಮತ್ತು ಭಾರತ: ಕೈಗಾರಿಕಾ ಕ್ರಾಂತಿಯ ಪ್ರಭಾವ: ಭಾರತ ತಂತ್ರಜ್ಞಾನ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆಗಳನ್ನು ನೀಡುತ್ತಾ ಬರುತ್ತಿದೆ. ಚರಕ–ಸುಶ್ರೂತರಿಂದ ಹಿಡಿದು ಕೆ. ಶಿವನ್‌ರ ವರೆಗೆ, ಭಾರದ್ವಾಜ ಮುನಿಯ ಅಂಶುಬೋಧಿನಿಯ 140ನೇ ಅಧ್ಯಾಯದಲ್ಲಿರುವ ವೈಮಾನಿಕ ಶಾಸ್ತ್ರ" ಗ್ರಂಥದಿಂದ ಮೊದಲ್ಗೊಂಡು ಮುಂದಿನ ವರ್ಷ ಇಸ್ರೋದಿಂದ ಉಡಾವಣೆಗೊಳ್ಳಲ್ಲಿರುವ "ಮಿಷನ್ ಆದಿತ್ಯ– ಎಲ್1" ವರೆಗೆ ವಿವೇಕಾನಂದ ಕಾಲೇಜು, ಪುತ್ತೂರು ತಂತ್ರಜ್ಞಾನದ ಕ್ಷೇತ್ರದಲ್ಲಿ ಭಾರತ ತನ್ನ ದಾಪುಗಾಲನ್ನಿರಿಸಿದೆ. ವಿಜ್ಞಾನ ತಂತ್ರಜ್ಞಾನ ಕ್ಷೇತ್ರದಲ್ಲಿ ಇಷ್ಟೆಲ್ಲಾ ಮುಂದುವರೆದಿದ್ದರೂ ವಿಶ್ವಕ್ಕೆ ಕಂಟಕವಾಗುವಂತಹ ಸಂಗತಿಗಳನ್ನು ನೀಡಿದ ಉದಾಹರಣೆ ಭಾರತದ ಇತಿಹಾಸದಲ್ಲಿಲ್ಲ. ಏಕೆಂದರೆ ಭಾರತ ಕೇವಲ ತಂತ್ರಗಳನ್ನು ರಚಿಸಿದ್ದಲ್ಲ. ಬದಲಾಗಿ ಸುಜ್ಞಾನವನ್ನೂ ಕೂಡ ವಿಶ್ವಕ್ಕೆ ಪಸರಿಸಿತ್ತು.

ಜ್ಞಾನ–ವಿಜ್ಞಾನ, ತಂತ್ರಜ್ಞಾನ ಮುಂತಾದ ಅನೇಕ ಕ್ಷೇತ್ರಗಳಲ್ಲಿ ಭಾರತ ಹದಿನೆಂಟನೇ ಶತಮಾನದವರೆಗೆ ಅಧಿಪತ್ಯ ಸ್ಥಾಪಿಸಿತ್ತು. ಕ್ರಿ.ಶ. 1750ರ ವರೆಗೆ ಭಾರತ ಅತ್ಯಂತ ಹೆಚ್ಚು ಒಟ್ಟು ದೇಶಿಯ ಉತ್ಪನ್ನವನ್ನು (ಜಿ.ಡಿ.ಪಿ.) ಹೊಂದಿದ್ದ ರಾಷ್ಟ್ರವಾಗಿತ್ತು. ಆದರೆ ಯಾವಾಗ ಪಾಶ್ಚಾತ್ಯ ರಾಷ್ಟ್ರಗಳು (ಮುಖ್ಯವಾಗಿ ಬ್ರಿಟನ್) ಬಂಡವಾಳ ಶಾಹಿತ್ವವನ್ನು ಅಸ್ತ್ರವನ್ನಾಗಿಸಿ, ವಿಶ್ವದೆಲ್ಲೆಡೆ ವ್ಯಾಪಾರದ ನೆಪವೊಡ್ಡಿ ಸಂಚಾರ ಮಾಡಲು ಶುರುಮಾಡಿದವೋ, ಅಲ್ಲಿಂದ ಭಾರತದಂತಹ ಅನೇಕ ಸ್ವಾವಲಂಭಿ ರಾಷ್ಟ್ರಗಳು ತಮ್ಮ ಸ್ಥಿರವಾದ ಅಸ್ತಿತ್ವವನ್ನು ಕಳೆದುಕೊಂಡವು. ಹತ್ತೊಂಬತ್ತನೆ ಶತಮಾನದಲ್ಲಿ ಇಂಗ್ಲೆಂಡ್‌ನಲ್ಲಿ ಪ್ರಾರಂಭಗೊಂಡ ಕೈಗಾರಿಕ ಕ್ರಾಂತಿ, ಭಾರತದಂತಹ ರಾಷ್ಟ್ರಗಳನ್ನು ಶೋಷಿಸುವುದಕ್ಕೆ ಶುರುಮಾಡಿದವು. ಅದರ ಪರಿಣಾಮ ಕ್ರಿ.ಶ. 1750ರಲ್ಲಿ ವಿಶ್ವದ ಅತೀ ದೊಡ್ಡ ಆರ್ಥಿಕ ಶಕ್ತಿಯಾಗಿದ್ದ ಭಾರತ, ಕ್ರಿ.ಶ. 1947ರ ಹೊತ್ತಿಗೆ ಬಡರಾಷ್ಟ್ರವಾಗಿ ಸೊರಗಿಹೋಗಿತ್ತು. ನಮ್ಮ ಗುಡಿ ಕೈಗಾರಿಕೆಗಳು ಮಣ್ಣುಪಾಲಾದವು. ನಮ್ಮ ಆರ್ಥಿಕತೆ ಕ್ಷೀಣಿಸಿತ್ತು, ಅನೇಕ ವಸ್ತುಗಳನ್ನು ರಫ್ತುಮಾಡುತ್ತಿದ್ದ ನಾವು, ನಮ್ಮಲ್ಲಿರದ ವಸ್ತುಗಳನ್ನು ಕೊಂಡುಕೊಳ್ಳಲೂ ಪರದಾಡುವ ಸ್ಥಿತಿಗೆ ತಂದಿದ್ದರು. ಇದಕ್ಕೆ ಪ್ರಮುಖವಾದ ಕಾರಣ ಪಾಶ್ಚಾತ್ಯ ರಾಷ್ಟ್ರಗಳ ಅವೈಜ್ಞಾನಿಕ ಶೈಲಿಯ ಅಸ್ಥಿರ ಅಭಿವೃದ್ಧಿ. ಇದೆಲ್ಲಾ ತಿಳಿದಿದ್ದರೂ ಪಾಶ್ಚಾತ್ಯರ ಆರ್ಥಿಕ ಮತ್ತು ಆಡಳಿತ ದಾಳಿಗೆ ಸಿಲುಕಿದ್ದ ಅನೇಕ ರಾಷ್ಟ್ರಗಳು, ಸ್ವತಂತ್ರಗೊಂಡ ನಂತರವೂ ಸುಸ್ಥಿರ ಅಭಿವೃದ್ಧಿಗೆ ಸಹಾಯಕವಾಗುವಂತಹ ತಂತ್ರಜ್ಞಾನವನ್ನು

ಅಭಿವೃದ್ಧಿ ಪಡಿಸದೆ ಇರುವುದು ಪ್ರಸ್ತುತದ ಅನೇಕ ಸಮಸ್ಯೆಗಳಿಗೆ ಕಾರಣಗಳಾಗಿವೆ.

ಈ ರೀತಿಯಾಗಿ ದೂರದೃಷ್ಟಿಯ ಕೊರತೆ ಮತ್ತು ದುರುದ್ದೇಶದಿಂದ ನಿರ್ಮಾಣಗೊಂಡಂತಹ ತಂತ್ರಜ್ಞಾನ ಇಂದು ಜಗತ್ತಿನಲ್ಲಿ ಅನೇಕ ಋಣಾತ್ಮಕ ಸಂಗತಿಗಳಿಗೆ ಮೂಲವಾಗಿದೆ.

"ONE MACHINE CAN DO THE WORK OF FIFTY ORDINARY MEN. NO MACHINE CAN DO THE WORK OF ONE EXTRAORDINARY MAN" ಎಂಬ ಮಾತು, ತಂತ್ರಜ್ಞಾನ ಎಷ್ಟೇ ಮುಂದುವರೆದರೂ, ಅದು ಮಾನವನಿಗೆ ಸರಿಸಾಟಿ ಅಲ್ಲ ಎನ್ನುವುದನ್ನು ಸಾರಿ ಹೇಳುತ್ತದೆ. ಆದರೆ ಯಾವ ಮಾನವನಿಂದ ಈ ತಂತ್ರಜ್ಞಾನವು ಸೃಷ್ಟಿಯಾಯ್ತೊ, ಅದೇ ಮನುಕುಲದ ವಿನಾಶಕ್ಕೆ ಈ ತಂತ್ರಜ್ಞಾನ ಕಾರಣವಾಗುತ್ತಿದೆ ಎಂದರೆ ಅತಿಶಯೋಕ್ತಿ ಆಗಲಾರದು.

ಮಾನವ ಏನೇ ಸಾಧಿಸಬೇಕಾದರೂ ಆರೋಗ್ಯ ಅತೀ ಮುಖ್ಯವಾದದ್ದು. ಮನುಷ್ಯನ ಆರೋಗ್ಯವನ್ನು ಹದಗೆಡಿಸುವಂತಹ ಕಾರ್ಯ ತಂತ್ರಜ್ಞಾನದ ಅತಿಯಾದ ಬಳಕೆಯ ಮೂಲಕ ಜರುಗುತ್ತಿದೆ. ದೈಹಿಕವಾದ ಸದೃಢತೆಯನ್ನು ಹಾಳು ಮಾಡುವ ಜೊತೆಗೆ ಕಣ್ಣಿನ ಸಮಸ್ಯೆಗಳನ್ನೂ ಈ ತಂತ್ರಜ್ಞಾನ ಹೆಚ್ಚಿಸುತ್ತಿದೆ. ಇಂದು ಬೆಂಗಳೂರಿನಂತಹ ನಗರಗಳಲ್ಲಿ ಜೀವನದ ಭಾಗವಾಗಬೇಕಿದ್ದ ನಡಿಗೆ ಅನ್ನುವುದು ಟ್ರೆಂಡ್ ಆಗುವಷ್ಟರ ಮಟ್ಟಿಗೆ ತಂತ್ರಜ್ಞಾನ ನಕಾರಾತ್ಮಕ ಬದಲಾವಣೆಯನ್ನು ತಂದಿದೆ. ಒಟ್ಟಿನಲ್ಲಿ ಯಾವುದೇ ರೀತಿಯ ದೈಹಿಕ ವ್ಯಾಯಾಮಕ್ಕೆ ಅವಕಾಶವನ್ನು ನೀಡುತ್ತಿಲ್ಲ.

ದೈಹಿಕ ಶ್ರಮವನ್ನು ಕಡಿಮೆಗೊಳಿಸುವುದರ ಜೊತೆಗೆ ಜನರನ್ನು ಆಲಸ್ಯರನ್ನಾಗಿಸುತ್ತಿದೆ. ಕೃಷಿ ಕ್ಷೇತ್ರದಲ್ಲಿ ಉಪಯೋಗಿಸುವ ವಸ್ತುಗಳಿಂದ ಹಿಡಿದು ಮನೆಗೆಲಸಕ್ಕೆ ಬೇಕಾಗುವ ಸಣ್ಣಪುಟ್ಟ ವಸ್ತುಗಳ ನಿರ್ಮಾಣದ ವರೆಗೆ ನಮ್ಮ ಕೆಲಸವನ್ನು ಸುಲಭಗೊಳಿಸುವಂತಹ ತಂತ್ರಜ್ಞಾನ ಬಂದಾಗಿದೆ. ಆ ಕಾರಣದಿಂದಲೇ ತಂತ್ರಜ್ಞಾನದ ಅತಿಯಾದ ಬಳಕೆಯ ಕಾರಣ ಮನುಷ್ಯನ ಆಯುಷ್ಯ ಪ್ರಮಾಣ ಕಡಿಮೆಯಾಗುವಂತೆ ಮಾಡುತ್ತಿದೆ.

ಇಂದು ತಂತ್ರಜ್ಞಾನ ಎಂದ ಕೂಡಲೇ ನಮ್ಮ ನೆನಪಿಗೆ ಬರುವ ಸಂಗತಿ ಸಾಮಾಜಿಕ ಜಾಲತಾಣಗಳು. ಅದಕ್ಕೆ ಕಾರಣವೂ ಇದೆ. ಒಟ್ಟು 7.6 ಬಿಲಿಯನ್ ಜನಸಂಖ್ಯೆಯಲ್ಲಿ 5.1 ಬಿಲಿಯನ್ ಮೊಬೈಲ್ ಬಳಸುತ್ತಾರೆ, 4.38 ಬಿಲಿಯನ್ ಜನ ಅಂತರ್ಜಾಲ ಬಳಸುತ್ತಿದ್ದಾರೆ. 3.48 ಬಿಲಿಯನ್ ಮಂದಿ ಸಾಮಾಜಿಕ ಜಾಲತಾಣಗಳನ್ನು ಬಳಸುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳನ್ನು ವಿಶ್ವದ ಶೇ. 45ರಷ್ಟು ಜನಸಂಖ್ಯೆಯನ್ನು ಒಳಗೊಂಡಿದೆ. ಕೇವಲ ಕಳೆದ ಒಂದು ವರ್ಷದಲ್ಲಿ 366 ಮಿಲಿಯನ್ ಜನ ಇದಕ್ಕೆ ಸೇರ್ಪಡೆಗೊಂಡಿದ್ದಾರೆ. ಈ ಅಂಕಿಅಂಶಗಳನ್ನು ಗಮನಿಸಿದಾಗ ಏನೇ ತಂತ್ರಜ್ಞಾನಗಳ ಅಭಿವೃದ್ಧಿಯಾದರೂ, ಸಾಮಾಜಿಕ ಜಾಲಾತಾಣಗಳದ್ದೇ ಕಾರುಬಾರು ಎನ್ನುವುದು ನಮಗೆ ತಿಳಿಯುವಂತದ್ದು.

ಅದಲ್ಲದೇ ವಿಶ್ವದ ಶೇ. 50ರಷ್ಟು ಯುವಜನತೆ ಮೊಬೈಲ್ ಫೋನ್‌ಗಳ ದಾಸರಾಗಿದ್ದಾರೆ. ಇದು ಬಲಿಷ್ಠ ಯುವಜನತೆಯ ಸೃಜನಶೀಲತೆಗೆ ಕಡಿವಾಣ ಹಾಕುವುದಕ್ಕೆ ಇಟ್ಟ ನಡೆಯಂತಿದೆ. ವಿದ್ಯಾರ್ಥಿಗಳು ಆಲೋಚಿಸುವ ಕಾರ್ಯದಿಂದ ವಿಮುಕ್ತರಾಗುತ್ತಿದ್ದಾರೆ. ಸಣ್ಣಪುಟ್ಟ ವಿಷಯವನ್ನು ತಿಳಿಯುವುದಕ್ಕೂ ಗೂಗುಲ್ ಗಳುರು ಮೊರೆ ಹೋಗುತ್ತಿದ್ದಾರೆ. ಮತ್ತು ವಿದ್ಯಾರ್ಥಿಗಳ ಚಾಕಚಕ್ಯತೆ, ಆಲೋಚಿಸುವ ಗುಣ, ಓದುವಿಕೆಯ ಮತ್ತು ಬುದ್ಧಿಶಕ್ತಿಯ ಮೇಲೆ ದೊಡ್ಡ ಋಣಾತ್ಮಕ ಪರಿಣಾಮವನ್ನು ಬೀರಿ, ಶೂನ್ಯ ಜ್ಞಾನಸಂಪಾದನೆಗೆ ನಾಂದಿ ಹಾಡಿ, ರೆಡಿಮೇಡ್ ಯುಗಕ್ಕೆ ಅವರನ್ನು (ಯುವಕರನ್ನು) ಸಜ್ಜುಗೊಳಿಸುವ ಬಹುದೊಡ್ಡ ಪ್ರಯತ್ನ ನಡೆಯುತ್ತಿದೆ.

ಈ ಸಂಗತಿಗಳಿಗೆ ಒಂದು ರೀತಿ ಹೆತ್ತವರೂ ಕಾರಣೀಭೂತರಾಗುತ್ತಾರೆ. ಶೇ. 27 ರಷ್ಟು ಮಂದಿ ಹೆತ್ತವರು ಮೊಬೈಲ್ಗಳನ್ನು ಹೆಚ್ಚಾಗಿ ಬಳಸುತ್ತಿದ್ದಾರೆ. ಮಕ್ಕಳು ಹಠ ಮಾಡಿದರೆ ಮಕ್ಕಳಿಗೂ ಮೊಬೈಲ್ ತೋರಿಸಿ, ಮುಂದೆ ಓದು ಮುಗಿಯುವುದರೊಳಗೆ ಅವರಿಗೆ ಮೊಬೈಲ್ ಕೊಡಿಸಿ ಅನೇಕ ವ್ಯಸನಗಳಿಗೆ ಮಕ್ಕಳನ್ನು ಬಲಿಯಾಗುವಂತೆ ಮಾಡಲು

ಹೆತ್ತವರೂ ಕಾರಣೀಕರ್ತರು ಎಂಬುದನ್ನು ಮರೆಯುವಂತಿಲ್ಲ. ಈ ಕಾರಣಗಳಿಂದಲೇ ಪೋಷಕರಲ್ಲೂ–ಮಕ್ಕಳಲ್ಲೂ ಸಂಬಂಧಗಳ ಮಹತ್ವ ಮರೀಚಿಕೆಯಾಗುತ್ತಿದೆ. ಮಕ್ಕಳಿಗಾಗಿ ಸಮಯ ಕೊಡದ ತಂದೆ ತಾಯಿ ಮೊಬೈಲ್‌ನಲ್ಲಿ ಮುಳುಗಿದ್ದಾಗ, ನಾನು ಸ್ಮಾರ್ಟ್‌ಫೋನ್ ಆಗಿದ್ದರೆ ತಂದೆ–ತಾಯಿಯ ಪ್ರೀತಿಗೆ ಪಾತ್ರನಾಗಬಹುದಿತ್ತು ಎಂದು ಆಸೆ ಪಡುವ ಮಕ್ಕಳು, ತಂದೆ ತಾಯಿ ಅವಿದ್ಯಾವಂತರು ಎನ್ನುವ ಕಾರಣಕ್ಕೆ, ಎರಡಕ್ಷರ ಕಲಿತಿದ್ದೇನೆ ಎಂದು ಜಂಬ ಕೊಚ್ಚಿಕೊಳ್ಳುವ ಮಕ್ಕಳು, ಹೀಗೆ ಬಾಂಧವ್ಯಕ್ಕೆ ಬೆಲೆಯೇ ಇಲ್ಲದಂತಾಗಿದೆ. ಫೇಸ್‌ಬುಕ್‌ನಲ್ಲಿ ಸಾವಿರಾರು ಮಂದಿ ಸ್ನೇಹಿತರಿರುತ್ತಾರೆ. ಆದರೆ ಸರಿಯಾದ ಸಮಯಕ್ಕೆ ಸಹಾಯಕ್ಕೆ ಧಾವಿಸುವವರು ಯಾರೂ ಇರುವುದಿಲ್ಲ. ಇದಕ್ಕೆ ಅಂಕಿ ಅಂಶಗಳೂ ಸಾಕ್ಷಿ. ಒಟ್ಟು ಫೇಸ್‌ಬುಕ್ ಬಳಸುವವರ ಸರಾಸರಿ ಮಿತ್ರ ಸಂಖ್ಯೆ 155. ಆದರೆ ಅವರಲ್ಲಿ ನೀವು ನಂಬಬಹುದಾದ ಮಿತ್ರರ ಸಂಖ್ಯೆ ನಾಲ್ಕು ಮಾತ್ರ ! ಎನ್ನುವುದು ವಿಪರ್ಯಾಸ.

ಇವಿಷ್ಟು ಸಾಮಾಜಿಕ ಜಾಲತಾಣಗಳಿಂದಾಗುತ್ತಿರುವ ದುಷ್ಪರಿಣಾಮಗಳಾದರೆ, ಉದ್ಯಮಗಳಲ್ಲಾಗುತ್ತಿರುವ ತಂತ್ರಜ್ಞಾನದ ಬೆಳವಣಿಗೆ ಏನೆಲ್ಲಾ ಸಮಸ್ಯೆಗಳನ್ನು ಉಂಟು ಮಾಡುತ್ತಿದೆ ಎನ್ನುವುದನ್ನು ಗಮನಿಸುವುದೂ ಅಗತ್ಯದ ಸಂಗತಿ. ಅತಿಯಾದ ತಂತ್ರಜ್ಞಾನದ ಬಳಕೆಯಿಂದ ಆದಷ್ಟು ಬೇಗ ನಮ್ಮ ನೈಸರ್ಗಿಕ ಸಂಪತ್ತನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ಆ ಮೂಲಕ ಪರಿಸರಕ್ಕೂ ಹಾನಿಯನ್ನುಂಟು ಮಾಡುತ್ತಿದ್ದೇವೆ. ಅತಿಯಾದ ತಂತ್ರಜ್ಞಾನದ ಬಳಕೆ ನಿರುದ್ಯೋಗವನ್ನು ಸೃಷ್ಟಿಸುತ್ತದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಭಾರತದಲ್ಲೇ ಶೇ. 33 ರಷ್ಟು ಯುವಕರು (ಅಂದರೆ ಸುಮಾರು 25 ಕೋಟಿ) ನಿರುದ್ಯೋಗಿಗಳು. ಇಷ್ಟು ಬಹುದೊಡ್ಡ ಸಂಖ್ಯೆಯಲ್ಲಿ ಯುವಕರು ನಿರುದ್ಯೋಗಿಗಳಾಗಲಿರುವ ಅನೇಕ ಕಾರಣಗಳಲ್ಲಿ ಇದೂ ಒಂದು. ಇಂದು ತಂತ್ರಜ್ಞಾನದ ಹಾವಳಿ ಹೆಚ್ಚಾದ್ದರಿಂದಲೇ ಮಾರುತಿ, ಪಾರ್ಲೇಜಿ ಮುಂತಾದ ಕಂಪೆನಿಗಳಿಂದ ಸಾವಿರಾರು ಜನರನ್ನು ಮನೆಗೆ ಕಳಿಸಲು ಕಾರಣ. ಹಾಗೆಯೇ ನಿರುಪಯುಕ್ತ ವಸ್ತುಗಳ ತಯಾರಿಕೆಯೂ ಜೊತೆ ಜೊತೆಗೆ ಆಗುತ್ತಿರುವುದು ವಿಷಾದನೀಯ ಸಂಗತಿ.

ತಂತ್ರಜ್ಞಾನದ ಬಹುದೊಡ್ಡ ವೈಫಲ್ಯವೆಂದರೆ ಅದು ಹ್ಯಾಕಿಂಗ್, ನಮ್ಮ ದೇಶದ ಮಹತ್ವಪೂರ್ಣ ಅಂಶಗಳಿಂದ ಹಿಡಿದು, ಈ ನಾಡಿನ ಸಾಮಾನ್ಯ ಪ್ರಜೆಯ ಕುರಿತಾದ ಮಾಹಿತಿಯವರೆಗೂ ಸೋರಿಕೆಯಾಗುವ ಆಪತ್ತು ಇದ್ದೇ ಇದೆ. ಎಲ್ಲದ್ದಕ್ಕಿಂತ ಹೆಚ್ಚಾಗಿ ಸಾಮಾಜಿಕ ಜಾಲತಾಣಗಳನ್ನು ಬಳಸುವವರು ಹೆಚ್ಚು ಗಮನವನ್ನು ಹರಿಸಿ, ತಮ್ಮ ವೈಯಕ್ತಿಕ ಮಾಹಿತಿಗಳನ್ನು ಕ್ಷೇಮವಾಗಿರಿಸಿಕೊಳ್ಳಬೇಕು. ಅನೇಕ ಮಂದಿ ಸುಳ್ಳುಸುದ್ದಿಗಳನ್ನು ಹರಿಬಿಡುವ ಮೂಲಕ ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುವ ಕಾರ್ಯದಲ್ಲಿ ಮಗ್ನರಾಗಿರುತ್ತಾರೆ. ಯಾರೋ ಗೊತ್ತುಗುರಿ ಇಲ್ಲದವರನ್ನು ಸಾಮಾಜಿಕ ಜಾಲತಾಣಗಳಲ್ಲಿ ಪರಿಚಯವಾದರೆಂದು ನಂಬಿ, ಅವರ ಹಿಂದೆ ಹೋದವರಿಗೆ ಕೊನೆಗೆ ದೊರೆತದ್ದು ಏನು ಎನ್ನುವುದನ್ನು ನಾವು ತಿಳಿದೇ ಇದೆ. ಇಂತಹ ಅನೇಕ ಸಂಗತಿಗಳಿಗೆ ತಂತ್ರಜ್ಞಾನದ ಅತಿಯಾದ ಬಳಕೆ ಮತ್ತು ದುರ್ಬಳಕೆಯೇ ಕಾರಣ.

ಇಷ್ಟು ಮಾತ್ರವಲ್ಲದೇ ಹೇಳುತ್ತಾ ಹೋದರೆ ತಂತ್ರಜ್ಞಾನದ ಅತಿಯಾದ ಬಳಕೆ ಮತ್ತು ದುಷ್ಪರಿಣಾಮಗಳ ಸಂಖ್ಯೆ ಜಾಸ್ತಿ ಆಗುತ್ತಲೇ ಹೋಗುತ್ತದೆ. ಆದರೆ ಇದು ಕೇವಲ ತಂತ್ರಜ್ಞಾನದ ತಪ್ಪಲ್ಲ. ಬದಲಾಗಿ ತಂತ್ರಜ್ಞಾನವನ್ನು ಉಪಯೋಗಿಸುವವರ ತಪ್ಪು. ಯಾವುದೇ ತಂತ್ರಜ್ಞಾನ ಕನ್ನಡಿ ಇದ್ದಂತೆ. ನಾವು ಆ ಕನ್ನಡಿಯ ಮುಂದೆ ನಿಂತು ಹೇಗೆ ವರ್ತಿಸುತ್ತೇವೆಯೋ, ಅದು ಕೂಡ ಹಾಗೇ ವರ್ತಿಸುತ್ತದೆ. ಆದ್ದರಿಂದ ತಂತ್ರಜ್ಞಾನವನ್ನು ಬಳಸಲು ಬೇಕಾಗಿರುವ ಸಮರ್ಥ ಕೈಗಳು ದೊರಕಬೇಕು. ನಮ್ಮ ರಾಷ್ಟ್ರದ ಸಂಗತಿಯಾದರೆ, ಈ ರಾಷ್ಟ್ರದಲ್ಲಿ ಏನೇ ಬದಲಾವಣೆ ಆಗುವುದಿದ್ದರೂ ಅದು ಇಲ್ಲಿನ ಯುವಜನತೆಯ ಮೇಲೆ ನಿರ್ಧರಿತವಾಗಿದೆ. ಈ ದೇಶದ ಯುವಕರು ಮನಸ್ಸು ಮಾಡಿ ಸಮರ್ಥವಾದ ರಾಷ್ಟ್ರವನ್ನು ನಿರ್ಮಿಸಲು ಪಣತೊಟ್ಟು ನಿಂತರೆ ಮತ್ತು ಆ ಕಾರ್ಯಕ್ಕಾಗಿ ತಂತ್ರಜ್ಞಾನವನ್ನು ಬಳಸಿಕೊಂಡರೆ ಮಾತ್ರ ಬದಲಾವಣೆ ತರಲು ಸಾಧ್ಯ.

ಪ್ರೇಕ್ಷಣೀಯ ಐತಿಹಾಸಿಕ ತಾಣಗಳು

ಲಕ್ಷ್ಮೀ ಹನ್ಮಂತಪ್ಪಾ ಕಳ್ಳಿಮನಿ
ಪ್ರಥಮ ಬಿ.ಎ.

ಬಾದಾಮಿ :

ಗುಡ್ಡದ ಬದಿಯನ್ನು ಕೊರೆದು ನಿರ್ಮಿಸಿದ ಬಾದಾಮಿಯ ಗುಹಾಲಯಗಳು ವಿಶ್ವವಿಖ್ಯಾತವಾಗಿವೆ. ಈ ಗುಡ್ಡದ ಬುಡದಲ್ಲಿರುವ ಕೆರೆಯ ಪಶ್ಚಿಮ ತೀರದಲ್ಲಿ ಊರು ಹಬ್ಬಿದೆ. ಗುಡ್ಡದ ಮೇಲೆ ಕೋಟೆಯೂ, ಚಾಳುಕ್ಯರ ಕಾಲದ ದೇವಾಲಯಗಳೂ, ಕಟ್ಟಡಗಳೂ ಇವೆ. ಕೆರೆಯ ಉತ್ತರದ ದಡದ ಮೇಲೆಬಂಡೆಯೊಂದರ ಮೇಲೆ 'ಕೆಪ್ಪೆ ಆರಭಟ್ಟ'ನ ಶಾಸನವನ್ನು ಕಾಣಬಹುದು. ಹತ್ತಿರದಲ್ಲಿ ಇನ್ನೊಂದು ಬಂಡೆಯ ಮೇಲೆ ಮುನ್ನಿದ್ದ ಶಾಸನವನ್ನು ಅಳಿಸಿ ಕೆತ್ತಲಾಗಿರುವ 'ಪಲ್ಲವ ನರಸಿಂಹವರ್ಮನ' 'ಜಯ ಶಾಸನ'ವನ್ನೂ ಕಾಣಬಹುದು. ಭಾರತೀಯ ದೇವಸ್ಥಾನ ನಿರ್ಮಾಣ ಕಲೆಯ ತೊಟ್ಟಿಲೆಂದೆನಿಸಿರುವ ಐಹೊಳೆ, ಪಟ್ಟದಕಲ್ಲುಗಳೂ, ಚಾಲುಕ್ಯರ ಪೂರ್ವ ರಾಜಧಾನಿಯಾಗಿದ್ದಿರಬಹುದಾದ ಮಹಾಕೂಟ ಬಾದಾಮಿಗೆ ದೂರದಲ್ಲಿಯೇ ಇವೆ.

ಚಾಲುಕ್ಯ ಮಹಾ ಸಾಮ್ರಾಜ್ಯದ ರಾಜಧಾನಿಯಾಗಿ ಮೆರೆದ ಇತಿಹಾಸ ಪ್ರಸಿದ್ಧ ಬಾದಾಮಿ ಇಂದು ಬಾಗಲಕೋಟೆ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರ. ಕನ್ನಡಿಗರ ಮಾತ್ರ ಮೊದಲ ಸಾಮ್ರಾಜ್ಯವಾದ ಕದಂಬರ ಆಳ್ವಿಕೆಯಲ್ಲಿ ದಂಡಾಧಿಕಾರಿಯಾಗಿದ್ದ ಜಯಸಿಂಹನೆಂಬುವನು ಕ್ರಿ.ಶ. 500ರಲ್ಲಿ ಸಿಡಿದು ಹೋಗಿ ಹೊಸ ತಂಡವನ್ನು ಕಟ್ಟಿ, ಈಗಿನ ಬಾದಾಮಿ ಪ್ರದೇಶದಲ್ಲಿ ಹೊಸ ರಾಜ್ಯ ಸ್ಥಾಪಿಸಿದ. ಇದೇ ಮುಂದೆ ಇತಿಹಾಸದಲ್ಲಿ ಚಾಳುಕ್ಯ ರಾಜ ಮನೆತನವೆಂದು ಪ್ರಸಿದ್ಧವಾಯಿತು. ಅಂದರೆ ಚಾಳುಕ್ಯರು ಕದಂಬ ವಂಶಸ್ಥರೇ ಆಗಿದ್ದು ಕದಂಬರ ಆಡಳಿತದ ಮುಂದುವರಿದ ಭಾಗವೆಂದು ಹೇಳಬಹುದು. ಬಾದಾಮಿಯಲ್ಲಿ ಸಿಕ್ಕ ಶಾಸನದಲ್ಲಿ ಉಲ್ಲೇಖಿಸಿರುವಂತೆ ಚಾಳುಕ್ಯರು ಮಾನವ್ಯ ಗೋತ್ರದ ವಂಶಜರು. ಕದಂಬರೂ ಕೂಡ ಇದೇ ವಂಶಕ್ಕೆ ಸೇರಿದವರು. ಆದ್ದರಿಂದ ಇವರದ್ದೂ ಕದಂಬರ ಕುಲವೇ ಆಗಿದೆ. ಅಲ್ಲದೇ ಚಾಳುಕ್ಯ ಎಂಬುದು ಸೆಲಕೆ, ಚಲಕೆ ಶಬ್ದಗಳಿಂದ ನಿಷ್ಪತ್ತಿಯಾಗಿದೆಯೆಂದು ಅಭಿಪ್ರಾಯಪಡಲಾಗಿದೆ.

ಇವುಗಳು ಅಚ್ಚ ಕನ್ನಡ ಪದಗಳಾಗಿದ್ದು ವ್ಯವಸಾಯದಲ್ಲಿ ಉಪಯೋಗಿಸುವ ವಸ್ತುಗಳಾಗಿವೆ. ಆದ್ದರಿಂದ ಚಾಳುಕ್ಯರು ಕನ್ನಡಿಗರೇ ಹೊರತು ಬೇರೆಲ್ಲಿಂದಲೋ ಬಂದು ಆಕ್ರಮಣ ಮಾಡಿ ರಾಜ್ಯ ಸ್ಥಾಪನೆ ಮಾಡಿದವರಲ್ಲ ಎಂಬುದು ಇತಿಹಾಸಜ್ಞರ ಒಟ್ಟಾರೆ ಅಭಿಪ್ರಾಯವಾಗಿದೆ. ಇವರ ರಾಜಲಾಂಛನ ವರಾಹ ! ಮೂಲತಃ ವೈಷ್ಣವ ಮತಾವಲಂಬಿಗಳಾಗಿದ್ದ ಇವರು 1ನೇ ವಿಕ್ರಮಾದಿತ್ಯನ ಕಾಲದಿಂದ 'ಶಿವಮಂಡಲ ದೀಕ್ಷೆ' ಪಡೆದು ಶೈವ ಸಂಪ್ರದಾಯವನ್ನು ಅನುಸರಿಸಲು ಶುರುಮಾಡಿದರು. ಕದಂಬರ ಆಡಳಿತದಲ್ಲಿ ದಂಡಾಧೀಶನಾಗಿ ಈ ಪ್ರಾಂತದಲ್ಲಿ ನಿಯುಕ್ತನಾಗಿದ್ದ ಜಯಸಿಂಹನೆಂಬುವವ ಮೊತ್ತಮೊದಲು ಸ್ವತಂತ್ರ್ಯವಾಗಿ ಕಾರ್ಯನಿರ್ವಹಿಸಲು ಶುರುಮಾಡುತ್ತಾನೆ.

ಇಂಥ ಹೆಮ್ಮೆಯ ಸಾಮ್ರಾಜ್ಯ ಕ್ರಿ.ಶ, 753ರಲ್ಲಿ ಕೀರ್ತಿವರ್ಮನಿಂದ ಕೊನೆಯಾಗುತ್ತದೆ. ತಮ್ಮ ಕೈಕೆಳಗೆ ಮಾಂಡಲಿಕರಾಗಿದ್ದ ರಾಷ್ಟ್ರಕೂಟರ ದಂತಿವರ್ಮನಿಗೆ ಸೋಲುವ ಮೂಲಕ ಚಾಳುಕ್ಯರ ಆಳ್ವಿಕೆ ತಾತ್ಕಾಲಿಕವಾಗಿ ಕೊನೆಯಾಗುತ್ತದೆ. ನಂತರ ರಾಷ್ಟ್ರಕೂಟರು ಸುಮಾರು 250 ವರ್ಷ ಆಡಳಿತ ನಡೆಸುತ್ತಾರೆ. ಇತಿಹಾಸದ ಕಾಲಚಕ್ರ ಉರುಳುತ್ತವೆ.

ಹಂಪಿ :

ಹಂಪಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ ಬಳಿ ಇರುವ ಸ್ಥಳವಾಗಿದೆ. 1336ರಿಂದ 1565ರವರೆಗೆ ಇದು ವಿಜಯನಗರ ಸಾಮ್ರಾಜ್ಯ ರಾಜಧಾನಿಯಾಗಿತ್ತು. ಹಂಪೆಯ ಮೊದಲನೆಯ ಹೆಸರು ಪಂಪಾ ಎಂದಿತ್ತು. ಅಂದರೆ ತುಂಗಭದ್ರ ನದಿ ಎಂದರ್ಥ. ವರ್ಷಗಳು ಕಳೆದಂತೆ ಇದು ವಿಜಯನಗರ ಮತ್ತು ವಿರೂಪಾಕ್ಷಪುರ ಎಂದು ಕರೆಯಲ್ಪಟ್ಟಿತ್ತು. ಹಂಪಿಯನ್ನು ಯುನೆಸ್ಕೊ ವಿಶ್ವಪರಂಪರೆಯ ತಾಣ ಎಂದು ಘೋಷಿಸಿದೆ. ವಿಜಯನಗರ ಸಾಮ್ರಾಜ್ಯದ ಒಡೆಯನಾದ ಕೃಷ್ಣದೇವರಾಯನ ಕಾಲದಲ್ಲಿ ಹಂಪಿ ಬಜಾರ್ ಎಂದೆನಿಸಿಕೊಂಡ ಬೀದಿಯಲ್ಲಿ ವಜ್ರಾಭರಣಗಳನ್ನು ತೂಕದ ಮಾದರಿಯಲ್ಲಿ ಮಾರುತ್ತಿದ್ದರು.

ಕೃಷ್ಣದೇವರಾಯನ ಕಾಲದಲ್ಲಿ ಹಂಪಿಯು ಅತ್ಯಂತ ಜನಪ್ರಿಯವಾಗಿತ್ತು.

ವಿರೂಪಾಕ್ಷ ದೇವಾಲಯ, ಹಜಾರ ರಾಮದೇವಸ್ಥಾನ, ಸಪ್ತಸ್ವರ ಸಂಗೀತ ಹೊರಹೊಮ್ಮಿಸುವ ಕಲ್ಲಿನ ಕಂಬಗಳು, ವಿಶ್ವವಿಖ್ಯಾತ ಕಲ್ಲಿನ ರಥ, ಮಹಾನವಮಿ ದಿಬ್ಬ, ಸಾಸಿವೆ ಕಾಳು ಗಣಪತಿ, ಉಗ್ರನರಸಿಂಹ, ಕಮಲ್‌ಮಹಲ್, ಬಡಲು ಲಿಂಗ, ಆನೆಲಾಯ ಹೀಗೆ ಹಲವಾರು ಕ್ಷೇತ್ರಗಳು ಮತ್ತು ಪ್ರೇಕ್ಷಣೀಯ ಸ್ಥಳಗಳನ್ನು ಹಂಪಿಯಲ್ಲಿ ಕಾಣಬಹುದು.

ಬೀದರ ಕೋಟೆ :

ಬೀದರ ಕೋಟೆ ಕರ್ನಾಟಕ ದಕ್ಷಿಣ ಪ್ರಸ್ಥಭೂಮಿ ಬೀದರ ನಗರದಲ್ಲಿ ನವಿಯಲ್ಲಿದೆ. ನವಿ ವ್ಯವಸ್ಥೆಯನ್ನು ಉತ್ತಮ ರೀತಿಯಲ್ಲಿ ಮಾಡಿದ್ದಾರೆ. ಬಹುಮನಿ ಮನೆತನದ ಸುಲ್ತಾನ್ ಅಲ್–ಉದ್–ದಿನ್ ಬಹಮೆನ್ ಗುಲ್ಬರ್ಗಾದಿಂದ ಬೀದರ್‌ಗೆ ತನ್ನ ರಾಜಧಾನಿಯನ್ನು 1423ರಲ್ಲಿ ವರ್ಗಾಯಿಸಿಕೊಂಡ ಮತ್ತು ಈ ಕೋಟೆಯನ್ನೂ ಇತರೆ ಇಸ್ಲಾಮಿಕ ಸ್ಮಾರಕಗಳನ್ನೂ ಕಟ್ಟಿಸಿದ. ಬೀದರ ಕೋಟೆಯ ಒಳಗೆ 20ಕ್ಕೂ ಹೆಚ್ಚು ಸ್ಮಾರಕಗಳಿವೆ. ಬೀದರ ನಗರ ಮತ್ತು ಜಿಲ್ಲೆಯನ್ನು ಆವರಿಸಿಕೊಂಡಿರುವ ಸುತ್ತಮುತ್ತಲಿನ ಭೂ ಪ್ರದೇಶ ಕಾರಂಜ ನದಿ, ಗೋದಾವರಿ ನದಿಯ ಮುಖ್ಯ ಉಪನದಿಯಾದ ಮಂಜಿರದ ಕಾಲುವೆಗಳಿಂದ ಸುತ್ತುವರಿಯಲ್ಪಟ್ಟಿದೆ. ಹವಾಮಾನ ವರ್ಷಪೂರ ಹಿತಕರವಾಗಿರುತ್ತದೆ. ಬೇಸಿಗೆಯ ತಿಂಗಳುಗಳಾದ ಏಪ್ರಿಲ್ ಮತ್ತು ಮೇಗಳಲ್ಲಿಯೂ ಕೂಡಾ ತೀಕ್ಷ್ಣ ಮತ್ತು ಇದ್ದಕ್ಕಿದ್ದಂತೆ ಬೀಳುವ ಗುಡುಗು ಮಳೆಯಿಂದ ಇಡೀ ಪ್ರದೇಶ ತಣ್ಣಗಾಗುತ್ತದೆ. ಜೂನ್ ಪ್ರಾರಂಭದಲ್ಲಿ ಉತ್ತರ–ಪಶ್ಚಿಮ ಮಾನ್ಸೂನ್ ಇಡೀ ಪ್ರದೇಶದ ಹಿತಕರ ವಾತಾವರಣವನ್ನು ಆವರಿಸಿಕೊಳ್ಳುತ್ತದೆ.

ಟಿಪ್ಪು ಸುಲ್ತಾನ ಅರಮನೆ :

ಬೆಂಗಳೂರಿನ ಕೋಟೆಯ ಆವರಣದಲ್ಲಿ 1781ರಲ್ಲಿ ನವಾಬ್ ಹೈದರಾಲಿ ಖಾನ್ ಕಾಲದಲ್ಲಿ ಮರ ಹಾಗೂ ಗಾರೆಗಚ್ಚಿನ ಈ ಅರಮೆನಯ ನಿರ್ಮಾಣ ಪ್ರಾರಂಭಗೊಂಡು ತದನಂತರ 1791ರಲ್ಲಿ ಟಿಪ್ಪು ಸುಲ್ತಾನನ ಕಾಲದಲ್ಲಿ ಪೂರ್ಣಗೊಂಡಿತ್ತು. ಇದು ಬೆಂಗಳೂರು ಕೋಟೆಯೊಳಗಣ ಆವರಣದ ಶ್ರೀ ವೆಂಕಟರಮಣ ದೇವಾಲಯದ ಸನಿಹದಲ್ಲಿದೆ.

ನೋಡಲು ಒಂದು ಅಂತಸ್ತಿನ ಸ್ತಂಭಗಳ ಮಂಟಪದಂತೆ ಕಂಡವು, ನೈಜಸ್ಥಿತಿಯಲ್ಲಿ ಎರಡಂತಸ್ತಿನ ಈ ಕಟ್ಟಡವನ್ನು ಸಮಕಾಲೀನ ಇಂಡೋ ಇಸ್ಲಾಮಿಕ್ ಶೈಲಿಯಲ್ಲಿ ನಿರ್ಮಾಣ ಮಾಡಲಾಗಿದೆ. ಆಯತಾಕಾರದ ಕಲ್ಲಿನ ಅಧಿಷ್ಟಾನದ ಮೇಲೆ ನಿರ್ಮಿಸಲ್ಪಟ್ಟ ಈ ಕಟ್ಟಡದ ಮುಂಭಾಗದಲ್ಲಿ ಉನ್ನತವಾದ ಮರಗಳ ಸ್ತಂಭಗಳನ್ನು ಕಲ್ಲಿನ ಪೀಠಗಳ ಮೇಲೆ ಅಳವಡಿಸಲಾಗಿದೆ. ಬಹುಭಾರವಾದ ತೊಲೆಗಳನ್ನು ಆಧರಿಸಿ ನಿಲ್ಲಿಸಲಾಗಿದೆ. ಸ್ತಂಭಗಳ ನಡುವೆ ಇಂಡೋ ಇಸ್ಲಾಮಿಕ್ ಶೈಲಿಯ ಅರ್ಧವರ್ತುಗಳ ಕಮಾನುಗಳನ್ನು ಹಾಗೂ ಬೋವಿಗೆಗಳನ್ನು ಅಳವಡಿಸಲಾಗಿದ್ದು ಇಡೀ ಸ್ತಂಭಗಳ ಈ ಮೊಗಸಾಲೆಯನ್ನು ಕಂದು ಹಾಗೂ ಹಳದಿ ಬಣ್ಣದ ಲೇಪನದಿಂದ ಸುಂದರಗೊಳಿಸಲಾಗಿದೆ.

ಅರಮನೆಯ ಗೋಡೆಗೆ ಹೊಂದಿರುವ ಒಂದು ಶಾಸನದಲ್ಲಿ ಇದನ್ನು 'ಸಂತೋಷದ ಆವಾಸ ಸ್ವರ್ಗದ ವೈರಿ' ಎಂದು ಬಣ್ಣಿಸಲಾಗಿದೆ.

ಫತೇಪುರ ಸಿಖ್ರಿ :

ಫತೆಪುರ ಸಿಖ್ರಿಯು ಉತ್ತರ ಭಾರತದ ಆಗ್ರಾದ ಒಂದು ನಗರ. ಕ್ರಿ.ಶ. 1570ರಲ್ಲಿ ಅಕ್ಬರನು ಈ ಐತಿಹಾಸಿಕ ನಗರವನ್ನು ನಿರ್ಮಿಸಿದನು. ಫತೆಪುರ ಸಿಖ್ರಿಯಲ್ಲಿರುವ ಪ್ರಮುಖ ಐತಿಹಾಸಿಕ ಸ್ಮಾರಕಗಳು ಮಿಲಿಂದ ಫರ್ವೇಜಾ, ಪಂಚ್ ಮಹಲ್, ಪಚೀಸೀ ನ್ಯಾಯಾಲಯ, ಹುಜ್ರಾ–ಇ–ಅನೂಪ್ ತಾಲಾವ್, ದಿವಾನ್–ಇ–ಬಾಸ್, ಫತೇಪುರ್ ಸಿಖ್ರಿಯಲ್ಲಿರುವ ಈ ಎಲ್ಲಾ ಕಟ್ಟಡಗಳು ಬಂಗಾಲ ಹಾಗೂ ಗುಜರಾತಿನ ವಾಸ್ತು ಶಿಲ್ಪ ಶಾಸ್ತ್ರದ ಶೈಲಿಯನ್ನು ಒಳಗೊಂಡಿದೆ.

ಮಹಾಬಲಿಪುರಂ :

ಬಂಗಾಳಕೊಲ್ಲಿಯ ಸಮುದ್ರದ ತೀರದಲ್ಲಿರುವ ಚೆನ್ನೈನ ದಕ್ಷಿಣಕ್ಕೆ 60 ಕಿ.ಮೀ ದೂರದಲ್ಲಿದೆ. ಮಹಾಬಲಿಪುರಂ 'ದೇಗುಲಗಳ ಪಟ್ಟಣ'ವೆಂದೇ ಪ್ರಸಿದ್ಧಿಯಾಗಿದೆ. ಇಲ್ಲಿನ ಅತ್ಯದ್ಭುತ 'ರಥ ಗುಹಾದೇವಾಲಯ' ಗಳನ್ನು ನಿರ್ಮಿಸಿರುವ ಪಲ್ಲವ ದೊರೆ ನರಸಿಂಹನು ಕ್ರಿ.ಶ. 7ನೇ ಶತಮಾನದಲ್ಲಿ ಇವುಗಳನ್ನು ನಿರ್ಮಿಸಿದನು. ಈ ದೇಗುಲಗಳನ್ನು

'ಪಂಚಪಾಂಡವ ರಥ' ಎಂದು ಕರೆಯಲಾಗುತ್ತದೆ. ಒಟ್ಟು 8 ದೇವಾಲಯಗಳಿದ್ದು ಎಲ್ಲಾ 8 ದೇವಾಲಯಗಳನ್ನು ಸಂರಕ್ಷಿಸಲಾಗಿದೆ. ಈ 8 ರಲ್ಲಿ 5 ದೇವಾಲಯಗಳನ್ನು ಧರ್ಮರಾಜ ರಥ, ಭೀಮರಥ, ಅರ್ಜುನ ರಥ, ದ್ರೌಪದಿ ರಥ ಹಾಗೂ ನಕುಲ ಸಹದೇವ ರಥ ಎಂದು ಹೆಸರಿಸಲಾಗಿದೆ.

ತಾಜ್‌ಮಹಲ್ :

ಉತ್ತರಪ್ರದೇಶದ ಆಗ್ರಾದಲ್ಲಿರುವ ತಾಜ್ ಮಹಲನ್ನು ಮೊಘಲ್ ದೊರೆ ಷಹಜಾನ್ ತನ್ನ ಪ್ರೀತಿಪಾತ್ರಳಾದ ಪ್ರೇಯಸಿ ಪತ್ನಿ ಮುಮ್ತಾಜ್ ನೆನಪಿಗಾಗಿ ಕಟ್ಟಿಸಿದನು. ಭಾರತೀಯ ಪರ್ಷಿಯಾ, ಹಾಗೂ ಇಸ್ಲಾಂ ವಾಸ್ತು ಶೈಲಿಯ ಅನನ್ಯ ಸಂಯೋಜನೆಯಾಗಿರುವ ಮಾಘೆಲ್ ವಾಸ್ತುಶಿಲ್ಪ ಶೈಲಿಯ ಅತ್ಯುತ್ತಮ ಉದಾಹರಣೆಯಾಗಿದೆ.

ಈ ತಾಜ್‌ಮಹಲ್ 1983ರಲ್ಲಿ ತಾಜ್‌ಮಹಲ್ ವಿಶ್ವ ಪರಂಪರ ಸ್ಥಳವಾಗಿ ಮಾನ್ಯತೆ ಪಡೆಯಿತು. ಪ್ರಪಂಚದ ನವೀನ ಏಳು ವಿಸ್ಮಯಗಳಲ್ಲಿ ಒಂದಾಗಿ ತಾಜ್ ಮಹಲ್ ಆಯ್ಕೆಯಾಗಿದೆ. ಕ್ರಿ.ಶ 1632ರಲ್ಲಿ ತಾಜ್ ಮಹಲಿನ ನಿರ್ಮಾಣ ಕಾರ್ಯವು ಪ್ರಾರಂಭವಾಗಿ 1653ರಲ್ಲಿ ಪೂರ್ಣಗೊಂಡಿತು.

ಲಹೌರಿ ತಾಜ್ ಮಹಲ್ ನಿರ್ಮಾಣದ ಪ್ರಮುಖ ಶಿಲ್ಪಿಯಾಗಿದ್ದನು.

ಖಜುರಾಹೋ ದೇವಾಲಯ :

ಕ್ರಿ.ಶ. 950 ಹಾಗೂ 1050 ರಲ್ಲಿ ಚಂಡೇಲಾ ರಜಪೂತ ದೊರೆಗಳಿಂದ ನಿರ್ಮಿತವಾದ ಅತ್ಯಂತ ಭವ್ಯ ಖಜುರಾಹೋ ದೇವಾಲಯಗಳು ಭಾರತದ ಅತ್ಯಂತ ಪ್ರಸಿದ್ಧ ಐತಿಹಾಸಿಕ ಸ್ಮಾರಕಗಳಲ್ಲೊಂದು. ಇಲ್ಲಿನ ದೇವಾಲಯಗಳನ್ನು ಶಿವ ಹಾಗೂ ವಿಷ್ಣು ಮತ್ತು ಜೈನ ತೀರ್ಥಂಕರುಗಳಿಗೆ ಸಮರ್ಪಿಸಲಾಗಿದೆ. ಮೊದಲು 85 ದೇವಾಲಯಗಳಿದ್ದವೆಂದು ಪುರಾವೆಗಳಿಂದ ತಿಳಿದು ಬಂದಿದೆ. ಆದರೆ ಈಗ ಸುಸ್ಥಿತಿಯಲ್ಲಿರುವ ದೇಗುಲಗಳ ಸಂಖ್ಯೆ ಕೇವಲ 22 ಖಜುರಾಹೋ ದೇವಾಲಯಗಳಲ್ಲಿ ಜಗದಂಭ ದೇಗುಲ, ಕೆಂಡರಿಯಾ ಮಹಾದೇವಾ ದೇಗುಲ, ಪತ್ರಗುಪ್ತ ದೇವಾಲಯ, ಧೂಲದೇವ ಮತ್ತು ಚತುರ್ಭುಜ ದೇವಾಲಯ ಅತ್ಯಂತ ಪ್ರಮುಖ ದೇವಾಲಯಗಳು.

ಅಜಂತಾ :

ಮಹಾರಾಷ್ಟ್ರದ ಜಲಗಾವ್‌ನಿಂದ ಕೇವಲ 40 ಮೀ ದೂರದಲ್ಲಿರುವ ಅಜಂತಾ ಗುಹೆಗಳನ್ನು ಕ್ರಿ.ಶ 1819ರಲ್ಲಿ ಕಂಡುಹಿಡಿಯಲಾಯಿತು. ಪ್ರಪಂಚದ ಅತ್ಯಂತ ಶ್ರೇಷ್ಠ ಸ್ಮಾರಕವೆಂದು ಯುನೆಸ್ಕೋದಿಂದ ಮಾನ್ಯತೆ ಪಡೆದಿದೆ. ಕ್ರಿ.ಪೂ. 2ನೇ ಶತಮಾನದಲ್ಲಿ ನಿರ್ಮಾಣ ಕಾರ್ಯವು ಮೊದಲುಗೊಂಡು ಕ್ರಿ.ಶ 2ನೇ ಶತಮಾನದಲ್ಲಿ ಅಂತಿಮಗೊಂಡಿತು.

ಒಟ್ಟು 28 ಗುಹೆಗಳಿದ್ದು ಅವುಗಳೆಲ್ಲವೂ ಅನಂತ ಸೌಂದರ್ಯದಿಂದ ಕೂಡಿರುವ ಚಿತ್ರಗಳಿಂದ ತುಂಬಿಹೋಗಿದೆ. ಬುದ್ಧ ಹಾಗೂ ಬೋಧಿಸತ್ವವನ್ನು ವಸ್ತುವಾಗಿಟ್ಟು ಕೆತ್ತಲಾಗಿರುವ ಅನೇಕ ಶಿಲೆಗಳಿವೆ. ವಿಹಾರ ಗುಹೆಗಳು ಹಾಗೂ ಚೈತಿ ಗುಹೆಗಳೆಂಬ ಎರಡು ಬಗೆಯ ಗುಹೆಗಳಿವೆ.

ಧಾಮಕ್ ಸ್ತೂಪ :

ಈ ಸ್ಮಾರಕ ಸಾರಾನಾಥದಲ್ಲಿದೆ. ಮೌರ್ಯ ದೊರೆ ಅಶೋಕ ಸಾಮ್ರಾಟನು ನಿರ್ಮಿಸಿದ್ದ ಸ್ತೂಪವನ್ನು ಕ್ರಿ.ಶ. 500ರಲ್ಲಿ ಪುನರ್ನಿರ್ಮಿಸಲಾಯಿತು. ಈ ಸ್ಮಾರಕವು ಭಾರತದಲ್ಲಿಯೇ ಅತೀ ಪ್ರಮುಖವಾದ ಬೌದ್ಧ ಸ್ಮಾರಕವಾಗಿದೆ. ಈ ಸ್ಮಾರಕವು ಬ್ರಹತ ಕೊಳವೆ ಆಕಾರದಲ್ಲಿದ್ದು 34 ಮೀ ಎತ್ತರ ಹಾಗೂ 28.3 ಮೀ ಸುತ್ತಳತೆಯನ್ನು ಹೊಂದಿದೆ.

ತಳಭಾಗವು ಕಲ್ಲಿನಿಂದ ನಿರ್ಮಿಸಲ್ಪಟ್ಟಿದ್ದು ಮೇಲ್ಭಾಗವು ಇಟ್ಟಿಗೆಗಳಿಂದ ನಿರ್ಮಿತವಾಗಿದೆ. ಭಗವಾನ್ ಬುದ್ಧನು ತನ್ನ ಮೊಟ್ಟ ಮೊದಲ ಪ್ರವಚನವನ್ನು ಈ ಸ್ತೂಪದಲ್ಲಿ ನೀಡಿದನು ಎಂದು ನಂಬಿಕೆ ಹೊಂದಿರುವುದರಿಂದ ಇದಕ್ಕೆ ತನ್ನದೇ ಆದ ಐತಿಹಾಸಿಕ ಹಿರಿಮೆ ಇದೆ. ಇಂದಿಗೂ ಈ ಪ್ರಸಿದ್ಧವಾದ ಪವಿತ್ರ ಸ್ತೂಪದಲ್ಲಿ ಬುದ್ಧನನ್ನು ಪೂಜಿಸಲು ವಿಶ್ವದೆಲ್ಲೆಡೆಯಿಂದ ಭಕ್ತರು ಆಗಮಿಸುತ್ತಾರೆ.

ಕುತುಬ್ ಮಿನಾರ್ :

ಕುತುಬ್ ಮಿನಾರ್ ದೆಹಲಿಯಲ್ಲಿದೆ. ಈ ಸ್ಮಾರಕವನ್ನು ಕ್ರಿ.ಶ. 1199ರಲ್ಲಿ ಕುತುಬ್ ಉದ್ದಿನ್ ಐಬಕ್‌ನು ಶುರುಮಾಡಿದನು. ಈತನ ಉತ್ತರಾಧಿಕಾರಿ ಹಾಗೂ ಅಳಿಯನಾದ ಇಲ್ತುಮಶ್‌ನು ನಿರ್ಮಾಣ ಕಾರ್ಯವನ್ನು

ಪೂರ್ಣಗೊಳಿಸಿದನು. ಕೆಂಪು ಕಲ್ಲಿನಿಂದ ನಿರ್ಮಿತವಾಗಿರುವ ಈ ಕಟ್ಟಡವು ಐದಂತಸ್ತಿನದ್ದಾಗಿದೆ. 379 ಮೆಟ್ಟಿಲುಗಳಿದ್ದು 72.05 ಮೀ ಉದ್ದವಿದೆ. ಭಾರತದಲ್ಲಿ ಕಲ್ಲಿನಿಂದ ನಿರ್ಮಿತವಾದ ಅತ್ಯಂತ ಎತ್ತರದ ಕಟ್ಟಡದ ತಳವು 14.3 ಮೀಟರ್ ಆಗಿದ್ದು 5ನೇ ಮಹಡಿಯ 2.7 ಮೀ ಸುತ್ತಳತೆ ಹೊಂದಿದೆ. ಕುತುಬ್ ಮಿನಾರ್‌ನ ಹೊರಮೈ ಅನೇಕ ಅರಬ್ಬಿ ಹಾಗೂ ನಾಗರಿ ಲಿಪಿಯ ಕೆತ್ತನೆಗಳನ್ನೊಳಗೊಂಡಿದೆ.

ಭಾರತದಲ್ಲಿ ನಿರ್ಮಿತವಾದ ಪ್ರಪ್ರಥಮ ಮಸೀದಿ ಕುವ್ವತ್ ಉಲ್–ಇಸ್ಲಾಂ' ಕುತುಬ್ ಮಿನಾರ್ ಆವರಣದಲ್ಲಿದೆ.

ಕೊನಾಕ್ ಸೂರ್ಯ ದೇಗುಲ :

ಒರಿಸ್ಸಾ ರಾಜ್ಯದ ಕೊನಾರ್ಕ್ ಎಂಬ ಸ್ಥಳದಲ್ಲಿರುವ 'ಕೊನಾರ್ಕ್ ಸೂರ್ಯ ದೇವಾಲಯ'ದ ಇನ್ನೊಂದು ಹೆಸರು 'ಕಪ್ಪು ಪಗೋಪ' ಭಾರತದ ಏಳು ವಿಸ್ಮಯಗಳಲ್ಲೊಂದಾಗಿರುವ ಈ ದೇವಾಲಯವು ಇಡೀ ಭಾರತದಲ್ಲಿಯೇ ಸುಪ್ರಸಿದ್ಧವಾಗಿದ್ದು ಒರಿಸ್ಸಾದ ಅತ್ಯುತ್ತಮ ಸ್ಮಾರಕ ಹಾಗೂ ಐತಿಹಾಸಿಕ ಸ್ಥಳವಾಗಿದೆ. ಹದಿಮೂರನೇ ಶತಮಾನದಲ್ಲಿ ಪೂರ್ವ ಗಂಗ ಸಾಮ್ರಾಜ್ಯದ ದೊರೆ ನರಸಿಂಹದೇವ (ಕ್ರಿ.ಶ 1236–1264) ನಿಂದ ನಿರ್ಮಿಸಲ್ಪಟ್ಟಿತ್ತು. ಈ ದೇವಾಲಯವು ಸೂಯರ್ಹ ದೇವನ ರಥದ ಆಕಾರದಲ್ಲಿದ್ದು ಸಂಪೂರ್ಣವಾಗಿ ಕಲ್ಲಿನಿಂದ ನಿರ್ಮಿಸಲಾಗಿದೆ. ಭಾರತದಲ್ಲಿನ ಇತರ ಯಾವುದೇ ದೇವಾಲಯದಲ್ಲಿ ಹಿಂದೆಂದೂ ಇರದಿದ್ದ ಸುಮಾರು 60 ಮೀ (200 ಅಡಿ) ಎತ್ತರದ ಗೋಪುರವೊಂದು ಈ ದೇವಾಲಯದಲ್ಲಿತ್ತೆಂದು ನಂಬಲಾಗಿದೆ.

ವಿಧಾನ ಸೌಧ :

ವಿಧಾನಸೌಧವು ಕರ್ನಾಟಕದ ವಿಧಾನ ಮಂಡಲದ ಸಭೆ ನಡೆಯುವ ಕಟ್ಟಡ. ಇದರ ನಿರ್ಮಾಣವು ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರ ಆಡಳಿತದ ಅವಧಿಯಲ್ಲಿ ನಿರ್ಮಾಣವಾಯಿತು. ವಿಧಾನಸೌಧಕ್ಕೆ 1951 ಜುಲೈ 13 ರಂದು ಅಂದಿನ ಪ್ರಧಾನಿಯಾಗಿದ್ದ ಜವಾಹರ್ ಲಾಲ್ ನೆಹರು ಶಂಕುಸ್ಥಾಪನೆ ಮಾಡಿದರು. 1952ರಲ್ಲಿ ಪ್ರಾರಂಭವಾದ ಕಟ್ಟಡ ನಿರ್ಮಾಣ ಕಾರ್ಯವು ಪೂರ್ಣಗೊಳ್ಳಲು ನಾಲ್ಕು ವರ್ಷಗಳಾದವು. 5000ಕ್ಕೂ ಹೆಚ್ಚು ಕೆಲಸಗಾರರು ಈ ಕಟ್ಟಡ ನಿರ್ಮಾಣದಲ್ಲಿ ಪಾಲ್ಗೊಂಡಿದ್ದರು. ರಾಜ್ಯ ಸಾರ್ವಜನಿಕ ಕಾರ್ಯಗಳ ಇಲಾಖೆಯಲ್ಲಿ ಮುಖ್ಯ ಇಂಜಿನಿಯರ್ ಹಾಗೂ ವಾಸ್ತುಶಿಲ್ಪಿಯಾಗಿದ್ದ ಮಾಣಿಕ್ಯಂ ಕಟ್ಟಡ ನಿರ್ಮಾಣದ ಉಸ್ತುವಾರಿ ನೋಡಿಕೊಂಡರು. ಇದರ ವಾಸ್ತು ಶಿಲ್ಪವು ಮೈಸೂರು ದ್ರಾವಿಡ ಶೈಲಿ ಎಂದು ಕೆಲವರು ಕರೆಯುತ್ತಾರೆ. ಈ ಕಟ್ಟಡದ ವಾಸ್ತು ಶೈಲಿಯಲ್ಲಿ ಇಂಡೋ ಸಾರ್ಸೆನಿಕ್ ಮತ್ತು ದ್ರಾವಿಡ ಶೈಲಿಯ ಹಲವಾರು ಅಂಶಗಳು ಅಡಕವಾಗಿದೆ. ಕರ್ನಾಟಕದ ಗಜೆಟ್ ಪ್ರಕಾರ ಅಂದು ವಿಧಾನಸೌಧ ಕಟ್ಟಲು ತಗುಲಿದ ವೆಚ್ಚ 1.75ಕೋಟಿ. ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ಭಾಗಗಳಲ್ಲಿ ಪ್ರವೇಶದ್ವಾರಗಳಿದ್ದು ಎತ್ತರವಾದ ಕೆತ್ತನೆಯುಳ್ಳ ಕಂಬಗಳು ಕಟ್ಟಡಕ್ಕೆ ವಿಶೇಷ ಮೆರುಗು ತಂದುಕೊಟ್ಟಿದೆ.

ಕಟ್ಟಡದ ಮೇಲ್ಭಾಗದಲ್ಲಿ ಚಿತ್ತಾರಗಳ ಮಧ್ಯೆ ಅಶೋಕ ಸ್ತಂಭವನ್ನು ಸ್ಥಾಪಿಸಲಾಗಿದೆ. ಗೋಪುರಗಳು ಇಂಡೋ ಇಸ್ಲಾಮಿಕ್ ಅಂಶಗಳನ್ನು ಒಳಗೊಂಡಿದ್ದು ಕಟ್ಟಡದ ಉಳಿದ ಭಾಗಗಳಿಗೆ ಸಂಬಂಧ ಕಲ್ಪಿಸುವಂತೆ ನಾಲ್ಕು ಮೂಲೆಗಳಲ್ಲಿ ಚಿಕ್ಕದಾದ ಗೋಪುರವನ್ನು ನಿರ್ಮಿಸಲಾಗಿದೆ.

ಆಯತಾಕಾರದಲ್ಲಿ ನಿರ್ಮಿಸಲಾದ ಕಟ್ಟಡದ ಒಳಭಾಗದಲ್ಲಿಯೂ ಸಾಕಷ್ಟು ಗಾಳಿ ಬೆಳಕು ಇರುವಂತೆ ಗಮನ ನೀಡಲಾಗಿದೆ. ವಿಸ್ತಾರವಾದ ಹಜಾರ ಕೂಡ ಇಲ್ಲಿಯ ಆಕರ್ಷಣೆ. ಬಾಲ್ಕನಿಗಳಿಗೆ ರಾಜಸ್ಥಾನಿಯ ಮೆರುಗು ಇದೆ.

ಬೆಟ್ಟಪಲಸೂರಿನಿಂದ ತರಿಸಲಾದ ಕಲ್ಲುಗಳಿಗೆ ಬಣ್ಣಗಳ ಲೇಪನವಿಲ್ಲದೆ ಮೂಲರೂಪವನ್ನೇ ಉಳಿಸಿಕೊಂಡಿರುವುದು ಕಟ್ಟಡದ ಭವ್ಯತೆಯನ್ನು ಹೆಚ್ಚಿಸಿದೆ. ವಿಧಾನಸೌಧದ ಭಾಗಿಲುಗಳು, ಕಿಟಕಿಗಳಿಗೆ ಬಳಕೆಯಾಗಿರುವುದು ಹುಣಸೂರು ತೇಗ. ಅವುಗಳಲ್ಲಿನ ಕೆತ್ತನೆ, ನೀಡಲಾದ ಪಾಲಿಶ್ ಮೆರಗು ಎಲ್ಲರ ಗಮನ ಸೆಳೆಯುತ್ತಿದೆ. ಸರ್ಕಾರದ ಸಚಿವಾಲಯ ಹಾಗೂ ಶಾಸಕಾಂಗ ಎರಡೂ ಒಂದೇ ಕಡೆ ಇರುವುದು ಕಟ್ಟಡದ ವಿಶೇಷ.

ಇಂಥ ವ್ಯವಸ್ಥೆ ಬೇರೆ ಯಾವ ರಾಜ್ಯದಲ್ಲಿಯೂ ಇಲ್ಲ. ಸುಮಾರು 700 ಅಡಿ ಉದ್ದ ಹಾಗೂ 350 ಅಡಿ ಅಗಲ ಹೊಂದಿರುವ ವಿಧಾನಸೌಧದಲ್ಲಿ ಒಟ್ಟು ನಾಲ್ಕು ಮಹಡಿಗಳಿವೆ.

ಒಂದನೇ ಮಹಡಿಯಲ್ಲಿ ವಿಧಾನಸಭೆ ಹಾಗೂ ವಿಧಾನ ಪರಿಷತ್ ಸಭಾಂಗಣಗಳಿದ್ದು ವಿಶಾಲವಾಗಿದೆ. ದೊಡ್ಡದಾದ ಈ ಸಭಾಂಗಣದ ಮಧ್ಯಭಾಗದಲ್ಲಿ ಒಂದೂ ಕಂಬ ಇಲ್ಲದಿರುವುದು ಇನ್ನೊಂದು ವಿಶೇಷ. ಪ್ರತಿ ಮಹಡಿಯಲ್ಲಿಯೂ ನಲವತ್ತರಿಂದ ನಲವತ್ತೈದು ಕಟ್ಟಡಗಳಿದ್ದು 3ನೇ ಮಹಡಿಯಲ್ಲಿ ಕ್ಯಾಬಿನೆಟ್ ಹಾಲ್ ಹಾಗೂ ಕಾನ್‌ಫರೆನ್ಸ್ ಹಾಲ್ ಇದೆ. ಎದುರಿನ ಹೈಕೋರ್ಟ್ ಹಾಗೂ ಉತ್ತರದಲ್ಲಿ ರಾಜಭವನ ಇದೆ.

ಬೆಂಗಳೂರು ಅರಮನೆ :

ಬೆಂಗಳೂರು ಅರಮನೆಯು ಸದಾಶಿವ ನಗರ ಮತ್ತು ಜಯಮಹಲ್ ಮಧ್ಯದ, ನಗರದ ಹೃದಯ ಭಾಗವಾದ ಪ್ಯಾಲೇಸ್ ಗಾರ್ಡನ್‌ನಲ್ಲಿದೆ. ಈ ಕಟ್ಟಡ ನಿರ್ಮಾಣದ ಹಿಂದಿನ ಉದ್ದೇಶವು, ಇದನ್ನು ಇಂಗ್ಲೆಂಡಿನ ವಿನ್ಸರ್ ಕ್ಯಾಸಲಿನ ಹಾಗೆ ನಿರ್ಮಿಸಬೇಕೆಂದಿದ್ದು. ಇದರ ಕಾಮಗಾರಿಯು 1862ರಲ್ಲಿ ರೆವ್. ಗಾರೆಟ್ ಅವರಿಂದ ಪ್ರಾರಂಭವಾಯಿತು. ನಂತರ 1884ರಲ್ಲಿ ಒಡೆಯರ್ ರಾಜವಂಶಸ್ಥರಾದ ಚಾಮರಾಜ ಒಡೆಯರ್ ಅವರಿಂದ ಇದು ಖರೀದಿಸಲ್ಪಟ್ಟಿತ್ತು.

ಅರಮನೆಯ ಕೆಳ ಮಹಡಿಯು ತೆರೆದ ಅಂಗಳವನ್ನು ಹೊಂದಿದ್ದು, ಕೂಡಲು ಗ್ರಾನೈಟ್ ಕಲ್ಲಿನ ಕಟ್ಟೆಗಳನ್ನು ಕೆತ್ತಲಾಗಿದೆ. ಇವುಗಳು ತಮ್ಮ ಮೇಲ್ಮೈಮೇಲೆ ನೀಲಿ ಬಣ್ಣದ ಟಾಯಿಗಳನ್ನು ಹೊಂದಿದ್ದು ರಾತ್ರಿಯಲ್ಲಿ ನೋಡಲು ಸೊಗಸಾಗಿರುತ್ತವೆ. ರಾಜನು ಸಭೆ ನಡೆಸುತ್ತಿದ್ದ ವಿಶಾಲವಾದ ದರ್ಬಾರ್ ಹಾಲ್‌ಅನ್ನು ಮೇಲ್ಮಹಡಿಯಲ್ಲಿ ಕಾಣಬಹುದು. ಅರಮನೆಯ ಒಳಗೋಡೆಗಳು ಗ್ರೀಕ್ ಡಚ್ ಮತ್ತು ಪ್ರಸಿದ್ಧವಾದ ರಾಜ ರವಿವರ್ಮನ ಚಿತ್ರ ಕಲೆಗಳಿಂದ ಅಲಂಕೃತಗೊಂಡಿದ್ದು ನೋಡಲು ಸುಂದರವಾಗಿದೆ.

ಅರಮನೆ ಕೋಟೆಯ ಗೋಪುರಗಳು, ಕೋಟೆ ಮತ್ತು ಗೋಪುರಗಳನ್ನೊಳಗೊಂಡ ಟ್ಯೂಡರ್ ಶೈಲಿಯ ವಾಸ್ತುಶಿಲ್ಪದಲ್ಲಿ ನಿರ್ಮಿಸಲಾಯಿತು. ಒಳಾಂಗಣದಲ್ಲಿ ಸೊಗಸಾದ ಮರದ ಕೆತ್ತನೆಗಳು, ಹೂವಿನ ಅಲಂಕಾರ, ಸುಂದರ ಕಮಾನುಗಳು ಮತ್ತು ಎಡ್ವರ್ಡಿಯೆನ ಶೈಲಿಯ ರೀತಿಯಲ್ಲಿ ಪೀಠೋಪಕರಣಗಳನ್ನು ಜಾನ್ ರಾಬರ್ಟ್ ಮತ್ತು ರಾಜರ್ ಅವರು ಖರೀದಿ ಮಾಡಿದರು.

ಉದ್ಯಾನಗಳ ಸಂರಕ್ಷಣೆ ಮತ್ತು ತೋಟಗಾರಿಕೆ ಗುಸ್ತಾವ್ ಹರ್ಮನ್ ಕ್ರುಬ್ಬುಎಗೆಲ್ ಅವರ ಕರ್ತವ್ಯವಾಗಿದೆ. ಒಟ್ಟು 35 ಕೊಠಡಿಗಳನ್ನು ಅರಮನೆಯಲ್ಲಿ ನಿರ್ಮಿಸಲಾಗಿತ್ತು ಮತ್ತು ಅವುಗಳಲ್ಲಿ ಬಹುಪಾಲು ಮಲಗುವ ಕೋಣೆಗಳಾಗಿದ್ದವು. ಈ ನವೀಕರಿಸುವಿಕೆ ವಿಶೇಷವಾಗಿ ಇಂಗ್ಲೆಂಡ್ ಆಮದು ಮಾಡಿಕೊಂಡ ಬಣ್ಣದ ಗಾಜು ಮತ್ತು ಕನ್ನಡಿಗಳು ಅಳವಡಿಕೆ, ಜನರಲ್ ಎಲೆಕ್ಟಿಕ್ ಒಂದು ಕೈಪಿಡಿ ಲಿಫ್ಟ್ ಮತ್ತು ಮರದ ಪಂಖಗಳ ಖರ್ಚನ್ನು ಒಳಗೊಂಡಿತ್ತು. 1970 ರಲ್ಲಿ ಎಚ್ ಜಯಚಾಮರಾಜೇಂದ್ರ ಒಡೆಯರ್ ಅವರು , ಎರಡುವಿದ್ಯುತ್ ಕಂಪೆನಿಗಳಿಗೆ ಅಂದಿನ ಗುತ್ತಿಗೆದಾರ ಚಾಮರಾಜ ಎಂಬುವವರ ಹೇಳಿಕೆ ಮೇಲೆ ಆಸ್ತಿ ಸ್ವಾಧೀನವನ್ನು ವರ್ಗಾಯಿಸಿಕೊಟ್ಟಿದ್ದರೆಂದು ಹೇಳಲಾಗುತ್ತದೆ.

ಚಾರ್ ಮಿನಾರ್ :

ಸುಪ್ರಸಿದ್ಧ ಐತಿಹಾಸಿಕ ಸ್ಮಾರಕ ಚಾರ್ ಮಿನಾರ್ ಇರುವುದು ಆಂದ್ರಪ್ರದೇಶದ ಹೈದರಾಬಾದ್‌ನಲ್ಲಿ. ಹೈದರಾಬಾದ್‌ನಲ್ಲಿ ಕಾಣಿಸಿಕೊಂಡಿದ್ದ ಬೀಕ ಪ್ಲೇಗ್ ಕಾಯಿಲೆಯು ಕೊನೆಗೊಂಡ ನೆನಪಿಗಾಗಿ 1591ರಲ್ಲಿ ಮೊಹಮ್ಮದ್ ಖುಲಿ ಶಾಹ್ ಮಹಾರಾಜನು ಈ ಸ್ಮಾರಕವನ್ನು ನಿರ್ಮಿಸಿದನು. ಚಾರ್ ಮಿನಾರ್ ಸ್ಮಾರಕವು ನಾಲ್ಕು ಮಿನಾರ್‌ಗಳು ನಾಲ್ಕು ಪ್ರಮುಖ ದಿಕ್ಕುಗಳಡೆಗಿದೆ.

ಚಾರ್ ಮಿನಾರ್ ಸ್ಮಾರಕವು ಚೌಕಾಕಾರದಲ್ಲಿದೆ. ಪ್ರತೀ ಬದಿಯೂ ಸುಮಾರು 100 ಅಡಿ ಅಳತೆಯಲ್ಲಿದೆ. ಹೈದರಾಬಾದ್ ನಗರವನ್ನು ಸಾಂಸ್ಕೃತಿಕವಾಗಿ ಶ್ರೀಮಂತಗೊಳಿಸುವಲ್ಲಿ ಚಾರ್ ಮಿನಾರ್‌ನ ಪಾತ್ರ ಮಹತ್ತರವಾಗಿದೆ.

ಚಾರ್ ಮಿನಾರ್ ಒಂದು ಕ್ಷೇತ್ರದ ಪ್ರೇಕ್ಷಣೀಯ ಸ್ಥಳವಾಗಿದ್ದು, ನೋಡಲು ಒಂದು ಸುಂದರವಾದ ಸ್ಮಾರಕ ಚಾರಮಿನಾರ್ ಎಂದು ಹೇಳಲಾಗಿದೆ.

ಕಂಪೇಗೌಡ ಕೋಟೆ :

ವಿಜಯನಗರ ಸಾವಮ್ರಾಜ್ಯದ ಸಾಮಂತ ರಾಜ ಕೆಂಪೇಗೌಡರು ಬೆಂಗಳೂರಿನಲ್ಲಿ 1537ರಲ್ಲಿ ಮಣ್ಣಿನ ಕೋಟೆ ಕಟ್ಟಿ ಆಧುನಿಕ ಬೆಂಗಳೂರಿನ ಉದಯಕ್ಕೆ ಕಾರಣಕರ್ತರಾದರು.

ನಂತರ 1761 ರಲ್ಲಿ ಹೈದರ ಅಲ್ಲಿ ಆ ಮಣ್ಣಿನ ಕೋಟೆಯ ಬದಲಿಗೆ ಕಲ್ಲಿನ ಕೋಟೆಯನ್ನು ಕಟ್ಟಿದರು. ಹಿರಿಯ ಕೆಂಪೇಗೌಡ ಶಾಲಿವಾಹನ ಶಕ ವರ್ಷ 1459ರ ಹೇಮಲಂಬಿ ಸಂವತ್ಸರದ ಮಾಘ ಶುದ್ಧ ತ್ರಯೋದಶಿ ಶುಕ್ರವಾರದಂದು (ಪ್ರ.ವ.14.1.1538) ಬೆಂಗಳೂರು ಕೋಟೆ ಮತ್ತು ಪೇಟೆಗಳ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿದರು. ಅದು ನಾಲಕು ಮೈಲಿ ಸುತ್ತಳತೆಯ , ನಾಲ್ಕು ಬತೇರಿಯ ಒಂಬತ್ತು (ನಾಲ್ಕು ಪ್ರದಾನ ಮತ್ತು ಐದು ಸಾಮಾನ್ಯ) ದ್ವಾರಗಳ ಅಂಡಾಕಾರದ ಕೋಟೆ. ಹದಮಾಡಿದ ಮಣ್ಣಿನ ಹೆಂಟೆಗಳಿಂದ ನಿರ್ಮಿಸಿದ್ದು . ಒಳ ಹಾಗೂ ಹೊರಭಾಗದಲ್ಲಿ ದಿಂಡುಗಲ್ಲಿನ ಒತ್ತಾಸೆ. ಆ ಕಾಲಕ್ಕೆ ಅದು ಬಯಲು ಸೀಮೆಯ ದೊಡ್ಡ ಕೋಟೆ. ಅರಮನೆ ಆವರಣಕ್ಕೆ ಹೊಂದಿಕೊಂಡಂತೆ ಚಿಕ್ಕಪೇಟೆ ಮತ್ತು ದೊಡ್ಡ ಪೇಟೆ ಎಂಬ ಎರಡು ಪೇಟೆಗಳು. ಈಗಿನ ಚಿಕ್ಕಪೇಟೆ ವೃತ್ತದ ಬದಿ ಅರಮನೆ ಅದರ ಸುತ್ತಮುತ್ತ ಭೈರವೇಶ್ವರ, ಶ್ರೀ ವೆಂಕಟರಮಣ, ಕೋದಂಡಸ್ವಾಮಿ, ಸೈನಿಕರ ಮನೆ, ಅಂಗಡಿ ಮುಂಗಟ್ಟು ಪೇಟೆ ಮೊದಲಾದವುಗಳು.

ಕೋಟೆಯ ಒಂಬತ್ತು ಬಾಗಿಲುಗಳು :

ಹಿರಿಯ ಕೆಂಪೇಗೌಡ ಕಟ್ಟಿಸಿದ ಕೋಟೆಯ ಒಂಬತ್ತು ಬಾಗಿಲುಗಳು ಹೀಗಿದ್ದವು. 1) ಪೂರ್ವಕ್ಕೆ ಹಲಸೂರು ಹೆಬ್ಬಾಗಿಲು. 2) ಉತ್ತರಕ್ಕೆ ಯಶವಂತಪುರ ಉಪದ್ವಾರ (ದೆಹಲಿದ್ವಾರ, ಈಗಿನ ಉಪ್ಪಾರ ಪೇಟೆ ಪೋಲಿಸ್ ಠಾಣೆ. 3) ಪಶ್ಚಿಮಕ್ಕೆ ಸೊಂಪೆಕೊಪ್ಪ (ಈಗಿನ ರೈಲ್ವೆ ಮೇಲು ಸೇತುವೆ ಬಳಿ) 4) ಕೆಂಗೇರಿ ಉಪದ್ವಾರ (ಮೈಸೂರು ದ್ವಾರ) 5) ಕಾಸಕಾನ ಹಳ್ಳಿ ಉಪದ್ವಾರ (ಈಗಿನ ಕೆಂಪೇಗೌಡ ವೈದ್ಯಕೀಯ ಮಹಾವಿದ್ಯಾಲಯ ಬಳಿ) 6) ದಕ್ಷಿಣಕ್ಕೆ ಆನೇಕಲ್ ಹೆಬ್ಬಾಗಿಲು (ಈಗಿನ ಕಲಾಸಿಪಾಳ್ಯ ಪೋಲಿಸ್ ಠಾಣೆ ಹಿಂಬಾಗ) 7) ಯಲಹಂಕ ಹೆಬ್ಬಾಗಿಲು 8) ಸಜ್ಜಾಪುರ ಉಪದ್ವಾರ 9) ವರ್ತೂರು ಉಪದ್ವಾರ. ಕೋಟೆಯ ಒಳಗಡೆ ಪೂರ್ವ ಪಶ್ಚಿಮ ಹಾಗೂ ಉತ್ತರ ದಕ್ಷಿಣಕ್ಕೆ ಹರಿದ ನಾಲ್ಕು ಮುಖ್ಯ ರಸ್ತೆಗಳು. ಎರಡೂ ಕೂಡುವ ಸ್ಥಳದಲ್ಲಿ (ಚಿಕ್ಕಪೇಟೆ ವೃತ್ತ) ಅರಮನೆ ಒಳ ಹೊರಭಾಗದಲ್ಲಿ ಮುಖ್ಯ ಪೇಟೆಗಳು. ಉದಾಹರಣೆಗೆ: ಒಕ್ಕಲಿಗರ ಪೇಟೆ , ಕುರುಬರ ಪೇಟೆ, ಮನವಾರ್ತೆ ಪೇಟೆ, ತಗಳ ಪೇಟೆ ಇತ್ಯಾದಿ. ಕೆಂಪೇಗೌಡನ ಕಾಲದಲ್ಲಿ ಎಲ್ಲಾ ಜಾತಿಯ ಜನರ ವಸತಿಗೂ ಪ್ರತ್ಯೇಕ ಪೇಟೆಗಳಿದ್ದವು. ಈಗಿನ ಟಿ.ಆರ್. ಮಿಲ್ಲಿನ ಮುಂಭಾಗ (ಚಾಮರಾಜ ಪೇಟೆ)ವನ್ನು ಗೌಡರ ಪೇಟೆ ಎಂದು ಕರೆಯುತ್ತಿದ್ದರು. ಈಗ ಹೆಸರು ಬದಲಾಗಿದೆ. ಗೌಡರ ಪೇಟೆಗೆ ಹೊಂದಿಕೊಂಡಂತೆ ಕುರುಬರ ಪೇಟೆ ಇತ್ತು. ಈಗ ಅದಿಲ್ಲ ಕೆಲವು ಪೇಟೆಗಳು ವಾಸಕ್ಕೆ ಮೀಸಲಾಗಿದ್ದವು. ಉದಾಹರಣೆಗೆ ಗೊಲ್ಲರಪೇಟೆ, ಗಾಣಿಗರ ಪೇಟೆ, ಹೂವಾಡಿಗರ ಪೇಟೆ, ಮೇದರ ಪೇಟೆ. ಕೆಂಪೇಗೌಡ ಕೋಟೆಯ ಒಳಗಿನ ಬೀದಿಗಳಿಗೆ ಆಕರ್ಶಕವಾದ, ದೈವಭಕ್ತಿಗೆ ಇಂಪಾದ ಹೆಸರುಗಳನ್ನು ಇಟ್ಟಿದ್ದನು. ಉದಾಹರಣೆಗೆ ಸೂರ್ಯ ಬೀದಿ (ಈಗಿನ ಅವೆನ್ಯೂ ರಸ್ತೆ) ಮತ್ತು ಚಂದ್ರ ಬೀದಿ (ಈಗಿನ ಅಯ್ಯಂಗಾರ್ ರಸ್ತೆ). ಕೆಂಪೇಗೌಡ ನಿರ್ಮಿಸಿದ ನಾಲ್ಕು ಬತೇರಿ, ಒಂಬತ್ತು ದ್ವಾರಗಳ ಕೋಟೆ ರಕ್ಷಣಾತ್ಮಕವಾದದ್ದು. ವ್ಯಾಪಾರಿಗಳಿಗೆ, ಕಸುಬುದಾರರಿಗೆ.

ಹೈಕೋರ್ಟ್ :

ಕರ್ನಾಟಕದ ಹೈಕೋರ್ಟ್ ಎಂದು ಅಧಿಕೃತವಾಗಿ ಕರೆಯಲ್ಪಡುವ ಕರ್ನಾಟಕ ಉಚ್ಚನ್ಯಾಯಾಲಯವು ಭಾರತದ ರಾಜ್ಯ ಕರ್ನಾಟಕ ಹೈಕೋರ್ಟ್ ಆಗಿದೆ. ಇದು ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿದೆ. ಇದನ್ನು ಹಿಂದೆ ಮೈಸೂರು ಹೈಕೋರ್ಟ್ ಎಂದು ಕರೆಯಲಾಗುತ್ತಿತ್ತು. ಅತ್ತಾರಾ ಕಚೇರಿ ಎಂದು ಕರೆಯಲ್ಪಡುವ ಕೆಂಪು ಇಟ್ಟಿಗೆ ಕಟ್ಟಡದಿಂದ ಹೈಕೋರ್ಟ್ ಕೋರ್ಟ್ ಕಾರ್ಯನಿರ್ವಹಿಸುತ್ತಿದೆ. ಇದು ಕರ್ನಾಟಕದ ಶಾಸಕಾಂಗದ ಸ್ಥಾನವಾಗಿರುವ ವಿಧಾನ ಸೌಧದ ಮುಂದೆ ಇದೆ. ಕರ್ನಾಟಕ ಹೈಕೋರ್ಟ್ ಪ್ರಸ್ತುತ ಬೆಂಗಳೂರು, ಹುಬ್ಬಳ್ಳಿ–ಧಾರವಾಡ ಮತ್ತು ಗುಲ್ಬರ್ಗದಲ್ಲಿ ಕಾರ್ಯನಿರ್ವಹಿಸುತ್ತಿದೆ. ವಾಸ್ತು ಶಿಲ್ಪದಲ್ಲಿ ಕಲ್ಲು ಮತ್ತು ಇಟ್ಟಿಗೆಯ ಎರಡು ಅಂತಸ್ತಿನ ಕಟ್ಟಡವಾಗಿದೆ. ಕೆಂಪು ಬಣ್ಣವನ್ನು ಚಿತ್ರಿಸಲಾಗಿದೆ. ಮಧ್ಯದಲ್ಲಿ ಮತ್ತು ಎತ್ತರದ ಎರಡು ತುದಿಗಳಲ್ಲಿ ಅಯಾನಿಕ ಪೋರ್ಟಿಕೊಗಳೊಂದಿಗೆ ವಿಶಾಲವಾದ ವಿಸ್ತಾರದ ರಚನೆ ಇದೆ.

ಮನಸಾರೆ ನಕ್ಕು ಬಿಡಿ

(ಬಹುಮಾನಿತ ಹಾಸ್ಯಬರಹ)

ದರ್ಶನ್ ಶೆಟ್ಟಿ
ತೃತೀಯ ಬಿ.ಎಸ್ಸಿ.

ಹ್ವಾಯ್ ನಮಸ್ಕಾರ. ಗಮ್ಮತ್ ಮಾಡುಕ್ ಹೊರ್ಟ್ರೆ ಭಾರೀ ಕಷ್ಟ ಇತ್ತೆ. ನೆಗಿ ಆಡುದ್ ಸುಲ್ಬ ಆದ್ರೆ ನ್ಯೆಗಿ ಆಡ್ಸುದೇ ಕಷ್ಟ. ಸಾವ್ರ ತಲಿಬಿಸಿ ಇಪ್ಪತ್ತಿಗೆ ನಾಕ್ ಗಮ್ಮತ್ ಕೆಂಡ್ರೆ ಎಷ್ಟ್ ಖುಷಿ ಆತ್ತ್. ಈಗಂತೂ ಸಾಮಾಜಿಕ ಜಾಲತಾಣದ ಬಗ್ಗೆ ಹೇಳೀತೀರ.

ಒಂದೊಂದ್ ಟಿಕ್‌ಟಾಕ್ ವೀಡಿಯೋ ಬತತ್ತ್ ಮರ್ರೆ, ಸೊಡ್ಡಿಗೆಲ್ಲಾ ಕಾಂಪ್ರ್ ಕಣಿಂಗೆ ಪೌಡ್ರ್ ಹೈಕಂಡ್, ಆ ಕೂದೆಲ್ ಎಲ್ಲಾ ಒಂದ್ ನಮನಿ ಯಾಸ ಮಾಡ್ಕಂಡ್ ವೀಡಿಯೋ ಮಾಡುದ್. ಆ ಬಿಕ್ರ್ ಮಂಡಿ ಕಂಡ್ರೆ ಒಂದ್ ದಿನ ಮಂಡಿಗೆ ನೀರ್ ಹಾಕ್ಲ್ ಅಂದ್ ಕಾಣ್ಕ್, ಯಾಬ್ಯಾ...ಕೆಲವ್ ಸೊಡ್ಡ್ ವಾರಿ ಕೆಲವ್ ಸಮ ಇಲ್ದಿದ್ದವ್ ರೋಡ್ ಮೇಲ್ ಮನಿಕಂಡ್ ಇರ್ತೋ. ಏ ಮರೆಯಾ ಎಂತಾ ಕೇಂಡ್ರೆ ಅದ್ ಟಿಕ್‌ಟಾಕ್ ಅಂಬ್ರಪ. ಈಗಳೀದ್ ಕಾಲದಂಗೆ ಆ ಮೊಬೈಲಂಗೆಲ್ಲ ಬಪ್ಪುದು ಸಮ ಇಲ್ಲ. ಈ ಭಾಷಿ ಇಲ್ದಿದ್ ಮನ್ಸಿಗೂ ಸಮ ಇಲ್ಲ. ಎಲ್ಲರಿಗೆ ಒಂದ್ ಮಾತ್ ಹೇಳ್ತಿ ಈಗ ವಾಟ್ಸಾಪ್, ಫೇಸ್ಬುಕಂಗೆಲ್ಲ ಎಷ್ಟೋ ವಿಚಾರಗಳ್ ಅಪಪ್ರಚಾರ ಅತಿತ್ತ್. ಅದಕ್ಕೆ ಯಾರೂ ಇನ್ನೊಬ್ರಿಗೆ ನೋಯಿಸುವ ವೀಡಿಯೋ ಆಗ್ಲಿ ಅಥವಾ ಧರ್ಮಕ್ಕೆ ಇತ್ಯಾದಿಗೆ ಸಂಬಂಧಿಸಿದ ವೀಡಿಯೋಗಳು ಬಂದರೆ ದಯವಿಟ್ಟು ಶೇರ್ ಮಾಡುಕಾಗ. ಅದರಿಂದ ಎಷ್ಟೋ ಜನ ಸಂಕಷ್ಟಕ್ಕೆ ಒಳಗಾಗ್ತ್ರ.

ಈಗಳಿನ ಜನ್ರ್ ಮೂಢನಂಬಿಕೆ ಅಂದ್ರೆ ಮರ್ರೆ ಹೇಳೀತೀರ. ಗಂಡಿಗೆ ಜ್ವರ ಬರ್ಕರಿಲ್ಲ. ಎಂತದೋ ಉಪದ್ರ ಇತ್ತ್ ಅಂತ್ರ್. ಜ್ವರ ಬಂದ್ರೆ ಯಾರಾದ್ರೂ ದರ್ಶಿನ ಮಾಡ್ತಾ...ಮನೇಗೆ ಕಿರಿಯಬ್ಬಿ ಹೇಳುದ್. ನಿನ್ನೆ ರಾತ್ರಿ ನನ್ನ್ ಕನ್ಸಂಗೆ ಹಾವ್ ಬಂದಿತ್ ಅಂಬುದೆ, ಅಲ ಮರ್ರೆ ಇವ್ರ್ ರಾತ್ರಿ ಮನಿಕಂಬಟ್ಟಿಗೆ ಕಿಚ್ಚೆಡದ್ ಧಾರಾವಾಹಿ ನಂದಿನಿ, ನಾಗಿಣಿ, ಕಂಡ್ಕಂಡ್ ಮನಿಕಂಡ್ರೆ, ಕನ್ಸಂಗೆ ಹಾವ್ ಬರ್ದೆ ಮತ್ತೆಂತಾ ಹೆಗ್ಗುಳ ಬತ್ತಾ....

ಅಷ್ಟೊತ್ತಿಗೆ ಮನಿದ್ ಹೆರಿ ಕ್ಯೊಡ್ ಹೇಳುದ್, ಏ ದೇವ್ರೆ ನಿನ್ನೆ ರಾತ್ರಿ ಅಡ್ಗಿ ಮನಿಯಂಗೆ ಪಾತ್ರ ಬಿದ್ದಿತೋ ಅಂಬುದ್. ಆ ಪಾತ್ರ ಬೆಕ್ಕ್, ಹೆಗ್ಗುಳ ಹಾರಿ ಬಿದ್ದದ್ ಅಂದ್ ಇವ್ರಿಗ್ ಗೊತ್ತಿಲ್ಲ...

ಹೋಯ್ ನಾನಂತು ಬಿಗಿ ಮರ್ರೆ. ಎಂತಕ್ ಕೇಣಿ ನಾನ್ ಗಟ್ಟಿರ್ ಅಂದೇಳಿ ಅಲ್ದೆ. ನಾನಿನ್ನು ಗಟ್ಟಿಗ ಆಯ್ಲ. ಮನೆಂಗೆಲ್ಲ ಇನ್ನು ಹೆಡ್ಡ ಅಂತ್ರ್. ಅರ್ದವಸಿ ಹೆಡ್ಡ್ ಹೆಡ್ಡ ಅಂದೇಲಿ ಹೇಳಿಯೇ ನಾನ್ ಹೆಡ್ಡ್ ಆದ್ದೇನೋ ಮರ್ರೆ. ಯಾಕ್ ಗಟ್ಟಿಗ್ ಅಂದದ್ ಗೊತ್ತಾ...ಹೋಯ್ ನಾನ್ ಹುಟ್ಟಿದ್ ಕುಂದಾಪ್ರದಂಗೆ...(ಹುಟ್ಟಿದ್ ಆಸ್ಪತ್ರೆಂಗೆ ಅನ್ಬೇಡಿ) ನಾವ್ ಬೆಳ್ದಿದ್ದೂ ಕುಂದಾಪ್ರದಂಗೆ.. ಏನೇ ಆರೂ ನಮ್ ಭಾಷಿ ಬಿಟ್ಟದ್ದಿಲ್ಲೆ. ಆರ್ರೆ ನೀವೂ ನಾಕ್ ದಿನ ಪರೂರಿಗೆ ಹೋಯಿ ಬಂದ್ ಕರ್ನಾಟಕ, ಇಂಗ್ಲೀಷ್ ಹಾರ್ಯಾ ಗಾಂಚಲಿ ಬಿಡಿ, ನಮ್ಮ ಭಾಷಿನ ಉಳ್ಸಿ.

ಈಗ ಕೆಲವ್ ಮಕ್ಕಳ್ ಬೆಂಗಳೂರಿಗೆ ಹೋಪತಿಗೆ ಸಮ ಇರ್ತೊ. ಮನೆಂಗೆ ಅಪ್ಪಯ್ಯಾ ನಾನ್ ಹೋಯಿಬತ್ತಿ ಅಂತೋ..ಆದ್ರೆ ಬೆಂಗಳೂರಂಗೆ ಇಪ್ಪುದ್ ನಾಕೆ ದಿನ. ಕಡಿಕೆ ಬಂದ್ಕಂಡ್ ಅಪ್ಪಯ್ಯಂಗೆ ದಾಡೆ ಅಂಬುದ್. ಏನ್ ದೇವ್ರೆ ಅಪ್ಪಯ್ಯಂಗೆ ಯಾರಾರೂ ದಾಡಿ ಅಂತ್ರಾ... ಅಮ್ಮಂಗೆ ಮಮ್ಮಿ ಅಂಬುದ್...ಮಮ್ಮಿ ಅಂದ್ರೆ ಸತ್ತ್ ಹೆಣ ಅಲ್ದೆ. ಹೋಯ್ ಬಾಯಿತುಂಬಾ ಅಮ್ಮಾ ಅಂದೇಳಿ ಕರ್ದ್ರೆ ಎಷ್ಟ್ ಖುಷಿ ಆತ್ತ್ ಆ ಹೆತ್ತ ಜೀವಕ್ಕೆ.

ಈಗಳಿನ್ ಗಂಡ್ಗಳ್ ಮಾಡುದ್ ಕಟಿಂಗ್ ಅಂದ್ರೆ..ಏ ಪರಮಾತ್ಮ ಹೇಳೀ ತೀರ...ಸುತ್ತ ರ್ಯೊಯ್ಯ ಕಟ್ ಮಾಡ್ಕಂಬುದ್ ಅದೆಂತ ಬೆಂಗಳೂರು ರಿಂಗ್ ರೋಡ?!! ಮೇಲ್ ಮಾತ್ರ ಗ್ವಾಸಡಿ ಕಣಿಂಗೆ ಬಿಡುದ್ ಅಂದೆತಾ ಹುಲ್ ಕುತ್ರಿಯಾ?... ಅದ್ರಂಗೂ ರ್ಯೊಯ್ ರೊಯ್ ಅಂದೇಳಿ ಮಾರ್ ಗೆರಿ ಹ್ವಾಕಂಬುದ್. ಒದ್ ಮಂಡಿ ಗೆರಿಯಂಗೆ ಹೋರ್ರೆ ಅವ್ವ್ ದೈದ್ ಮನಿಗೆ ಹೋತ್ತಾ ಕಾಂತ್.

ಆ ಇದ್ದದ್ ಇಸ್ರೂಪನ್ನ ಒಂದ್ ಹಾಳ್ ಮಾಡ್ಕಂಬುದ್. ಆ ಕರಿ ಸೊಡ್ಡಿಗೆ ಹತ್ತ್ ಕೇಜಿ ಪೌಡ್ರ್ ಹಾಕುದ್ ಮರ್ರೆ ಆ ಬಿಳಿ ಪೌಡ್ರು ಎಲ್ಲ್ ಸಾಕತ್ತ್...ಅವ್ನ ಒಂದು ದಿನ ಬ್ಲೀಚಿಂಗ್ ಪೌಡ್ರು ಹಾಕಿ ನೆನ್ಸಿ ಇಟ್ರು ಬಿಳಿ ಆತಿಲ್ಲ ಅಂದೇಳಿ ಅವ್ಕ್ ಗೊತ್ತಿದ್ರೂ ಮಾಡುದ್. ಒಂದ್ ದಿನ ಮೆತ್ತಿ ಮೆತ್ತಿ ಆ ಬಿಳಿ ಪೌಡ್ರು ಅಂಡಿಯೇ ಕಪ್ಪ್ ಆತ್ತ್....

ಈಗಳಿನ್ ಕಾಲೇಜ್ ನಮಂತಹ ಮಕ್ಕಳ್ ಬಗ್ಗೆ ಹೇಳಿ ನನ್ನ್ ಮಾತ್ ಮುಗಿಸ್ತಿ.

ಶಾಲಿ ಬಿಟ್ಟ್ ಮನಿಗೆ ಹೋಯ್ ಚೀಲ ತೆಗ್ದ್ ಬಿಸಾಕುದ್, ಎದ್ರ್ ಸಿಕ್ತರ್ ಸೊಡ್ಡ್ ಒಟ್ಟಿ ಆತ್ತ್. ಕಡಿಗೆ ಟಿ.ವಿ. ಎದ್ರ್ ಕೂಕಂಡ್ ಮೊಬೈಲ್ ಒತ್ತುದ್. ಅಬ್ಬಿ ಉಂಬುಕ್ ಹಾಕಿ ತಂದ್ರೂ ಉಂಬುದ್ ಆ ಮಕ್ಕಳ್ ಮೊಬೈಲ್ ಒತ್ತುದ್, ಟಿವಿ ಕಾಂಬುದ್, ಉಂಬುದ್...ಒಂದಲ್ಲ ಒಂದ್ ದಿನ ಆ ಕಿಚ್ಚಿಡದ್ ಮೊಬೈಲೂ ಅನ್ನದೊಟ್ಟಿಗೆ ಹೊಟ್ಟೆ ಒಳಗೆ ಹೋತ್ತ್...ಆ ಮೊಬೈಲನ್ ಒಂದ್ ಪಚ ಪಚ ಒತ್ತುದೆ..ಮೂರ್ ಹೊತ್ತ್ ಊಟ ಇಲ್ದಿರು ಬದುಕತ್ತೋ ಆದೆ ಮೊಬೈಲ್ ಇಲ್ದಿರೆ ಬದ್ಕುದಿಲ್ಲ. ಹಾಂಗೆ ಮೊಬೈಲ್ ಒತ್ತುಕಾಗ್ದೆ.

ಈಗ ಕೆಲವ್ ಮಂಡಿ ಸಮ ಇಲ್ದಿದ್ದವ್ ಪರೀಕ್ಷೆಂಗೆ ಮಾರ್ಕ್ ಕಡ್ಮಿ ಬಂತ್ ಅಂದೇಳಿ ಜೀವ್ ತೆಕಂಬುದ್ ಮರ್ರೆ. ಮತ್ತ್ ಯಾವನೋ ಯಾವಳೋ ಕೈ ಕೊಟ್ಟ್ ಓಡಿ ಹೋದ ಅಂದೇಳಿ ಆತ್ಮಹತ್ಯೆ ಮಾಡ್ಕಂತೋ..ಕೊಳ್ಳಟಿ ಅವ್ ಅಂತರನ್ನ್ ನಾವೇ ಬೆಂಕಿ ಹಾಕಿ ಕೊಲ್ಕ್, ಯಾಕ್ ಕೇಣಿ ಅವ್ ಸಾವತಿಗೆ ಈ ಹೆತ್ತ್ ಅಪ್ಪ ಅಬ್ಬಿ ಬಗ್ಗೆ ಯೋಚನೆ ಮಾಡ್ತ್ವ ಮರ್ರೆ... ಇವ್ವ್ ಹ್ವಾದವ್ ಹ್ವಾತೋ. ಟ್ಯೊಯ್ಯಾ ಹೋತೋ. ಇಲ್ಲ್ ಜೀವಮಾನದಿಡಿ ಎತಿ ಪಡುದ್ ಮನಿಯರ್. ಒಂದ್ ಮಾತ್ ಹೇಳ್ತಿ ಕೇಣಿ. ಒಂದ್ ಎರ್ಡ್ ವರ್ಷದಂಗೆ ಯಾವನೋ ಕಿಚ್ಚ್ ಹಿಡ್ಡನ್ ಯಾವಳೋ ಸೂಡಿ ಬಿಚ್ಚಳ್ ಸಿಕ್ಕಿ, ಕಡಿಕ್ ಅವ್ರ್ ಕೈ ಕೊಟ್ರ್ ಅಂದೇಳಿ ನಿಮ್ಮ ಜೀವ ತೆಕಬೇಡಿ. ಇಪ್ಪತ್ ಇಪ್ಪತ್ತೈದ್ ವರ್ಷದರಿಗೆ ಕಣ್ಣಂಗೆ ಕಣ್ಣಿಟ್ ಜೀವನನ್ನ ತಮ್ಮ ಮಕ್ಕಳಿಗಾಗಿ ಕೊಟ್ಟಿರ್ತ್ ಕಾಣಿ ಹೆತ್ತ್ ತಂದೆ ತಾಯಿಗಳ್. ಅವ್ರನ್ನ ನೆಮ್ಮದಿಯಂಗೆ ಸಾಂಕಂಡ್ ಮನಿಯಂಗೆ ನೆಮ್ಮದಿಯಂಗ್ ಇರ್ಕೆ, ಅಪ್ಪ, ಅಬ್ಬಿ ಕಣ್ಣಂಗ್ ನೀರ್ ಹಾಕ್ಸುಕಾಗ.

ಬರೀ ಗಮ್ಮತ್ ಮಾಡ್ರ್ ಎಲ್ಲ್ ಸಾಪಾತ್ತೆ...ಗಮ್ಮತ್ತಿನ ಒಟ್ಟಿಗೆ ಸ್ವಲ್ಪ ವಿಷಯನ್ನು ತಿಳ್ಸುಕ್ ಹೊರ್ಟಿದಿ. ಇಷ್ಟ್ ಕೇಳ್ದನ್ ನಾನೇ ಒಂದಿನ ಆತ್ಮಹತ್ಯೆ ಮಾಡಂಬುದು ಸಾಕ್ ಯಾಕ್ ಹೇಳಿ. ಈಗಿನ ಜನ್ತೆ ಹಾಂಗೆ ಊರಿಗೆಲ್ಲಾ ಬುದ್ದಿ ಹೇಳುದ್ ಒಳಿಗೆ....

ಹಿಂಗೇ ಕ್ಲಾಸಂಗ್ ಒಂದೊಂದ್ ದಿನಾ....

ಸ್ನೇಹಾ
ದ್ವಿತೀಯ ಬಿ.ಕಾಂ.

ಹಿಂಗೇ ಕುತ್ಕಂಡಿದ್ದೆ ಒಂದಿನ, ಅದೆಂತ ಜಾಗ ಅಂದ್ರೆ, ನಾನ್ ಕೂತಲ್ಲೇ ಇದ್ದೆ. ಆದ್ರ್ ನನ್ ಮಂಡಿ ಮಾತ್ರ ಮನಿಯಂಗ್ ಅಬ್ಬೆ ಎಂತ ತಿಂಬುಕ್ ಮಾಡಿದಳೋ? ಅಂದ್ ಇಡೀ ಊರಬದಿಯೆಲ್ಲಾ ಒಂದೊಂದ್ ಸುತ್ ಹೋಯ್ ಬತ್ತಿತ್, ಅಷ್ಟೊತ್ತಿಗೆ ಏನಮ್ಮಾ ಏನ್ ಮಾಡ್ತಿದ್ಯಾ ಅಂದ ಯಾರೋ ಕೇಂಡಂಗ್ ಆಯ್ತ್. ಕಡಿಕ್ ಕಾಂಬಂತಿಗೆ ನಮ್ ಕ್ಲಾಸಂಗ್ ಸರ್ ಕರದ್, ಎಂತಂದ್ರೆ ನಾನ್ ಕ್ಲಾಸಂಗ್ ಕೂತಿದೆ, ಕೂತ್ಕ ಪಾಠ ಕೇಂತಿದ್ದೆ. ಅಲ್ದೇ ನಿಜ ಹೇಳ್ಕಂದ್ರೆ ನಾನೊಬ್ಳೆ ಅಲ್ಲಾ ಎಲ್ಲರ್ದು ಇದೆ ಕಥಿ ಅಲಾ...ಕ್ಲಾಸಾಂಗ್ ಕೂತ್ಕ ಹಗ್ಲಗನ್ಸ್ ಕಾಂಬುದ್ ಅಂದ್ರೆ ಅದ್ರಂಗ್ ಇಪ್ಪು ಮಜಾನೆ ಬೇರೆ ಅಲ್ದಾ..?

ಹೀಂಗೆ ಹೇಳುಕ್ ಹೋರ್ ಸುಮರ್ ಇತ್. ಹೋಯ್, ಆಗಳಿಕ್ ಒಂದ್ ಸಲಾ ಲಾಸ್ಟ್ ಬೇಂಚಂಗ್ ಕುತ್ಕಂತಿತ್. ಲಾಸ್ಟ್ ಬೆಂಚ್ ಅಂದ್ರೆ ಕೇಣ್ಸಾ ಹೇಳಿ, ಅಲ್ ಕೂತ್ಕಂಡ್ ಪಾಠ ಅಂತೂ ಕೇನ್ಸಾ, ಅದಕ್ಕಿಂತ ಹೆಚ್ ತಿಂಡಿ ತಿಂಬುದ್, ಬುತ್ತಿ ಓಪನ್ ಮಾಡ್ಕಂಡ್ ಮಧ್ಯಾಹ್ನದ್ ತಂದದ್ ಖಾಲಿ

ಮಾಡುದ್ ಇದೇ ಮಾಡದ್. ಅಲ್ ಕೂತ್ಕಂಡ್ ಬುತ್ತಿ ತೆಗ್ವತಿಗ್ ಪರಿಮಳ ಬಂದ್ ಯಾರ್ ಕಾಂತ್ರೋ, ಸರ್ ಎಂತಾ ಅಂತ್ರೋ ಅಂದ್ ಹೆದ್ರಿಕಿ, ಆರೂ ತಿಂಬುದ್ ಬಿಡುಕ್ ಅತ್ತಾ? ಬುತ್ತಿ ಖಾಲಿ ಮಾಡಿಯೇ ಕೂತ್ಕಂತಿತ್. ಇದೆಲ್ಲಾ ಯಾವ್ ಜನ್ಮದಾಗ್ ನೆನ್ಪ್ ಹೋತಿಲ್ಲಾ, ಮತ್ ಯಾವತ್ತೂ ಹೀಂಗೆಲ್ಲಾ ಪಣ್ಕ್ ಮಾಡುಕು ಆತಿಲ್ಲಾ. ಕ್ಲಾಸಂಗ್ ಸುಮ್ನೆ ಕೂತ್ಕಂಡ್ ಪಾಠ ಕೇಂಬುದ್ ಇದ್ದದ್ದೆ ಅಲ್ಲಾ. ಆದ್ರೂ ಕೆಂಬು ಹೊತ್ತಂಗ್ ಪಾಠ ಕೇನ್ಕ್ ಇಲ್ದಿರ್ ಮತ್ ಬೆರ್ಸ್ತ್ರ್ ಕ್ಲಾಸಿಂದ. ಪಣ್ಕ್ ಮಾಡು ಹೊತ್ತಂಗ್ ಪಣ್ಕ ಮಾಡ್ಕ್ ಇಲ್ದಿರ್ ಅದು ಹೇಸಿಗಿ ಅಲ್ದೇ?.

ಅಬ್ದುಲ್ ಕಲಾಮ್ ಒಂದ್ ಮಾತ್ ಹೇಳಿರ್, 'ಮುಂದ್ ಒಂದಿನ ನಾವ್ ಕಾಲೇಜ್ ದಿನದ ಬಗ್ಗೆ ನೆನ್ಪ್ ಮಾಡ್ಕಂಡಲ್ ನಮ್ಗ್ ನೆನ್ಪ್ ಆಪುದ್ ಈಗ ಫ್ರೆಂಡ್ಸ್ ಒಟ್ಟಿಗ್ ಕ್ಲಾಸ್ ಬಂಕ್ ಮಾಡಿ ಓಡಿ ಹೋದದ್ದೇ. ಅದ್ ಬಿಟ್ ಎಷ್ಟು ಕ್ಲಾಸೆಲ್ ಹೋಯ್ ಕೂತ್ಕಂಡಿತ್ ಅಂದ್ ಅಲ್ಲಾ' ಅಂದ್. ಒಂದಿನ ಕೂತ್ಕಂಡ್ ಕಾಲೇಜ್ ದಿನದ ಬಗ್ಗೆ ನೆಪ್ಕ್ ಮಾಡ್ಕಂಡ್ರೆ ನಮ್ಗ್ ನಾವ್ ಮಾಡ್ತಿದ್ ಕಿತಾಪತಿನೇ ನೆಪ್ತ ಆಪುದ್ ಇದ್ ಮಾತ್ರ ನಿಜಾ...ಅಲ್ವಾ?

ಕಾಲೇಜ್ ಲೈಫ್ ಅಂದ್ರೆ ಗೋಲ್ಡನ್ ಲೈಫ್ ಅಂತ್ರ್ ಈ ಗೋಲ್ಡನ್ ಲೈಫ್ ಅಲ್ ಒಂದ್ ಎರಡ್ ಅರೂ ಗೋಲ್ಡನ್ ನೆನ್ಪ್ ಇರ್ಕ್ ಅಲ್ವಾ...?

ನಾಗಜ್ಜಿಯ ಕಂಗ್ಲೀಷು

ನಾಗರತ್ನ
ದ್ವಿತೀಯ ಬಿ.ಎಸ್ಸಿ.

ಹುಣ್ಸಮಕ್ಕಿ ಎಂಬ ಊರೊಂದರಲ್ಲಿ ಪ್ಯಾಟಿಗ್ ಹೋಯ್ ಮೀನ್ ತೆಕಬಂದಿದೆ, ಬೇಕಾದವ್ರ ನನ್ನ್ ಕರಿನಿ, ನನ್ನ್ ಬುಟ್ಟೆಂಗೆ ಇಪ್ಪು ಮೀನ ಬೈಗಿ, ಬಂಗಡಿ, ಕಾಣಿ ಅಂತ್ ಹಾಡ್ ಹಾಡ್ತಾ ಮೀನು ಮಾರುತ್ತಾ ತನ್ನ ವೃದ್ಧಾಪ್ಯವನ್ನು ಕಳೆಯುತ್ತಿದ್ದಳು ನಾಗಜ್ಜಿ. ಈ ನಾಗಜ್ಜಿಯ ಮಗ, ಸೊಸೆ, ಮೊಮ್ಮಕ್ಕಳೆಲ್ಲ ದೂರದ ಅಮೇರಿಕಾದಲ್ಲಿ ವಾಸಿಸುತ್ತಿದ್ದರು.

ಹೀಗಿರುವಾಗ ಒಂದು ದಿನ ನಾಗಜ್ಜಿಯ ಮಗನಾದ ಹರೀಶನು ಅಮೇರಿಕಾದಿಂದ ಹುಣ್ಸಮಕ್ಕಿಗೆ ಬರುವ ಮನಸ್ಸು ಮಾಡಿದನು. ಈ ವಿಷಯವನ್ನು ದೂರವಾಣಿ ಮೂಲಕ ತಿಳಿದ ನಾಗಜ್ಜಿಯ ಸಂತೋಷಕ್ಕೆ ಮಿತಿಯೇ ಇಲ್ಲ. ನಾಗಜ್ಜಿಗೆ 15 ವರ್ಷದ ನಂತರ ಮಗನನ್ನು ನೋಡುವ, ಆತನೊಂದಿಗೆ ಮಾತನಾಡುವ ತವಕ ಒಂದೆಡೆಯಾದರೆ, ತನ್ನ ಮಗನಿಗೆ ಈ ಹಳ್ಳಿ ವಾತಾವರಣ, ಆಚಾರ-ವಿಚಾರ ಹೊಂದುತ್ತದೆಯೋ ಇಲ್ಲವೋ? ಇಲ್ಲಿನ ಕುಂದಗನ್ನಡ ಭಾಷೆ ನೆನಪಿದೆಯೋ ಇಲ್ಲವೋ? ಎನ್ನುವ ತಲೆಬಿಸಿ ಬೇರೆ. ನಾಗಜ್ಜಿಗಂತೂ ಇಂಗ್ಲೀಷ್‌ನ ತಲೆ-ಬುಡ ಗೊತ್ತಿಲ್ಲ. ಆಕೆ ಅಪ್ಪಟ ಕುಂದಗನ್ನಡತಿ. ಆದರೂ ತನ್ನ ಮಗನಿಗೋಸ್ಕರ ಅವರಿವರ ಬಳಿ ಕೇಳಿ, ಅರ್ಥವಾಗದಿದ್ದರೂ ಟಿ.ವಿ., ರೇಡಿಯೋಗಳಲ್ಲಿ ಇಂಗ್ಲೀಷ್ ಪದಗಳ ಉಚ್ಚಾರಣೆಯನ್ನು ಕೇಳಿ ಹರಸಾಹಸ ಮಾಡಿ ಅಲ್ಪಸ್ವಲ್ಪ ಇಂಗ್ಲೀಷ್ ಅನ್ನು ಕಲಿತೇ ಬಿಟ್ಟಳು ನಮ್ಮ ನಾಗಜ್ಜಿ.

ಸ್ವಲ್ಪ ದಿನಗಳ ಬಳಿಕ ಹರೀಶನು ಹುಣ್ಸಮಕ್ಕಿಯತ್ತ ಮುಖ ಮಾಡಿದನು. ಅಮೇರಿಕಾದಿಂದ ಬರುವ ಮಗನನ್ನು ಸ್ವಾಗತಿಸಲು 60ರ ಪ್ರಾಯದ ನಾಗಜ್ಜಿ ಎಳೆವಯಸ್ಸಿನ ಮದುಮಗಳಂತೆ ಇಡೀ ಊರಿನವರೊಂದಿಗೆ ತಯಾರಾಗಿ ನಿಂತಿದ್ದಳು. ಹರೀಶನು ಊರಿಗೆ ಕಾಲಿಡುತ್ತಿದ್ದಂತೆ ಆತನನ್ನು ಊರಿನವರು ಪ್ರೀತಿಯಿಂದ ಬರಮಾಡಿಕೊಂಡರು. ನಂತರ ಅಮೇರಿಕಾ ಅಂದ್ರೆ ಏನೆಂದೇ ತಿಳಿಯದ ಆ ಊರಜನರು ಅಮೇರಿಕಾದಲ್ಲಿ ಅದ್ ಇತ್ತಾ? ಇದ್ ಇತ್ತಾ? ವಿಮಾನಕ್ಕೆ ಚಕ್ರ ಇತ್ತಾ? ಅಮೇರಿಕಾದಲ್ಲಿ ತಿಂಬುಕೆ ಮೀನ್ ಸಿಕ್ಕತ್ತಾ? ಹ್ಯಾಂಗೆ? ಏನ್? ಎಂತಾ? ಎಂದು ಪ್ರಶ್ನೆಗಳ ಸುರಿಮಳೆಯನ್ನೇ ಹರೀಶನತ್ತ ಸುರಿಸಿದರು. ಹರೀಶನಿಗೆ

ಈ ಜನರ ಪ್ರಶ್ನೆಗಳು ಪರೀಕ್ಷೆಯಲ್ಲಿ ಬರುವ ಪ್ರಶ್ನೆಗಳಿಗಿಂತಲೂ ಕಷ್ಟವೆನಿಸಿತು. ಆದರೂ ಹಾಗೆ ಹೀಗೆ ಎಂದು ನಿಭಾಯಿಸಿ ಜನರ ಪ್ರಶ್ನೆಗಳಿಗೆ ಉತ್ತರಿಸುವುದರಲ್ಲೇ ಒಂದು ದಿನ ಕಳೆಯಿತು.

ಮಾರನೇ ದಿನ ಸೂರ್ಯನು ಆಗಸದತ್ತ ಮುಖಮಾಡುವ ಮೊದಲು ನಾಗಜ್ಜಿ ಹರೀಶನ ಬಳಿ ಬಂದು ಕೆಪ್ಪಿ ಬುರುಡೆ ಮಗಾ, ಕೆಪ್ಪಿ ಬುರುಡೆ ಎಂದು ಬೊಬ್ಬೆ ಹಾಕಿದಳು. ಅರ್ಧಂಬರ್ಧ ನಿದ್ದೆಯಲ್ಲಿದ್ದ ಹರೀಶ ಗಾಬರಿಯಿಂದ ಎದ್ದು ನೋಡಿದರೆ ಅಜ್ಜಿಯ ಬೊಬ್ಬೆ ಕೆಪ್ಪಿ ಬುರುಡೆ, ಕೆಪ್ಪಿ ಬುರುಡೆ ಹರೀಶ ಎಂತ ಅಮ್ಮ? ಎಲ್ಲಿ ಕೆಪ್ಪೆ? ಎಲ್ಲಿ ಬುರುಡೆ? ಎಂದು ಕೇಳಿದ. ಆಗ ನಾಗಜ್ಜಿ ಅದೇ ಮಗಾ ಇವತ್ ನಿಂದ್ ಬುರುಡೆ ಅಲ್ಲಾ? ಅದ್ಕೆ ವಾಶ್ ಮಾಡ್ದೆ ಅಂದಳು. ಇದನ್ನು ಕೇಳಿದ ಹರೀಶನಿಗೆ ತಕ್ಷಣ ನೆನಪಾಯ್ತು ಅವನ ಬರ್ತಡೇ ಅಂತ. ಅಲ್ಲಿಗೆ ನಾಗಜ್ಜಿ ಹೇಳಿದ್ದು ಬುರುಡೆ ಅಲ್ಲಾ ಬರ್ತಡೇ, ಕೆಪ್ಪಿ ಅಲ್ಲಾ ಹ್ಯಾಪಿ ಅಂತ ತಿಳಿದು ಅಮ್ಮನಿಗೆ ಧನ್ಯವಾದ ಹೇಳಿ ಸ್ನಾನಕ್ಕೆ ನಡೆದನು. ಹರೀಶನು ಸ್ನಾನ ಮಾಡುತ್ತಿರುವಾಗ ನಾಗಜ್ಜಿಯ ಹಿನ್ನೆಲೆ ಧ್ವನಿ ಮಗಾ ತಿಂಬುಕೆ ವಾಟರ್ ರೈಸ್ ಮಾಡಿದೆ. ಇದನ್ನು ಕೇಳಿದ ಹರೀಶ ಪ್ರೈಡ್ ರೈಸ್ ಗೊತ್ತು, ಗೀ ರೈಸ್ ಗೊತ್ತು ಇದೇನಿದು ವಾಟರ್ ರೈಸ್? ಓ ಅಮ್ಮ ತನ್ನ ಹುಟ್ಟುಹಬ್ಬಕ್ಕೆ ಏನೋ ಸ್ಪೆಷಲ್ ತಿಂಡಿ ಮಾಡಿರಬೇಕು ಅಂತ ಭಾವಿಸಿ ಗಡಿಬಿಡಿಯಿಂದ ಸ್ನಾನ ಮುಗಿಸಿ ಬಂದು ನೋಡಿದರೆ ಆತನ ಕಣ್ಣು ಮುಂದೆ ವಾಟರ್ ರೈಸ್ ರೆಡಿ. ಇದನ್ನು ಕಂಡ ಹರೀಶನಿಗೆ ಅಳುವುದೋ–ನಗುವುದೋ ಗೊತ್ತಾಗಲಿಲ್ಲ ಏಕೆಂದರೆ ಆತನ ತಟ್ಟೆಯಲ್ಲಿದ್ದದು ವಾಟರ್ ರೈಸ್ ಎಂದು ಹೊಸದಾಗಿ ನಾಮಕರಣಗೊಂಡ ಗಂಜಿ. ಪಾಲಿಗೆ ಬಂದದ್ದು ಪಂಚಾಮೃತ ಅಂದು ಹರೀಶನು ಗಂಜಿಯನ್ನು ಕುಡಿಯುತ್ತಿರುವಾಗ ಬಾಯಿಬಡ್ಕಿ ನಾಗಜ್ಜಿ 'ಮಗಾ ಪ್ಯಾಟಿಯವ್ರ ಕಂಡಂಗೆ ನಂಗೆ ಗಾಂಜಾ, ಬಾರ್ ಗಾರ್, ವಾಗಿಯೆಲ್ಲ ಮಾಡುಕೆ ಬತ್ತಿಲ್ಲಾ, ಅದ್ನೆಲ್ಲಾ ತಿಂದ್ರೆ ಹುಲ್ತಿಗಾರು ಆತ್ತಾ? ಎಂದು ಕೇಳಿದಳು. ಈ ವಿಚಿತ್ರ ಶಬ್ದಗಳನ್ನು ಕೇಳಿದ ಹರೀಶನಿಗೆ ಯಾವ ಡಿಕ್ಷನರಿಯಲ್ಲಿ ಈ ಪದಗಳ ಅರ್ಥ ಹುಡುಕುವುದೆಂದು ಗೊತ್ತಾಗಲಿಲ್ಲ. ಆದರೂ ಸಮಾಧಾನದಿಂದ ಅಮ್ಮನ ಬಳಿ' ಎಂತ ಅಮ್ಮ ಗಾಂಜಾನಾ? 'ಬಾರಾಗಾರಾ? ಹಾಗಂದ್ರೆ ಎಂತಾ?' ಎಂದು ಕೇಳಿದ. ಅದಕ್ಕೆ ನಾಗಜ್ಜಿ 'ಆಯ್ಯ ಬ್ಯಾ ನಿಂಗೆ ಅದೆಲ್ಲಾ ಗೊತ್ತಿಲ್ಯಾ ಗಡ? ಅದೆಲ್ಲ ಟಿವಿಯಂಗೆ ಬತ್ತಲಾ? ಮಕ್ಕಳೆಲ್ಲ ಸೊಡ್ಡಾ ವಾರಿ ಮಾಡ್ಕಂಡ್ ತಿಂತ್ರಲ್ಲಾ? ಶಂಕರಪೊಳಿ ಕಂಡಂಗೆ ದೊಡ್ಡದಿರತ್ತಲ್ಲಾ ಅದೇ ಗಾಂಜಾ, ಮತ್ತೊಂದ್ ಅದೇ ಎರಡ್ ಬ್ರೆಡ್ ಮಧ್ಯಾ ಬಸಲಿಸೊಪ್ಪ್ ಹರ್ಗಿಸೊಪ್ಪ್ ಎಂತೆಲ್ಲ ಹೈಕಂಡ್ ತಿಂತ್ರಲ್ಲೆ ಬಾರ್ಗಾರ್ ಅಂಬ್ರಲೆ. ಇನ್ನೊಂದ್ ಮಸ್ತ್ ನರ್ಕಹುಳ ಕಂಡಂಗೆ ಇರತ್ ಅಲೇ ವಾಗಿ, ವಾಗೀ ಅಂಬ್ರ." ಇದನ್ನೆಲ್ಲ ಕೇಳಿದ ಹರೀಶ, "ಅಯ್ಯೋ ನಿನ್ನ ಇಂಗ್ಲೀಷ್ ಮಾತಾಡು ಜ್ವಾಗೋಳದೊಳಗೆ ನನ್ನ ತಲಿ ಹನ್ನೆರಡ್ ಆಣಿ ಆಯ್ತು. ಅಲ್ಲ ಮರೆತ್ಯಾ ಅದ್ ಗಾಂಜಾ ಅಲ್ಲ ಪಿಜಾ, ಬಾರ್ ಗಾರ್ ಅಲ್ಲಾ ಬರ್ಗರ್, ವಾಗಿ ಅಲ್ಲ ಅದ್ ಮ್ಯಾಗಿ, ಅಬ್ಬಾ ನಿನ್ನ್ ಕಂಗ್ಲೀಷಿಗೇ ದೊಡ್ಡ ನಮಸ್ಕಾರ.

ಅಲ್ಲಾ ನಾನ್ ಅಮೇರಿಕಾದಲ್ಲಿ ಇಪ್ಪುದ್ ಹೌದ್ ಹಾಗಂದೇಳಿ ನಮ್ಮ ಊರನ್ನ್ ನಮ್ಮ ಕುಂದಾಪ್ರ ಕನ್ನಡ ನಾ ಮರ್ತಿದೆ ಅಂದ್ಹೇಳಿ ಮಾಡಿದ್ಯಾ? ಹುಟ್ಸದ್ ಅಮ್ಮನ್ನ, ಮೆಟ್ಟದ್ ನೆಲಾನ ಏಗಳಿಕೂ ಮರುಕಾಗ ಅಂದ್ಹೇಳಿ ನೀನೇ ಅಲ್ಲಾ ನಂಗೆ ಹೇಳದ್. ಸಾಕ್ ಇನ್ ನೀನ್ ಉಸ್ರಕಟ್ಟ ಈ ಇಂಗ್ಲೀಷ್ ಮಾತಾಡುದ ಬ್ಯಾಡ". ಅಂದ ಹರೀಶ್.

ಇದನ್ನು ಕೇಳಿದ ನಾಗಜ್ಜಿಗೆ ಹೋದ ಜೀವ ಬಂದಂತಾಯ್ತು. ಪಟಪಟನೆ ಕುಂದಾಪ್ರ ಕನ್ನಡದಲ್ಲಿ ಹೋಯ್ಕ್ ಬರ್ಕ ಎಂದು ಹರೀಶ್‌ನೊಂದಿಗೆ ಮಾತಿಗಿಳಿದು ತನ್ನೆಲ್ಲ ಭಾವನೆಗಳನ್ನು ಸರಾಗವಾಗಿ ಮಗನಲ್ಲಿ ಹಂಚಿಕೊಂಡಳು ನಾಗಜ್ಜಿ.

ಉಮೇಶ್ ಭಾಗ್ವತ್ –
ರಾಷ್ಟ್ರೀಯ ಸೇವಾ ಯೋಜನಾ ತಂಡ

ಕುಂದಾಪ್ರ ಕನ್ನಡ ಗಾದೆಮಾತುಗಳು

ದೀಪ್ತಿ ಯು.
ದ್ವಿತೀಯ ಬಿ.ಕಾಂ.

1) ಗಂಡ್ ಕೂತ್ ಕೆಡ್ತ್, ಹೆಣ್ ತಿರ್ಗಿ ಕೆಡ್ತ್
2) ತಲಿ ಹತ್ಕಂಡ್ ಬುಡ ಕಡು ಯಾಪಾರ
3) ಹೆಡ್ಡಂಗೆ ಒಂದ್ ಬದಿ ಆರೆ, ಬುದ್ದೊಂತಂಗೆ ಮೂರ್ ಬದಿ
4) ಕೆಲ್ಸ ಗಿಲ್ಸ ನನ್ನಿಂದೆಡಿಯಾ, ಉದ್ದಿನ್ ದ್ವಾಸಿಗ್ ನಾನೇ ಒಡಿಯಾ
5) ಕೋಲ್ ಕೊಟ್ ಬಡ್ಗಿ ತಿಂದಂಗಾಯಿತ್
6) ತೌಡ್ ತಿಂಬನ್ ಹ್ವಾರೆ, ಉಮ್ಮಿ ತಿಂಬನ್ ಬತ್ತಾ
7) ನಕ್ಕುಳ ಹೆಡಿ ಎತ್ರ್ ಎಷ್ಟ್ ಎತ್ತತ್
8) ನಾಯಿ ಬಾಲಕ್ ನಳ್ಗಿ ಹಾಕ್ದಂಗೆ
9) ಸಾವ್ರ ರೂಪಾಯಿ ಕೊಟ್ ಎಮ್ಮಿ ತಂದಿನಂಬ್ರ್, ಕರುಕೆ ಚಂಬಿಲ್ದೆ ವಾಪಸ್ ಮಾಡಿನಂಬ್ರ್
10) ಕಂಡ್ರೆ ಮಾಣಿ, ಉಂಡ್ರೆ ಗೋಣಿ
11) ಯಾರ್ ತಕಿ ಕುಣಿದ್ರೂ ಕುಂಬಾರನ್ ತಕಿ ಕುಣುಕೆಡಿಯಾ
13) ಕಲ್ತದ್ ಹೆಚ್ಚಾಯಿತ್ ಕಾಲ್ ಮೇಲಾಯಿತ್, ಗಾಳಿ ಬರ್ಕ್ ಮನಿಗ್ ಹೊಯ್ಕ್
14) ನಾಯಿ ಕೈಲ್ ಹೇಳ್ರೆ ಅದ್ ಅದ್ರ ಬಾಲದ್ ಹತ್ರ ಹೇಳ್ತ್ ಅಂಬ್ರ
15) ನೆಸಿ ಕೊಟ್ ನಾಯಿ, ನೆಸಲ್ ನಕ್ಕಿತಂಬ್ರ್
17) ಕರ್ಕೆರಿ ದೇವ್ರಿಗೆ ಮರದ್ ಗೆಂಟಿ
18) ಗಳಗಳ ಅಂಬರ್ ಗಾಳಿ ನುಂಗತ್ರ್, ಮಿಣ್ಣಕಿದ್ದರ್ ಇಡೀ ಅಂಗಳುವೇ ನುಂಗುತ್ರ್
19) ಮೂಗಗೆ ಮಸಿ ಇತ್ತಂದ್ರೆ, ಮೂಗನ್ನೇ ಕೊಯ್ಕಂತ್ರಾ?
20) ಎತ್ ಮಾರಿ ಹೊತ್ ಗಂಜಿ
21) ಹೆಣ್ ಹೆತ್ತಳ್, ಮಣ್ ದೂರಳ್
22) ಕೋಳಿ ತನ್ ಕಾಲ್ ಬುಡಕ್ಕೇ ಕೆದ್ರತ್
23) ತಣ್ಣೀರಾದ್ರೂ ತಣ್ಸಿ ಕುಡಿಕಂಬ್ರ್
24) ಬೆಕ್ಕಿನ್ ಬಿಡಾರು ಬೇರೆ
25) ಅಂಡಿ ಬಾಯಾರೂ ಕಟ್ಟುಕೆ ಆತ್, ದೊಂಡಿ ಬಾಯಿ ಕಟ್ಟುಕೆ ಆತಿಲ್ಲಾ
26) ಉದ್ದುವಾದನ್ ಗಡ್ಡ ಹಿಡ್ಕ ಎಳದ್ರೆ, ಮತ್ತಷ್ಟೂ ಉದ್ದ
27) ತಿಂಗಳ್ ಬೆಳ್ಕಗೆ ನಾಯಿ ಕಂಡ್ರೂ ಬೊಗಳತ್ ಕಾಣ್ದೆಯೂ ಬೊಗಳತ್
28) ಕೊಣುಕೆ ಬಾರ್ದಿದ್ದನ್ ರಂಗಸ್ಥಳ ವಾರಿ ಅಂತನಂಬ್ರ್
29) ಉಣ್ಕೆದ್ರೆ ಮೊದಲ್ ಬಾಳೆಲಿ ಹರ್ಕಂಡಗೆ
30) ಅಕ್ಕಿ ಕೊಟ್ ಉಣ್ಕರೆ ಅಕ್ಕನ್ ಹಂಗ್ ಎಂತಕೆ

(ಸಂಗ್ರಹ)

भाग्यवन्तं प्रसूयेत मा शूरं मा च पण्डितम् ।
शूराश्च कृतविद्याश्च वने सीदन्ति पाण्डवाः ॥

ಭಾಗ್ಯವಂತಂ ಪ್ರಸೂಯೇತ ಮಾ ಶೂರಂ ಮಾ ಚ ಪಂಡಿತಮ್ ।
ಶೂರಾಶ್ಚ ಕೃತವಿದ್ಯಾಶ್ಚ ವನೇ ಸೀದಂತಿ ಪಾಂಡವಾಃ ॥

ಶೂರನಾಗದಿದ್ದರೂ ಆಗಬಹುದು. ವಿದ್ಯಾವಂತನಾಗದಿದ್ದರೂ ಆಗಬಹುದು.
ಆದರೆ ಭಾಗ್ಯವಂತನಾದ ಮಗನನ್ನೇ ಪಡೆಯಬೇಕು.
ಏಕೆಂದರೆ ಪಾಂಡವರು ಶೂರರಾಗಿದ್ದರೂ ವಿದ್ಯಾವಂತರಾಗಿದ್ದರೂ ಕೂಡಾ ಕಾಡಿನಲ್ಲಿ ದುಃಖಪಡುವವರಾಗಿದ್ದಾರೆ.

ಕೋಟಿ ಚೆನ್ನಯ್ಯ

ರಜತ್
ದ್ವಿತೀಯ ಬಿ.ಕಾಂ.

ಕೋಟಿ ಚೆನ್ನಯ್ಯೆರ್ ತುಳುನಾಡ್ ತೂಯಿನ ಪ್ರಸಿದ್ಧ ಅಮರ್ ಬೊಳ್ಳಿಲು. ಮೊಕುಲು ಆಯುರ್ವೇದ ಪಂಡಿತೆ ಆಯಿನ ದೇಯಿ ಬೈದೇತಿನ ಜೋಕುಲು. ಮೊಕುಲು ಪುತ್ತೂರುದ ಪಡುಮಲೆಟ್ ಪುಟ್ಟಿಯೆರ್. ಮೊಕಲ್ನ ಪೂರ್ತಿ ಪುದರ್ ಕೋಟಿ ಬೈದ್ಯ ಬೊಕ್ಕ ಚೆನ್ನಯ್ಯ ಬೈದ್ಯ. ಮೊಕಲೆನ್ ತುಳುನಾಡ್‌ದ್ ಕಾರ್ನಿಕ ಪುರುಷೆರ್ ಪಂದ್ ಲೆಪ್ಪುವೆರ್.

ಅಪ್ಪೆ ದೇಯಿ ಬೈದೇತಿ ತೀರಿಬೊಕ್ಕ ಕೋಟಿ ಚೆನ್ನಯ್ಯೆರ್ ಪಡುಮಲೆತ ಪೆರ್ಮಾಲ ಬಲ್ಲಾಳ್ರೆನ ಆಶ್ರಯೊಡು ಬುಳೆವೆರ್. ದೇಯಿ ಬೈದೇತಿ ಪೆರ್ಮಾಲ ಬಲ್ಲಾಳ್ರೆನ ಜೀವ ಒರಿಪಾದಿಪ್ಪುವೊಲು. ಆ ಋಣ ಸಂದಾರೆಗ್ ಅರಸೆ ಕೋಟಿ ಚೆನ್ನಯ್ಯೆರೆನ್ ಪೊರ್ಲುಡು ತಾಂಕುವೆ. ಆಂಡ ಆಸ್ಥಾನದ ಮಂತ್ರಿ ಬುದ್ಯಂತಗ್ ಜೋಕುಲೆನ್ ಮಿತ್ತ್ ಮಚ್ಚರ ಉಂಟಾದ್ ರಾಣಿನ ಕೆಬಿ ಊದುವೆ. ರಾಣಿ ಅವೆನ್ ಅರಸಡ ಪಂಡ್‌ದ್ ಅರಸಗ್ ಕೋಟಿ ಚೆನ್ನಯ್ಯೆರ್‌ನ ಮಿತ್ತ್ ಮಚ್ಚರ ಬರ್ಪಿಲಕ ಮಲ್ಪುವೊಲು. ಆಂಡ ದೇಯಿ ಬೈದೇತಿನ ಋಣ ಇಪ್ಪುನ ಕಾರಣ ಅರಸೆ ರಾಣಿಗ್ ತೆರಿಯಂದಿಲಕ ಕೋಟಿಚೆನ್ನಯ್ಯರೆನ ಅಕಲ್ನ ಮಾಮ ಸಾಯನ ಬೈದ್ಯನ್ ಲೆಪುಡಾದ್ ಅಕಲೆಗ್ ವಿದ್ಯಾಭ್ಯಾಸ ಶಿಸ್ತು, ಯುದ್ಧ, ಕೌಶಲ್ಯ ಗುಣನ್ ಕಲ್ಪಾರೆ ಸಹಾಯ ಮಲ್ಪುವೆ.

ಪೆರ್ಮಲೆ ಬಲ್ಲಾಳ್ರ್ ಕೋಟಿ ಚೆನ್ನಯ್ಯೆರೆಗ್ ಒಂಜಿ ಜಾಗನ್ ವ್ಯವಸಾಯ ಮಲ್ಪರೆ ಕೊರ್ದಿಪ್ಪುವೆರ್. ಆ ಜಾಗದ್ ಬರಿಟೇ ಮಂತ್ರಿ ಬುದ್ಯಂತನ ಜಾಗ್‌ಲ ಇಪ್ಪುಂಡು. ಮಂತ್ರಿ ಮಚ್ಚರೊಡು ಆಯನ ಕಂಡದ ನೀರ್‌ನ್ ಮೊಕಲ್ನ ಕಂಡೊಗು ಬುಡ್ಡು ಬುಳೆ ಹಾಳ್ ಮಲ್ಪರೆ ತೂಪೆ. ಅವ್ಲೆ ಇತ್ತಿನ ಚೆನ್ನಯ್ಯೆ ಕೋಪೊಡು ಮಂತ್ರಿನ ರುಂಡ ಕಟ್ತ್‌ದ್ ಕಂಡಗ್ ಪುಣೆ ಕಟ್ಟುವೆ. ಬೊಕ್ಕ ಅಕುಲು ಪಡುಮಲೆಡ್ಡ್ ಸೀದ ಅಕಲ್ನ ಪಲ್ದಿ ಕಿನ್ನಿದಾರುನ ಊರುಗು ಬರ್ಪೆರ್. ಪಲ್ದಿ ಅಕಲ್ನ ಕುಲದೇವೆರಾಯಿನ ಕೆಮ್ಮಲಜೆ ನಾಗಬ್ರಹ್ಮೆರೆಗ್ ಪೂಜೆ ಕೊರ್ರೆಗ್ ಪನ್ಪೊಲು. ಅಕುಲು ಐಕ್ ಅಲ್ತ್‌ಡ್ಡ್ ಪಯ್ಯ ಬೈದ್ಯನ ಸಹಾಯ ಗೆತೊಂದು ದೇವೆರ್ನ ಸನ್ನಿದಿಗ್ ಪಿದಡುವೆರ್.

ಕೋಟಿ ಚೆನ್ನಯ್ಯೆರ್ ಬೊಕ್ಕ ಪಂಜಗ್ ಬರ್ಪೆರ್. ಅಲ್ಪ ಅಕಲ್ನ ಧೈರ್ಯ, ಸಾಹಸ, ಮನುಷ್ಯತ್ವ ಗುಣ, ಮಲ್ಲಕ್ಲೆಗ್ ಕೊರ್ಪಿನ ಮರ್ಯಾದೆ ಪೂರ ತೂದು ಊರ್ದ ಜನ ಅಕಲೆನ್ ಪುಗರ್ರೆ ಸುರು ಮಲ್ಪುವೆರ್. ಉಂದೆನ್ ತೂಯಿನ ಅಲ್ತ ಮಂತ್ರಿ ಚಂದುಗಿಡಿಕ್ ಕಿಚ್ಚಿ ಸುರು ಆಪುಂಡು. ಅವ್ವೇ ಪೊರ್ತುಗು ಪೆರ್ಮಾಲ ಬಲ್ಲಾಳ್ರ್ ಕೋಟಿ ಚೆನ್ನಯ್ಯರೆನ್ ತನ್ನ ವಶ ಮಲ್ಪೊಡು ಪಂಡ್ ಪತ್ರ ಬರೆಪೆರ್. ಆಂಡ ಚಂದುಗಿಡಿ ಅಕಲೆನ್ ಕೆರ್ರೆ ಪತ್ರ ಬೊಯ್ದಿನಿ ಪಂದ್ ಸುಳ್ಳು ಪನ್ಪೆ. ಐತ ಪ್ರಕಾರ ಅಕಲೆನ್ ದಿಂಡುಮಲೆ ಪನ್ಪಿನ ಗುಹೆತುಲಾಯಿ ಕಡಮಡ್ಡ್ ಕಲ್ಲ್ ಮುಚ್ಚುವೆರ್. ಆಂಡ ಕೋಟಿ ಚೆನ್ನಯ್ಯೆರ್ ಕಲ್ಲ್ ಪುಡೆತ್ತಿದ್ ಪಿದಯ ಬರ್ಪೆರ್.

ಅಲ್ತ್‌ಡ್ಡ್ ಬೊಕ್ಕ ಅಕುಲು ಬ್ರಹ್ಮದೇವೆರೆನ ಸನ್ನಿದಿಗ್ ಪೋದು ಪೂಜೆ ಮಲ್ತ್‌ದ್ ದೇವೆರ್ನ ಅನುಗ್ರಹ ಪಡೆದ್ ಆ ಊರುದ ಅರಸೆ ಆಯಿನ ದೇವ ಬಲ್ಲಾಳ್ರ್ ಕೊರ್ತಿನ ಜಾಗೊಡು ಬೇಸಾಯ ಮಲ್ತ್‌ದ್ ಜೀವನ ನಡಪಾವೆರ್. ಆ ಪೊರ್ತುಗು ಕೇಮರ ಬಲ್ಲಾಳ್ರ್ ಕೋಟಿ ಚೆನ್ನಯ್ಯೆರೆನ್ ತನ್ನ ವಶ ಮಲ್ಪರೆಗ್ ಪತ್ರ ಬರೆಪೆರ್. ಕೋಟಿ ಚೆನ್ನಯ್ಯೆರ್ನ ಮಹಿಮೆ ತೆರೆದಿತ್ತಿನ ದೇವ ಬಲ್ಲಾಳ್ರ್ ಅಕಲೆನ್ ಬುಡ್ಡು ಕೊರ್ರೆಗ್ ಆಪುಜಿ, ಬೋಡಾಂಡ ಯುದ್ಧ ಮಲ್ಪುಗ ಪಂಡ್‌ದ್ ಸವಾಲ್ ಪಾಡುವೆರ್. ಕೇಮರ ಬಲ್ಲಾಳ್ರ್ ಪೆರ್ಮಾಲ ಬಲ್ಲಾಳ್ರೆನ ಸಹಾಯ ಗೆತೊಂದು ಯುದ್ಧೊಗು ಪಿದಡುವೆರ್.

ಕೇಮರ ಬಲ್ಲಾಳ್ರುಲ ಕೋಟಿಲ ಯುದ್ಧ ಮಲ್ಪುನಗ ಪೆರ್ಮಾಲ ಬಲ್ಲಾಳ್ರು ಬೆತ್ತಡಿಡ್ಡ್ ಬಾಣ ಬುಡ್ಪೆರ್. ಉಂದೆನ್ ತೂಯಿನ ಕೋಟಿ ಎಂಕುಲು ಎಲ್ಯ ಇಪ್ಪುನಗ ಎಂಕಲೆನ್ ಸ್ವಂತ ಜೋಕುಲ್ನಲಕ ತಾಂಕ್‌ದ್ ಇತ್ತೆ ಮೋಸ ದೇಗ್ ಮಲ್ತರ್ ಪಂದ್ ಕೇನಿನ್ಯೆಕ್ ಪೆರ್ಮಾಲ ಬಲ್ಲಾಳ್ರ್ ಒವ್ವಾ

ಒಂಜಿ ಮಾಯಾ ಶಕ್ತಿ ಎನಡ ಇಂಚ ಮಲ್ಪಾಂಡ್. ಎನನ್ ಮಾಪು ಮಲ್ಪುಲ ಪಂಡ್‌ದ್ ಕೇನುವೆರ್. ಐಕ್ ಕೋಟಿ ಯಾನ್ ಮಾಪ್ ಮಲ್ಪೊಡು ಪಂದಾಂಡ ನಿಕುಲು ಮೂಜಿ ಜನಲ ಒಟ್ಟಾದ್ ತುಳುನಾಡನ್ ಆಳ್ವಿಕೆ ಮಲ್ಪುಲೆ ಪಂಡ್‌ದ್ ಭಾಷೆ ಗೆತೊಂದು ಪ್ರಾಣ ಬುಡ್ಪೆ. ಉಂದೆನ್ ತೂಯಿನ ಚೆನ್ನಯ್ಯೆ ಕೋಟಿ ಇಜ್ಜೆಡ ಎನ್ನ ಬದ್‌ಕ್ ವ್ಯರ್ಥ ಪಂಡ್‌ದ್ ಮಂಜೊಲು ಪಾದೆಗ್ ಮಂಡೆ ದರ್ತ್‌ದ್ ಪ್ರಾಣ ಬುಡ್ಪೆ.

ಕೋಟಿ ಚೆನ್ನಂಯ್ಯೆರ್ನ ಪುದರ್ ತುಳುನಾಡ್‌ಡ್ ಅಜರಾಮರ ಆದಿಪ್ಪೊಡು ಪಂಡ್‌ದ್ ಮೂಜಿ ಅರಸೆರ್ಲ ಪ್ರತಿ ಒಂಜಿ ಊರುಡ್ಲ ಗರಡಿ ನಿರ್ಮಿಸಾದ್ ವರ್ಷಲ ಮೊಕಲೆಗ್ ನೇಮ ಕೊರ್ದು ಕೋಟಿ ಚೆನ್ನಯ್ಯೆರ್ನ ಕಾರ್ನಿಕೊನು ತುಳುನಾಡ್‌ಗ್ ಪರಿಚಯ ಮಲ್ತೆರ್. ಕೋಟಿಚೆನ್ನಯ್ಯೆರ್ನ ಕಾರ್ನಿಕ ತೂದು ತುಳುನಾಡ್‌ದ ಪೂರ ಜನಲ ಅಕಲೆನ್ ನಂಬುದ್ ಅಕಲೆಗ್ ಪರಕೆ ಸಂದಾವೆರ್.

ನಂಬಿನಕ್ಲೆಗ್ ಇಂಬು ಕೊರ್ಪ. ಸತ್ಯ ಗೆಂದಾದ್ ಕೊರ್ಪ, ಪನ್ಪಿನ ಕೋಟಿ ಚೆನ್ನಯ್ಯೆರ್ನ ನುಡಿ ಇನಿಕ್ಲ ತುಳುನಾಡ್‌ದ ಜನಕುಲೆಗ್ ಆಸರೆಯಾದ್ ಒರಿದಿಂಡ್.

ಉನ್ನತ್ ಭಾರತ್ ಅಭಿಯಾನದಡಿಯಲ್ಲಿ ಮೊಳಹಳ್ಳಿ ಗ್ರಾಮದ ಸಮಾಜಶಾಸ್ತ್ರೀಯ ಅಧ್ಯಯನದ ವರದಿ

(ಪೂರ್ಣಪ್ರಜ್ಞ ಕಾಲೇಜು ಸಮಾಜಶಾಸ್ತ್ರ ವಿಭಾಗದ ವತಿಯಿಂದ ನಡೆದ ಸಂಶೋಧನಾ ಕಾರ್ಯ)

ಶಿವರಾಜ್ ಕುಮಾರ್
ತೃತೀಯ ಬಿ.ಎ.

ಪೀಠಿಕೆ :

'ಉನ್ನತ್ ಭಾರತ್ ಅಭಿಯಾನ್ ಇದರ ಅಡಿಯಲ್ಲಿ ಪೂರ್ಣಪ್ರಜ್ಞ ಕಾಲೇಜು ಸಂಶೋಧನಾ ಕೇಂದ್ರ ಹಾಗೂ ಪೂರ್ಣಪ್ರಜ್ಞ ಕಾಲೇಜಿನ ಸಂಖ್ಯಾಶಾಸ್ತ್ರ ವಿಭಾಗ ಮತ್ತು ಸಮಾಜಶಾಸ್ತ್ರ ವಿಭಾಗಗಳ ಜಂಟಿ ಆಶ್ರಯದಲ್ಲಿ ಮೊಳಹಳ್ಳಿ ಎಂಬ ಕುಂದಾಪುರ ತಾಲೂಕಿನ ಗ್ರಾಮ ಸಮೀಕ್ಷೆಯ ವರದಿ ಇದಾಗಿದೆ.

ಈ ಸಮೀಕ್ಷೆಯು ಪೂರ್ಣಪ್ರಜ್ಞ ಸಂಶೋಧನ ಕೇಂದ್ರದ ನಿರ್ದೇಶಕರಾದ ಡಾ। ಕೃಷ್ಣ ಕೊತಾಯ, ಪೂರ್ಣಪ್ರಜ್ಞ ಕಾಲೇಜಿನ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ರಾಘವೇಂದ್ರ ಎಲ್, ಸಂಖ್ಯಾಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಗೋಪಾಲ ಎಂ. ಗೋಖಲೆ ಮತ್ತು ಉಪನ್ಯಾಸಕಿ ಕುಮಾರಿ ಮಧು ಇವರ ಮಾರ್ಗದರ್ಶನದಲ್ಲಿ ಸಮಾಜಶಾಸ್ತ್ರದ 10 ವಿದ್ಯಾರ್ಥಿಗಳ ಹಾಗೂ ಸಂಖ್ಯಾಶಾಸ್ತ್ರದ 25 ವಿದ್ಯಾರ್ಥಿಗಳನ್ನು ಒಳಗೊಂಡು ಒಟ್ಟು 35 ವಿದ್ಯಾರ್ಥಿಗಳು ಸಮೀಕ್ಷೆಯಲ್ಲಿ ಭಾಗವಹಿಸಿದರು.

ಈ ಸಮೀಕ್ಷೆಯಲ್ಲಿ ಮೊಳಹಳ್ಳಿ ಗ್ರಾಮದ ಜನರ ಜೀವನ, ವೃತ್ತಿ, ಆರ್ಥಿಕ ಸ್ಥಿತಿಗತಿಗಳನ್ನು ತಿಳಿದು ಮಾಹಿತಿ ಸಂಗ್ರಹಿಸಲಾಯಿತು.

ಜನರ ಜೀವನ :

ಮೊಳಹಳ್ಳಿ ಗ್ರಾಮದ ಜನರು ಕೃಷಿ ಹಾಗೂ ಕೃಷಿಯ ಸಂಬಂಧಿತ ಚಟುವಟಿಕೆಗಳನ್ನು ಆಧರಿಸಿ ಜೀವನ ನಡೆಸುತ್ತಾ ಇದ್ದಾರೆ. ಮುಖ್ಯವಾಗಿ ಇಲ್ಲಿನ ಬಹುತೇಕ ಜನರು ಶಿಕ್ಷಣದಿಂದ ವಂಚಿತರಾಗಿದ್ದು, ಹಲವಾರು ಜನ ಪ್ರಾಥಮಿಕ ಶಿಕ್ಷಣವನ್ನು ಪಡೆಯುವಲ್ಲಿ ಮಾತ್ರ ಸಫಲರಾಗಿದ್ದಾರೆ. ಕಳೆದ ಎರಡು ದಶಕಗಳಿಂದೀಚೆಗೆ ಅಂದರೆ ಈ ತಲೆಮಾರಿನ ಯುವ ಜನತೆಯಲ್ಲಿ ಶೈಕ್ಷಣಿಕ ಜಾಗೃತಿ ಮೂಡಿದ್ದು, ಪ್ರೌಢ, ಪದವಿಪೂರ್ವ ಹಾಗೂ ಪದವಿ ಶಿಕ್ಷಣದತ್ತ ಮುಖ ಮಾಡಿದ್ದಾರೆ.

ಜನರ ಆರ್ಥಿಕ ಸ್ಥಿತಿ ಅಷ್ಟೊಂದು ಉತ್ತಮವಾಗಿಲ್ಲದ ಕಾರಣ ಜನಜೀವನ ಸುಧಾರಣೆಯಾಗಿಲ್ಲ. ನಮ್ಮ ಸಮೀಕ್ಷೆಯಲ್ಲಿ ತಿಳಿದು ಬಂದುದೇನೆಂದರೆ ಇಲ್ಲಿನ ಶೇಕಡ 85% ರಷ್ಟು ಜನರು ಬಡತನ ರೇಖೆಗಿಂತ ಕೆಳಗಿದ್ದಾರೆ ಹಾಗೂ ಮೂಲಭೂತ ಸೌಕರ್ಯಗಳನ್ನು ಸಂಪೂರ್ಣವಾಗಿ ಪಡೆಯಲಾಗಿಲ್ಲ. ಆದರೂ ತೃಪ್ತಿಕರ ಜೀವನವನ್ನು ಇಲ್ಲಿ ಕಾಣಬಹುದು.

ಆರ್ಥಿಕ ಸ್ಥಿತಿ :

ಮೊಳಹಳ್ಳಿ ಜನರ ಆರ್ಥಿಕ ಸ್ಥಿತಿಗತಿ ಮುಂದುವರಿದಿಲ್ಲ. ಅಲ್ಪವಷ್ಟೇ ಅಭಿವೃದ್ಧಿ ಹೊಂದಿದ ಹಾಗಿದೆ. ಇಲ್ಲಿನ 85% ಜನರು ಆರ್ಥಿಕವಾಗಿ ಬಡತನ ರೇಖೆಗಿಂತ ಕೆಳಗಿದ್ದಾರೆ. ಹಳ್ಳಿಗರೆಲ್ಲರೂ ಸ್ವಂತ ಮನೆಗಳನ್ನು ಹೊಂದಿದ್ದು ಸಾಮಾನ್ಯವಾಗಿ ಎಲ್ಲಾ ಪಕ್ಕಾ ಮನೆಗಳಾಗಿವೆ. ಜನರೆಲ್ಲರೂ ಕೃಷಿ ಹಾಗೂ ಕೃಷಿ ಸಂಬಂಧಿತ ಚಟುವಟಿಕೆಗಳು ಅದರಲ್ಲೂ ಮುಖ್ಯವಾಗಿ ಕೂಲಿ, ಹೈನುಗಾರಿಕೆಯನ್ನು ಅವಲಂಬಿಸಿದ್ದಾರೆ. ಇವು ವರ್ಷದ ಕೆಲವು ತಿಂಗಳಷ್ಟೇ ಉದ್ಯೋಗ ಒದಗಿಸುತ್ತದೆ. ಬಳಿಕ ನಿರುದ್ಯೋಗದ ಬದುಕು ಸಹಜ ಎಂದು ತಿಳಿದುಬರುತ್ತದೆ. ಸರ್ಕಾರದ ಯಾವುದೇ ಆರ್ಥಿಕ ಸುಧಾರಣಾ ಯೋಜನೆಗಳನ್ನು ಬಳಸಿಕೊಳ್ಳುವಲ್ಲಿ ಈ ಜನ ವಿಫಲರಾಗಿದ್ದಾರೆ. ಹಳ್ಳಿಯಲ್ಲಿ ಶಿಕ್ಷಿತರು ಕಡಿಮೆ ಇರುವ ಕಾರಣ ಯಾವುದೇ ಆಧುನಿಕ ವೃತ್ತಿ ಉದ್ಯೋಗಗಳಲ್ಲಿ ತಮ್ಮನ್ನು ತೊಡಗಿಸುವಲ್ಲಿ ವಿಫಲರಾಗಿದ್ದರೆ. ಇದು ಆರ್ಥಿಕತೆಯ ಮೇಲೆ ಬಹಳಷ್ಟು ಪರಿಣಾಮ ಬೀರಿದ್ದು ಸ್ಪಷ್ಟವಾಗಿ ಕಂಡುಬರುತ್ತದೆ. ಕೃಷಿ ಇವರ ಪ್ರಮುಖ ಕಸುಬಾಗಿದೆ.

ಸಾಮಾಜಿಕ ಸ್ಥಿತಿ :

ವಿಶೇಷವೆಂದರೆ ಇಲ್ಲಿ ಸಾಮಾಜಿಕ ಏಣಿ ಶ್ರೇಣಿ ವ್ಯವಸ್ಥೆ ಅಷ್ಟೊಂದು ಕಾಣಿಸುವುದಿಲ್ಲ. ಆದರೆ ಸಾಮಾಜಿಕ ಜಾತಿ, ಪಂಗಡಗಳು ಪ್ರಮುಖ ಎನಿಸಿದ್ದು. ಪರಿಶಿಷ್ಟ ಜಾತಿ 25% ಪ.ಪಂಗಡದ 15%, ಇತರೆ ಹಿಂದುಳಿದ ವರ್ಗ 40%, ಸಾಮಾನ್ಯರು 20% ರಷ್ಟಿದೆ. ಸಾಮಾಜಿಕ ಸ್ವಚ್ಛತೆ, ಶಿಸ್ತನ್ನು ಅನುಸರಿಸಿದ್ದಾರೆ. ಅಲ್ಲಿನ ಸಮಾಜ ಹಿಂದುಳಿದಿದೆ ಆದರೂ ಅವರದೇ ಆದ ಸಾಂಸ್ಕೃತಿಕ ಮೌಲ್ಯಗಳನ್ನು ಹೊಂದಿದೆ.

ಮೊಳಹಳ್ಳಿಯ ಜನರಲ್ಲಿ ಸಾಮಾಜಿಕ ನೈರ್ಮಲ್ಯದ ಜಾಗೃತಿಯಲ್ಲಿ ಶೇ. 97%ರಷ್ಟು ಜನ ಶೌಚಾಲಯವನ್ನು ಹೊಂದಿದ್ದಾರೆ. ಕೇವಲ 3% ರಷ್ಟು ಜನ ಮಾತ್ರ ಅನಿವಾರ್ಯತೆಯಿಂದ ಬಯಲು ಶೌಚಾಲಯಕ್ಕೆ ಹೋಗುತ್ತಿದ್ದಾರೆ. ಗ್ರಾಮೀಣ ಪ್ರದೇಶವಾದ್ದರಿಂದ ಇಲ್ಲಿ ಕಸ ಸಂಗ್ರಹಣೆ ವ್ಯವಸ್ಥೆಯ ಪರಿಚಯ ಇವರಿಗೆ ಇರುವುದಿಲ್ಲ. ಇಲ್ಲಿ ಹಸಿಕಸವನ್ನು ಗೊಬ್ಬರ ತಯಾರಿಕೆಗೆ ಹಾಗೂ ಒಣ ಕಸವನ್ನು ಬೆಂಕಿ ಹಾಕಿ ಸುಡಲಾಗುತ್ತದೆ.

ವಲಸೆ ಸ್ಥಿತಿ :

ಮೊಳಹಳ್ಳಿ ಗ್ರಾಮದ ಜನರು ಸುತ್ತಮುತ್ತಲಿನ ಹಳ್ಳಿಗಳಲ್ಲಿಯೇ ದುಡಿಯುತ್ತಿರುವುದರಿಂದ ಕೆಲಸಕ್ಕಾಗಿ ಇಡೀ ಊರೇ ವಲಸೆ ಹೋಗುವ ಸ್ಥಿತಿ ಹೊಂದಿಲ್ಲ. ಇಲ್ಲಿ ಕೃಷಿ ಕೆಲಸ ಮುಗಿದ ದಿನಗಳಲ್ಲಿ ಕೃಷಿ ಸಂಬಂಧಿತ ಇತರೆ ಕೆಲಸಗಳನ್ನು ಮಾಡುತ್ತಾ ಜೀವನ ಸಾಗಿಸುತ್ತಿದ್ದಾರೆ. ಒಟ್ಟಿನಲ್ಲಿ ಈ ಗ್ರಾಮದ ಜನರ ವಲಸೆ ಪ್ರಮಾಣ ಬಹಳ ಕಡಿಮೆ ಇದೆ ಎಂಬುದು ವಿಶೇಷ.

ಕೌಟುಂಬಿಕ ಸ್ಥಿತಿ :

ಮೂಲತಃ ಮಾತೃಪ್ರಧಾನ ಕುಟುಂಬ ವ್ಯವಸ್ಥೆ ಹೊಂದಿದ ಈ ಗ್ರಾಮ ಇಂದಿಗೂ ಅದೇ ಕುಟುಂಬ ವ್ಯವಸ್ಥೆಯನ್ನು ಅನುಸರಿಸುತ್ತಿದೆ. ಶೇ. 33% ರಷ್ಟು ಕುಟುಂಬಗಳಲ್ಲಿ ಹಿರಿಯ ಮಹಿಳಾ ಸದಸ್ಯೆ ಆ ಕುಟುಂಬದ ವ್ಯವಹಾರದ ಚುಕ್ಕಾಣಿ ಹಿಡಿದಿರುತ್ತಾರೆ.

ಮೊಳಹಳ್ಳಿಯ ಜನರು ಕೌಟುಂಬಿಕವಾಗಿ ಉನ್ನತ ಸ್ಥಿತಿಯನ್ನು ಹೊಂದಿದ್ದಾರೆ. ಇಲ್ಲಿನ ಕುಟುಂಬದಲ್ಲಿ ಯಾವುದೇ ರೀತಿಯ ಕಲಹ, ದ್ವೇಷಗಳು ಇಲ್ಲ. ಪತಿ–ಪತ್ನಿ ಕಲಹಗಳೂ ಇಲ್ಲ ಎಂಬುದು ಸ್ಪಷ್ಟವಾಗಿದೆ.

ಉಪಸಂಹಾರ :

ಉನ್ನತ ಭಾರತ್ ಅಭಿಯಾನ್ ಇದರ ಅಡಿಯಲ್ಲಿ ಪೂರ್ಣಪ್ರಜ್ಞ ಕಾಲೇಜು ಸಂಶೋಧನಾ ಕೇಂದ್ರದ ಡಾ. ಕೃಷ್ಣ ಕೊತಾಯರವರ ಮಾರ್ಗದರ್ಶನದಲ್ಲಿ ಕೈಗೊಂಡ ಸಮೀಕ್ಷೆ ಇದಾಗಿ ಯಶಸ್ವಿಯಾಗಿ ಜರುಗಿತು. ನಮ್ಮ ವಿದ್ಯಾರ್ಥಿಗಳಿಗೆ ಇದೊಂದು ಉತ್ತಮ ಅನುಭವವಾಗಿರುವುದಂತೂ ಸತ್ಯ ಸಂಗತಿ. ಇದರಿಂದ ಇನ್ನಷ್ಟು ಸಮೀಕ್ಷೆಗಳಲ್ಲಿ ತೊಡಗಿಕೊಳ್ಳಲು ಉತ್ಸುಕರಾಗಿದ್ದೇವೆ.

ನಮ್ಮ ಕಾಲೇಜಿನ ಪೂರ್ಣಪ್ರಜ್ಞ ಸಂಶೋಧನಾ ಕೇಂದ್ರ, ಸಂಖ್ಯಾಶಾಸ್ತ್ರ ವಿಭಾಗ ಹಾಗೂ ಸಮಾಜಶಾಸ್ತ್ರ ವಿಭಾಗದ ಜಂಟಿ ಆಶ್ರಯದಲ್ಲಿ ಈ ಸಮೀಕ್ಷೆಗೆ ಭಾಗವಹಿಸಿರುತ್ತೇವೆ. ಇಂದು ಒಂದು ರೀತಿಯ ಸುಂದರ ಅನುಭವದ ಸಮೀಕ್ಷೆಯಾಗಿದೆ. ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಈ ಸಮೀಕ್ಷೆಯಲ್ಲಿ ಭಾಗವಹಿಸಲು ಅನುವು ಮಾಡಿಕೊಟ್ಟ ಪೂರ್ಣಪ್ರಜ್ಞ ಸಂಶೋಧನಾ ಕೇಂದ್ರದ ನಿರ್ದೇಶಕರು, ಸಂಖ್ಯಾಶಾಸ್ತ್ರ ಹಾಗೂ ಸಮಾಜಶಾಸ್ತ್ರ ವಿಭಾಗದ ಅಧ್ಯಾಪಕರುಗಳಿಗೆ ಧನ್ಯವಾದಗಳು.

ಕೊಲ್ಲೂರು ಸುತ್ತಮುತ್ತಲಿನ ವ್ಯಾಪಾರಿಗಳ ಬಗ್ಗೆಗಿನ ಸಮಾಜಶಾಸ್ತ್ರೀಯ ಅಧ್ಯಯನ

(ಪೂರ್ಣಪ್ರಜ್ಞ ಕಾಲೇಜು ಸಮಾಜಶಾಸ್ತ್ರ ವಿಭಾಗದ ವತಿಯಿಂದ ನಡೆದ ಸಂಶೋಧನ ಕಾರ್ಯ)

ಚೈತ್ರ, ಸೌಜನ್ಯ, ಬಿ.ಆರ್. ಚೈತ್ರ
ತೃತೀಯ ಬಿ.ಎ.

ಪೀಠಿಕೆ :

ಕೊಲ್ಲೂರು ಕರ್ನಾಟಕ ರಾಜ್ಯದ ಉಡುಪಿ ಜಿಲ್ಲೆಯಲ್ಲಿದೆ. ಪಶ್ಚಿಮಘಟ್ಟದ ಬುಡದಲ್ಲಿದೆ ಮತ್ತು ಹಿಂದೂ ಯಾತ್ರಾ ಕೇಂದ್ರವಾಗಿದೆ. ಸೌಪರ್ಣಿಕಾ ಎಂಬ ನದಿಯ ತಾಣವಾಗಿದೆ. ಕೊಲ್ಲೂರು ಮೂಲ ಸೌಲಭ್ಯಗಳಿಲ್ಲದೆ ದಟ್ಟ ಕಾಡುಗಳ ನಡುವೆ ಇದ್ದು, ಅಲ್ಲಿಗೆ ಬಂದ ವಿಭಿನ್ನ ಜನರ ಕಾರಣದಿಂದಾಗಿ ಅಭಿವೃದ್ಧಿ ಪ್ರಕ್ರಿಯೆಯು ವೇಗಗೊಂಡಿದೆ. 5 ವರ್ಷಗಳ ಅವಧಿಯಲ್ಲಿ ವಿವಿಧ ಆಯಾಮಗಳಲ್ಲಿ ಸಾಕಷ್ಟು ಅಭಿವೃದ್ಧಿ ಆಗಿದೆ. ಯಾವುದೇ ಜಾತಿ ಮತ್ತು ಧರ್ಮದ ವ್ಯತ್ಯಾಸವಿಲ್ಲದೆ ಅಲ್ಲಿಗೆ ಬರುವ ಪ್ರತಿಯೊಬ್ಬರನ್ನು ಸಮಾನ ಗೌರವದಿಂದ ಪರಿಗಣಿಸಲಾಗುತ್ತದೆ ಮತ್ತು ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ಪ್ರಾಚೀನ ಕಾಲದಲ್ಲಿ ಸರಿಯಾದ ಸೌಲಭ್ಯಗಳಿರಲಿಲ್ಲ. ಆದರೆ ಈಗ ವಾಸ್ತುಶಿಲ್ಪ, ನೈರ್ಮಲ್ಯ, ಆತಿಥ್ಯ ಇತ್ಯಾದಿಗಳಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ರಥಗಳನ್ನು ತಯಾರಿಸುವ ಕಲೆ, ವಿಗ್ರಹ ವಾಸ್ತುಶಿಲ್ಪದ ಒಂದು ಅಂಶವಾಗಿದೆ. ಭಾರತದಲ್ಲಿ ರಥವನ್ನು ತಯಾರಿಸುವ ಮತ್ತು ಬಳಸುವ ಕಲೆ ಕ್ರಿ.ಶ. ಎರಡನೆಯ ಶತಮಾನಕ್ಕೆ ಹೋಗುತ್ತದೆ. ಸೌಪರ್ಣಿಕಾ ನದಿಯು ಅಪರೂಪದ ಗಿಡಮೂಲಿಕೆಗಳಿಗೆ ಹೆಸರುವಾಸಿಯಾದ ಕಾಡಿನ ಮೂಲಕ ಹರಿಯುತ್ತದೆ ಮತ್ತು ನೀರು ಔಷಧೀಯ ಗುಣಗಳನ್ನು ಹೊಂದಿದೆ.

ಕೊಲ್ಲೂರು ಮೂಲದ ಚಂದ್ರಶೇಖರ್ ಅವರು ಜೀಪ್ ಸೇವೆಯನ್ನು ನಡೆಸುತ್ತಿದ್ದಾರೆ. ಅವರಿಗೆ ಈ ಕ್ಷೇತ್ರದಲ್ಲಿ ಸುಮಾರು 20 ವರ್ಷಗಳ ಅನುಭವವಿದೆ. ಹೆಚ್ಚಿನ ಸಂದರ್ಶಕರು ಕೇರಳದಿಂದ ಬಂದವರು. ಪಯಾಣಕ್ಕೆ ತಲಾ 25 ರೂ ಮತ್ತು ಜೀಪ್‌ಗೆ 150 ರೂ. ವಾರಾಂತ್ಯದಲ್ಲಿ ಮತ್ತು ನವರಾತ್ರಿ, ಓಣಂ, ಕ್ರಿಸ್‌ಮಸ್‌ನಂತಹ ರಜಾದಿನಗಳಲ್ಲಿ ಮಾತ್ರ ಜನಸಂದಣಿ ಇರುತ್ತದೆ. ಅವರು ಪ್ರತಿದಿನ 44 ಕಿ.ಮೀ. ಪ್ರಯಾಣಿಸುತ್ತಾರೆ. ರಸ್ತೆಗಳು ಅಷ್ಟು ಉತ್ತಮವಾಗಿಲ್ಲದ ಕಾರಣ ಗಳಿಕೆ ಸಾಕಾಗುವುದಿಲ್ಲ. ಪ್ರತಿ ಟ್ರಿಪ್‌ಗೆ ಜೀಪ್ ಸೇವೆ ಮಾಡಬೇಕಾಗುತ್ತದೆ. ಬೆಳಿಗ್ಗೆ 5 ಗಂಟೆಗೆ ಟ್ರಿಪ್ ಪ್ರಾರಂಭವಾಗುತ್ತದೆ ಮತ್ತು ಕೊನೆಯ ಟ್ರಿಪ್ ಮುಂಜಾನೆ 4.30ಕ್ಕೆ ಕೊನೆಗೊಳ್ಳುತ್ತದೆ. ಚೆಕ್‌ಪೋಸ್ಟ್ ಇದೆ. ಸುರಕ್ಷತೆಗಾಗಿ ರಾತ್ರಿ ಸವಾರಿ ಮಾಡಲು ಅನುಮತಿಸುವುದಿಲ್ಲ. ರಸ್ತೆಗಳು ಅಷ್ಟು ಉತ್ತಮವಾಗಿಲ್ಲ ಮತ್ತು ಒಂದು ಅಥವಾ ಎರಡು ಟ್ರಿಪ್‌ಗಳಲ್ಲಿ ಗಳಿಸಿದ ಹಣವನ್ನು ಗ್ಯಾರೇಜ್‌ಗಾಗಿ ಖರ್ಚು ಮಾಡಬೇಕಾಗುತ್ತದೆ. ಅವರ ದೈನಂದಿನ ಆದಾಯವು ಅವರ ಖರ್ಚುಗಳಿಗೆ ಸಾಕಾಗುವುದಿಲ್ಲ.

ಸಾಮಾನ್ಯ ಅಂಗಡಿ ಮಾಲೀಕ ರಾಧಾಕೃಷ್ಣ ಅವರು ಕೇರಳ ಮೂಲದವರಾಗಿದ್ದು ಅವರ ಕುಟುಂಬದೊಂದಿಗೆ ಕೊಲ್ಲೂರಿನಲ್ಲಿ ನೆಲೆಸಿದ್ದಾರೆ. ಕರಕುಶಲ ವಸ್ತುಗಳು, ಮಕ್ಕಳಿಗಾಗಿ ಆಟಿಕೆಗಳು, ಕಲಾಕೃತಿಗಳು ಇತ್ಯಾದಿಗಳನ್ನು ಹೊಂದಿರುವ ಸಾಮನ್ಯ ಅಂಗಡಿಯೊಂದನ್ನು ಅವರು ತೆರೆದು 10 ವರ್ಷಗಳಾಗಿವೆ. ಅವರ ಆದಾಯವು ಅವರ ಅಂಗಡಿಗೆ ಬರುವ ಜನರು ಮತ್ತು ಅವರು ಎಷ್ಟು ಖರೀದಿಸುತ್ತಾರೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ಇವರು ಕೇರಳದಲ್ಲಿ ಶಿಕ್ಷಣ ಮುಗಿಸಿದರು. ಅವರು ಒಂದು ಸಣ್ಣ ಕುಟುಂಬವನ್ನು ಹೊಂದಿದ್ದಾರೆ ಮತ್ತು ಅವರ ದೈನಂದಿನ ಖರ್ಚುಗಳು ದೈನಂದಿನ ಗಳಿಕೆಯಿಂದ ತೃಪ್ತಿಗೊಳ್ಳುತ್ತವೆ.

ಶೀಲಾ ಕೇರಳ ಮೂಲದವರು, ಕೊಲ್ಲೂರಿನಲ್ಲಿ ಚಹಾ ಅಂಗಡಿಯೊಂದನ್ನು ನಡೆಸುತ್ತಿದ್ದಾರೆ. ಅವರು ಸುಮಾರು 30 ವರ್ಷಗಳಿಂದ ಕೊಲ್ಲೂರಿನಲ್ಲಿದ್ದಾರೆ. ಅವರು ತಮ್ಮ ಕುಟುಂಬದೊಂದಿಗೆ ಕೊಲ್ಲೂರಿನಲ್ಲಿದ್ದಾರೆ. ಅವರು ಮೊದಲು ಕೇರಳದಲ್ಲಿ ಉಳಿದುಕೊಂಡಿದ್ದಕ್ಕೆ ಹೋಲಿಸಿದರೆ ಅವರ ಜೀವನ ವಿಭಿನ್ನವಾಗಿದೆ. ಅವರು ಸರಳ ಜೀವನವನ್ನು ನಡೆಸುತ್ತಿದ್ದಾರೆ. ಅವರು ದೇವಿಯನ್ನು ತುಂಬಾ ನಂಬಿದ್ದಾರೆ. ಈ ತಾಯಿಯನ್ನು ಇಲ್ಲಿನ ಪ್ರತಿಯೊಂದು ಮನೆಯಲ್ಲೂ, ಕೇರಳದಲ್ಲಿಯೂ ಪೂಜಿಸಲಾಗುತ್ತದೆ. ಕೊಲ್ಲೂರಿನಲ್ಲಿ ದೇವಿಯನ್ನು ಇಲ್ಲಿ ಹೇಗೆ ಸ್ಥಾಪಿಸಲಾಗಿದೆ? ಮೂಕಾಸುರನನ್ನು ಹೇಗೆ ಕೊಲ್ಲಲಾಯಿತು? ಅಂದಿನಿಂದ ದೇವಿ ಇಲ್ಲಿದ್ದಾಳೆ ಎಂಬ ಕಥೆಯನ್ನು ಅವಳು ಹೇಳುತ್ತಾರೆ. ಅವರು ಬೆಳಿಗ್ಗೆ 5 ಗಂಟೆಗೆ ತಮ್ಮ ಅಂಗಡಿಯನ್ನು ತೆರೆಯುತ್ತಾರೆ. ಮತ್ತು ಸಂಜೆ 6ರ ಹೊತ್ತಿಗೆ ಅವರು ಅದನ್ನು ಮುಚ್ಚುತ್ತಾರೆ. ದೇವಿಯನ್ನು ಭೇಟಿಮಾಡಲು ಪ್ರಪಂಚದಾದ್ಯಂತ ಜನರು ಬರುತ್ತಾರೆ. ಅವರು 30 ವರ್ಷಗಳ ಹಿಂದೆ ಬಂದಾಗ ಭೂಮಿ ಬಂಜರು ಆದರೆ ಈಗ ಅದನ್ನು ಮೂಲ ಸೌಕರ್ಯದಲ್ಲಿ ಅಭಿವೃದ್ಧಿಪಡಿಸಲಾಗಿದೆ ಹಾಗೂ ನಗರ ಮತ್ತು ಪ್ರವಾಸಿಗರಿಗೆ ಆಕರ್ಷಣೀಯವಾಗಿದೆ. ದೇವಾಲಯದ ಆಡಳಿತ ಮಂಡಳಿ ಅಭಿವೃದ್ಧಿ ಮತ್ತು ಜನರ ಕಲ್ಯಾಣಕ್ಕಾಗಿ ಸಾಕಷ್ಟು ಕೆಲಸ ಮಾಡಿದೆ. ಮೊದಲಿಗೆ ಕೇವಲ 10 ಮನೆಗಳು ಮತ್ತು 3 ಟೀ ಸ್ಟಾಲ್‌ಗಳು ದೇವಾಲಯದ ಸುತ್ತಮುತ್ತ ಇದ್ದವು.

ಕೊಲ್ಲೂರು ಮೂಲದ ಗಿರಿಜಾ ಬಳೆ ಅಂಗಡಿ ಹೊಂದಿದ್ದಾರೆ. ಅವರು ಕಳೆದ 20 ವರ್ಷಗಳಿಂದ ಅಲ್ಲಿಯೇ ಇದ್ದು ಬಳೆಗಳನ್ನು ಮಾರುತ್ತಿದ್ದಾರೆ. ಹೆಚ್ಚಿನ ವ್ಯವಹಾರವು ಬೆಳಿಗ್ಗೆ 10 ರಿಂದ ಪ್ರಾರಂಭವಾಗುತ್ತದೆ ಮತ್ತು ಸಂಜೆವರೆಗೆ ನಡೆಯುತ್ತದೆ. ಜನರು ಈ ಸ್ಥಳಕ್ಕೆ ಹೆಚ್ಚು ಭೇಟಿ ನೀಡುವ ಸಮಯ ಇದು. ರಜಾದಿನಗಳು ಇದ್ದಾಗ ಸಂದರ್ಶಕರ ಸಂಖ್ಯೆ ಹೆಚ್ಚಾಗುತ್ತದೆ. ಸಂದರ್ಶಕರಲ್ಲಿ ಹೆಚ್ಚಿನವರು ಕೇರಳದವರು. ಒಂದು ದಿನದಲ್ಲಿ ಸುಮಾರು 20 ಬಸ್ಸುಗಳು ಕೇರಳದಿಂದ ಬರುತ್ತದೆ. ಜನರ ಗಳಿಕೆ ಅವರ ದೈನಂದಿನ ಅಗತ್ಯಗಳನ್ನು ಪೂರೈಸಲು ಮಾತ್ರ ಸಾಕು. ಜನರು ಬಳೆಗಳನ್ನು ಖರೀದಿಸುತ್ತಾರೆ. ಏಕೆಂದರೆ ಅವರ ನಂಬಿಕೆಗಳ ಪ್ರಕಾರ ದೇವಿ ಬಳೆಗಳನ್ನು ಧರಿಸಲು ಮತ್ತು ಆರಾಧಿಸಲು ಇಷ್ಟ ಪಡುತ್ತಾಳೆ. ವರ್ಷದಿಂದ ವರ್ಷಕ್ಕೆ ಕೇರಳದಿಂದ ಯಾತ್ರಿಕರ ಸಂಖ್ಯೆಯನ್ನು ಹೆಚ್ಚಿಸಲಾಗುತ್ತಿದೆ. ಈ ಸ್ಥಳವು ಹೆಚ್ಚು ಜನಸಂದಣಿಯಿಂದ ಕೂಡಿರುವುದು ನವರಾತ್ರಿ ಹಬ್ಬದ ಸಂದರ್ಭದಲ್ಲಿ. ಹೆಚ್ಚಿನ ಸಮಯದಲ್ಲಿ ದೇವಾಲಯವು ಉಚಿತ ಆಹಾರವನ್ನು ನೀಡುತ್ತದೆ. ಕೊಲ್ಲೂರಿನಲ್ಲಿ ಅಂಗಡಿಗಳನ್ನು ನಡೆಸುತ್ತಿರುವ ಜನರು ಸಾಕಷ್ಟು ತೃಪ್ತರಾಗಿದ್ದಾರೆ ಮತ್ತು ದೇವಿಯ ಮೇಲೆ ಸಂಪೂರ್ಣ ನಂಬಿಕೆ ಮತ್ತು ಭರವಸೆ ಹೊಂದಿದ್ದಾರೆ.

ಕೊಲ್ಲೂರು ಮೂಲದವರಾದ ಸರೋಜರವರು ಬಳೆ ಅಂಗಡಿಯೊಂದನ್ನು ನಡೆಸುತ್ತಿದ್ದಾರೆ. ಅವರು ಕಳೆದ 15 ವರ್ಷಗಳಿಂದ ಬಳೆಗಳನ್ನು ಮಾರಾಟ ಮಾಡುತ್ತಿದ್ದಾರೆ. ಇಲ್ಲಿ ಸರಾಸರಿ ಹೆಚ್ಚಿನ ಅಂಗಡಿಗಳು ಬಳೆ ಅಂಗಡಿಗಳಾಗಿವೆ. ಮಾರಾಟಗಾರರು ಪಡೆಯುವ ಆದಾಯವು ಅವರ ಕುಟುಂಬಗಳನ್ನು ನಡೆಸಲು ಸಾಕಾಗುವುದಿಲ್ಲ. ಆದರೆ ಅವರು ಕಷ್ಟಪಟ್ಟು ಕೆಲಸ ಮಾಡುತ್ತಾರೆ.

ಉಪಸಂಹಾರ

ಈ ಮೇಲಿನ ವಿಷಯಗಳು ತಿಳಿಸುವುದೇನೆಂದರೆ ಅಲ್ಲಿನ ವ್ಯಾಪಾರಸ್ಥರ ಪ್ರತಿದಿನದ ಲಾಭ–ನಷ್ಟಗಳು ಅಂದಿನ ದೈನಂದಿನ ವ್ಯಾಪಾರದ ಮೇಲೆ ನಡೆಯುತ್ತದೆ. ಕೆಲವೊಮ್ಮೆ ನಷ್ಟವು ಸಂಭವಿಸುತ್ತದೆ. ಕೆಲವೊಮ್ಮೆ ಲಾಭವು ಆಗುತ್ತದೆ. ಆದ್ದರಿಂದ ಇಲ್ಲಿನ ವ್ಯಾಪಾರಸ್ಥರ ಆರ್ಥಿಕಸ್ಥಿತಿ ಅಷ್ಟಕಷ್ಟೇ. ಇವರ ಜೀವನ ಉತ್ತಮಗೊಳಿಸಲು ಸ್ಥಳೀಯ ಆಡಳಿತ ಸಂಸ್ಥೆಗಳು, ಸ್ಥಳೀಯ ಪಂಚಾಯತ್ ಹಾಗೂ ಸರ್ಕಾರ ಮುಂದೆ ಬರಬೇಕಾಗಿದೆ.

ಉಡುಪಿ ತಾಲೂಕಿನ ವಿದ್ಯಾರ್ಥಿನಿಲಯಗಳ ಸಮಾಜಶಾಸ್ತ್ರೀಯ ಅಧ್ಯಯನ

(ಪೂರ್ಣಪ್ರಜ್ಞ ಕಾಲೇಜು, ಸಮಾಜಶಾಸ್ತ್ರ ವಿಭಾಗದ ವತಿಯಿಂದ ನಡೆದ ಸಂಶೋಧನಾ ಕಾರ್ಯ)

ಅಸ್ಸಾದಿ, ಅಶ್ವತ್, ಪ್ರವೀಣ್, ಸುದರ್ಶನ್
ತೃತೀಯ ಬಿ.ಎ.

ಪೀಠಿಕೆ :

ವಸತಿನಿಲಯಗಳು ಎಂದರೆ ಯಾರಿಗೆ ತಾನೆ ತಿಳಿದಿಲ್ಲ. ಎಲ್ಲರಿಗೂ ಚಿರಪರಿಚಿತ, ಸಮಾಜದ ಅಂಗಗಳೇ ಈ ವಿದ್ಯಾರ್ಥಿ ವಸತಿ ನಿಲಯಗಳು. ಬಡವರ ಮಕ್ಕಳ ಪಾಲಿನ ಅರಮನೆಗಳೂ ಇವಾಗಿವೆ. ಕೆಲವು ವಿದ್ಯಾರ್ಥಿಗಳೂ ತಮ್ಮ ವಿದ್ಯಾರ್ಥಿ ಜೀವನದಲ್ಲಿ ಸ್ವಂತಮನೆಗಿಂತ ಜಾಸ್ತಿ ಸಮಯ ಕಳೆಯುವ ಸ್ಥಳಗಳು ಇವಾಗಿವೆ. ಕೆಲವು ಸಾಧನೀಯ ವ್ಯಕ್ತಿಗಳೂ ಸಹ ಒಂದೊಮ್ಮೆ ಈ ವಸತಿ ನಿಲಯಗಳಲ್ಲಿ ಕಳೆದಿದ್ದಾರೆ ಎಂದು ನಾವು ಕೇಳಿದ್ದೇವೆ.

ಸಮಾಜಶಾಸ್ತ್ರದ ವಿದ್ಯಾರ್ಥಿಗಳಾದ ನಮಗೆ ಕ್ಷೇತ್ರ ಕಾರ್ಯದ ವಿಷಯವಾಗಿ ಈ ವಸತಿ ನಿಲಯಗಳ ಬಗ್ಗೆ ಕ್ಷೇತ್ರಕಾರ್ಯ ಕೈಗೊಳ್ಳಲಾಯಿತು. ಅಂತೆಯೇ ತರಗತಿಯ ಕ್ಷೇತ್ರ ಕಾರ್ಯದ ಗುಂಪುಗಳಲ್ಲಿ ಒಂದಾದ ನಮ್ಮ ತಂಡ ಉಡುಪಿ ಜಿಲ್ಲೆಯ ಕೆಲವು ವಸತಿ ನಿಲಯಗಳನ್ನು ಭೇಟಿ ಮಾಡಿ ನಮಗೆ ದೊರೆತ ಮಾಹಿತಿಯನ್ನು ಇಲ್ಲಿ ತಿಳಿಸಿರುತ್ತೇವೆ.

ಸಾಮಾಜಿಕ ಸ್ಥಿತಿ:

ಸಾಮಾಜಿಕವಾಗಿ ಉಡುಪಿಯಲ್ಲಿರುವ ವಸತಿ ನಿಲಯಗಳನ್ನು ಎಸ್.ಸಿ/ ಎಸ್.ಟಿ., ಬಿ.ಸಿ.ಎಮ್. ಹಾಸ್ಟೆಲ್ ಎಂದು ವಿಭಾಗಿಸಲಾಗಿದೆ. ನಮ್ಮ ಕ್ಷೇತ್ರ ಕಾರ್ಯದ ವಸತಿ ನಿಲಯಗಳು ಡಯಾನದಲ್ಲಿ ಎರಡೂ ಹಾಸ್ಟೆಲ್ ಹುಡುಗರಿಗೆ ಇವೆ. ಅದರಲ್ಲಿ ಎಸ್.ಸಿ/ ಎಸ್.ಟಿಯ ವಿದ್ಯಾರ್ಥಿಗಳಿಗೆ ಒಂದು ವಸತಿ ನಿಲಯ, ಬಿ.ಸಿ.ಎಂ. ಹಾಸ್ಟೆಲ್ ಓ.ಬಿ.ಸಿ. ವಿದ್ಯಾರ್ಥಿಗಳಿಗೆ ಒಂದು ವಸತಿ ನಿಲಯವಿದೆ. ಡಯಾನದಲ್ಲಿ ಹುಡುಗಿಯರಿಗೂ ಇದೇ ತರನಾದ ಹಾಸ್ಟೆಲ್ ವ್ಯವಸ್ಥೆ ಇದೆ. ಈ ಹಾಸ್ಟೆಲ್‌ಗಳಲ್ಲಿ ಎಸ್.ಸಿ/ ಎಸ್.ಟಿ. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವಸತಿ ನಿಲಯವಿದೆ. ಇಲ್ಲಿ ತುಂಬಾ ದೂರದ ಪ್ರದೇಶದಿಂದ ಬಂದು ಉಳಿದುಕೊಳ್ಳುವ ವಿದ್ಯಾರ್ಥಿಗಳಿಗೆ ಮೊದಲ ಪ್ರಾಶಸ್ತ್ಯವಿದೆ. ಇಲ್ಲಿ ವಸತಿ ನಿಲಯದ ವಾರ್ಡನ್ ವಿದ್ಯಾರ್ಥಿಗಳಿಗೆ ಏನಾದರೂ ಸಮಸ್ಯೆಯಾದಲ್ಲಿ ಪರಿಹರಿಸಲು ನೆರವಾಗುತ್ತಾರೆ. ಮುಖ್ಯವಾಗಿ ಆರೋಗ್ಯ ಸಮಸ್ಯೆಗೆ ಪ್ರಮುಖ ಕಾಳಜಿಯಿದೆ. ಇನ್ನು ಉಡುಪಿ ಜಿಲ್ಲೆಯ ಇತರ ಹಾಸ್ಟೆಲ್ ಬಿ.ಸಿ.ಎಂ.ಗಳಲ್ಲಿ ಸಹ ಸಾಮಾಜಿಕವಾಗಿ ಎಲ್ಲಾ ಸೌಕರ್ಯಗಳನ್ನು ನೀಡಲಾಗುತ್ತದೆ. ಸರಕಾರದಿಂದ ಪರಿಶಿಷ್ಟ ಪಂಗಡ/ಜಾತಿ ವಸತಿ ನಿಲಯದ ವಿದ್ಯಾರ್ಥಿಗಳಿಗೆ ಹೆಚ್ಚು ಹೆಚ್ಚು ಅವಕಾಶಗಳು ದೊರೆಯುತ್ತವೆ.
ಕೆಲವು ವಲಸೆ ಬಂದಂತಹ ಕುಟುಂಬಗಳ ಮಕ್ಕಳನ್ನು ಸಹ ನಾವಿಲ್ಲಿ ಕಾಣಬಹುದು. ಅದೇನೇ ಇರಲಿ ಸಾಮಾಜಿಕವಾಗಿ ಉತ್ತಮವೆಂದಿದ್ದಾರೆ ಪ್ರತಿಕ್ರಿಯಿಸಿದ ವಿದ್ಯಾರ್ಥಿಗಳು.

ಆರ್ಥಿಕ ಸ್ಥಿತಿಗತಿ:

ಉಡುಪಿ ಜಿಲ್ಲಾ ವಸತಿ ನಿಲಯಗಳಲ್ಲಿ ವಾಸಿಸುತ್ತಿರುವ ಬಹುತೇಕ ವಿದ್ಯಾರ್ಥಿಗಳು ಇತರೆ ಊರುಗಳಿಂದ ಬಂದವರಾಗಿದ್ದಾರೆ. ಅವರವರ ಮನೆಗಳಲ್ಲಿ ಆರ್ಥಿಕವಾಗಿ ಸುಸ್ಥಿತಿ ಇಲ್ಲದಿದ್ದರೂ ವಸತಿ ನಿಲಯಗಳಲ್ಲಿ ಯಾವುದೇ ಆರ್ಥಿಕ ಸಮಸ್ಯೆ ಎದುರಾಗುತ್ತಿಲ್ಲ.

ವಿದ್ಯಾರ್ಥಿಯು ಪೋಷಕರು ತಿಂಗಳಿಗೆ ಒಮ್ಮೆ ಸಾಧ್ಯವಾದರೆ ಭೇಟಿ ನೀಡಬೇಕೆಂಬುದೊಂದು ನಿಯಮವಿದೆ.

ಹೀಗೆ ಪೋಷಕರು ಬೇಟಿ ಕೊಟ್ಟಾಗ ತಮ್ಮ ತಮ್ಮ ಮಕ್ಕಳಿಗೆ ಅವಶ್ಯಕವಿರುವ ಹಣವನ್ನು ನೀಡುತ್ತಾರೆ. ಅಥವಾ ಬ್ಯಾಂಕ್ ಖಾತೆಗೆ ಹಾಕುತ್ತಾರೆ.

ರಕ್ಷಣಾ ವ್ಯವಸ್ಥೆ

ಹಾಸ್ಟೆಲ್‌ಯಿಂದ ವಿದ್ಯಾರ್ಥಿಗಳಿಗೆ ಹೊರಗೆ ಹೋಗುವ ಸಮಯ ನಿಗದಿ ಇರುತ್ತದೆ. ವಸತಿ ನಿಲಯ ಒಂದರಲ್ಲೇ 8 ಸಿ.ಸಿ. ಟಿವಿ ಕ್ಯಾಮೆರಾ ಅಳವಡಿಸಲಾಗಿದೆ. ವಿದ್ಯಾರ್ಥಿಗಳು ಯಾವುದೇ ದ್ವೇಷ, ದುಶ್ಚಟಗಳಿಗೆ ಬಲಿಯಾಗದಂತೆ ಜಾಗೃತೆ ವಹಿಸಲಾಗುತ್ತಿದೆ. ಹೊರಗಿನ ವ್ಯಕ್ತಿಗಳನ್ನು ಒಳಗೆ ಬಿಡುವುದಿಲ್ಲ. ವಾರ್ಡನ್ ಅಪ್ಪಣೆ ನಂತರವಷ್ಟೇ ಒಳಗೆ ತೆರಳಬಹುದು.

ಧನ್ಯವಾದ ಸಮರ್ಪಣೆ

ಒಂದು ಕಾರ್ಯಕ್ರಮ, ಯೋಜನೆ ಸಕ್ರಿಯವಾಗಬೇಕಾದರೆ ಹಲವಾರು ವ್ಯಕ್ತಿಗಳ ಸಹಾಯ ಅವಶ್ಯಕವಿರುತ್ತದೆ. ಹಾಗೆಯೇ ಈ ಕ್ಷೇತ್ರ ಕಾರ್ಯಕ್ಕೆ ತೆರಳಿದಾಗ ನಮಗೆ ಸಹಕರಿಸಿದ ಹಾಗೂ ಮಾಹಿತಿ ನೀಡಿದ ಡಯಾನ ಬಿ.ಸಿ.ಎಂ. ಹಾಸ್ಟೆಲ್ ವಾರ್ಡನ್ ಹಾಗೂ ಎಸ್.ಸಿ./ಎಸ್.ಟಿ. ಹಾಸ್ಟೆಲ್‌ನ ವಿದ್ಯಾರ್ಥಿಗಳಿಗೂ ತುಂಬು ಹೃದಯದ ಧನ್ಯವಾದಗಳು. ಹಾಗೂ ಇತರ ಹಾಸ್ಟೆಲ್‌ನವರಿಗೂ ಧನ್ಯವಾದಗಳು. ಈ ಕ್ಷೇತ್ರ ಕಾರ್ಯಕ್ಕೆ ಅನುಮತಿ ಪತ್ರ ನೀಡಿ ಸಹಕರಿಸಿದ ನಮ್ಮ ಕಾಲೇಜಿನ ಪ್ರಾಂಶುಪಾಲರಿಗೂ ಧನ್ಯವಾದಗಳು.

ನಮ್ಮ ಸಮಾಜಶಾಸ್ತ್ರದ ವಿಭಾಗದ ಮುಖ್ಯಸ್ಥರಾದ ಡಾ। ರಾಘವೇಂದ್ ಎಲ್ ಸರ್‌ರವರು ಉತ್ತಮವಾದ ಮಾರ್ಗದರ್ಶನ ನೀಡಿ ಈ ಕ್ಷೇತ್ರ ಕಾರ್ಯಕ್ಕೆ ಕಳುಹಿಸಿದ್ದಾರೆ. ಅವರಿಗೂ ಧನ್ಯವಾದಗಳು. ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು.

ಸಾಮಾಜಿಕ ಬದಲಾವಣೆಯಲ್ಲಿ ಕಡುಬಿ ಬುಡಕಟ್ಟು

(ಸಮಾಜಶಾಸ್ತ್ರ ವಿಭಾಗದ ವತಿಯಿಂದ ನಡೆದ ಸಂಶೋಧನಾ ಕಾರ್ಯದ ವರದಿ)

ಸಂತೋಷ್, ದೀಪಕ್, ಸಂದೇಶ್, ಅಯ್ಯಪ್ಪ,
ತೃತೀಯ ಬಿ.ಎ.

ಭಾರತದಲ್ಲಿ ಬುಡಕಟ್ಟು ಜನರನ್ನು ಬುಡಕಟ್ಟು ಮತ್ತು ಪರಿಶಿಷ್ಟ ಬುಡಕಟ್ಟು ಎಂಬುದಾಗಿ ವರ್ಗೀಕರಿಸಲಾಗಿದೆ. ಭಾರದಲ್ಲಿ ಪರಿಶಿಷ್ಟ ಪಟ್ಟಿ ತಯಾರಿಕೆಯ ಪ್ರಕ್ರಿಯೆಯಲ್ಲಿ ಆದಂತಹ ಅನೇಕ ಗೊಂದಲಗಳಿಂದಾಗಿ, ತಪ್ಪುಗಳಿಂದಾಗಿ ದೇಶದ ಹಲವಾರು ಬುಡಕಟ್ಟಿನ ಜನರು ಇನ್ನೂ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರ್ಪಡೆಗೊಳ್ಳದೆ ಇಂದು ಅನೇಕ ಗಂಭೀರ ಸಮಸ್ಯೆಗಳನ್ನು ಎದುರಿಸುವಂತಾಗಿದೆ. ಹೀಗೆ ಅನೇಕ ಹಿಂದುಳಿದ ವರ್ಗದವರ ಜೊತೆ ಕುಡುಬಿಯರು ಪರಿಶಿಷ್ಟೇತರ ಬುಡಕಟ್ಟು ಸಮುದಾಯವಾಗಿ ಬದುಕುತ್ತಿದ್ದಾರೆ.

ಕುಡುಬಿಯವರ ಮೂಲ ನೆಲೆ

ಕುಡುಬಿಯವರು ಪ್ರಮುಖವಾಗಿ ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ವಾಸಿಸುತ್ತಿದ್ದು ಉಡುಪಿ ಜಿಲ್ಲೆಯ ಕುಂದಾಪುರ, ಕಾರ್ಕಳ ತಾಲ್ಲೂಕುಗಳಲ್ಲಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹಂಚಿಹೋಗಿದ್ದಾರೆ. ಇವರು ಗೋವಾ ಪ್ರದೇಶಕ್ಕೆ ಸೇರಿದ ಮೂಲ ನಿವಾಸಿ ಗುಂಪಿಗೆ ಸೇರಿದವರಾಗಿದ್ದಾರೆ. ಸುಮಾರು 4 ಶತಮಾನಗಳ ಹಿಂದೆ ಕರ್ನಾಟಕಕ್ಕೆ ವಲಸೆ ಬಂದು ನೆಲೆಸಿದ್ದಾರೆ.

ಕುಡುಬಿಯವರ ಬೇಟೆಯಾಡುವ ಬುಡಕಟ್ಟು, ಜನಾಂಗವೆಂದು ಕರೆಯುತ್ತಾರೆ. ವಿವಿಧ ವರದಿಯ ಪ್ರಕಾರದಲ್ಲಿ ಕುಡುಬಿಯರನ್ನು ಬೇಟೆಯಾಡುವ ಬುಡಕಟ್ಟು, ಅಭಿರುಚಿಯುಳ್ಳ ಬುಡಕಟ್ಟು ಸ್ಥಳ ಬದಲಿಕೆಯ ಬೇಸಾಯ ಮಾಡುವ ಕಾಡಿನ ಬುಡಕಟ್ಟು, ಮೂಲನಿವಾಸಿ ವಂಶದ ಭೂಹೀನ ಕಾರ್ಮಿಕರು ವಿಭಿನ್ನವಾಗಿ ವರ್ಣಿಸಿದ್ದಾರೆ. ಕುಡುಬಿ ಜನರಲ್ಲಿ ಈವಾಗಲೂ ಬೇಟೆಯಾಡುವ ಪದ್ಧತಿ ಜಾರಿಯಲ್ಲಿದೆ.

ಕುಡುಬಿ ಪದವು ನೆರೆಹೊರೆಯ ಜನರು, ಬ್ರಿಟಿಷ್ ಜನಾಂಗೀಯ ಸಮೀಕ್ಷಾಗಾರರು ಮತ್ತು ರಾಜ್ಯದ ಆಡಳಿತಗಾರರು ನೀಡಿದ ಪದವಾಗಿದ್ದು, ಮೂಲ ಪ್ರಸ್ತುತ ಕುಡುಬಿ ಜನಾಂಗದೊಳಗೆ ಬಳಕೆಯಲ್ಲಿರುವ ಪದ ಕುಡ್ಬಿ ಆಗಿದೆ. ಮದ್ರಾಸ್ ಸರಕಾರವು 1941ರಿಂದ 1956ರ ವರೆಗೆ ಇವರನ್ನು ಪರಿಶಿಷ್ಟ ಜಾತಿ ಎಂದು ಪರಿಗಣಿಸಿತ್ತು. ಆದರೆ ಕುಡುಬಿಯವರು ಬುಡಕಟ್ಟು ಜನಾಂಗದವರಾಗಿದ್ದರೂ ಅವರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ ಕರ್ನಾಟಕದ ಹಾಗೂ ದೇಶದ ಇತರ ಬುಡಕಟ್ಟು ಜನರ ಹಾಗೆಯೇ ಕೆಳಮಟ್ಟದ್ದಾಗಿದ್ದರೂ ಕರ್ನಾಟಕ ಸರಕಾರವು 1993ರ ವರೆಗೆ ಇವರನ್ನು ಬಿ ಗುಂಪಿಗೆ ಸೇರಿಸಿ ತದನಂತರ 1994ರಲ್ಲಿ ಚಿನ್ನಪ್ಪ ರೆಡ್ಡಿ ಆಯೋಗದ ಶಿಫಾರಸಿನಂತೆ ಸರಕಾರವು ಇವರನ್ನು ಅತೀ ಹಿಂದುಳಿದ ಜಾತಿ ಎಂದು ಪುನರ್ ವರ್ಗೀಕರಣ ಮಾಡಿತು.

ಕುಡುಬಿಯವರಲ್ಲಿ ಗೋವಾ, ಕೊಡಿಯಾಲ, ಆರೆ, ನಾಡ ಮತ್ತು ಜಾತಿ ಕುಡುಬಿಯರೆಂಬ ಆರು ಒಳಪಂಗಡಗಳಿವೆ. ಉತ್ತರ ಕನ್ನಡ ಗೋವಾ ಮತ್ತು ಕೊಡಿಯಾಲ ಕುಡುಬಿ ಒಳ ಪಂಗಡಗಳು ಎರಡು ಮುಖ್ಯ ಪಂಗಡಗಳಾಗಿವೆ.

ಆಹಾರ ಪದ್ಧತಿ

